TIGHT BINDING BOOK

OSMANIA UNIVERSITY LIBRARY

Call No. K 83 K 97 D

Name of Book ದರ್ಶನ

Name of Author ಕುಲಕರ್ಣಿ ಮ. ಜ

UNIVERSAL LIBRARY

OU_200102

UNIVERSAL LIBRARY

ಸಂಜೀವಿನಿ ಪ್ರಕಾಶನ ೨ನೇ ವರುಷದ ೨ನೇ ಗ್ರಂಥ

# ದರ್ಶನ

(ಸ್ವತಂತ್ರ ಸಾಮಾಜಿಕ ಕಾದಂಬರಿ)

ಶ್ರೀ ಬಿ. ಜಿ. ಕುಲಕರ್ಣಿ ಬಿ. ಎ. (ಆನರ್ಸ)

ಸಂಜೀವಿನಿ ಪ್ರಕಾಶನ

ಹುಬ್ಬಳ್ಳಿ

೧೯೪೮) (೨-೦-೦

ಸಂಜೀವಿನೀ ಪ್ರಕಾಶನ ಹುಬ್ಬಳ್ಳಿ.

CHEC[illegible]D. 1951

ಸಂಪಾದಕರು: ಕಲಮದಾನಿ ಗುರುರಾಯರು

Checked 1969

CHECKED 195[illegible]

ಬರಲಿರುವ ಗ್ರಂಥಗಳು

ಕಾಲಚಕ್ರ (ಕಾದಂಬರಿ)

ಡಿ. ಎಚ್. ಕೊಪ್ಪರ (ಬಿ. ಎ.)

ಮುದ್ದಿನಕುಳ್ಳಿ (ಕಥಾಗುಚ್ಛ)

ಕೆ. ಆರ್. ಬೆಳ್ಳುಬ್ಬಿ

ಈ ಪುಸ್ತಕದ ಈ ಆವೃತ್ತಿಯ ಹಕ್ಕು ಮಾತ್ರ ಪ್ರಕಾಶಕನದು.

ಮುದ್ರಕರು ಮತ್ತು ಪ್ರಕಾಶಕರು
ಶಂ. ಬಾ. ಮನಗೋಳಿ
ದಾಜೀಬಾಪೇಟ, ಹುಬ್ಬಳ್ಳಿ

ಮುದ್ರಣ ಸ್ಥಳ
ಆದರ್ಶ ಮುದ್ರಣ
ದಾಜೀಬಾಪೇಟೆ, ಹುಬ್ಬಳ್ಳಿ

# ದುರ್ಗದಬೈಲು—ಪ್ರವೇಶ

ಸಂಜೀವನಿ ಪ್ರಕಾಶನದ ' ಉತ್ಕಲಾ ' ಕಾದಂಬರಿಯನ್ನು ಬರೆದ 'ಹರಿಜಾತ'ರು ತಮ್ಮ ಪುಸ್ತಕದ ಡಂಬೆಲ್ಲಿನಷ್ಟು ತೂಕದ ಹಸ್ತಲಿಖಿತವನ್ನು ಸಂಪಾದಕರಿಗೆ ಓದಿ ತೋರಿಸಲು 'ಗೃಹಪ್ರವಿಷ್ಟ'ರಾದರೆಂದು ಆ ಪುಸ್ತಕದ ಪ್ರಸ್ತಾವನೆಯಲ್ಲಿ ಹೇಳಲಾಗಿದೆ. ನಾನು ಈ ಪುಸ್ತಕದೊಡನೆ 'ದುರ್ಗದ ಬೈಲ'ನ್ನು ಪ್ರವೇಶಿಸಿದ್ದೇನೆ. ಕೇಳಿರಿ.

'ದರ್ಶನ'ವು ಅಲಿಖಿತವಾಗಿ ನನ್ನ ತಲೆಯಲ್ಲಿ ಇರುವ ಸಮಯದಲ್ಲಿಗೆ. **ಕಲಮುದಾನಿ ಗುರುರಾಯ**ರು ಒಂದು ಕಾದಂಬರಿಯನ್ನು ಬರೆದುಕೊಡಲು ಕೇಳಿದರು. ಮಾತು ಕೊಟ್ಟೆ. ದೊಡ್ಡ ದೊಡ್ಡ ರಾಷ್ಟ್ರಗಳೂ ತಾವೇಮುಂದಾಗಿ ಮಾಡಿಕೊಂಡ ಒಪ್ಪಂದಗಳನ್ನು ಬೇಕಾದಂತೆ ಭಂಗಿಸುವ ಈ ಕಾಲದಲ್ಲಿ ನನ್ನಂಥ ಸಾಮಾನ್ಯನೊಬ್ಬನು ತಾನು ಕೊಟ್ಟ ವಚನವನ್ನು ಪಾಲಿಸಲೇ ಬೇಕಾದೀತೆಂದು ನನಗನಿಸಲಿಲ್ಲ. ಆದರೆ ಗುರುರಾಯರ ಹಿಡಿತ ಒಂಟಿಯ ಹಿಡಿತ. ಕಾದಂಬರಿಗಾಗಿ ಬೆನ್ನುಹತ್ತಿದರು. ಎಲ್ಲಿಗೆ ಬಂತು? ಎಂದು ಕೊಡ್ಯವವರು? ಬರೆದಷ್ಟು ತೋರಿಸಿರಿ ನೋಡೋಣ, ಎಂದು ಮುಂತಾಗಿ ವಾಗ್ಬಾಣಗಳನ್ನು ಎಸೆಯ ತೊಡಗಿದರು. ಇದಕ್ಕೆ ಒಂದು ಉಪಾಯ ಹುಡುಕಿದೆ. ದುರ್ಗದಬೈಲಿನಲ್ಲಿರುವ ಅವರ ಕಾರ್ಯಾಲಯದ ಎದುರು ಹಾಯುವುದನ್ನು ಬಿಟ್ಟು ಬಿಟ್ಟೆ!

ನಾಲ್ಕು ದಿವಸಗಳವರೆಗೆ ಈ ಉಪಾಯ ಚೆನ್ನಾಗಿ ಫಲಿಸಿತು. ಕಾದಂಬರಿಯ ಸಲುವಾಗಿ ಯಾರಿಗೂ ಮಾತು ಕೊಡದವರಂತೆ ಮೋರೆ ಮಾಡಿಕೊಂಡು ಕತ್ತನ್ನೆತ್ತಿ ಹುಬ್ಬಳ್ಳಿಯ ಇತರ ವಿಭಾಗಗಳಲ್ಲಿ ಅಲೆಯತೊಡಗಿದೆ. ಆದರೆ ದುರ್ಗದಬೈಲನ್ನು ಬಿಟ್ಟರೆ ನಡೆದೀತೆ? ವ್ಯಾಪಾರಕ್ಕಾಗಿ ಪ್ರಸಿದ್ಧವಿರುವ ಹುಬ್ಬಳ್ಳಿಯ ಹೃದಯ ದುರ್ಗದಬೈಲು! ಪೇಟೆಯ ಕೇಂದ್ರ. ಸಂಸಾರಿಗಳಂತೂ ದುರ್ಗದಬೈಲನ್ನು ಬಿಟ್ಟು ಒಂದು ಗಳಿಗೆ ನಡೆಯಲಾರದು. ಅಡಿಕೆ, ಬಾಳೆ ಎಲೆ, ಎಣ್ಣೆ, ಬೆಣ್ಣೆ, ಮೊಸರು, ಹಣ್ಣು ಹಂಪಲು, ಕಾಯಿಪಲ್ಲೆ, ಎಲ್ಲವೂ ಅಲ್ಲಿಯೇ. ಕಿರಾಣಿ ಸಾಮಾನುಗಳು ಔಷಧ, ಕೊಡೆ ದುರಸ್ತಮಾಡುವವರ ಅಡ್ಡೆಗಳು, 'ಕಲಾಯಿ' ಮಾಡುವವರ ಮೆಟ್ಟುಗಳು,

ಅರಿವೆಗೆ ಛಾಪ ಹೊಡೆಯುವವರು, ಸಿಂಪಿಗರು ಮುಂತಾದವರ ಎಲ್ಲ ಪ್ರಕಾರದ ಅಂಗಡಿಗಳು ಅಲ್ಲಿಯೇ. ದುರ್ದೈವದಿಂದ ನಮ್ಮ ರೇಶನ್ನ ಅಂಗಡಿಯು ಆಗ ಅಲ್ಲಿಯೇ. ಹೀಗಾಗಿ ವಚನ ತಪ್ಪಿಸಲು ವನವಾಸವನ್ನು ಸ್ವೀಕರಿಸಿದಂತೆ ನನ್ನ ಸ್ಥಿತಿಯಾಯಿತು.

ಇತ್ತ. ಗೆ|| ಗುರುರಾಯರು ಹೊಸ ತಂತ್ರವನ್ನು ಪ್ರಾರಂಭಿಸಿದರು. ಮನೆಗೆ ಬಂದು ಕಾದಂಬರಿಗಾಗಿ "ಹೋ" ಹಾಕತೊಡಗಿದರು. ನಿರುಪಾಯನಾಗಿ ತಲೆಯಲ್ಲಿದ್ದ ಕಾದಂಬರಿಯನ್ನು ಕಾಗದದ ಮೇಲೆ ಇಳಿಸಿದೆ. 'ಉತ್ಕಲಾ'ದ ಬೆನ್ನು ಮೇಲೆ 'ದರ್ಶನ' ವು ಜನ್ಮವೆತ್ತಿತು. 'ದರ್ಶನ'ದ ಹಸ್ತಲಿಖಿತವನ್ನು ಗೆ|| ಗುರುರಾಯರ ಸ್ವಾಧೀನಮಾಡಿ ಇನ್ನು ಯಾವ ಅಡ್ಡಿ ಆತಂಕವಿಲ್ಲದೆ, ಯಾವ ಭಯವಿಲ್ಲದೆ ದುರ್ಗದಬೈಲಿನಲ್ಲಿ ಹೋಗಬಹುದೆಂದು ಎಣಿಸಿದೆ. ಆದೇ ಕ್ಷಣಕ್ಕೆ ಇನ್ನೊಂದು ವಿಚಾರವು ಮನದಟ್ಟಾಯಿತು. ನನ್ನ ಮೊದಲನೆಯ ಕಾದಂಬರಿಯನ್ನು ಸಾರ್ವಜನಿಕರ ಕೈಯಲ್ಲಿಟ್ಟು ಒಂದು ದೃಷ್ಟಿಯಿಂದ ಇದೇ ನಾನು ದುರ್ಗದ ಬೈಲನ್ನು ಪ್ರವೇಶಿಸುತ್ತಿದ್ದೇನೆ, ಗೆ|| ಗುರುರಾಯರ ಭಯವಿಲ್ಲದೆ ಇನ್ನು ಅಲ್ಲಿ ಅಲೆಯಬಹುದೇನೊ ನಿಜ, ಆದರೆ ಸಾರ್ವಜನಿಕರ ಅನುಜ್ಞೆಯಿಲ್ಲದೆ ನನಗೆ ಅಲ್ಲಿಂದ ಮರಳಿ ಬರಲು ಬರಲಾರದು! ದುರ್ಗದಬೈಲು ಪ್ರವೇಶ!

ತಾತ್ಪರ್ಯವೇನಂದರೆ, ಸಾಹಿತ್ಯದ ಬೆಳವಣಿಗೆಗೆ ವಿಮರ್ಶಕರು ಬೇಕು ವಿಮರ್ಶಕರು ಬೇಕೆಂದು ಕೂಗುವದರ ಮೊದಲು ಗೆ|| ಗುರುರಾಯರಂಥ ಪ್ರಕಾಶಕರನ್ನು ಹೆಚ್ಚಿಸುವಂತೆ ಮಾಡಿದರೆ ಸಾಕು. ಬಿತ್ತಿ ಹೊಲ ಬೆಳೆದಮೇಲೆ ಕಳೇ ತೆಗೆಯುವವರು ಬಾರರೆ! ಜಯಹಿಂದ

ಬಿ. ಜಿ. ಕುಲಕರ್ಣಿ

## ಸಂಪಾದಕರ ಮಾತು

ಸಂಜೀವಿನಿ ಪ್ರಕಾಶನದ ಈ ವರುಷದ ಎರಡನೆಯ ಕಾದಂಬರಿಯ **'ದರ್ಶನ'**ವನ್ನು ಓದುಗರಿಗೆ ಒದಗಿಸಿಕೊಡಲು ನನಗೆ ಬಹಳ ಸಂತೋಷವಾಗುವದು. ಇದು ಸ್ವತಂತ್ರ ಸಾಮಾಜಿಕ ಕಾದಂಬರಿ. ಇದನ್ನು ಬರೆದವರು **ಶ್ರೀ. ಬಿ. ಜಿ. ಕುಲಕರ್ಣಿ**ಯವರು ಬೆಳಗಾವಿ ಜಿಲ್ಹೆಯ ಪಾಶ್ಚಾಪುರದವರು.

ಇವರು ಬರೆಯುತ್ತಿರುವ ಕತೆಗಳನ್ನೂ ಹರಟೆಗಳನ್ನೂ ನಾನು 'ಜಯಂತಿ' 'ಕರ್ಮವೀರ' 'ಕತೆಗಾರ' 'ಕೊರವಂಜಿ' ಮೊದಲಾದ ಪತ್ರಿಕೆಗಳಲ್ಲಿ ಓದುತ್ತಿದ್ದೆ. ಆದರೆ ಅವರನ್ನು ಕಂಡದ್ದು ಹೋದ ವರುಷ, ಅವರು ಹುಬ್ಬಳ್ಳಿಗೆ ಬಂದು "ಸಂಯುಕ್ತ ಕರ್ನಾಟಕ"ದಲ್ಲಿ ಉಪಸಂಪಾದಕ ಸ್ಥಾನವನ್ನು ಅಲಂಕರಿಸಿದ್ದಾರೆ.

ಯಾವ ತರಹದ ಸ್ವಪ್ರತಿಷ್ಠೆ ಅಹಂಕಾರಗಳಿಲ್ಲದೇ ಸಾಹಿತ್ಯ ಕಲೋಪಾಸಕ ಭಾವಬೀರುವ ಕುಲಕರ್ಣಿಯವರ ಪರಿಚಯ ಆಗ ನನಗಾಯಿತು. ಅವರ ಪರಿಚಯದಿಂದ ಆನಂದಪಟ್ಟೆನು. ಸರಿ, ಗ್ರಂಥಮಾಲೆಯ ಸಂಪಾದಕನಾದ ನಾನು ಇಂಥವರ ಲಾಭಪಡೆಯದೇ ಬಿಡುವದೆಂತು! ಕೇಳಿದೆ. **ಸಂಜೀವಿನಿ ಪ್ರಕಾಶನಕ್ಕೆ** ಒಂದು ಕಾದಂಬರಿಯನ್ನು ಬರೆದು ಕೊಡಲು ಶ್ರೀ ಬಿ. ಜಿ. ಕುಲಕರ್ಣಿಯವರನ್ನು ಕೇಳಿದೆನು. ಅವರೂ ಒಪ್ಪಿದರು. ಸಕಾಲಕ್ಕೆ ಬರೆದುಕೊಟ್ಟುಬಿಟ್ಟರು. ಅದಕ್ಕಾಗಿ ಅವರಿಗೆ ನಾನು ಕೃತಜ್ಞನು.

ಶ್ರೀ. ಬಿ. ಜಿ. ಕುಲಕರ್ಣಿಯವರು ಇಂಗ್ಲೀಷದಲ್ಲಿಯೂ ಅನೇಕ ಲೇಖನಗಳನ್ನು ಬರೆದಿದ್ದಾರೆ. "K. C. Roy's Weekly," "Bombay Chronicle" "Human Affairs" "Indian Social Reformer" ಮೊದಲಾದ ಪತ್ರಿಕೆಗಳ ಓದುಗರಾದ ಅಖಿಲ ಭಾರತೀಯರು ಇವರ ಲೇಖನಗಳನ್ನು ಓದಿದ್ದಾರೆ, ಓದುತ್ತಿದ್ದಾರೆ. ಇಂಥವರು ಬರೆದ ಈ ಕಾದಂಬರಿಯು ಪ್ರಥಮ ಪ್ರಯತ್ನವಾದರೇನಾಯಿತು, ಕಾದಂಬರಿ ಲೋಕದಲ್ಲಿ ಇದಕ್ಕೆ ಸ್ಥಾನವಿದೆ ಎಂದು ನಾನು ನಂಬುತ್ತೇನೆ.

ಈ 'ದರ್ಶನ'ವನ್ನು ವೇಳೆಗೆ ಸರಿಯಾಗಿ ಅಚ್ಚುಮಾಡಿ ಪ್ರಕಾಶನಕ್ಕೆ ನೆರವಾದ **ಆದರ್ಶ ಮುದ್ರಣ**ದವರಿಗೆ ನಾನು ಋಣಿ.

ಹುಬ್ಬಳ್ಳಿ
೧-೯-೪೮

**ಕಲಮುದಾನಿ ಗುರುರಾಯ**

# ಪ್ರಯಾಣಿಕರಿಗೆ ಸೂಚನೆ

ಈ ಗ್ರಂಥದ ಗ೧ನೇ ಪುಟದಲ್ಲಿ ಒಂದೆರಡು ವಾಕ್ಯಗಳೂ ವಾಕ್ಯಾಂಗಗಳೂ ಅದಲು ಬದಲಾಗಿರುವದರಿಂದ ವಾಚಕರ ಸುಖಕರ ಪ್ರಯಾಣಕ್ಕೆ ಅಲ್ಪಸ್ವಲ್ಪ ಆತಂಕ ಉಂಟಾಗುವ ಸಂಭವವಿದೆ. ಅದನ್ನು ಪರಿಹರಿಸಲು ಆಯಾಯ ವಾಕ್ಯಗಳನ್ನು ಸರಿಪಡಿಸಿ ಕೆಳಗೆ ನಿಲ್ಲಿಸಲಾಗಿದೆ:—

**. . . . . . . . ಆದರೆ ಮುಂದೆ ಬರಬರುತ್ತ ಛತ್ರಪತಿಗಳು ತಮ್ಮ ರಾಜ್ಯವನ್ನು ವೈಭವವನ್ನು ಕಳೆದುಕೊಂಡರು. ತಾಳೀಕೋಟೆಯ ಕಾಳಗದ ತರುವಾಯ ವೈಭವಪುರದ ಕೆಲವು ಭಾಗವನ್ನು ವಿಜಾಪುರ ಸುಲ್ತಾನರೂ, ಇನ್ನಷ್ಟು ಭಾಗವನ್ನು ಹೈದರನೂ ಕೆಲ ಭಾಗವನ್ನು ಟೀಪುಸುಲ್ತಾನನೂ ಮತ್ತಷ್ಟು ಭಾಗವನ್ನು ನಿಜಾಮನೂ ಕಸಿದುಕೊಂಡಿದ್ದರು. ಚೌಥಾಯಿ ಸರದೇಶಮುಖಿಯಲ್ಲಿ ಪೇಶ್ವೆಯವರು ಕೆಲವೊಂದು ಭಾಗವನ್ನು ತೆಗೆದುಕೊಂಡರು. ಆನೆ ತೆಗೆದುಕೊಂಡು ಅಡಿಕೆ ಕೊಟ್ಟರೆಂಬಂತೆ ಈ ಭಾಗಕ್ಕೆ ಪ್ರತಿಯಾಗಿ ಅವರು ವೈಭವಪುರಕದರಿಗೆ ಛತ್ರಪತಿ ಎಂಬ ಬಿರುದನ್ನು ಕೊಟ್ಟರು ಸನ್ಮಾನಾರ್ಥವಾಗಿ ಕೊಟ್ಟಿದ್ದು ಅಡಿಕೆಯಾದರೇನು, ಆನೆಯಾದರೇನು ಎಂದು ಛತ್ರಪತಿಗಳು ಆ ಬಿರುದನ್ನು ಗೌರವದಿಂದ ಹಂಚಿಕೊಳ್ಳುತ್ತಿದ್ದರು. ಸಬಸಿಡಿಯರಿ ಪದ್ಧತಿಯ ಸಲುವಾಗಿ ಇಂಗ್ಲೀಷರು ಒಂದಿಷ್ಟು ಭಾಗವನ್ನು ನುಂಗಿದರು. ಹೀಗಾಗಿ ವೈಭವಪುರ ಸಂಸ್ಥಾನವು ತೀರ ಸಣ್ಣದಾಯಿತು . . . . . . .**

# ದರ್ಶನ.

## ಪದ್ಮನಾಭ

ಜೂನ ೨೦, ಅಂದೇ ಮಹಮ್ಮದಪುರದ ಅಶೋಕ ಕಾಲೇಜು ಬೇಸಿಗೆಯ ಸೂಟಿಯ ನಂತರ ತೆರೆಯಲ್ಪಟ್ಟಿತ್ತು. ಕಾಲೇಜದ ಆವಾರದಲ್ಲಿ ಎಲ್ಲೆಡೆಗೆ ಗೊಂದಲವೇ ಗೊಂದಲ.

ಒಂದು ಕಡೆಗೆ ಮೇಲಿನ ವರ್ಗಗಳ ವಿದ್ಯಾರ್ಥಿಗಳು ಕಾಲೇಜು ಚುನಾವಣೆಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಇನ್ನೊಂದು ಕಡೆಗೆ ಹಲವು ವಿದ್ಯಾರ್ಥಿಗಳು ಆ, ಈ ಪರೀಕ್ಷೆಗಳ ಫಲಿತಾಂಶಗಳನ್ನು ಮೆಲಕು ಹಾಕುತ್ತ ನಿಂತಿದ್ದಾರೆ. ಹೊಸದಾಗಿ ಬರಲಿರುವ ಪ್ರಾಧ್ಯಾಪಕರ ವಿಷಯವಾಗಿ ಒಂದು ಗುಂಪು ತರ್ಕ ವಿತರ್ಕ ನಡೆಸಿದೆ. ಇನ್ನೊಂದು ಗುಂಪು ಕಾಲೇಜನ್ನು ಬಿಟ್ಟುಹೋದ, ಬಿಡಲಿಚ್ಛಿಸುವ ಅಥವಾ ಬಿಡಲು ಹೊಂಚುಹಾಕಿದ ಪ್ರಾಧ್ಯಾಪಕರ ಬಗ್ಗೆ ವಿಚಾರವಿನಿಮಯ ನಡೆಸಿದೆ. ಕಾಲೇಜವೆಂದರೆ ನಂದನವನ, ಎಂಬ ಸರ್ವಸಾಮಾನ್ಯ ಜನರ ಅಭಿಪ್ರಾಯವನ್ನು ಸಿದ್ಧ ಮಾಡಿಕೊಡಲು ಏನೊ ಎನ್ನುವಂತೆ ಕೆಲವು ತರುಣಿಯರು ಒನಪು ಒಯ್ಯಾರಗಳಿಂದ ಅಲೆಯುತ್ತಿದ್ದಾರೆ. ನಂದನವನದ ಸೌಂದರ್ಯಕ್ಕೆ ಮುಗ್ಧವಾದ ಉದಯೋನ್ಮುಖ ಕವಿಗಳ ಗಣವೊಂದು ವಿಹರಿಸುತ್ತಿದೆ. ಅಂದು ವರ್ಗಗಳಿಲ್ಲದ್ದರಿಂದ ಪ್ರಾಧ್ಯಾಪಕರ ಕೋಣೆಯಲ್ಲಿಯೇ ಕುಳಿತ ಪ್ರೊಫೆಸರರು ತಮ್ಮಲ್ಲಿ ಯಾರ್ಯಾರಿಗೆ ಎಲ್ಲೆಲ್ಲಿ ಉತ್ತಮ 'ಚಾನ್ಸ' ದೊರೆಯಬಹುದೆಂಬುದನ್ನು ಗುಪ್ತವಾಗಿ ಚರ್ಚಿಸುತ್ತಿದ್ದಾರೆ. ಎಲ್ಲಿ ನೋಡಿದರೂ ಮುಖಗಳೇ, ಎಲ್ಲಿ ಕಿವಿಗೊಟ್ಟರೂ ಮಾತುಗಳೇ.

ಹಿಂದಿನ ಕಾಲದ ಕವಿಯೊಬ್ಬನನ್ನು ತಂದು ಇಂದು ಕಾಲೇಜಿನಲ್ಲಿ ಹೊಗಿಸಿದ್ದರೆ ಅವನು ಅದಕ್ಕೆ ಗ್ರೀಷ್ಮದಲ್ಲಿ ಸಹಸ್ರಾಂಶುವಿನ ಪ್ರಚಂಡ ಬಿಸಿಲಿಗೆ ಬತ್ತಿಹೋದ ನದಿಗೆ ಮೇಘರಾಜನ ಕೃಪೆಯಾದೊಡನೆ ಮಹಾಪೂರ ಬಂದಂತೆ ಬೇಸಿಗೆಯಲ್ಲಿ ನಿರ್ಜನವಾದ ಕಾಲೇಜ ಇಂದು ಸಂತೆಯಾಗಿದೆ. ಎಂದು ಮುಂತಾಗಿ ಅವನು ವರ್ಣಿಸಬಹುದಾಗಿತ್ತು.

ಅಂದು ಕಾಲೇಜಿಗೆ ಮಹಾಪೂರ ಬಂದುದೇನೊ ನಿಜ, ಆದರೆ ಆ ಮಹಾಪೂರು ಕಾಲೇಜ ಕಚೇರಿಯಲ್ಲಿ ಮಡುಗಟ್ಟಿತ್ತು. ಅಲ್ಲಿ ಹೊಸದಾಗಿ ಹೆಸರು ಹಚ್ಚುವವರು ಅಷ್ಟು ಮುಕುರಿದ್ದರು. ಇಷ್ಟು ಜನ ಏಕೆ ಕಲೆಯುವರು. ಇಷ್ಟು ಏಕೆ ಕಲಿಯುವರು ಕಲಿತು ಏನು ಮಾಡಲಿದ್ದಾರೆ. ಎಂಬ ವಿಚಾರಗಳು ಆ ತರುಣ ತರುಣಿಯರ ಮನಸ್ಸಿನಲ್ಲಿ ತಪ್ಪಿ ಕೂಡ ಹಾಯ್ದಿರಲಿಲ್ಲ. ಇಂಥ ವಿಚಾರಗಳ ಗುತ್ತಿಗೆಯನ್ನು ಅಲ್ಲಿ ಕುಳಿತ ಕಾರಕೂನರೇ ಹೊತ್ತಿದ್ದರು. ಒಂದು ಕೈಯಲ್ಲಿ ಹಣ ಇನ್ನೊಂದು ಕೈಯಲ್ಲಿ ಅರ್ಜಿಯನ್ನು ಹಿಡಿದುಕೊಂಡ ಹುಡುಗ ಹುಡಿಗೆಯರ ಸಾಲುಗಳನ್ನೂ, ಹುಡುಗೆಯರ ಹಿಂದಿನಿಂದ ಪಾಲಕರ ಸಾಲಗಳನ್ನೂ, ಕಂಡು ಅವರು ಹೌಹಾರಿಹೋಗಿದ್ದರು. ಸಾಕ್ಷಾತ್ ಶ್ರೀ ಕೃಷ್ಣ ಪರಮಾತ್ಮನೆ ಅವತಾರ ಧರಿಸಿಬಂದರೆ ಮಾತ್ರ ಈ ಎಲ್ಲ ಹುಡುಗ ಹುಡಿಗೆಯರ ಹೆಸರುಗಳನ್ನು ಹಚ್ಚಿಕೊಳ್ಳುವದು ಸಾಧ್ಯ, ಎಂದು ದೇವರಲ್ಲಿ ನಂಬುಗೆಯಿದ್ದ ಹಿರಿಯ ಕಾರಕೂನನೊಬ್ಬನು ಆಗಾಗ್ಗೆ ನುಡಿಯುತ್ತಿದ್ದನು. ಆದರೆ ಕೇಳುವರಾರು?

ಹೌದು ಕೇಳುವರಾರು? ಇದೇ ವಿಚಾರ ವಿದ್ಯಾರ್ಥಿಗಳು ಮನದಲ್ಲಿಯೂ ಮಾಡುತ್ತಿದ್ದರು. ತಾಸುಗಟ್ಟಲೆ ನಿಂತರೂ ನಮ್ಮನ್ನೂ ಕೇಳುವವರಾರು? ಸಂತೆಯಲ್ಲಿ ಯಾರು ಯಾರನ್ನು ಕೇಳುವರು? ಎಲ್ಲರೂ ಯುಃ ಕಕ್ಷಿತ ವ್ಯಕ್ತಿಗಳೆ.

ಆದರೆ ಪದ್ಮನಾಭನು ಮಾತ್ರ ಎಲ್ಲರ ಲಕ್ಷ್ಯವನ್ನು ಒಮ್ಮೆಲೆ ತನ ಕಡೆಗೆ ಸೆಳೆದುಕೊಂಡನು. ಯಾರೂ ಯಾರನ್ನೂ ಕೇಳುವದಿಲ್ಲ. ಎಂದು ಲೆಕ್ಕ ಹಾಕುತ್ತಿದ್ದ, ಎಲ್ಲರೂ ಅವನನ್ನು ಒಮ್ಮೆಲೆ ಪ್ರಶ್ನಿಸತೊಡಗಿದರು. ನಿರಭ್ರವಾದ ಆಕಾಶದಲ್ಲಿ ಒಮ್ಮೆಲೆ ಕಾರ್ಮೋಡಗಳು ಕಲೆತು ಗುಡುಗು ಮಿಂಚು ಪ್ರಾರಂಭವಾದವು.

ಯಾಕಂದರೆ ಎಲ್ಲರನ್ನೂ ಹಿಂದಕ್ಕೆ ದೂಡಿ ಪದ್ಮನಾಭನು ಕಾರಕೂನರ ಮೇಜಿನ ಹತ್ತರಹೋಗಿ ನಿಂತನು.

"ಮಿಸ್ಟರ ನಿಮ್ಮ 'ಟರ್ನ' ಬಂದಿಲ್ಲ"
"ಮಿಸ್ಟರ ನಿಮ್ಮ ಸರತಿ ಇನ್ನೂ ದೂರ"
"ಅವರ ತೈಲೀನ s 'ಟರ್ನ' ಆಗ್ಯೇತಿ"
ಮೋಶಾ ಬಾಜೀರಾವ ನೈ ?"

ಮಿಸ್ಟರ, ಮಿಸ್ಟರ. ನಾಳೆ ನೀವು ಕಾಲೇಜಸ್ಟೂಡಂಟ ಆಗುವವರು. ಶಿಸ್ತಿಗೇಡಿ ಆದರ ನಡೆಯಲಾರದು. ನಿಮ್ಮ ಸರತಿ, ಬರಲಿ ಬರ್ರಿ. ಇಲ್ಲವಾದರೆ ನಿಮ್ಮ ಹೆಸರನ್ನೇ ಹಚ್ಚಿಕೊಳ್ಳುವದಿಲ್ಲ." ಎಂದು ಪ್ರಧಾನ ಕಾರಕೂನರು ಎಚ್ಚರಿಸಿದರು.

"ಯಾವದೂ ಕಾಲೇಜದಾಗ ಹೆಸರ ಹಚ್ಚಿಗೊಳಧಾಗ ಮಾಡತೇವ!" ಎಂದು ಕಿರಿ ಕಾರಿಕೂನರೊಬ್ಬರು ಸ್ವರಗೂಡಿಸಿದರು.

ಹೆಸರು ಹಚ್ಚಿಸುವವರ ಸಾಲಿನಲ್ಲಿ ತಾಸುಗಟ್ಟಲೆ ನಿಲ್ಲುವದೊಂದು ಆನಂದ. ಆ ಆನಂದ ತನಗಿಲ್ಲೆಂದು ಪದ್ಮನಾಭನಿಗೆ ಒಳಗಿಂದೊಳಗೆ ಬಹಳ ಕೆಡಕೆನಿಸಿತು. ಆದರೆ —

"ನನಗೆ ಹೆಸರು ಹಚ್ಚಬೇಕಾಗಿಲ್ಲ. ಐದು ದಿವಸಗಳ ಹಿಂದೆ ಹಚ್ಚಿಸಿದ ಹೆಸರನ್ನು ತೆಗೆಸಬೇಕಾಗಿದೆ. ಮತ್ತು 'ಕಾಶನ್ ಮನಿ' ಮರಳಿ ಪಡೆಯಬೇಕಾಗಿದೆ; ಎಂದು ಪದ್ಮನಾಭ ಆರ್ತಸ್ವರದಲ್ಲಿ ಹೇಳಿದ. ಎಲ್ಲರಿಗೂ ಆಶ್ಚರ್ಯದೊಡನೆ ಖೇದವೂ ಆಯಿತು. ಕರ್ಮೋಡಗಳು ಬಂದ ಹಾದಿಯನ್ನು ಹಿಡಿದು ಹಾರಿಹೋದವು.

ಹುಡುಗರು ವಿರೋಧವಿಲ್ಲದೆ ಹಾಗೆ ನಿಂತುಕೊಂಡರು. ಸಹಾನುಭೂತಿಯ ಮಧುರ ಸ್ವರವೊಂದು ಒಂದು ಸಾಲಿನಲ್ಲಿ ಕೇಳಬಂದಿತು. ಆದರೆ ಕಾರಕೂನರ ಸಿಟ್ಟು ಮಾತ್ರ ನೆತ್ತಿಗೇರಿತು.

"ನೀವು ಕಾಲೇಜೆಂದರೆ ಶಾಲೆಯೆಂದು ತಿಳಿದಿರುವಿರಾ? ಹೆಸರು ಹಚ್ಚುವದು ಬೇಡಾಗಿದ್ದರೆ ಐದು ದಿನಸಗಳ ಹಿಂದೆ ಬುದ್ಧಿಯನ್ನೆಲ್ಲಿಟ್ಟಿದ್ದಿರಿ?

ನಿಮ್ಮ ಅವಿಚಾರದಿಂದ ಎಷ್ಟು ಜನರಿಗೆ ತೊಂದರೆಯಾಯಿತೆಂಬುದು ನಿಮಗೆ ಗೊತ್ತೋ ? ಈ ಜನ ಇಲ್ಲಿ ತಡೆದು ನಿಂತರು. ನಮ್ಮ ರಜಿಸ್ಟರಗಳಲ್ಲಿ ಮತ್ತೆ ಕಾಟಕೂಟ. ಬೇರೀಜ ವಜಾಬಾಕಿ ನೀವು ಹೆಸರು ಹಚ್ಚಿದ್ದರಿಂದ ನಾವು ಬೇರೆಯವರೊಬ್ಬರಿಗೆ ಸ್ಥಳವಿಲ್ಲೆಂದು ತಿಳಿಸಬೇಕಾಯಿತು ಅವರಿಗೂ ಕಷ್ಟ. ಮೊದಲೇ ವಿಚಾರ ಮಾಡಬೇಕು." ಎಂದು ಪ್ರಧಾನ ಕಾರಕೂನರು ಎಲ್ಲರಿಗೂ ಕೇಳಿಸುವಂತೆ ದಕ್ಷತೆವಹಿಸಿ ದೊಡ್ಡ ದನಿಯಲ್ಲಿ ಹೇಳಿದರು.

"ಈಗ ಹೆಸರು ತೆಗೆದೊಗೆಯುತ್ತೇವೆ. ಇನ್ನೈದು ದಿವಸಕ್ಕೆ ಮತ್ತೆ ಹಚ್ಚಲು ಬರಬೇಡಿರಿ!" ಎಂದು ಮರಿಕಾರಕೂನ ದನಿಗೂಡಿಸಿದ. ಇನ್ನೊಬ್ಬ ಕಾರಕೂನರು ಇದೇ ಮಾತನ್ನೇ ಪದ್ಮನಾಭನಿಗೆ ಇಂಗ್ಲೀಷಿನಲ್ಲಿ ಹೇಳಲು ಪ್ರಯತ್ನಿಸಿದರು.

ಕಾಲೇಜನ್ನು ಬಿಡಬೇಕಾಗಿ ಬಂದುದರಿಂದ ಪದ್ಮನಾಭನಿಗೆ ಬಹಳ ದುಃಖವೆನಿಸಿತ್ತು. ಆದ್ದರಿಂದ ಮೇಲಿನ ಮಾತುಗಳಿಂದ ಅವನಿಗೆ ವ್ಯಥೆಯಾದರೂ ವೇದನೆಯಾಗಲಿಲ್ಲ.

ಮೊದಲೆ ಏಕೆ ವಿಚಾರ ಮಾಡಬಾರದು; ಐದು ದಿನಗಳ ಹಿಂದೆ ಪದ್ಮನಾಭನು, ಅಥವಾ ಅವನ ಪಾಲಕರು ತಮ್ಮ ಬುದ್ಧಿಯನ್ನು ಒತ್ತೀ ಇಟ್ಟಿದ್ದರೆ ?

ಪದ್ಮನಾಭನು ಮ್ಯಾಟ್ರಿಕ್ ಪಾಸಾದ ದಿನವೇ ಅವನ ತಂದೆಯವರು ಅವನ ಧ್ಯೇಯವನ್ನು ನಿರೂಪಿಸಿದ್ದರು. ನಮ್ಮ ಮಧ್ಯಮ ವರ್ಗದ ಹುಡುಗ ಹುಡಿಗೆಯರ ಧ್ಯೇಯಗಳನ್ನು ನಮ್ಮಪಾಲಕರೆ ನಿರೂಪಿಸುವರಲ್ಲವೆ?

ಪದ್ಮನಾಭನನ್ನು ಕರೆದು ಅವನ ಬೆನ್ನು ಚಪ್ಪರಿಸಿ ಅವನ ತಂದೆಯವರು ಹೀಗೆ ಹೇಳಿದರು, "ನೀನು ಪರೀಕ್ಷೆಯಲ್ಲಿ ಪಾಸಾದುದನ್ನು ಕೇಳಿ ನನಗೆ ಅತ್ಯಾನಂದವಾಗುತ್ತದೆ ಆದರೆ ಬಬ್ಬನೆ ಮಗನಾದ ನಿನ್ನನ್ನು ಕೂಡ ಮುಂದಕ್ಕೆ ಕಳಿಸಲು ನನ್ನಲ್ಲಿ ಶಕ್ತಿಯಿಲ್ಲವೆಂದು ದುಃಖವೂ ಆಗುವದು. ಹಾಸಿಗೆ ಇದ್ದಷ್ಟು ಕಾಲುಚಾಚಬೇಕೆಂದು ಹೇಳುತ್ತಾರೆ. ಅಷ್ಟೇ ಮಾಡೋಣ. ನಮ್ಮಂಥ ಸ್ಥಿತಿಯಲ್ಲಿದ್ದವರ ಹುಡುಗರಂತೆ ನೀನೂ

ಒಂದು ನೌಕರಿ ಹಿಡಿ. ನಿನಗೊಂದು ಸರಕಾರಿ ನೌಕರಿಯನ್ನು ಎಲ್ಲಿಯಾದರೂ ದೊರಕಿಸಿಕೊಡುವೆ. ಸದರಿನಿಂದ ನೂರಾರು ರೂಪಾಯಿ ಹೋದರೂ ಹೋಗಲಿ."

ಇದೇ ಧ್ಯೇಯ ನಿರೂಪಣೆ. ಪದ್ಮನಾಭನು ಇದಕ್ಕೊಪ್ಪಿದ. ತನ್ನ ಮನೆತನದ ಪರಿಸ್ಥಿತಿಯ ಅರಿವು ಅವನಿಗೆ ಮೊದಲಿನಿಂದಲೂ ಗೊತ್ತಿದ್ದುದರಿಂದ ಅವನ ಮನಸ್ಸು ಇದಕ್ಕೆ ಮೊದಲೆ ಸಿದ್ಧವಾಗಿತ್ತು. ಮೂರನೆ ದಿನದಿಂದಲೆ ಅವನು ಟಾಯಿಪ-ರಾಯಿಟಿಂಗ ಕ್ಲಾಸಿಗೆ ಹೋಗಲು ಪ್ರಾರಂಭಿಸಿದ.

ಆದರೆ ಮುಂದೆ ಒಂದೆರಡು ದಿನಗಳು ಕಳೆಯುವಷ್ಟರಲ್ಲಿ ಪದ್ಮನಾಭನ ತಂದೆಯವರು ಅವನನ್ನು ಕಾಲೇಜಿಗೆ ಕಳುಹಲು ನಿರ್ಧರಿಸಿದರು. ಈ ಹೊಸ ನಿರ್ಧಾರಕ್ಕೆ ಒಂದು ಚಿಕ್ಕ ಘಟನೆಯು ಕಾರಣವಾಯಿತು.

ಪದ್ಮನಾಭನ ತಂದೆಯವರಿಗೆ ಒಕ್ಕಲತನ ಶಾಖೆಯ ಒಂದು ಕಚೇರಿಯಲ್ಲಿ ಹಿರಿಯ ದರ್ಜೆಯ ಕಾರಕೂನನ ಕೆಲಸವಿದ್ದಿತು. ತಮಗೆ ಸಿಗುವ ವೇತನದಲ್ಲಿ ಮನೆಯ ವೆಚ್ಚವನ್ನೂ ನೋಡಿಕೊಂಡು, ಹುಡುಗನ ಶಿಕ್ಷಣ ಸಾಗಿಸಿ, ಬೇನೆ ಬೇಸರಿಕೆಯ ಊರು ಕೇರೆಗಳ ಅನಿರೀಕ್ಷಿತ ವೆಚ್ಚವನ್ನು ನಿರ್ವಹಿಸಿ ಆಯವ್ಯಯಗಳನ್ನು ಸಮವಾಗಿರಿಸಬೇಕಾದರೆ ಅವರಿಗೆ ಸಾಕು ಬೇಕಾಗುತ್ತಿತ್ತು. ಆದರೂ ಪದ್ಮನಾಭನ ತಂದೆಯವರ ಸಂಸಾರವು ತೂಕ ತಪ್ಪದೆ ಸಾಗಿದ್ದಿತು. ಎರಡನೇ ಜಾಗತಿಕ ಯುದ್ಧವು ಪ್ರಾರಂಭವಾದ್ದರಿಂದ ದರಗಳು ಹಾವು ಏರಿದಂತೆ ರಭಸದಿಂದ ಏರತೊಡಗಿದ್ದವು. ಪರಿಸ್ಥಿತಿಯಲ್ಲಿ ಇಂಥ ಸಂಸಾರದ ಲೆಕ್ಕವನ್ನು ಬಾಯಿಗೂಡಿಸುವದು ಚಿತ್ರಗುಪ್ತನಿಗೂ ಅಸಾಧ್ಯವಾದಮಾತು. ಅಂಥಹದರಲ್ಲಿ ಮಗನನ್ನು ಕಾಲೇಜಿಗೆ ಕಳಿಸುವದೆಂದರೆ ಹಾದಿಯಿಂದ ಹೋಗುವ ಆನೆಯನ್ನು ಮನೆಯಲ್ಲಿ ತಂದು ಸಾಕಿದಂತಾಗುವಂತಿತ್ತು. ಆದ್ದರಿಂದ ಅವರು ಮೊದಲೇ ಹಾಸಿಗೆ ಇದ್ದಷ್ಟೇ ಕಾಲುಚಾಚಲು, ನಿರ್ಧರಿಸಿದರು.

ಆದರೆ ಅಷ್ಟರಲ್ಲಿ ದೇವರಿಗೆ ಏನು ಎನ್ನಿಸಿತೊ ಏನೋ! ಪದ್ಮನಾಭನ ತಂದೆಯ ಕಚೇರಿಯ ವರಿಷ್ಠ ಕಾರಕೂನರು ಹೃದಯ ವಿಕಾರದಿಂದ ಒಮ್ಮೆಲೆ ಮರಣಹೊಂದಿದರು. ಈ ದುರ್ಘಟನೆಯಿಂದ ಒಂದು ಕುಟುಂಬವು

ಅದೆಷ್ಟು ಸಂಕಟಕ್ಕೀಡಾಗಿರಬಹುದು; ದುಃಖಸಾಗರದಲ್ಲಿ ಮುಳುಮುಳುಗಿ ಎದ್ದಿರಬಹುದು. ಆದರೆ ಪದ್ಮನಾಭನ ಮನೆಯಲ್ಲಿ ಅದರಲ್ಲೂ ವಿಶೇಷವಾಗಿ ಪದ್ಮನಾಭನಿಗೆ ಆನಂದವಾಯಿತು. ಯಾಕೆಂದರೆ ಪದ್ಮನಾಭನ ತಂದೆಯವರಿಗೆ ವರಿಷ್ಠ ಕಾರಕೂನನ ಹುದ್ದೆಯು ಸಿಕ್ಕಿತು. ಅವರ ವೇತನವು ಒಮ್ಮೆಲೆ ಹೆಚ್ಚಾಯಿತು. ಪದ್ಮನಾಭನನ್ನು ಕಲೇಜಿಗೆ ಕಳುಹುವದು ಅವರಿಗೆ ಸುಲಭವೆನಿಸತೊಡಗಿತು. ಕೂಡಲೆ ಅವರು ತಮ್ಮ ನಿರ್ಧಾರವನ್ನು ಪುನರ್ವಿಮರ್ಶಿಸಿ ಬದಲಿಸಿದರು. ಪದ್ಮನಾಭನು ಎಫ್. ವಾಯ್. ಸಾಯಿನ್ಸಿಗೆ ಹೆಸರು ಹಚ್ಚಿಬಂದನು.

ಪದ್ಮನಾಭನ ತಂದೆಯವರು ತಮ್ಮ ನಿರ್ಧಾರವನ್ನು ಪುನರ್ವಿಮರ್ಶಿಸಿದಂತೆ ಸರಕಾರವು ಇತ್ತ ತನ್ನ ನಿರ್ಧಾರವನ್ನು ಪುನರ್ವಿಮರ್ಶಿಸಿತು. ಅಂದರೆ ಮತ್ತೊಂದು ದುರ್ಘಟನೆ ಸಂಭವಿಸಿ ಪದ್ಮನಾಭನ ಹಾಗೂ ಅವನ ತಂದೆಯವರ ಕಲ್ಪನಾಸಾಮ್ರಾಜ್ಯಗಳು ನೆಲಸಮವಾದವು.

ಒಕ್ಕಲತನ ಶಾಖೆಯ ಪುಣೆಯಲ್ಲಿದ್ದ ಕೇಂದ್ರ ಕಚೇರಿಯಲ್ಲಿಯ ಒಂದು ವರಿಷ್ಠ ಕಾರಕೂನನ ಸ್ಥಳವನ್ನು ಸರಕಾರದವರು ಕಡಿಮೆ ಮಾಡಿದರಂತೆ, ಕೂಡಲೆ ಶಾಖೆಯವರು ಅಲ್ಲಿಯ ವರಿಷ್ಠ ಕಾರಕೂನನ್ನು ಪದ್ಮನಾಭನ ತಂದೆಯ ಸ್ಥಳಕ್ಕೆ ವರ್ಗಾಯಿಸಿದರು. ಪದ್ಮನಾಭನ ತಂದೆಗೆ ಮತ್ತೆ ಮೂಲಪದವು, ಮೂಲವೇತನವು ಪಾಲಿಗೆ ಬಂದಿತು. ಸ್ವಲ್ಪದರಲ್ಲಿ ಹೇಳಬೇಕಾದರೆ ಪದ್ಮನಾಭನು ಕಾಲೇಜಿಗೆ ಶರಣುಹೊಡೆದು ಮತ್ತೆ ಟಾಯಿಪರಾಯಟಂಗ ಕ್ಲಾಸಿನ ಕಡೆಗೆ ಮೋರೆ ಹೊರಳಿಸಬೇಕಾಗಿ ಬಂತು.

ಈಗಿನಷ್ಟು ಆಗ ನೌಕರಿಗಳು ಸುಲಭವಾಗಿರಲಿಲ್ಲ. ನೌಕರಿಯ ಕಾಮಧೇನುವಾದ ಸೀದಾ ಶಾಖೆಯು ಆಗ ಇನ್ನೂ ಶೈಶವಾವಸ್ಥೆಯಲ್ಲಿತ್ತು. ಯಾವದೊಂದು ಕಚೇರಿಯಲ್ಲಿ ಒಂದು ಸ್ಥಳವು ತೆರವಾದರೂ ಯಾರಿಗೂ ಸುಳಿವು ಹತ್ತುವ ಮೊದಲೇ ಅದು ತುಂಬಲ್ಪಡುತ್ತಿತ್ತು. ಪದ್ಮನಾಭನು ನೌಕರಿಗಾಗಿ ಅನೇಕ ಕಡೆಗೆ ಅನೇಕ ರೀತಿಯಿಂದ ಪ್ರಯತ್ನಿಸಿದ. ಎಲ್ಲ ಸರಕಾರಿ ಕಚೇರಿಗಳಿಗೊಂದೊಂದು ಅರ್ಜಿಯನ್ನಿಟ್ಟಿದ್ದ. ಊರಲ್ಲಿಯ ಎಲ್ಲ ದೊಡ್ಡ ವ್ಯಾಪಾರಸ್ಥರಿಗೂ ಉದ್ದಿಮೆದಾರರಿಗೂ ಭೆಟ್ಟಿಕೊಟ್ಟ. ಇನ್ನು

ರನ್ನು ಕಂಪನಿಗಳ ಶಾಖೆಗಳಲ್ಲಿ ಸ್ಥಾವರ ಬ್ಯಾಂಕುಗಳಲ್ಲಿ ಹಣಕಿಕ್ಕಿದ. ಎಲ್ಲಿಯೂ ನೌಕರಿ ಸಿಗಲಿಲ್ಲ. ಕೊನೆಗೆ ಮಾಧ್ಯಮಿಕ ಶಾಲೆಗಳ ಹೆಡ್ಡ್ ಮಾಸ್ತರರಿಗೂ ಶರಣುಹೋದ, ವ್ಯರ್ಥವಾಯಿತು. ಅವನ ತಂದೆಯವರೂ ಎಷ್ಟೆಷ್ಟೋ ಪ್ರಯತ್ನಪಟ್ಟರು. ಸಾವು ಲಂಚ ವಶೀಲಿ ಮೊದಲಾದ ನೌಕರಿ ದೊರಕಿಸುವ ಎಲ್ಲ ಉಪಾಯಗಳನ್ನು ಪ್ರಯೋಗಿಸಿದರು. ಆದರೆ ಏನೂ ಸಾಧಿಸಲಿಲ್ಲ. ಎಲ್ಲಿಯೂ ಕಲ್ಲು ತಾಗಲಿಲ್ಲ.

ಒಂದು ದಿನ ಪದ್ಮನಾಭನ ತಂದೆಯವರು ಸರ್ವವಿಧದಲ್ಲೂ ನಿರಾಶಿತರಾಗಿ, ಈ ಗ್ರಹದ ಮೇಲೆ ಎಲ್ಲಿಯೂ ನೌಕರಿ ಇಲ್ಲ. ಮಂಗಳ ಲೋಕದಲ್ಲಿಇದ್ದರೆ ಇರಬಹುದೆಂದು ನಿಟ್ಟುಸುರುಬಿಡುತ್ತ ಸೂರ್ಯನ ಕಡೆಗೆ ದೃಷ್ಟಿಯಿಟ್ಟುಕೊಂಡು ಕುಳಿತಿದ್ದರು. ಅಷ್ಟರಲ್ಲಿ ಮುಂಬಯಿಯ ಒಂದು ದೊಡ್ಡ ಕಚೇರಿಯಲ್ಲಿ ನೌಕರಿಗಿದ್ದ ಅವರ ಮಿತ್ರರು ಬಂದರು.

"ಏನೋ ರೈತಾ ಏನು ಸಮಾಚಾರ?" ಎಂದು ಕುಶಲ ಪ್ರಶ್ನೆಯನ್ನು ಕೇಳುತ್ತಲೇ ಅವರು ಒಳಗೆ ಬಂದರು. ಪದ್ಮನಾಭನ ತಂದೆಯವರು ಒಕ್ಕಲತನ ಶಾಖೆಯಲ್ಲಿ ಕೆಲಸಕ್ಕಿದ್ದುದರಿಂದ ಅವರ ಮಿತ್ರ ಪರಿವಾರವು ಅವರಿಗೆ ರೈತನೆಂದೇ ಕರೆಯುತ್ತಿತ್ತು.

ಆ ಮಾತು ಈ ಮಾತು ಆದಬಳಿಕ ಪದ್ಮನಾಭನ ತಂದೆಯವರು ತಮ್ಮ ತಲೆ ತಿನ್ನುತ್ತಿದ್ದ ಸಮಸ್ಯೆಯನ್ನು ಅವರ ಮುಂದೆ ಮಂಡಿಸಿದರು. ಮುಂಬಯಿ ಮಿತ್ರರಿಗೆ ಅವರ ಸಮಸ್ಯೆ ಸಮಸ್ಯೆಯಾಗಿ ಕಾಣಲೇ ಇಲ್ಲ.

"ಇಷ್ಟೇಕೆ ನೌಕರಿ ಚಿಂತೆ? ನಿನ್ನ ಹುಡುಗನನ್ನು ಮುಂಬಯಿಗಟ್ಟು. ನಾನು ನೋಡಿಕೊಳ್ಳುತ್ತೇನೆ," ಎಂದು ಅವರು ಪ್ರಾರಂಭದಲ್ಲಿಯೇ ಆಶ್ವಾಸನಕೊಟ್ಟರು. ಮತ್ತು ಮುಂಬಯಿಯ ಮಹಿಮೆಯನ್ನು ಅವರು ಹಾಡಿಹರಿಸಿದರು.

ಮುಂಬಯಿಗೆ ಬಂದ ಭಿಕ್ಷಾಪತಿಗಳು ಲಕ್ಷಾಪತಿಗಳಾಗಿದ್ದಾರೆ. ನಿನ್ನ ಮಗನ ದೈವವು ಅಲ್ಲಿಯೆ ತೆರೆಯಲಿರಬೇಕು. ಯಾರಿಗೆ ಗೊತ್ತು? ಉಟ್ಟ ಧೋತರದ ಮೇಲೆ ಮುಂಬಯಿಗೆ ಬಂದ ಝುಂಡಾಲಾಲ ಎಂಬ ಮಾರವಾಡಿಯು ಈಗ ನಾಲ್ಕು ಅಂತಸ್ತಿನ ಚಾಳದ ಒಡೆಯನಾಗಿದ್ದಾನೆ.

ಎಲೆಯಡಿಕೆಯ ಅಂಗಡಿಯನ್ನು ಹಾಕಲೂ ಹಣವಿಲ್ಲದ ಆಗಿನ ವಾನಾವಾಲಾ ಎಂಬ ಗುಜರಾತಿಯು ಇಂದು ಮುಂಬಯಿಯ ಕೋಟ್ಯಾಧೀಶರಲ್ಲೊಬ್ಬ. ಗವರ್ನರನೂ ಅವನನ್ನು ಭೋಜನ ಸಮಾರಂಭಕ್ಕೆ ಆಮಂತ್ರಿಸುತ್ತಾನೆ. ಹೆಗಲಮೇಲೆ ಡಬ್ಬಿಯನ್ನು ಹೊತ್ತುಕೊಂಡು ಅಡ್ಡಾಡುತ್ತಿದ್ದ ನರಸವಾಂಜಿ ಎಂಬ ಫಾರಸಿಕನು ಇಂದು ಒಂದು ಪ್ರಚಂಡ ಕಾರ್ಖಾನೆಯ ಒಡೆಯನು. ಅದೇಕೆ ನನ್ನನ್ನೆ ನೋಡು. ನಾನು ನೀನು ಕೂಡಿಯೇ, ಬಿ. ಎ. ಪಾಸಾದರೂ ನಿನಗಿಂತ ನಾನು ಐದು ಪಟ್ಟು ಹೆಚ್ಚು ಸಂಬಳ ದೊರೆಕಿಸುತ್ತಿದ್ದೇನೆ. ನೀನು ಒಬ್ಬನೇ ಒಬ್ಬನಾದ ಹುಡುಗನನ್ನು ಕಾಲೇಜಿಗೆ ಕಳಿಸಲು ನೆರಳುತ್ತಿದ್ದರೆ ನಾನು ನನ್ನ ಮಗಳನ್ನು ಕಾಲೇಜಿಗೆ ಹಾಕಿದ್ದೇನೆ. ನಿನ್ನ ಮಗನ ಹಿತದ ದೃಷ್ಟಿಯಿಂದ ಇದನ್ನೂ ಹೇಳುತ್ತಿದ್ದೇನೆ. ಹೊರತು ನಿನ್ನನ್ನು ಹೀಯಾಳಿಸುವ ದೃಷ್ಟಿಯಿಂದಲ್ಲ," ಎಂದು ಮುಂತಾಗಿ ಮುಂಬಯಿ ಮಿತ್ರರು ಪ್ರಸ್ತಾಪಿಸಿದರು.

"ಆ ? ಮುಂಬಯಿಯಲ್ಲಾದರೂ ನನ್ನ ಮಗನಿಗೆ ನೌಕರಿ ಸಿಗಬಹುದೆ ?" ಎಂದು ಪದ್ಮನಾಭನ ತಂದೆ ಶಂಕಿತರಾಗಿ ಕೇಳಿದರು.

"ಸಿಗದೇಏನು ? ಪವಹಾಡೀತು." ಮುಂಬಯಿ ಮಿತ್ರರು ಉತ್ತರಿಸಿದರು," "ಈಗಂತೂ ಯುದ್ಧ ಪ್ರಾರಂಭವಾಗಿ ಬಿಟ್ಟಿದೆ. ಕೇಳುವದೇನು ? ಅದೇಕೆ, ಹೇಳುತ್ತೇನೆ ಕೇಳು. ನೊನ್ನೆ ಒಬ್ಬ ಮದ್ರಾಸಿ, ತನ್ನ ಕಚೇರಿಯ ದಾರಿಯನ್ನು ತಪ್ಪಿ ಬೇರೊಂದು ಕಚೇರಿಯಲ್ಲಿ ಕಾಲಿಟ್ಟ. ಅಲ್ಲಿ ಅವನಿಗೆ ಮೊದಲಿನಿಗಿಂತಲೂ ಉತ್ತಮ ನೌಕರಿ ದೊರೆಯಿತು. ಮದ್ರಾಸಿ ಜನರಿಗೆ ಆಶ್ರಯ ಕೊಡಬಲ್ಲ ಮುಂಬಯಿ ನಮಗೆ ಆಶ್ರಯ, ಕೊಡಲಾರದೆ ?"

ಪದ್ಮನಾಭನ ತಂದೆಯವರಿಗೆ ತಮ್ಮ ಮಗನಿಗೆ ನೌಕರಿಸಿಕ್ಕರೆ ಸಾಕಾಗಿತ್ತು. ಮುಂಬಯಿ ಮಿತ್ರರ ವಾಕ್ ಗಂಗೆಯಲ್ಲಿ ತೇಲಿದ ಮೇಲಂತೂ ಅವರನ್ನು ಎಂಥ ಬೇ ವಿಚಾರಗಳೂ ಬಾಧಿಸಲಿಲ್ಲ. ಪದ್ಮನಾಭನನ್ನು ಮುಂಬಯಿಗೆ ಕಳುಹಲು ಅವರು ಒಪ್ಪಿದರು. ಕಾಲೇಜಿಗೆ ಹೆಸರು ಹಚ್ಚಿ ಮತ್ತೆ ಅದನ್ನು ತೆಗೆಸಿದುದು, ಅವಲಕ್ಷಣವೆಂದೂ ಹಾಗಾದಮೇಲೆ ಮಿತ್ರರಿಗೆ ಮೋರೆ ತೋರುವದನುಚಿತವೆಂದು ಅನ್ನುತ್ತಿದ್ದ ಪದ್ಮನಾಭನಿಗೆ ಮಹಮ್ಮದಪೂರವನ್ನು ಬಿಟ್ಟು ಬೇರೆ ಎಲ್ಲಿಯಾದರೂ ಹೋಗುವದೇ ಬೇಕಾಗಿತ್ತು.

# ಪದ್ಮಜಾ

ಆ ಖಾಧೀ ಧಾರಿಗಳಿಗೆ ಈ ಸುಂದರ ಕಾಲೇಜ ತರುಣಿಯ ಮೇಲೆ ಕಳೆದ ಎಂಟು ದಿವಸಗಳಿಂದಲೂ ಕಣ್ಣಿತ್ತು. ಅವಳು ಯಾರು? ಎಲ್ಲಿಂದ ಬರುವಳು ಮೊದಲಾದ ಸಂಗತಿಗಳನ್ನು ತಿಳಿದುಕೊಳ್ಳುವದೇ ಅವರ ಜೀವನದ ಧ್ಯೇಯವಾಗಿದ್ದಿತು. ಒಂದು ತಿಂಗಳದ ಹಿಂದೆ ಇವರಿಗೆ ಅವಳಗೋಜು ಬೇಕಾಗಿದ್ದಿಲ್ಲ. ಅವಳ ಗೊಡವೆ ಇದ್ದಿಲ್ಲ. ಆದರೆ ಕಳೆದ ಇಪ್ಪತ್ತು ದಿವಸಗಳಲ್ಲಿ ಪರಿಸ್ಥಿತಿಯು ಬದಲಾಗಿದ್ದಿತು. ಅಂತೆಯೇ ಅವರಿಬ್ಬರು ಕೆಲವು ಕಾಲೇಜ ತರುಣರಂತೆ ಸುಂದರ ವಿದ್ಯಾರ್ಥಿನಿಯರ ಬೆನ್ನು ಹತ್ತಿ ಹೊರಟಿದ್ದರು.

ಆ ಸುಂದರ ವಿದ್ಯಾರ್ಥಿನಿಗೆ ತನ್ನನ್ನು ಯಾರೋ ಬೆನ್ನಟ್ಟುತ್ತಿರುವರೆಂಬ ಅರಿವು ಇದ್ದೇ ಇತ್ತು. ಅಂತೆಯೇ ಅವಳು ಕಳೆದ ಎಂಟು ದಿವಸಗಳಿಂದ ಶಾಂತಿನಿಕೇತನದಲ್ಲಿ ಕಾಲಿಟ್ಟಿರಲಿಲ್ಲ. ಈಗ ಮಾತ್ರ ಅವಳಿಗೆ ಭಯವೆನಿಸಲಿಲ್ಲ. ಸಂಜೆಯಾಗುತ್ತ ಬಂದಿತ್ತು. ಗಾಂಧಿ ಟೊಪ್ಪಿಗಳಲ್ಲಿ ಅವಳಿಗೆ ವಿಶ್ವಾಸವೆನಿಸಿತು. ನನ್ನ ಬೆಂಗಾವಲಿಗೆ ಖಾದಿ ಇದೆ. ಬೆನ್ನು ಹಿಂದೆ ಖಾಕಿ ಇಲ್ಲ ಎಂದು ಧೈರ್ಯದಿಂದ ಅವಳು ಶಾಂತಿನಿಕೇತನದತ್ತ ಸಾಗಿ ಆ ಭವ್ಯ ವಾಸಭವನದಲ್ಲಿ ಸೇರಿದಳು.

ಹೌದು ಶಾಂತಿನಿಕೇತನಕ್ಕೆ ವಾಸಭವನವೆನ್ನುವದೇ ಒಳ್ಳೆದು. ಯಾಕೆಂದರೆ ಅದಕ್ಕೆ ಬಂಗಲೆ ಎಂದರೆ ಅದರಲ್ಲಿ ವಾಸಿಸುವ ಶತ್ರುಪತಿ ಸರ ರಘುನಾಥ ಪ್ರತಾಪಗಿರಿ ಸಂಸ್ಥಾನಿಕ ವೈಭವ ನಗರ, ಇವರ ಗೌರವಕ್ಕೆ ಕುಂದುತಂದಂತಾಗುವದು. ಅದಕ್ಕೆ ಅರಮನೆ ಎಂದು ಕರೆದರೆ ಅದು ಹಾಸ್ಯಾಸ್ಪದವಾಗುವದು. ಶಾಂತಿ ನಿಕೇತನದಲ್ಲಿ ನಿಜವಾಗಿಯೂ ಓರ್ವ ಸಂಸ್ಥಾನಿಕರೇ ಇದ್ದರೂ ಅದು ಆ ಸಂಸ್ಥಾನಿಕರ ವಾಸಭವನವಾದರೂ ಆಧುನಿಕ ಪದ್ಧತಿಯಂತೆ ಹೊಸದಾಗಿ ಕಟ್ಟಿಸಿದ್ದು. ವಿದ್ಯಾನಗರದ ಅನೇಕ ಬಂಗಲೆಗಳಲ್ಲಿ ಅದು ಒಡೆದು ಕಾಣದಿದ್ದರೂ ಅದರ ದಿವಾಣಖಾನೆಯಲ್ಲಿ ಕಾಲಿಟ್ಟ ಕೂಡಲೆ ಮಾತ್ರ ಅದರ ವೈಭವವು ಚನ್ನಾಗಿ ಕಂಡು ಬರುತ್ತಿತ್ತು.

ಕೇವಲ ಹಿಂದಿನ ವೈಭವವನ್ನು ನೋಡಿದರೆ ವೈಭವಪುರ ಸಂಸ್ಥಾನವು ದೊಡ್ಡದು. ಅವರ ಇತಿಹಾಸವು ಉಜ್ವಲವಾದದ್ದು. ಹಿಂದಿನ ವೈಭವವನ್ನು ನೋಡಿ ಬ್ರಿಟಿಶ ಸರಕಾರವು ಸಲಾಮುಗಳ ಸಂಖ್ಯೆಯನ್ನು ನಿರ್ಧರಿಸಿದ್ದರೆ ವೈಭವಪುರದ ಅಧಿಪತಿಗಳಿಗೆ ೧೧ ತೋಫಿನ ಸಲಾಮು ಸಿಗಬೇಕಾಗಿತ್ತು. ಅದರ ಅಧಿಪತಿಗಳು ಪೇಶ್ವೆರಿಂದ ಶತ್ರುಪತಿ ಎಂದು ಬಿರುದು ಪಡೆದುಕೊಂಡಿದ್ದರು. ಆದರೆ ಮುಂದೆ ಬರ ಬರುತ್ತ ಶತ್ರುಪತಿಗಳು ತಮ್ಮ ರಾಜ್ಯವನ್ನೂ ತಮ್ಮ ವೈಭವವನ್ನೂ ಕಳೆದುಕೊಂಡರು. ತಾಳೀಕೋಟೆಯ ಕಾಳಗದತರುವಾಯ ವೈಭವಪೂರದ ಕೆಲವು ಭಾಗ(ಪನ್ಮಾನಾರ್ಥವಾಗಿ)ವನ್ನು ಕೊಟ್ಟಿದ್ದು. ಅಡಿಕೆಯಾದರೇನು ಆನೆಯಾದರೇನು ಎಂದು ಅವರು ಗೌರವದಿಂದ ಅದನ್ನು ಹಚ್ಚಿಗೊಳ್ಳುತ್ತಿದ್ದರೆ ಹೈದರನೂ, ಇನ್ನಷ್ಟು ಭಾಗವನ್ನು ಟೀಪು ಸುಲ್ತಾನನೂ, ಮತ್ತಷ್ಟು ಭಾಗವನ್ನು ನಿಜಾಮನೂ ಕಸಿದುಕೊಂಡಿದ್ದರು. ಆನೆ ತೆಗೆದುಕೊಂಡು ಅಡಿಕೆಕೊಂಡರೆಂದು ಹೇಳುವಂತೆ ಆ ಭಾಗಕ್ಕೆ ಪ್ರತಿಯಾಗಿ ಅವರು ವೈಭವಪೂರಕರರಿಗೆ ಶತ್ರುಪತಿ ಎಂದು ಬಿರುದುಕೊಟ್ಟರು. ಚೌಥಾಯಿ ಸರದೇಶಿಮುಖಿಯಲ್ಲಿ ಪೇಶ್ವೆಯರೂ ಕೆಲವೊಂದು ಭಾಗವನ್ನು ತೆಗೆದುಕೊಂಡಿದ್ದರು. ಸಬಸಿಡಿಯರ ಪದ್ಧತಿಯ ಸಲುವಾಗಿ ಇಂಗ್ಲೀಷರು ಒಂದಷ್ಟು ನುಂಗಿದ್ದರು. ಹೀಗಾಗಿ ವೈಭವ ನಗರದ ಸಂಸ್ಥಾನವು ತೀರ ಸಣ್ಣದಾಯಿತು. ಕ್ಷೇತ್ರವು ಇಪ್ಪತ್ತು ಚದುರ ಮೈಲು, ವಾರ್ಷಿಕ ಆದಾಯವು ೧೦ ಸಾವಿರ ರೂಪಾಯಿ, ಜನಸಂಖ್ಯೆ, ೫ ಸಾವಿರ, ಆದಾಯಕ್ಕೆ ತಕ್ಕಂತೆ ಸಾಲವೂ ಇತ್ತು. ಇದೇ ಅದರ ಈಗಿನ ವೈಭವ ಆದರೂ ಸಂಸ್ಥಾನವು ಸಣ್ಣದಾದರೂ ಸಂಸ್ಥಾನಿಕರ ವೈಭವ ಕಡಿಮೆ ಆಗುವದಿಲ್ಲವೋ ಏನೋ, ಅವರು ಇರುವ ರೀತಿ, ಅವರ ಜೀವನವೆಚ್ಚ ಇವಕ್ಕೂ ಸಂಸ್ಥಾನದ ಆದಾಯಕ್ಕೂ ಎಂದಿನಿಂದಲೂ ವ್ಯಸ್ತಪ್ರಮಾಣ ವೈಭವ ಪುರವು ಈ ಮಾತಿಗೆ ಅಪವಾದವಾಗಿದ್ದಿಲ್ಲ. ಶಾಂತಿನಿಕೇತನವೇ ಈ ಮಾತನ್ನು ಎತ್ತಿ ಸಾರಿ ಹೇಳುತ್ತಿತ್ತು.

ಶಾಂತಿ ನಿಕೇತನವು ಒಂದು ಸಣ್ಣ ಉಪವನದಲ್ಲಿದೆ. ಪೂರ್ವಾತ್ಯ ಮತ್ತು ಪಶ್ಚಿಮಾತ್ಯ ಹಣ್ಣುಹೂಗಳಿಂದ ಯುಕ್ತವಾದ ಆ ಉಪವನದಲ್ಲಿ

ಒಂದು ಕಾರಂಜಿಯಿದೆ. ಕಾರಂಜಿಯ ಸುತ್ತಲೂ ನೀರನ್ನು ಸಂಗ್ರಹಿಸಲು ಸಿಮೆಂಟಿನ ಕಟ್ಟೆಯನ್ನು ಕಟ್ಟಿದ್ದಾರೆ. ಈ ಸಣ್ಣ ಜಲಾಶಯವು ಕಾಣಲು ಅಷ್ಟೊಂದು ರಮಣೀಯವಲ್ಲವೇನೊ ನಿಜ, ಅದರ ಹೆಸರು ಮಾತ್ರ ತೀರ ಸ್ಮರಣೀಯ. ಅಚ್ಛೋದ ಸರೋವರ. ಅಚ್ಛೋದ ಸರೋವರದ ಮಧ್ಯದಲ್ಲಿ ಒಂದು ಎಮ್ಮೆ ಕರದ ಆಕಾರದ ಒಂದು ಆನೆಯಿದ್ದು ಅದರ ಮೇಲೆ ವೈಭವಪೂರದ ಐರಾವತ ಎಂದಿದೆ. ಅದರ ಸೊಂಡೆಯೊಳಗಿಂತ ಕಾರಂಜಿ ಪುಟಿಯುವಂತೆ ಮಾಡಿದ್ದಾರೆ. ನೀರು ಮೇಲಕ್ಕೆ ಹಾರಿ ನಾಲ್ಕು ಕಡೆಯಿಂದ ಅಚ್ಛೋದ ಸರೋವರದಲ್ಲಿ ಬೀಳುವವು. ಆನೆಯ ಎದುರಿನಲ್ಲಿ ಒಂದು ಚಾತಕ ಪಕ್ಷಿಯು 'ಆ' ಎಂದು ಬಾಯಿ ತೆರೆದು ಕುಳಿತಿದೆ. ಅದರ ಬಾಯಲ್ಲಿ ಒಂದು ಹನಿ ನೀರು ಬೀಳದಂತೆ ಲಕ್ಷ್ಯಗೊಟ್ಟಿದ್ದಾರೆ. ಶಾಂತಿನಿಕೇತನದಲ್ಲಿ ಕಾಲಿಟ್ಟವರೆಲ್ಲ ಅಚ್ಛೋದ ಸರೋವರ ಮತ್ತು ಐರಾವತಗಳಲ್ಲಿ ತಲ್ಲೀನರಾಗವರು. ವೈಭವಪೂರದ ಬಾಲ್ಯಾವಸ್ಥೆಯಲ್ಲಿದ್ದ ಪ್ರಜಾಸಂಘದ ಭೀಷ್ಮ ದ್ರೋಣರು ಮಾತ್ರ ಚಾತಕ ಪಕ್ಷಿಯ ಕಡೆಗೆ ದೃಷ್ಟಿ ಹೊರಳಿಸುವರು. ವೈಭವಪೂರದ ಪ್ರಜೆಗಳ ರೀತಿ ಅವರ ಶಾಂತಿನಿಕೇತನದಲ್ಲಿದ್ದ ಚಾತಕ ಪಕ್ಷಿಯಂತಾಗಿದೆ ಎಂದು ಅವರು ಆಡುವರು.

ಶಾಂತಿನಿಕೇತನದ ದಿವಾಣಖಾನೆಯು (ದಿವಾಸ—ಈ—ಖಾಸ ಎಂದು ಅದರ ಹೆಸರು) ಜನರನ್ನು ದಿಗಿಲು ಬಡಿಸುವಂಥಹುದು. ಅದನ್ನು ಪ್ರವೇಶಿಸಿದವನಿಗೆ ತಾನು ೨೦ ನೇ ಶತಮಾನದವನೊ, ೧೮ ನೇ ಶತಮಾನದವನೊ ಎಂದು ಕ್ಷಣ ಕಾಲ ಸಂಶಯ ಬರುವದು. ಆ ಆಸ್ಥಾನ ಮಂಟಪದ ಒಂದು ಭಾಗದಲ್ಲಿ ಕೂಡ್ರಲು, ಆಡಲು, ಒರಗಲು, ಉರುಳಾಡಲು ಯೋಗ್ಯವಾಗುವಂಥ ವಿವಿಧ ತರದ ಕುರ್ಚಿ, ಬಾಕು, ಸೋಫಾಗಳೂ, ಮಂಚಗಳೂ ವಿವಿಧ ಆಕಾರದ ಮತ್ತು ಒಂದು, ಮೂರು, ನಾಲ್ಕು ಹತ್ತು ಕಾಲುಗಳ ಮೇಲೆ ನಿಂತ ಮೇಜುಗಳೂ ಕಾಣುವವು. ಮೇಜುಗಳ ಮೇಲೆ ಇಂಗ್ಲಂಡದ ನಾಲ್ಕೈದು ಮಾಸಿಕಗಳೂ ಮುಂಬಯಿಯ ಇಂಗ್ಲೀಷ ದಿನ ಪತ್ರಿಕೆಗಳೂ ಒಂದು ಕನ್ನಡ ದಿನ ಪತ್ರಿಕೆಯು ಕಾಣಬಹುದು. ಅವುಗಳ ಮಧ್ಯದಲ್ಲಿ ಬಂಗಾರದ "ಟ್ರೆ", ದಲ್ಲಿ ಸಿಗರೇಟುಗಳೂ ಮತ್ತು "ಆ್ಯಶ್ ಟ್ರೆ" ಗಳೂ

ದೃಷ್ಟಿಗೆ ಬೀಳುವವು. ಮತ್ತು ಈ ಭಾಗದಲ್ಲಿ ಹಚ್ಚಿದ ಚಿತ್ರಗಳು ಪಾಶ್ಚಾತ್ಯ ಪದ್ಧತಿ ದಿವಾಣ ಖಾನೆಗೆ ಒಪ್ಪುವಂಥಹವು. ಜಾಜ ಭೂಪತಿಯು ದೊಡ್ಡದೊಂದು ಛಾಯಾಚಿತ್ರ, ನೈಗಾರಾ ತಡಸಲು, ತಾಜಮಹಾಲ, ಚೀನದ ಗೋಡೆ, ಪೀಸಾದ ವಾರೆಯಾದ ಸ್ತಂಭ, ಬ್ರಿ. ಪಾರ್ಲಿಮೆಂಟಿನ ಭವನ ಮೊದಲಾದವುಗಳ ಚಿತ್ರಗಳಿವೆ. ನೆಲದ ಮೇಲೆಲ್ಲ ಇರಾಣದಿಂದ ತರಿಸಲಾದ ಜಮಖಾನೆಗಳನ್ನು ಹಾಸಲಾಗಿದೆ.

ದಿವಾಣಖಾನೆಯ ಇನ್ನೊಂದು ಭಾಗದತ್ತ ದೃಷ್ಟಿಯನ್ನು ಹೊರಳಿಸಿದರೆ ತೀರ ಬೇರೆ ದೃಶ್ಯವು ಕಾಣುವದು. ಕಾಶ್ಮೀರದ ಒಂದು ದೊಡ್ಡ ರತ್ನಗಂಬಳಿಯ ಮೇಲೆ ಶುಭ್ರವಾದ ಗಾದಿ ಲೋಡುಗಳಿವೆ. ಗಾದಿಯ ಒಂದು ಮಗ್ಗಲಿಗೆ ಗಂಧದ ಕಟ್ಟಿಗೆಯಲ್ಲಿ ಕೆತ್ತಿದ ನಗ್ನ ಸ್ತ್ರೀಯ ಪ್ರತಿಮೆ ಇದೆ. ಈ ಪ್ರತಿಮೆಯ ಕೈಗಳಲ್ಲಿ ಒಂದು ಬಂಗಾರದ ತಬಕವಿದ್ದು ಅದರ ಮೇಲೆ ತಾಂಬೂಲದ ಸಕಲ ಸಾಮುಗ್ರಿಗಳನ್ನಿಡಲಾಗಿದೆ. ಇನ್ನೊಂದು ಮಗ್ಗಲಿಗೆ ಹಸ್ತಿದಂತದ ನಗ್ನ ಸ್ತ್ರೀಯ ಪ್ರತಿಮೆ ಇದೆ. ಅದರ ಕೈಯಲ್ಲಿ ಒಂದು ಬೆಳ್ಳಿಯ ಪಿಕದಾಣಿಯಿದೆ. ಲೋಡಿನ ಹಿಂದಿನ ಗೋಡೆಯ ಮೇಲೆ ಹರಿಯುತ್ತಿದ್ದ ಹೊಟ್ಟೆಯನ್ನು ಹಾವಿನಿಂದ ಬಿಗಿದುಕೊಳ್ಳಲೆತ್ನಿಸುತ್ತಿದ್ದ ಗಣಪತಿಯ ಭವ್ಯ ತೈಲ ಚಿತ್ರವಿದೆ. ರತ್ನಗಂಬಳಿಯ ಒಂದು ಪಕ್ಕದಲ್ಲಿ ರೇಶಿಮೆಯ ನವಿಲಿನ ಮೇಲೆ ಬಂಗಾರದ ಸರಸ್ವತಿ, ವೀಣೆ ಬಾರಿಸುತ್ತ ಕುಳಿತಿದ್ದಾಳೆ. ಇನ್ನೊಂದು ತುದಿಗೆ ಬೆಳ್ಳಿಯ ಸುಂದರ ಕಮಲದಲ್ಲಿ ರತ್ನಖಚಿತ ಲಕ್ಷ್ಮೀ ನಿಂತಿದ್ದಾಳೆ. ನವಿಲಿನ ಕಾಲು ಹಾಗು ಕಮಲದ ದೇಟು ಇನ್ನಷ್ಟು ದೃಢವಾಗಿ ಬೇಕಾಗಿತ್ತೆಂದು ಪ್ರೇಕ್ಷಕನಿಗೆ ಅನಿಸುವದು.

ದಿವಾಣಖಾನೆಯಂತೆಯೇ ವೈಭವಪುರದ ಶತ್ರುಪತಿಗಳ ವೇಷಭೂಷಣವೂ ಪೌರ್ವಾತ್ಯ ಪಾಶ್ಚಿಮಾತ್ಯ ಸಂಸ್ಕೃತಿಗಳ ಸಂಗಮ. ತಲೆಯ ಮೇಲೆ ಕ್ರಾಪು, ಕಿವಿಗಳಲ್ಲಿ ಬಾವುಲಿ. ಕೊರಳೊಳಗೆ ನೆಕ್ಟಾ, ಅದರ ಕೆಳಗೆ ಅಂಗಿಯೊಳಗೆ ರುದ್ರಾಕ್ಷಿ ಮಾಲೆ, ಮೋಸಿಗೆ ಹುರಿ. ಕಾಲಿಗೆ ಬೂಟು ಮತ್ತು ಚೊಣ್ಣ, ಅದರೆ ಪಾರ್ಶಿ ಕೋಟು. ಬಲ ಕೈಗೆ "ಪ್ರೋಚ" ಎಡಗೈಗೆ "ರಿಷ್ಟ ವಾಚ್"; ಶತ್ರುಪತಿಗಳ ಹೃದಯವೂ ಹೀಗಿಯೇ. 'ಒಳಗೊಳಗೆ ದೇವರ

ಬಗ್ಗೆ ಭೀತಿ, ಹೊರಗೆ ತರ್ಕದ ಡಂಭಾಚಾರ, ಇತ್ತ ಸಣ್ಣ ಸಣ್ಣ ಘಟನೆಗಳ ಬಗ್ಗೆ ಸಂಶಯ, ಅತ್ತ ವಂಶಪರಂಪರೆಯಾಗಿ ಬಂದ ಧೈರ್ಯಶೌರ್ಯಗಳ ಸಂಪತ್ತಿನ ಅರಿವು. ಭಾರತೀಯ ಸಂಸ್ಕೃತಿಯ ಬಗ್ಗೆ ಅಭಿಮಾನ ಆದರೆ ಪಾಶ್ಚಾತ್ಯ ಸಂಸ್ಕೃತಿಯ ಆಚರಣೆ. ಆ ಸುಂದರ ಯುವತಿಯು ಲಗುಬಗೆಯಿಂದ ಶಾಂತಿನಿಕೇತನದಲ್ಲಿ ಹೊಕ್ಕು ಬರ್ರನೆ ದಿವಾಣಖಾನೆಗೆ ಹೋದಳು ಅವಳು ಹೊರಳಿ ನೋಡಲಿಲ್ಲ.

"ಏನಿದು ಪದ್ಮಜಾ ಎಲ್ಲಿ ಅದೃಶ್ಯವಾಗಿದ್ದೆ ?" ಎಂದು ಕೇಳಿದರು ಆರಾಮ ಖುರ್ಚಿಯಲ್ಲಿ ಒರಗಿ ಕನ್ನಡ ಪತ್ರಿಕೆಯಲ್ಲಿ ಬಂದ ತಮ್ಮ ಸಂಸ್ಥಾನದ ಸುದ್ದಿಯನ್ನು ಓದುತ್ತಿದ್ದ ಛತ್ರಪತಿ ಸರ ರಘುನಾಥ ಪ್ರತಾಪಗಿರಿ.

"ನನಗೆ ಅದೃಶ್ಯವಾಗಲು ಬಂದಿದ್ದರೆ ಕಾಣೆಯಾಗುವ ಪ್ರಸಂಗವೇ ಬರುತ್ತಿರಲಿಲ್ಲ" ಎಂದಳು ಪದ್ಮಜಾ. ಅವಳ ಸುಂದರ ಮುಖದ ಮೇಲೆ ಚಿಂತೆಯು ಒಡಮೂಡಿದಂತಿತ್ತು.

ಕಳೆದ ಎಂಟು ದಿನಗಳಿಂದ ಪದ್ಮಜೆಯ ದರ್ಶನವಿಲ್ಲದ್ದಕ್ಕೆ ಛತ್ರಪತಿಗಳಿಗೆ ಚಿಂತೆಯುಂಟಾಗಿತ್ತು. ಮನಸ್ಸು ಅಸ್ವಸ್ಥವಾಗಿತ್ತು. ಒಂದುದಿನ ಕಾಲೇಜಕ್ಕೆಂದು ಶಾಂತಿನಿಕೇತನದಿಂದ ಹೊರಟಿದ್ದವಳು ಎಂಟು ದಿನಗಳಾದರೂ ಅವಳು ಬಂದಿರಲಿಲ್ಲ. ಪದ್ಮಜಾ ಇಲ್ಲದೆ ಹೋದರೆ ಛತ್ರಪತಿಗಳಿಗೆ ಚಡಪಡಿಕೆಯಾಗುತ್ತಿತ್ತು. ಪದ್ಮಜೆಯ ಸೌಂದರ್ಯವಷ್ಟೇ ಅಲ್ಲದೆ ಅವಳ ಜಾಣ್ಮೆಯೂ ಮೋಹಿಸಿತ್ತು. ಅಲ್ಲದೆ ತಾವು ತಮ್ಮ ತಂದೆಗೆ ಕೊಟ್ಟ ವಚನವು ಚನ್ನಾಗಿ ಅವರ ಜ್ಞಾಪಕದಲ್ಲಿತ್ತು. ಕಳೆದ ವರ್ಷವೇ ಮಹಾಬಳೇಶ್ವರದಲ್ಲಿ ಸಂಭವಿಸಿದ ಘಟನೆಯದು. ವೈಭವಪೂರದ ಹಿಂದಿನ ಛತ್ರಪತಿಗಳಾದ ಸರ ಪ್ರಜಾವತ್ಸಲ ಪ್ರತಾಪಗಿರಿಯು ಮೃತ್ಯುಶಯ್ಯೆಯಲ್ಲಿ ಮಲಗಿದ್ದಾರೆ. ಸುತ್ತಲೂ ಪರಿವಾರದವರೂ, ದಿವಾನರೂ, ವೈಭವಪೂರದ ೨೦ ಪೋಲೀಸರ ಪಡೆಯೂ ಸೇನಾಪತಿಗಳೂ, ಡಾಕ್ಟರರೂ ಇದ್ದಾರೆ. ಯಮನು ಕ್ಷಣಗಳನ್ನು ಎಣಿಸುತ್ತ ಅಲ್ಲಿಯೇ ಎಲ್ಲಿಯೋ ನಿಂತಿದ್ದಾನೆ. ಛತ್ರಪತಿ ಪ್ರಜಾವತ್ಸಲರು, ಕೈಸನ್ನೆಯಿಂದ ಎಲ್ಲರನ್ನೂ ಹೊರಗೆ ಹಾಕಿ ಕೇವಲ ಸರ ರಘುನಾಥರನ್ನೂ ಹಾಗೂ ದಿವಾನರನ್ನೂ ಇಟ್ಟುಕೊಂಡರು. ಸಂಸ್ಥಾನದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ಅವರು ಕಣ್ಣಲ್ಲಿ

ನೀರು ತಂದುಕೊಂಡು "ಮುಂಬಯಿಯಲ್ಲಿ ಕಲಿಯುತ್ತಿದ್ದ ಪದ್ಮಜಾ ಅವಳನ್ನು ವಿದ್ಯಾನಗರದಲ್ಲಿ ತಂದಿಟ್ಟುಕೊಂಡು.......? ವಾಕ್ಯ ಮುಗಿಯಲಿಲ್ಲ. ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ, ಅದೇ ಪದ್ಯ. ದಿವಾನ ಸಾಹೇಬರಿಗೆ ಪದ್ಮಜಾ ಎಂಬ ಹುಡಿಗೆಗೆ ವೈಭವಪೂರದ ಬೊಕ್ಕಸದಿಂದ ಹಣ ಸಲ್ಲುತ್ತಿದ್ದ ವಿಷಯ ಗೊತ್ತಿತ್ತು. ಛತ್ರಪತಿಗಳ ರಕ್ತವೇ ಅವಳಲ್ಲಿ ಹರಿದಾಡುತ್ತಿರಬಹುದೆಂದು ಅವರಲ್ಲಿ ಸಂಶಯವೂ ನಾಟಿತ್ತು. ಆದರೆ ಗೊತ್ತಿದ್ದರೂ ಹೇಳಬಾರದಂಥ ವಿಷಯ. ಗೊತ್ತಿಲ್ಲದೆ ಏಕೆ ಹೇಳುವದು? ಎಂದು ಅವರು ಸುಮ್ಮನಾದರು. ಸರ ರಘುನಾಥರ ಮನಸ್ಸಿನಲ್ಲಿಯೂ ಏನೇನೋ ಸಂಶಯಗಳು ಬಂದವು. ಯಾರು ಏಕೆ ಎಂಬುದು, ಗೊತ್ತಿಲ್ಲದೆ, ಯಾರಿಗೇಕೆ ಸಹಾಯ ಮಾಡಬೇಕೆಂಬ ವಿಚಾರ ಅವರ ತಲೆಯಲ್ಲಿ ಎದ್ದಿತ್ತು. ಆದರೆ ಪದ್ಮಜಾಳನ್ನು ಕಂಡೊಡನೆ ಈ ಬಗ್ಗೆ ಸಂಶಯಗಳವೇಲೆ ಆ್ಯಟಂ ಬಾಂಬನ್ನೆಸೆದಂತಾಯಿತು. ಪದ್ಮಜೆಯನ್ನು ಕಂಡೊಡನೆ ಅವರಿಗೆ ಅವಳು ಸಂಬಂಧಿಕಳಾಗದಿದ್ದರೂ ಸಂಬಂಧಿಕಳಾಗುವಂತೆ ಕರುಣಿಸೆಂದು ಹೊಟ್ಟೆಯನ್ನು ಬಿಗಿದುಕೊಳ್ಳುತ್ತಿದ್ದ ಗಣಪತಿಗೆ ಪ್ರಾರ್ಥಿಸಬೇಕೆಂಬ ಭಾವನೆ ಉಂಟಾಗುತ್ತಿತ್ತು. ನಿಜವಾಗಿಯೂ ಅಂಥವಳೆ ಪದ್ಮಜಾ. ತುಂಬುಗಲ್ಲಗಳಮೇಲಿನ ಅವಳ ಮಂದಹಾಸವು ಎಲ್ಲೆಡೆಗೆ ಸುಖಸಂತೋಷಗಳನ್ನು ಬೀರುವಂತಹದಿತ್ತು. ಅವಳನ್ನು ನೋಡಿದರೆ ಅರಳಿದ ಹೂಗಳಿಂದ ತುಂಬಿದ ಮಲ್ಲಿಗೆಯ ಮಂಟಪದೆದುರು ನಿಂತಂತೆ ಅನಿಸುತ್ತಿತ್ತು.

"ನಿನ್ನ ಜಾಣತನದ ಮಾತುಗಳು ಕಳೆದ ದಿವಸಗಳಿಂದ ನನ್ನ ಕಿವಿಯಮೇಲೆ ಬೀಳಲಿಲ್ಲವಲ್ಲ. ಪೋಲೀಸಿನವರಿಗೆ ತಿಳಿಸಬೇಕೆಂದಿದ್ದೆ."

"ಯಾಕೆ ತಿಳಿಸಲಿಲ್ಲ?"

"ಅಲ್ಲಾ ಹುಚ್ಚಿ ಬ್ರಿಟಿಶ ಸರಕಾರದ ಪೋಲೀಸರು ವೈಭವಪೂರ ಸರಕಾರದ ಮಾತು ಕೇಳುವರೇ? ಬ್ರಿಟಿಶ ಸರಕಾರದ ಪೋಲೀಸರಿಗೆ ನಮ್ಮಂಥವರು ಒತ್ತಟ್ಟಿಗಿರಲಿ ಹೈದ್ರಾಬಾದದ ನಿಜಾಮನೂ ಅಂಜುತ್ತಾನಂತೆ!"

ಇಷ್ಟರಲ್ಲಿ ಹೊರಗಿನಿಂದ ಆ ಇಬ್ಬರು ಖಾದೀ ಧಾರಿಗಳು ಒಳಗೆ ಬಂದದ್ದರಿಂದ ಪದ್ಮಜಾ ತಟ್ಟನೆ ಎದ್ದು ಒಳಗೆ ಹೋದಳು.

"ಛತ್ರಪತಿಗಳಿಗೆ ಶರಣು" ಎಂದರವರು ಸಲಾಮು ಮಾಡುತ್ತ.

ಛತ್ರಪತಿ ಸರ ರಘುನಾಥರಾಯರಿಗೆ ಒಮ್ಮೆಲೆ ಏನೋ ಸಂಶಯ ಬಂದಿತು. ನೆಲಮುಟ್ಟಿ ನಮಸ್ಕಾರ ಮಾಡದವರು ಅವರ ದೃಷ್ಟಿಗೆ ಬಿದ್ದಿರಲಿಲ್ಲ. ಮೇಲಿಂದಮೇಲೆ ಸಲಾಮು ಮಾಡುವ ಈ ಜನ ಬ್ರಿಟಿಷ್ ಪ್ರದೇಶದವರಿರಬೇಕೆಂದು ಅವರು ಲೆಕ್ಕ ಹಾಕಿದರು.

"ಯಾರು ನೀವು?"

"ನಾವು ಯಾರೆಂದು ಕೇಳುವ ಮೊದಲು, ಈಗ ಒಳಗೆ ಹೋದ ತರುಣಿ ಯಾರೆಂದು ಹೇಳಿದರೆ ನಮ್ಮ ಮೇಲೆ ಉಪಕಾರವಾಗುವದು ಸರಕಾರ"

"ವಾದಿಸಬೇಡಿರಿ ನೇರವಾಗಿ ಕೇಳಿದ್ದಕ್ಕೆ ಉತ್ತರ ಕೊಡಿರಿ"

ಇಬ್ಬರೂ ಖಾದೀ ಧಾರಿಗಳು ತಮ್ಮ ಗಾಂಧೀ ಟೊಪ್ಪಿಗೆಗಳನ್ನು ತೆಗೆದರು. ಕೇಶಭೂಷಣಗಳಿಂದ ಭೂಷಿತವಾದ ಅವರ ಕ್ರಾಪುಗಳು ಕತ್ತಲೆಯಾಗುತ್ತ ಬಂದಿದ್ದರೂ ಮಿಂಚಿದವು. ಅವರಲ್ಲೊಬ್ಬ ಹೇಳಿದ

ನಾವು ಸರದಾರ ಪಟೇಲ ಅಥವಾ ಪಂ. ಜವಾಹರಲಾಲ ನೆಹರೂ ಇರಬಹುದೆಂದು ತಿಳಿಯ ಬೇಡಿರಿ. ನಾನು ಪೋಲೀಸ ಇನ್ಸಪೆಕ್ಟರ ಮತ್ತು ಇವರು ಮಹಮ್ಮದಪೂರದ ಫೌಜದಾರರು. ಈ ವೇಷದಲ್ಲಿ ನೀವು ನಮ್ಮನ್ನು ಗುರುತಿಸಿರಲಿಕ್ಕಿಲ್ಲ. ಇರಲಿ. ಇದೇ ನಿಮ್ಮ ಮನೆಯಲ್ಲಿ ಬಂದ ತರುಣಿ ಎಂಟು ದಿನಗಳ ಹಿಂದೆ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದಳು, ಏಳು ದಿನಗಳ ಹಿಂದೆ ಪ್ರಭಾತಫೇರಿಯೊಂದನ್ನು ಸಾಗಿಸಿದಳು. ಕಾಂಗ್ರೆಸಿನ ಗುಪ್ತ ಪರಿಪತ್ರಗಳನ್ನು ಅವಳು ಹಂಚುತ್ತಿದ್ದಳೆಂದು ನಮಗೆ ಸಂಶಯ ಬಂದಿದೆ. ಆದ್ದರಿಂದ ಸರಕಾರ, ನಮಗೆ ಸಹಾಯ ಮಾಡಬೇಕು. ಅವಳ ಹತ್ತರ ಪರಿಪತ್ರಗಳು ಸಿಕ್ಕರೆ ಅವಳನ್ನು ಬಂಧಿಸುವೆವು. ಅವಳು ಯಾರೆಂದು ಮೊದಲು ತಿಳಿಸುವದಾಗಬೇಕು."

"ಅವಳೆಂದೂ ಹಾಗೆ ಮಾಡುವವಳಲ್ಲ" ಎಂದು ಗದ್ದರಿಸಿದರು ಛತ್ರಪತಿಗಳು.

"ವೈಸರಾಯರ ವರೆಗೆ ಈ ಸಂಗತಿ ಹೋದೀತು!"

"ಬ್ರಿಟಿಷ್ ಸರಕಾರದ ಕೂದಲಕ್ಕೂ ಧಕ್ಕೆ ಹತ್ತಗೊಡಲಾರೆವೆಂದು

ನಮ್ಮ ಪೂರ್ವಜರು ಬರೆದುಕೊಟ್ಟ ಆಶ್ವಾಸನವು ವೈಸರಾಯರ ಹತ್ತಿರ ಇರುವದು. ಇರಲಿ, ಪದ್ಮಜಾ ನಮ್ಮವಳು. ಅವಳು ಒಂದುವೇಳೆ ಪರಿಪತ್ರ ಹಂಚುವಲ್ಲಿ ಕೈ ತೊಡಗಿಸಿಕೊಂಡಿದ್ದರೆ ಅವಳನ್ನು ಪರಾವೃತ್ತ ಮಾಡುವದು ನಮ್ಮ ಕೆಲಸ. ನೀವು ನಿಶ್ಚಿಂತರಾಗಿರಿ. ನಾನು ಕೊರೆದ ಗೆರೆಯನ್ನು ಅವಳು ದಾಟುವದಿಲ್ಲ."

ಖಾದೀ ಧಾರಿಗಳಿಬ್ಬರೂ ಅರ್ಧವಾಣೆದು ಸಲಾಮು ಮಾಡಿ ಶತ್ರುಪತಿಗಳಿಗೆ ಬೆನ್ನು ತೋರಿಸದೆ ತಿರುಗಿ ಹೋದರು.

"ಪದ್ಮಜಾ" ಎಂದು ಕರೆದರು. ಶತ್ರುಪತಿಗಳು.

ಪದ್ಮಜಾ 'ಓ' ಎನ್ನಲಿಲ್ಲ. ಶತ್ರುಪತಿಗಳು ಎಲ್ಲೆಲ್ಲಿಯೂ ಹುಡುಕಾಡಿದರು. ಹುಡುಕಹತ್ತಿದರು ಆದರೆ ಪದ್ಮಜಾ ಸಿಗಲಿಲ್ಲ. ಶತ್ರುಪತಿಗಳಿಗೂ ಸಿಗಲಿಲ್ಲ. ವೈಭವಪೂರದ ಪೋಲೀಸರಿಗೂ ಸಂಸ್ಥಾನೀ ಪೋಲೀಸರಿಗೂ ಸಿಗಲಿಲ್ಲ. ಮಹಮ್ಮದಪೂರದ ಬ್ರಿಟಿಶ್ ಪೋಲೀಸರಿಗೂಸಿಗಲಿಲ್ಲ.

## ಎಲ್ಲರ ದೊಡ್ಡವ್ವ

ಪದ್ಮನಾಭನ ತಂದೆಯ ಮುಂಬಯಿ ಮಿತ್ರರಾದ ಶ್ರೀ ಗಾಡಗೋಳಿ ಶ್ರೀಕಾಂತರಾಯರು ಪದ್ಮನಾಭನ ತಂದೆಗಿತ್ತಂತೆ ತಮ್ಮ ಇನ್ನೊಬ್ಬ ಮಿತ್ರರಿಗೂ ಅಭಯವನ್ನಿತ್ತು ಅವರನ್ನೂ ಮುಂಬಯಿಗೆ ಆಮಂತ್ರಿಸಿದರು. ಪದ್ಮನಾಭನು ಶ್ರೀಕಾಂತರಾಯರೊಡನೆ ಮುಂಬಯಿಗೆ ಹೊರಟಂತೆ ಹಾರವಾಡ ಶ್ರೀಪತರಾಯರು ಮುಂಬಯಿಗೆ ಹೊರಟರು. ಆದರೆ ನೌಕರಿಗಲ್ಲ.

ಬಹುತರ ಎಲ್ಲ ಮಧ್ಯಮ ವರ್ಗದ ಕುಟುಂಬದ ಪಾಲಕರು ತಾವೆ ತಮ್ಮ ಮಕ್ಕಳ ಧ್ಯೇಯ ಧೋರಣೆಗಳನ್ನು ನಿಶ್ಚಯಿಸುವರು. ತಮ್ಮ ಗಂಡುಮಕ್ಕಳು ಎಲ್ಲಿಯಾದರೂ ಒಂದು ನೌಕರಿಯನ್ನು ಹಿಡಿದು ಉದರ ನಿರ್ವಾಹಮಾಡಿಕೊಳ್ಳಬೇಕು, ಹೆಣ್ಣು ಮಕ್ಕಳು ಯಾವನೊಬ್ಬ ಉದರ ನಿರ್ವಾಹಕನ ಸಮರ್ಥನೆಗಾಗಿ ಒಲೆ ಹೂಡಬೇಕು, ಇದೇ ಪಡಿಯಚ್ಚಿನಲ್ಲಿಯೇ ಬಹುತರ ಎಲ್ಲ ಮಧ್ಯಮ ವರ್ಗದ ಕುಟುಂಬದ ತರುಣ ತರುಣಿ

ಯರ ಧ್ಯೇಯಧೋರಣಗಳು ಸಿದ್ಧವಾಗುವವು. ಹಾರವಾಡ ಶ್ರೀಪತರಾಯರು ತಮ್ಮ ಒಬ್ಬಳೇ ಮಗಳಾದ ಕನಕಲತೆಗೆ ಒಂದು 'ಉತ್ತಮ' ಸ್ಥಳವನ್ನು ನೋಡಿ ಧಾರೆಎರೆದಿದ್ದರು. ಆದರೇನು? ಮದುವೆಯಾಗಿ ಒಂದು ತಿಂಗಳೊಳ ಗಾಗಿ ಅವಳ ಗಂಡನು ಇಹಲೋಕವನ್ನು ಬಿಟ್ಟು ಶ್ರೀಪತರಾಯರನ್ನೂ ಕನ ಕಲತೆಯನ್ನೂ ಕಗ್ಗತ್ತಲೆಯಲ್ಲಿ ನೂಕಿ ಹೋಗಿಬಿಟ್ಟನು. ತಮ್ಮ ಮಗಳ ಭವಿ ತವ್ಯವೇನೆಂದು ಹಾರವಾಡರಿಗೆ ಮತ್ತೆ ಚಿಂತೆಬಿದ್ದಿತು.

ಕನಕಲತೆಯು ಕರ್ನಾಟಕದ ತರುಣಿಯರಂತೆ ನಸುಗಪ್ಪಾದರೂ ಸೌಂದರ್ಯವು ಮೈಬಣ್ಣದಲ್ಲಿಲ್ಲವೆಂದು ಸಿದ್ಧಮಾಡಿಕೊಡುತ್ತಿದ್ದಳು. ಅವ ಳನ್ನು ಕಂಡರೆ ಮೂರ್ತಿಮಂತ ಆರೋಗ್ಯವನ್ನೇ ಕಾಣುತ್ತೇವೇನೋ ಎಂದು ಕ್ಷಣಕಾಲ ಭಾಸವಾಗುತ್ತಿತ್ತು. ಅವಳು ಮ್ಯಾಟ್ರಿಕ್ ಪರೀಕ್ಷೆಯನ್ನೂ ಮದುವೆ ಪರೀಕ್ಷೆಯನ್ನೂ ಒಂದೇ ಕಾಲಕ್ಕೆ ಪಾಸಾದಕಾರಣದಿಂದ ಶ್ರೀಪತರಾಯರು ಅವಳನ್ನು ಕಾಲೇಜಿಗೆ ಕಳಿಸಲಿಲ್ಲ. ಕನಕಲತೆಗೆ ಮ್ಯಾಟ್ರಿಕ್‌ದಲ್ಲಿ ವಿಶ್ವವಿದ್ಯಾ ಲಯದ ಒಂದು ಶಿಷ್ಯವೃತ್ತಿ ಸಿಕ್ಕಿದ್ದರೂ ಮತ್ತು ಅವಳ ಶಿಕ್ಷಕಿಯರು ಶ್ರೀಪತ ರಾಯರಿಗೆ ಎಷ್ಟು ವಿಧದಿಂದ ಹೇಳಿಕೊಂಡರೂ ಅವರ ಮನಸ್ಸು ತಿರುಗಲಿಲ್ಲ. ಕನಕಲತೆಯ ಮದುವೆಯಾಯಿತು. ಮುಂದೆ ಒಂದೇ ತಿಂಗಳದಲ್ಲಿ--! ಮದು ವೆಯು [illegible]ನ್ನು ಬಿಟ್ಟುಕೊಟ್ಟು, ಅವಳನ್ನು ಕಾಲೇಜಿಗೆ ಕಳುಹಿಸ್ದರೆ ನೆಟ್ಟಗಾಗುತ್ತಿತ್ತೆಂದು ಶ್ರೀಪತರಾಯರು ಮನದಲ್ಲಿ ಮರುಗಿದರು.

ಕನಕಲತೆಯನ್ನು ಕಾಲೇಜಿಗೆ ಕಳಿಸಿರಿ, ಭಾಸ್ಕರಾಚಾರ್ಯರ ಲೀಲಾ ವತಿಯಂತೆ ಅವಳು ವಿದುಷಿಯಾಗಲಿ, ಎಂದು ಕೆಲವರು ಸಲಹೆಕೊಟ್ಟರು. ದೈವದಲ್ಲಿದ್ದುದನ್ನು ತಪ್ಪಿಸಲು ಯಾರಿಗೆ ಶಕ್ಯ? ಇದ್ದಷ್ಟು ದಿನ ರಾಮ ರಾಮ ಎಂದು ಕಡೆಗೊಮ್ಮೆ ಕಣ್ಣುಮುಚ್ಚುವದು; ಅವನು ಇಟ್ಟಹಾಗೆ ಇರಬೇಕು, ಎಂದು ಕೆಲವರು ನಿಟ್ಟುಸಿರು ಬಿಟ್ಟರು. ಅವಳನ್ನು ನಮ್ಮ ಕಡೆಗೆ ಟಾಯಿ ಪಿಂಗ ಕಲಿಯಲು ಕಳಿಸಿರಿ, ಒಂದೆರಡು ತಿಂಗಳಲ್ಲಿ ಅವಳು ಟಾಯಿಪಿಸ್ಟ ಆಗಿ ತನ್ನ ದಾರಿಯನ್ನು ತಾನೆ ನೋಡಿಕೊಳ್ಳುವಳು ಎಂದು ಸೂಚಿಸಿದರು, ಕೆಲವು ಚಾಣಾಕ್ಷರು. ಕನಕಲತೆಗೆ ವೈಧವ್ಯಬಂಧನದ ಅರಿವು ಚನ್ನಾಗಿ ಆಗಿದ ಲ್ಲಿಲ್ಲ. ಗಂಡನ ಬಗ್ಗೆ ಪ್ರೀತಿ ಪ್ರೇಮಗಳು ಹೃದಯದಲ್ಲಿ ನಾಟುವ ಮೊದ್ಲಾ

ಅವನು ಮಾಯವಾದರೆ ಏಕೆ ದುಃಖವಾಗಬೇಕು? ಅಂತೆಯೇ ಅವಳಿಗೆ ಜನರ ಸಹಾನುಭೂತಿ ಕಠೋರವಾಗಿ ಪರ್ವತಪ್ರಾಯವಾಗಿ ಕಾಣತೊಡಗಿತು. ಅದರಿಂದ ಅವಳಿಗೆ ವೈಧವ್ಯದ ದಾರುಣತೆಯು ಸ್ಪಷ್ಟವಾಗತೊಡಗಿತು. ಶ್ರೀಪತರಾಯರಿಗೂ ಏನೂ ತಿಳಿಯದಂತಾಗಿತ್ತು. ಇಷ್ಟರಲ್ಲಿ ಗಾಡಗೋಳಿಯವರು ರಜೆಪಡೆದುಕೊಂಡು ಮುಂಬಯಿಯಿಂದ ಕರ್ನಾಟಕಕ್ಕೆ ಬಂದರು. ತಮ್ಮೊಡನೆ ಹೊಸವಿಚಾರಗಳನ್ನು ತಂದರು. "ಎಷ್ಟು ದಿವಸ ನಾವು ಹಳೆ ವಿಚಾರಗಳಲ್ಲಿ ಕೊಳೆಯುವದು? ಕನಕಲತೆ ಪುನರ್ವಿವಾಹ ಏಕೆ ಮಾಡಿಕೊಳ್ಳಬಾರದು? ಅವಳ ಸೌಭಾಗ್ಯಕ್ಕೆ ನಾವು ಕಾಯಕಲ್ಪ ಮಾಡಿಸುತ್ತೇವೆ. ನನ್ನೊಡನೆ ಮುಂಬಯಿಗೆ ನಡೆಯಿರಿ" ಎಂದು ಅವರು ಹಾರವಾಡರಿಗೆ ತಿಳಿಸಿದರು. ಮತ್ತು ಮುಂಬಯಿಯಲ್ಲಿ ನೆಲೆಸಿದ ಕರ್ನಾಟಕದ ಒಬ್ಬ ಯುವಕನನ್ನು ಸೂಚಿಸಿದರು. ಪುನರ್ವಿವಾಹ ಮಾಡಿಕೊಳ್ಳುವದಕ್ಕಾಗಿಯೇ ಅವನು ತನ್ನ ವಿವಾಹವನ್ನು ಮುಂದೆ ಹಾಕುತ್ತಿದ್ದಾನೆಂದು ತಮಗೆ ತಿಳಿದಿರುವದಾಗಿ ಹೇಳಿದರು. ಸೌಭಾಗ್ಯಕ್ಕೆ ಕಾಯಕಲ್ಪ— ಕನಕಲತೆಗೆ ಧೈರ್ಯ ಬಂದಿತು. ಮದುವೆ ಇಲ್ಲದೆ ಇರಬಹುದು. ಆದರೆ ವಿಧವೆಯಾಗಿ ಕ್ಷಣಕಾಲ ಕೂಡ ಬಾಳುವದಶಕ್ಯವೆಂದು ಕೆಲವು ದಿವಸಗಳಲ್ಲಿಯೇ ಅವಳು ಮನಗಂಡಿದ್ದಳು. ಶ್ರೀಪತರಾಯರೂ ಮುಂಬಯಿಗೆ ನಡೆದರು. ಅವರ ಪೆಟ್ಟಿಗೆಯಲ್ಲಿ ಕನಕಲತೆಯ ಛಾಯಾಚಿತ್ರವೂ, ಕೋಟಿನ ಕಿಸೆಯಲ್ಲಿ ಅವಳ ಜನ್ಮಪತ್ರಿಕೆಯೂ ಇದ್ದವು.

ಮುಂಬಯಿ ಎಂಥ ವಿಚಿತ್ರಪಟ್ಟಣವಿರಬಹುದು? ಆಧುನಿಕ ಯಕ್ಷನಗರಿಯು ಅದು. ಎಲ್ಲರ ವಿಧವಿಧದ ಬೇಡಿಕೆಗಳನ್ನು ಪೂರೈಸುವ ಕಾಮಧೇನುವೇ ಅದು. ನಿರುದ್ಯೋಗಿ ತರುಣರಿಗೆ ನೌಕರಿ. ವಿಧವೆಯರಿಗೆ ಸೌಭಾಗ್ಯ, (ಮತ್ತು ಗಾಡಗೋಳಿಯವರು ಆಗಾಗ್ಗೆ ಹೇಳುತ್ತಿದ್ದಂತೆ) ಭಿಕ್ಷಾಪತಿಗಳಿಗೆ ಲಕ್ಷಾಪತಿಯ ಐಶ್ವರ್ಯ ಕರುಣಿಸುವ ಮುಂಬಯಿ! ಈ ಮೊದಲಾದ ವಿಚಾರಗಳು ಪದ್ಮನಾಭನ ತಲೆಯಲ್ಲಿ ಸುಳಿಯುತ್ತಿದ್ದವು. ಅವೇ ವಿಚಾರಗಳನ್ನು ಅವನು ಚರ್ವಿತಚರ್ವಣಮಾಡಿ ಮೆಲುಕು ಹಾಕುತ್ತಿದ್ದ. ಅಷ್ಟರಲ್ಲಿ ಮುಂಬಯಿಯಲ್ಲಿದ್ದ ಅವನ ಆಸ್ಥೆಯನ್ನು ಹೆಚ್ಚಿಸುವ ಮತ್ತೊಂದು ಸಂಗತಿಯು ಸಂಭವಿಸಿತು.

ಶ್ರೀ. ಗಾಡಗೋಳಿ, ಹಾರವಾಡ ಮತ್ತು ಅವನು ಮುಂಬಯಿಗೆ ಪ್ರಯಾಣ ಬೆಳೆಸುತ್ತಿದ್ದಾಗ ಅವರ ಡಬ್ಬಿಯಲ್ಲಿಯೇ ಆ ಸಣ್ಣ ಸಂಗತಿ ಸಂಭವ

ಸಿತು. ನಿರ್ಜನಿಯ ಸ್ಟೇಶನ್ನಿನಲ್ಲಿ ಗಾಡಿಯು ಬಹಳ ಹೊತ್ತು ನಿಲ್ಲುವದರಿಂದ ಗಾಡಿಯಲ್ಲಿಯ ಜನರೆಲ್ಲ ಕೆಳಗೆ ಇಳಿದುಹೋಗಿದ್ದರು. ಶ್ರೀ ಗಾಡಗೋಳಿ ಹಾಗೂ ಹಾರವಾಡರೂ ಚಹಾಪಾನಕ್ಕಾಗಿ ಕೆಳಗಿಳಿದು ಸಾಮಾನುಗಳನ್ನು ನೋಡಲೆಂದು ಪದ್ಮನಾಭನನ್ನು ಇಟ್ಟುಹೋಗಿದ್ದರು. ಆದೇ ಮುಚ್ಚುಂಜೆಯಾಗುತ್ತಿತ್ತು. ಗಾಡಿಯಲ್ಲಿ ಕುಳಿತು ಪದ್ಮನಾಭನಿಗೆ ಬೇಸರ ಬಂದಿತ್ತು, ಅಂತೆಯೇ ಅವನು ಮೈಮುರಿದುಕೊಳ್ಳುತ್ತ ಕಾಲನ್ನು ಮುಂದೆ ಚಾಚಿದನು. ಅವನ ಕಾಲುಗಳು ಎದುರಿನ ಬಾಕಿನ ಕೆಳಭಾಗದಲ್ಲಿ ಒಳಸೇರಿದುದೊಂದೇ ತಡ ಅಲ್ಲಿಂದ ಒಂದು ಆರ್ತಸ್ವರವು ಕೇಳಬಂದಿತು. ಆದೇನೆಂದು ಅವನು ಬಗ್ಗಿ ನೋಡಿದ. ಅಷ್ಟರಲ್ಲಿ ಅಲ್ಲಿದ್ದ ಮಾನವ ಪ್ರಾಣಿಯು ಅವನಿಗೆ ಕೈಮುಗಿದು ಬೇಡಿಕೊಂಡಿತು:– “ ಬಡವರನ್ನು ಒದೆಯಬೇಡಿರಿ. ” ಪದ್ಮನಾಭನಿಗೆ ದಿಗಿಲು ಬಿದ್ದಿತು. ಮೇಲೆ ಇಷ್ಟು ಜಾಗವಿದ್ದರೂ ಈ ವ್ಯಕ್ತಿಯು ಪಾತಾಳವನ್ನೇಕೆ ಆರಿಸಬೇಕು ಎಂದು ಅವನಲ್ಲಿ ಜಿಜ್ಞಾಸೆ ಉಂಟಾಯಿತು. ಕೇಳಿದ.

ಆ ಮಾನವಪ್ರಾಣಿಯು ಹೇಳಿತು.:— “ ಮಾರಾಯಾ ಮಾತಾಡಿಸಬ್ಯಾಡ. ಆ ರಾಕ್ಷಸಗ ತಿಳಿತಂದರ ನನ್ನ ಚಂಡಿಗೆ ಕೈಕೊಟ್ಟು ಹೊರಗ ಒಗಿತಾನ. ತಿಕೀಟ ಇದ್ದವರು ಬತ್ತಲೆಕುಣಿದರೂ ನಡೀತತಿ. ನಾವು ಮುಸಿಕಾಡಿದರೂ ಮೈಮ್ಯಾಗ ಬರತತಿ. ”

ಪದ್ಮನಾಭನು ಆ ರಾಕ್ಷಸನು ದೂರದಲ್ಲಿರುವನೆಂದುಹೇಳಿ ಆ ಪ್ರಾಣಿಯ ಐತಿಹ್ಯವನ್ನು ಕೇಳಿಕೊಂಡ. ಅವನ ಹೆಸರ ಏಳೀರಪ್ಪ. ಅವನು ಗೋಕಾಕದ ಗಿರಣಿಯಲ್ಲಿಯ ಒಬ್ಬ ಕೂಲಿಕಾರ. ಅವನನ್ನು ಒಮ್ಮೆಲೇ ಕೆಲಸದ ಮೇಲಿಂದ ತೆಗೆದೊಗೆದದ್ದರಿಂದ ಅವನು ಮುಂಬಯಿಯ ಮೋರೆ ನೋಡುವ ಪ್ರಸಂಗ ಬಂದಿತು. ಮುಂಬಯಿಯಲ್ಲಿ ಅನೇಕ ಗಿರಣಿಗಳಿದ್ದು ಒಂದು ತಪ್ಪಿದರೂ ಇನ್ನೊಂದರಲ್ಲಿ ತನಗೆ ನೌಕರಿ ಸಿಕ್ಕೆ ಸಿಗುವದೆಂದು ಅವನಿಗೆ ಯಾರೋ ಹೇಳಿದ್ದರಂತೆ. ಅಂತೆಯೇ ಅವನು ಹೊರಟಿದ್ದ. “ತಿಕೀಟ ಕೊಳ್ಳೋಕುವತ್ತಿದ್ದದ್ದರ ಮುಂಬಯಿಗ್ಯಾತಕ್ಕ ಹೋಗತೇನs”? ಎಂದು ಅವನು ಹೇಳಿದ. ಪದ್ಮನಾಭನ ವಿಚಾರಕ್ಕೆ ಮತ್ತೆ ಅನ್ನವಾಯಿತು.

ಪ್ರವಾಸದಲ್ಲಿ ಸಾಮಾನುಗಳನ್ನು ಕಾಯುತ್ತ ಕೂಡ್ರುವ ಕೆಲಸವನ್ನು ಪದ್ಮನಾಭನು ಗುತ್ತಿಗೆ ಹೊತ್ತಿದ್ದನೊ ಏನೋ ಎನ್ನುವಂತೆ ಪುಣೆಯ ಸ್ಟೇಶನ್ನಿನ

ಲ್ಲಿಯೂ ಸಾಮಾನುಗಳನ್ನು ಕಾಯುವ ಕೆಲಸವು ಅವನ ಮೇಲೆಯೇ ಬಂದಿತು. ಮುಂಬಯಿಯ ಗಾಡಿಯು ಎರಡು ತಾಸು ತಡವಿದ್ದಿತಾದ್ದರಿಂದ ಶ್ರೀ ಗಾಡಗೋಳಿ ಹಾಗೂ ಹಾರವಾಡರವರು ಪುಣೆ ಪಟ್ಟಣದಲ್ಲಿದ್ದ, ಒಬ್ಬ ಮಿತ್ರನಿಗೆ ಭೆಟ್ಟಿಯಾಗಿ ವಿಧವಾ ವಿವಾಹದ ಬಗ್ಗೆ ಪ್ರಗತಿಪರ ವಿಚಾರಗಳನ್ನಿಟ್ಟುಕೊಂಡ ಹಾಗೂ ಅವುಗಳನ್ನು ಆಚರಣೆಯಲ್ಲಿ ತರಲು ಸಕ್ರಿಯಿಸಿದ್ದ ಆ ಮುಂಬಯಿ ತರುಣನ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳಲು ಮತ್ತು ಪರಿಚಯ ಪತ್ರವನ್ನು ದೊರಕಿಸಿಕೊಳ್ಳಲು ಹೋದರು. ಪದ್ಮನಾಭನು ಪ್ಲಾಟಫಾರ್ಮಿನ ಮೇಲೆ ಸಾಮಾನುಗಳನ್ನು ಕಾಯುತ್ತ ಕುಳಿತನು.

ರಾತ್ರಿಯೆಲ್ಲ ನಿದ್ರೆಯಿಲ್ಲದೆ ಹೋದುದರಿಂದ ಪದ್ಮನಾಭನಿಗೆ ಸಾಮಾನುಗಳ ಮೇಲೆ ಒರಗಿರುವಾಗಲೇ ಅರೆನಿದ್ರೆ ಹತ್ತಿತು. ಯಾವಾಗ ತನಗೆ ನಿದ್ರೆ ಹತ್ತಿತೆಂಬುದು ಅವನಿಗೆ ಗೊತ್ತಿರಲಿಲ್ಲ. ಆದರೆ ಒಂದು ತಗಡಿನ ಡಬ್ಬಿಯಲ್ಲಿಯ ಹಾಕಿದ ಒಂದೆರಡು ದುಡ್ಡಿನ ಖೊಳಕ್ಕ ಖೊಳಕ್ಕ ಎಂಬ ಶಬ್ದದಿಂದ ಅವನಿಗೆ ಒಮ್ಮೆಲೆ ಎಚ್ಚರಾಯಿತು. ಕಣ್ತೆರೆದು ನೋಡಿದ.

ಅವನ ಮುಂದೆ ಒಬ್ಬ ಭಿಕ್ಷುಕ ನಿಂತಿದ್ದ. ಎಲ್ಲ ಭಿಕ್ಷುಕರಂತೆಯೆ ಇವನಿದ್ದ. ಆಳವಾದ ಗುದ್ದಿನಲ್ಲಿ ಸಿಕ್ಕ ಎರಡು ಕಣ್ಣುಗಳು ( ಇವುಗಳನ್ನು ಅವನು ತೆರದಿರಲಿಲ್ಲ. ) ಅಸ್ಥಿಪಂಜರ ದೇಹ. ಅದರ ಮೇಲೆ ಹರಕು ಹರಕಾದ ಬಟ್ಟೆಗಳು. ಪಚ್ಚುಬಿದ್ದ ಮೋರೆ. ಒಂದು ಕೈಯಲ್ಲಿ ಒಂದು ಬಡಿಗೆ— ಇನ್ನೊಂದು ಕೈಯಲ್ಲಿ ಭಿಕ್ಷಾಪಾತ್ರೆ. ಬಡಿಗೆಯನ್ನು ಹಿಡಿದ ಕೈಯಲ್ಲಿ ಈ ಭಿಕ್ಷುಕನು ಒಂದು ಕಾಗದವನ್ನು ಹಿಡಿದಿದ್ದ. ಮತ್ತು ಇದೇ ಕೈಯನ್ನೇ ಅವನು ಮುಂದೆ ಚಾಚಿದ್ದ.

ಪದ್ಮನಾಭನು ಕಾಗದವನ್ನು ತೆರೆದು ಓದಿನೋಡಿದ. ಅದು ಇಂಗ್ಲೀಷನಲ್ಲಿತ್ತು. ಅದರಲ್ಲಿ ಹೀಗೆ ಬರೆಯಲಾಗಿತ್ತು,— "ಈ ಮನುಷ್ಯನು ಮದ್ರಾಸದ ಬಳ್ಳಾರಿ ಜಿಲ್ಲೆಯವನು. ಬರಗಾಲದಲ್ಲಿ ತನ್ನ ಇದ್ದುಬಿದ್ದುದನ್ನೆಲ್ಲ ಮಾರಿಕೊಂಡು ಇವನು ಒಕ್ಕಲತನಕ್ಕೆ ಶರಣಹೊಡೆಯಬೇಕಾಯಿತು. ಇವನ ಮಕ್ಕಳು ಮರಿಗಳೂ ಭಿಕ್ಷಾಪಾತ್ರೆಯನ್ನು ಹಿಡಿದಿರುವರು. ನಾಲ್ಕೆಂಟು ದುಡ್ಡು ಕೂಡಿಸಿ ಮತ್ತೆ ಒಕ್ಕಲತನ ಪ್ರಾರಂಭಿಸಬೇಕೆಂದು ಇವನ ವಿಚಾರ. ಎಲ್ಲರೂ ಕರುಣೆಯಿಂದ ಸಹಾಯ ಸಲ್ಲಿಸಿ ಪುಣ್ಯವನ್ನು ಸಂಪಾದಿಸಿಕೊಳ್ಳಬೇಕು."

ಪತ್ರಕ್ಕೆ ನಿವೃತ್ತ ನ್ಯಾಯಧೀಶ ಎಂದು ಯಾರದೋ ಸಹಿ ಇದ್ದಿತು. ಆದರೆ ಸ್ಪಷ್ಟವಾಗಿ ಕಾಣುತ್ತಿರಲಿಲ್ಲವಾದ್ದರಿಂದ ಅದು ಯಾರದೆಂದು ಅಥವಾ ಯಾವ ಭಾಷೆಯಲ್ಲಿದೆಂದು ಹೇಳುವದು ದುಸ್ತರವಾಗಿತ್ತು.

ಈ ಚೀಟಿಯೂ ಅದರ ಒಡೆಯನಂತೆ ಕಂಗಾಲ ಸ್ಥಿತಿಗೆ ಬಂದಿತ್ತು. ಮಡಿಚಿ ಮಡಿಚಿ ಮಡಿಚಲ್ಪಟ್ಟದ್ದರಿಂದ ಮಡಿಕೆಗಳ ಗುಂಟ ಅದು ಹರಿದು ಹೋಗಿತ್ತು. ತುಂಡು ತುಂಡಾಗಿತ್ತು. ಕಷ್ಟದಿಂದಲೇ ಅದನ್ನು ಓದಬಹುದಾಗಿತ್ತು. ಪದ್ಮನಾಭನು ಆದಷ್ಟು ಜಾಗರೂಕತೆಯಿಂದ ಅದನ್ನು ಮತ್ತೆ ಮಡಿಚಿ ಆ ಭಿಕ್ಷುಕನ ಕೈಯಲ್ಲಿಟ್ಟು ಮಾಫಕರೋ ಬಾವಾಜಿ ಎಂದು ಹೇಳಿದ.

" ಮ್ಮ ಮ್ಮ ಮ್ಮ ಮ್ಮ ಮ್ಮ " ಎಂದ ಬಾವಾಜಿ.

ಮ್ಮ ಮ್ಮ ಮ್ಮ ಮ್ಮ ! ಇದೆಂಥ ಭಾಷೆಯೋ ಪದ್ಮನಾಭನಿಗೆ ತಿಳಿಯಲಿಲ್ಲ. ತಿಳಿದುಕೊಳ್ಳಲು ಅವನು ಪ್ರಯತ್ನಿಸಲಿಲ್ಲ. ತಾನು ಸಣ್ಣ ಹುಡುಗನೆಂದೂ, ನಿರುದ್ಯೋಗಿಯೆಂದೂ, ಭಿಕ್ಷುಕರಿಗೆ ಕೊಡಲು ಒಂದು ಕಾಸೂ ತನ್ನ ಕಡೆಗಿಲ್ಲವೆಂದು ಅವನ್ನು ಹಿಂದಿಯಲ್ಲಿ ಸ್ಪಷ್ಟಪಡಿಸಿದ.

ಸಣ್ಣ ಹುಡುಗನೆಂದ ಕೂಡಲೆ ಬಾವಾಜಿಗೆ ಧೈರ್ಯಬಂದಂತಾಯಿತು. ಅವನು ಗುದ್ದಿನಲ್ಲಿದ್ದಂತಿದ್ದ ತನ್ನ ಕಣ್ಣುಗಳನ್ನು ತೆರೆದು ಪದ್ಮನಾಭನನ್ನು ನೋಡಿದ. ಅವನ ಧೈರ್ಯವು ದೃಢವಾಯಿತು. '' ಇಂಗ್ರೇಜಿ?? '' ಎನ್ನುತ್ತ ಆವನು ಬರೆದವರಂತೆ ನಟಿಸುತ್ತ ಕೇಳಿದ. ಮೂಕನಿಗೆ ಒಮ್ಮೆಲೆ ಬಾಯಿ ಬಂದಿತು!

'' ಹೌದು ಇಂಗ್ರೇಜಿ ಬರುತ್ತದೆ '' ಎಂದು ಪದ್ಮನಾಭ ಕನ್ನಡದಲ್ಲಿ ಹೇಳಿದ.

'' ನೀನೂ ನಮ್ಮ ದೇಶದವನೇ.— ಮತ್ತೊಂದು ಕಾಗದ್ಯಾಗ ಬರದ ಕೊಡಪ್ಪ— ಇದನ್ನೆಲ್ಲ "

" ಸಹಿ ? "

" ನೀನs ಸಹಿ ಮಾಡ— ಜಡ್ಜಿ ಅಂತ. "

ಪದ್ಮನಾಭನು ತನ್ನ ಕೋಟಿನ ಒಳಕಿಸೆಯೊಳಗಿಂದ ತನ್ನ ಪ್ರಮಾಣ ಪತ್ರಗಳ ಪುಡಿಕೆಯನ್ನು ತೆಗೆದ. ಅದರಲ್ಲಿ ಅವನ ಮ್ಯಾಟ್ರಿಕ್ ಪರೀಕ್ಷೆಪಾಸಾದ

ಬಗ್ಗೆ ಶಾಲೆಯ ಮಾಸ್ತರರು ಕೊಟ್ಟ ಸರ್ಟಿಫಿಕೇಟು, ಕಲೆಕ್ಟರರ ಕಡೆಯಿಂದ ದೊರಕಿಸಿಕೊಂಡ 'ಡೊಮಿಸಾಯಿಲ' ಸರ್ಟಿಫಿಕೇಟು, ಅಲ್ಲದೆ ಇಬ್ಬರು ಸದ್ಗೃಹಸ್ಥರ ಕಡೆಯಿಂದ ಉತ್ತಮ ನಡಾವಳಿಯ ಬಗ್ಗೆ ದೊರಕಿಸಿಕೊಂಡ ಸರ್ಟಿಫಿಕೇಟುಗಳೂ ಟಾಯಿಪಿಂಗ ಕ್ಲಾಸಿನ ಅಧ್ಯಾಪಕರ ಕಡೆಯಿಂದ ದೊರೆತ ಸರ್ಟಿಫಿಕೇಟು ಇವೆಲ್ಲ ಇದ್ದವು. ಅವುಗಳ ಜೊತೆಗೆ ಅವನು ಅರ್ಜಿಬರೆಯುವದಕ್ಕೊಂದು ಸಾಕಷ್ಟು ಬಿಳಿಹಾಳೆಯನ್ನೂ ಇಟ್ಟಿದ್ದ. ಒಂದು ಹಾಳೆಯ ಮೇಲೆ ಆ ಭಿಕ್ಷುಕನ ಪ್ರಮಾಣಪತ್ರದ ಪ್ರತಿಯನ್ನು ಇಳಿಸಿದ. ಇನ್ನು ಸಹಿ ಮಾಡುವದೊಂದೆ ಉಳಿದಿದ್ದು ಅಷ್ಟರಲ್ಲಿ ಆ ಭಿಕ್ಷುಕನು ಹೇಳಿದ. " ದ್ಯಾವ್ರ ನಾ ಮೂಕ ಕುಡ್ಡಾ ಅಂತ ಬರದಬಿಡ್ರಿ. "

" ಆ ? "

" ಮೂಕ ಕುರುಡ ಅಂದರ್‍ನ ಮುಂಬಯಿಯ್ಯಾಗ ನಾಲ್ಕು ದುಡ್ಡು ಹುಟ್ಟತಾವಂತ ಭಿಕ್ಷಾ ಬೇಡವರಿಗೆ— " " ಅಂದರ ನೀನು ಮುಂಬಯಿಗೆ ಹೋಗುವಿ?"

"ಹೌಂದು ಮತ್ತೆಲ್ಲಿ? ಮುಂಬಯಿ ಎಲ್ಲಾರ ದೊಡ್ಡವ್ವ. ಯಾರನ್ನೂ ಅವಳು ಹಿಂದಕ್ಕಳಸಾಣಿಲ್ಲ. "

ತನ್ನ ಸುಂದರ ಅಕ್ಷರಗಳಲ್ಲಿ ಪದ್ಮನಾಭನು ಆ 'ಸರ್ಟಿಫಿಕೇಟಿ' ನ ಪ್ರತಿ ತೆಗೆದು ಅದನ್ನು ಭಿಕ್ಷುಕನಿಗೆ ಕೊಟ್ಟನು. ಅಕ್ಷರಗಳನ್ನು ನೋಡಿ ಸಂತುಷ್ಟನಾದ ಭಿಕ್ಷುಕನು ಅವನ ಉಪಕಾರ ಸ್ಮರಿಸಿ ಎಲ್ಲಿಯೋ ಹೊರಟುಹೋದನು.

ಮುಂಬಯಿ ವಿಷಯವಾಗಿ ಪದ್ಮನಾಭನಿಗೆ ಜಿಜ್ಞಾಸೆ ಬೆಳೆಯಿತು. ಒಂದು ರೀತಿಯಿಂದ ಮರುತಿಯೂ ಹೆಚ್ಚಿತು. ಆದರೆ ಈ ಭಾವನೆಗಳು ಬಹಳ ವೇಳೆ ಉಳಿಯಲಿಲ್ಲ. ಯಾಕೆಂದರೆ ಪಟ್ಟಣದಲ್ಲಿ ಹೋದ ಶ್ರೀ. ಗಾಡಗೋಳಿ ಹಾಗು ಹಾರವಾಡರು ಮರಳಿ ಬಂದರು. ಬರುವಾಗ ಅವರು ಒಂದು ವೃತ್ತಪತ್ರವನ್ನೂ ಕೈಯಲ್ಲಿ ಹಿಡಿದುಕೊಂಡು ಬಂದಿದ್ದರು. ಅದರಲ್ಲಿಯ ಭಯಂಕರ ಸುದ್ದಿಯಿಂದ ಅವನ ವಿಚಾರಗಳ ಪ್ರವಾಹ ಮುಂಬಯಿ ಬಿಟ್ಟು ಬೇರೆ ದಿಕ್ಕಿಗೆ ಹರಿಯತೊಡಗಿದವು.

ಮುಂಬಯಿಯಲ್ಲಿ ಅ. ಭಾ. ಕಾಂಗ್ರೆಸ ಸಮಿತಿಯ ಸಭೆಗಾಗಿ ಸೇರಿದ ಕಾಂಗ್ರೆಸ ಮುಖಂಡರನ್ನು ಸೆರೆಹಿಡಿದಿದ್ದರು. ಆ ಪಟ್ಟಣದಲ್ಲಿ ಒಂದೆರಡು

ಕಡೆಗೆ ಲಾಠಿ ಪ್ರಹಾರವಾಗಿತ್ತು. ಪಟ್ಟಣದಲ್ಲಿ ಅತ್ಯಂತ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿದೆಂದು ಉಲ್ಲೇಖಿಸಲಾಗಿತ್ತು. ಎಲ್ಲರನ್ನು ಬರಮಾಡಿಕೊಳ್ಳುವ ದೊಡ್ಡವ್ವ ಕೋಪಿಸಿಕೊಂಡಿದ್ದಾಳೆಂದು ಅವನು ಮನಸ್ಸಿನಲ್ಲಿ ಎಣಿಸಿದ.

ಆ ವೃತ್ತಪತ್ರದ ಒಳಗಿನ ಪುಟಗಳಲ್ಲಿ ಕಾಂಗ್ರೆಸ ಮುಖಂಡರ ಭಾಷಣಗಳನ್ನು ಕೊಡಲಾಗಿತ್ತು. ಮಹಾತ್ಮಾ ಗಾಂಧೀಯವರ ಭಾಷಣದ ಮರ್ಮವಾದ 'ಮಾಡಿರಿ ಇಲ್ಲವೆ ಮಡಿಯಿರಿ' ಎಂಬುದನ್ನೂ ಎಲ್ಲರೂ ಸ್ವತಂತ್ರ ನಾಗರಿಕರೆಂದು ವರ್ತಿಸಬೇಕು. ಎಂಬ ಮೌಲಾನಾ ಅಬುಲ ಕಲಂ ಅಝಾದರ ಭಾಷಣದ ಸಾರವನ್ನು ದಪ್ಪಕ್ಷರಗಳಲ್ಲಿ ಪ್ರಸಿದ್ಧಿಸಲಾಗಿತ್ತು.

ಪದ್ಮನಾಭನ ಮನಸ್ಸೆಂಬ ಸಾಗರದಲ್ಲಿ ಒಮ್ಮೆಲೇ ಬಿರುಗಾಳಿ ಬಿಟ್ಟಿತು. 'ಮಾಡು ಇಲ್ಲವೆ ಮಡಿ' ಎಂಬ ಶಬ್ದದ ಮೇಲೆ ಅವನು ವಿಚಾರಮಾಡತೊಡಗಿದ. ದೇಶಕ್ಕೆ ದಾಸ್ಯತ್ವದ ದಾರಿದ್ರ್ಯದ ಶೃಂಖಲೆಗಳನ್ನು ತೊಡಿಸಿದ ಬ್ರಿಟಿಶರ ಮೇಲೆ ಅವನಿಗೆ ಹೇಳಲಾರದಷ್ಟು ಕೋಪಬಂದಿತು. 'ಮಾಡು ಇಲ್ಲವೆ ಮಡಿ' ಎಂದು ಅವನು ತನ್ನೊಳಗೆ ತಾನೇ ಅನ್ನತೊಡಗಿದ. ಪುಣೆಯಿಂದ ಮುಂಬಯಿಗೆ ಹೊರಟ ಗಾಡಿಯು ಗಾಲಿಗಳೂ 'ಮಾಡು ಇಲ್ಲವೆ ಮಡಿ' ಎಂದು ಶಬ್ದಗೈಯ್ಯುತ್ತಲೆ ಮುಂದೆ ಸಾಗುತ್ತಿವೆಂದು ಅವನಿಗೆ ಅನಿಸತೊಡಗಿತು.

## ವೈಭವಪುರದ ರಕ್ಷಣೆ

ಶತ್ರುಪತಿಗಳಿಗೆ ಮನಃಸ್ವಾಸ್ಥ್ಯ ಲಭಿಸಲೆಂದು ವೈಭವಪುರದ ಪೋಲೀಸರು ಮತ್ತು ಬ್ರಿ. ಸರಕಾರದ ಬೇರುಗಳು ಅಲುಗಾಡದಿರಲೆಂದು ಬ್ರಿ. ಸರಕಾರದ ಪೋಲೀಸರು ಅವಿಶ್ರಾಂತವಾಗಿ ಒಂದೇ ಸವನೆ ಪದ್ಮಜೆಯನ್ನು ಹುಡುಕಿದರು. ಅವರಿಗೆ ಯಶದೊರೆಯಲಿಲ್ಲ. ಯಾಕಂದರೆ ಸ್ವತಃ ಸಂಸ್ಥಾನದ ದಿವಾಣರೆ ಅವಳಿಗೆ ಸಹಾಯ ಮಾಡುತ್ತಿದ್ದರು.

ವೈಭವಪುರ ಸಂರಕ್ಷಣೆಗೆ ಹಿಂದಕ್ಕೆ ಅದೆಷ್ಟೋ ಶೂರರು ಧೀರರು ಪ್ರಾಣ ಕೊಟ್ಟರು. ಸ್ತ್ರೀಯರೂ ಕೂಡ ಪುರುಷರಂತೆ ಧೈರ್ಯತೋರಿ ವೈರಿಗಳನ್ನು ಹಿಂದಕ್ಕಟ್ಟಿದರು ಮತ್ತು ಸಂಸ್ಥಾನವನ್ನು ಕಾಪಾಡಿದರು. ಹಿಂದಕ್ಕೆ ಹೈದರ ಅಲ್ಲಿಯ ಆಳುಹಿಂದ ಸೇನಾಪತಿ ಮಹಮ್ಮದ ಕಾಫೀರನು ವೈಭವಪುರದ ದುರ್ಗಕ್ಕೆ

ಮುತ್ತಿಗೆ ಹಾಕಿ ಅದರ ವ್ಯವಹಾರವನ್ನೆಲ್ಲ ಕಟ್ಟುಮಾಡಿ ಅದು ಉಸಿರಾಡದಂತೆ ಮಾಡಿದ್ದನಂತೆ. ಆಗ ದುರ್ಗದಲ್ಲಿಯ ಎಲ್ಲ ಸಾಧನ ಸಾಮುಗ್ರಿಗಳು ತೀರಿ ಹೋದವು. ಶೂರರ ಕೈಗಳು ಸೋತವು. ಮದ್ದಿನ ಸಂಗ್ರಹ ತೀರಿದ್ದಕ್ಕೆ ದುರ್ಗದಲ್ಲಿದ್ದ ಒಂದೇ ಒಂದು ತೋಫು ಕೂಡ ಮೌನತಾಳಿತು. ಇನ್ನು ನಾಲ್ಕೈದು ದಿವಸ ಹಾಗೆಯೇ ಮುತ್ತಿಗೆ ಉಳಿದಿದ್ದರೆ ಇಂದು ವೈಭವಪುರದ ಗಾದಿಯ ಮೇಲೆ ಶತ್ರುಪತಿ ಸರ ರಘುನಾಥರ ಬದಲು ನವಾಬ ಯಾರಾದರೂ ಕೂಡ್ರಬಹುದಾಗಿತ್ತು. ಆದರೆ ವೈಭವಪುರದ ಪುಣ್ಯದೊಡ್ಡದು. ಸಂಕಟ ಸಮಯದಲ್ಲಿ ಕಡ್ಡಿಯೇ ಗುಡ್ಡವಾಗಿ ಅನೇಕ ಸಾರೆ ಅದು ಶತ್ರುಗಳ ಕೈಯಿಂದ ಪಾರಾಯಿತು, ವೈಭವಪುರದ ವಾರಾಂಗನೆಯರಲ್ಲಿ ನಾಲ್ವರು ಸುಂದರಿಯರು ರಾತ್ರಿಯಲ್ಲಿ ದುರ್ಗದಿಂದ ಹೊರಬಿದ್ದು ಮಹಮ್ಮದ ಕಾಫೀರನ ಛಾವಣಿಯಲ್ಲಿ ಹುಲ್ಲು ಮಾರುವವರ ವೇಷದಲ್ಲಿ ಸೇರಿದರು. ಕಾಫೀರನ ಸೈನಿಕರು ಯುಕ್ತಿ ಪ್ರಯುಕ್ತಿಗಳಿಂದ ಅವರನ್ನು ತಮ್ಮ ಸೇನಾಪತಿಯ ಕಡೆಗೆ ಒಯ್ದು ಆದರದಿಂದ ಸಮರ್ಪಿಸಿದರು. ಛಾವಣಿಯಲ್ಲಿ ಈ ರೀತಿ ನುಗ್ಗಿದ ಈ ಸುಂದರಿಯರಿಗೆ ಖಾನನ ಹೃದಯದಲ್ಲಿ ಹೊಕ್ಕು ಅದನ್ನು ವಶಪಡಿಸಿಕೊಳ್ಳುವದು ತಡವಾಗಲಿಲ್ಲ. ಅವರು ತಮ್ಮ ಹಾಡು, ಕುಣಿತ ಮಣಿತಗಳಿಂದ ಅವನನ್ನು ಮೋಹಿಸಿ ಕಡೆಗೆ ಅವನ ಮದ್ಯದಲ್ಲಿ ವಿಷಪ್ರಯೋಗ ಮಾಡಿ ಅಲ್ಲಿಂದ ನುಸುಳಿದರು. ಮೂರನೆ ದಿನ ಸೇನಾಪತಿಯ ಕಳೆಬರದೊಡನೆ ಹೈದರನ ಸೈನ್ಯವು ಮರುಳಿ ಹೋಯಿತು! ವೈಭವಪುರದ ಅಲಿಖಿತ ಇತಿಹಾಸದಲ್ಲಿ ಇಂಥ ಎಷ್ಟೋ ಉದಾಹರಣೆಗಳು ಇವೆ. ಈ ಪರಂಪರೆಗೆ ಅನುಗುಣವಾಗಿಯೋ ಏನೋ ಎನ್ನುವಂತೆ ವೈಭವಪುರದ ಸದ್ಯದ ದಿವಾಣರು ಕೂಡ ಅದರ ಸಂರಕ್ಷಣೆಗೆ ನಡಗಟ್ಟಿ ನಿಂತು ಅದನ್ನು ಪಾರುಮಾಡಿದರು.

ಖಾದೀ ಧಾರಿಗಳಿಬ್ಬರು ಪದ್ಮಜೆಯ ಬೆನ್ನುಹತ್ತಿ ಶಾಂತಿನಿಕೇತನದಲ್ಲಿ ಹೊಕ್ಕುದು ಕೇವಲ ಹಸ್ತಪತ್ರಿಕೆಯನ್ನು ಹಂಚುವವರ ಶೋಧಕ್ಕೆಂದು ಅಲ್ಲ. ಅಂದು ಮುಂಜಾನೆ ವಿದ್ಯಾನಗರದ ಪೋಸ್ಟ ಆಫೀಸಿನ ಬಳಿಯಲ್ಲಿ ಕಚ್ಚಾ ಬಾಂಬು ಒಂದು ಸ್ಫೋಟವಾಗಿ ಹಸ್ತಪತ್ರಿಕೆಯ ಹಂಚಿಕೆಗೆ ಬಹಳ ಮಹತ್ವ ಬಂದಿತು. ಕಚ್ಚಾಬಾಂಬಿನ ಶೋಧ ಮಾಡುತ್ತಿದ್ದಾಗ ಪೋಲೀಸರಿಗೆ ಸ್ತ್ರೀಯ ಹಸ್ತಾಕ್ಷರಗಳುಳ್ಳ ಪರಿಪತ್ರವೊಂದು ದೊರೆಯಿತು. ಇದು ಮೇಲೆ ಪ್ರೇಮ

ಪತ್ರದಂತೆ ಕಂಡರೂ ಆ ಪತ್ರದ ೧, ೩, ೫, ೭, ೯, ಮತ್ತು ೧೧ನೇ ಸಾಲುಗಳನ್ನು ಬಲದಿಂದ ಎಡಕ್ಕೆ ಉರ್ದು ಓದುವಂತೆ ಓದಿದರೆ ಬಾಂಬಿನ ಬಗ್ಗೆ ಏನೊ ಅದರಲ್ಲಿ ಉಲ್ಲೇಖವಿದೆಂಬ ಸಂಶಯ ಬರುತ್ತಿತ್ತು. ಆ ಸ್ತ್ರೀಯ ಹಸ್ತಾಕ್ಷರದ ಶೋಧ ಮಾತ್ರ ಆಗಲಿಲ್ಲ. ಆದರೆ ಬಾಂಬು ಸ್ಫೋಟವಾಗಿ ಒಂದೆರಡು ತಾಸುಗಳಲ್ಲಿ ನೆಟ್ಟನ್ನ ಮೂಗಿನ ತುಂಬಗಲ್ಲದ ಓರ್ವ ತರುಣಿಯು ಅಪಾದಿತನ ಮನೆಯಿಂದ ಹೊರಬೀಳುವದು ಕಂಡಿತ್ತು. ಹಸ್ತಾಕ್ಷರಗಳು ಇವಳವೇ ಎಂದು ಪೋಲೀಸರಿಬ್ಬರು ಅವಳ ಬಗ್ಗೆ ತಪಾಸು ನಡೆಸಿದರು. ಅವಳು ಕಾಲೇಜ ಕನ್ಯೆ ಎಂದು ತಿಳಿದುಕೊಂಡು ಅವರು ನೇರವಾಗಿ ಕಾಲೇಜಿಗೆ ಹೋಗಿ ಅಲ್ಲಿಯ ವಿಧುರ ಮತ್ತು ವೃದ್ಧ ಪ್ರಧಾನ ಕಾರಕೂನರಾದ ಶ್ರೀ. ಪ್ರಧಾನರನ್ನು ಕಂಡು ಸಾಮ ದಾನಗಳಿಂದ ಅವರಿಗೆ ಅವಳ ಹಸ್ತಾಕ್ಷರಗಳನ್ನು ( ಅಂದರೆ ಅವಳ ಪ್ರವೇಶ ಅರ್ಜಿಯನ್ನು ) ಇಲ್ಲವೆ ಅವಳ ವಿಳಾಸವನ್ನು ಕೊಡಲು ಕೇಳಿದರು. ಆದರೆ ಶ್ರೀ ಪ್ರಧಾನರು ಸಂಬಂಧಪಟ್ಟ ಪೋಲೀಸರಿಗಿಂತ ಮೊದಲು ಹುಟ್ಟಿದುದರಿಂದ ಅವರ ಮೋರೆಯ ಮೇಲೆ ಕೈಎಳೆದರು. ಆ ಹುಡಿಗೆಯು ಇನ್ನೂ ತನ್ನ ಮ್ಯಾಟ್ರಿಕ್ ಸರ್ಟಿಫಿಕೇಟ ತಂದಿಲ್ಲವಾದ್ದರಿಂದ ಅವಳ ಅರ್ಜಿಯನ್ನು ಮುರುಳಿಕೊಟ್ಟಿದ್ದೇನೆ. ಇನ್ನೆರಡು ದಿವಸಗಳಲ್ಲಿ ಅದನ್ನು ದೊರೆಕಿಸಿ ನಿಮ್ಮ ವಶಕ್ಕೆ ಕೊಡುವೆನೆಂದು ಹಾರಿಸಿಕೊಂಡು ಬಿಟ್ಟರು. ಪೋಲೀಸರು ಬಾಧಿವೇಷ ಧರಿಸಿಕೊಂಡು ಪಿಟ್ಟನ ತಪಾಸು ನಡೆಸಿದಾಗ ಅವರಿಗೆ ಒಮ್ಮೆಲೇ ಪದ್ಮಜೆಯು ಹೊರ[illegible]ಂಡಿತು. ಪದ್ಮಜೆಯ ಶರೀರ ಪುಷ್ಟಿಯು ಯಾವಾಗಲು ಒಡೆದು ಕಾಣುವಂಥಹದೆ !

ಈ ಬಾಂಬಿನ ಪ್ರಕರಣದಲ್ಲಿ ವೈಭವಪೂರ ಸಂಸ್ಥಾನಿಕರ ಸಂಬಂಧಿಕರ ಅಂಗಬರಬಹುದೆಂದು ಫೌಜದಾರರು ಅವನ್ನು ಅಲ್ಲಿಯೇ ಮತ್ತಿಕ್ಕಲು ಪ್ರಯತ್ನಿಸಿದರು. ಆಂಗ್ಲೋ ಇಂಡಿಯನ್ ಸಾರ್ಜಂಟನೊಬ್ಬನು ತನ್ನ ಬಿಸ್ತ್ರ ರಾಜವನ್ನು ಭದ್ರಮಾಡುವ ಉದ್ದೇಶದಿಂದ ತನ್ನ ಮಾತೃ ದೇಶವನ್ನು ಮರೆತು ಈ ಸಂಗತಿಯನ್ನು ಡಿ. ಎಸ್. ಪಿ. ಮ್ಯಾಕ್‌ಫ್ಯಾರಡೆ ಹಾಗೂ ಮಹಮ್ಮದಪೂರ ಜಿಲ್ಹೆಯ ಕಲೆಕ್ಟರನ ಪತ್ನಿ ಮಾರ್ಜರಿ ವಿಲಿಯಮ್ಸ ಇವರೀರ್ವರ ಕಿವಿಯಲ್ಲಿ ಊದಿಬಿಟ್ಟನು. ಡಿ. ಎಸ್. ಪಿ. ಸಾಹೇಬರು ಸಾಹೇಬರೆ ಆದ್ದರಿಂದ ಕೂಡಲೆ ಪೋಲಿಟಿಕಲ್ ಏಜಂಟರಿಗೆ ತಂತಿ ಬಿಟ್ಟರು. ಪೋಲಿಟಿಕಲ್ ಏಜಂಟರು ತಮ್ಮ

ಬಾಲಮಿತ್ರರಾದ ವಿಲಿಯಮ್ಸ್ ಕಲೆಕ್ಟರರಿಗೊಂದು ಪತ್ರ ಬರೆದು ನಿಜಸಂಗತಿಯನ್ನು ಕೂಡಲೆ ತಿಳಿಸಬೇಕೆಂದು ಖಾಸಗಿ ರೀತಿಯಿಂದ ಕೇಳಿಕೊಂಡರು. ಅಂತೂ ಪರಿಸ್ಥಿತಿ ತೀರ ವಿಕೋಪಕ್ಕೆ ಹೋಗಿ ಹೈದರ ಅಲ್ಲಿಯ ಸೈನ್ಯವೇ ಮತ್ತೆ ವೈಭವಪೂರಕ್ಕೆ ಮುತ್ತಿಗೆ ಹಾಕಿದೆಯೋ ಏನೊ ಎನ್ನುವಂಥ ಗಂಭೀರ ಪರಿಸ್ಥಿತಿಯು ಉದ್ಭವಿಸಿತು. ದಿವಾಣರಾದ ರಾ. ಸಾ. ಅಚ್ಯುತರಾವ ಇಬ್ಬನ್ನಿಯವರು ವೈಭವಪುರದ ಸೇವಕರ ಸ್ತುತ್ಯಪರಂಪರೆಗೆ ಅನುಗುಣವಾಗಿ ಸಂಸ್ಥಾಸಂರಕ್ಷಣೆಗಾಗಿ ಸೊಂಟ ಬಿಗಿದರು.

ಶತ್ರುಪತಿಗಳಿಗೆ ತಿಳಿಯದಂತೆ ಪದ್ಮಜೆಯು ಇಬ್ಬನ್ನಿಯವರ ಮನೆಗೆ ಹೋಗಿದ್ದಳು. ತನ್ನ ಮೂಲಕ ಸಂಸ್ಥಾನವು ಗಂಡಾತರದಲ್ಲಿ ಬರುವದೆಂದು ಅನಿಸಿದ್ದರಿಂದ ಅವಳು ಶತ್ರುಪತಿಗಳಿಗೆ ಮೋರೆ ತೋರದೆ ವಿದ್ಯಾನಗರದಿಂದ ಕಾಲುಕಿತ್ತುವ ಉಪಾಯ ಹುಡುಕುವದರಲ್ಲಿ ಮಗ್ನಳಾಗಿದ್ದಳು. ಆದರೆ ಎಲ್ಲಿ ಹೋಗುವದು ? ವೇದಕಾಲದ ಋಷಿಗಳಿಂದ ಮೊದಲು ಮಾಡಿಕೊಂಡು ಸತ್ಯವನ್ನು ಕಂಡುಕೊಳ್ಳಲು ಹಿಮಾಲಯದಲ್ಲಿ ದೇಹವನ್ನು ದಂಡಿಸುತ್ತಿದ್ದ ಆಧುನಿಕ ಋಷಿಗಳ ವರೆಗೆ ಎಲ್ಲರ ಎದುರು ಧುತ್ತೆಂದು ನಿಂತ " ನಾನು ಯಾರು? " ಎಂಬ ಪ್ರಶ್ನೆಯು ಅವಳ ತಲೆಯನ್ನೂ ತಿನ್ನುತ್ತಿತ್ತು. ಅವಳಿಗೆ ವಿಷಯ ಆರಾಮುಗಳಿಗೆ ಎಂದೂ ಕಡಿಮೆ ಇರಲಿಲ್ಲ. ಕಳೆದ ೧೭ ವರ್ಷಗಳಿಂದ ಅವಳು ಸುಖದಲ್ಲಿ ಬೆಳೆದಿದ್ದಳು. ಆದರೂ ಆ ಋಷಿಗಳಂತೆ ಅವಳ ಮನಸ್ಸು ಅಸಮಾಧಾನದಿಂದ ತುಂಬಿತ್ತು. ಅಲ್ಲದೆ ವೈಭವಪೂರಕ್ಕೆ ಅವಳು ತೀರ ಹೊಸಬಳು. ದಿವಾಣ ಸಾಹೇಬರ ಹೊರತು ಅವಳಿಗೆ ಬೇರೆ ಯಾರ ಪರಿಚಯವಿರಲಿಲ್ಲ. ನೆರವು ದೊರೆತರೆ ಅವರಿಂದಲೆ ದೊರೆಯಬಹುದೆಂದು ಅವಳು ಲೆಕ್ಕ ಹಾಕಿದ್ದಳು.

ಈ ಸಂಗತಿಯು ಇಷ್ಟು ವಿಕೋಪಕ್ಕೆ ಹೋಗಬಹುದೆಂದೂ ಅದರಿಂದ ಸಂಸ್ಥಾನವು ಗಂಡಾಂತರದಲ್ಲಿ ಬರುವ ಪ್ರಸಂಗವು ಬರಬಹುದೆಂದೂ ದಿವಾಣರಿಗೆ ಅನಿಸಿದ್ದಿಲ್ಲ. ಅಂತೆಯೇ ಅವರು ಶತ್ರುಪತಿಗಳಿಗೆ ಪದ್ಮಜೆಯನ್ನು ಹುಡುಕುತ್ತೇನೆಂದು ವಚನ ಕೊಟ್ಟರು. ಮತ್ತು ಪೋಲೀಸರಿಗೂ ಅದೇ ರೀತಿ ಆಶ್ವಾಸನ ಕೊಟ್ಟರು. ತಮ್ಮ ಮನೆಯಲ್ಲಿದ್ದ ಪದ್ಮಜೆಗೆ ಮಾತ್ರ ಎಂಟು ದಿವಸ

ಅಜ್ಞಾತವಾಸದಲ್ಲಿರು, ಮುಂದೆ ನಿನ್ನನ್ನು ಎಲ್ಲಿಯಾದರೂ ಕಳಿಸಿಕೊಡುತ್ತೇನೆ, ಇಲ್ಲವೆ ಪರಿಸ್ಥಿತಿ ಶಾಂತವಾದರೆ ಶತ್ರುಪತಿಗಳಿಗೆ ಪ್ರತ್ಯಕ್ಷಳಾಗು, ಎಂದು ಹೇಳಿದರು. ಮತ್ತು ಅವಳ ಸುಳಿವು ಯಾರಿಗೂ ಹತ್ತದಂತೆ ವ್ಯವಸ್ಥೆ ಮಾಡಿದರು.

ಆದರೆ ದಿನದಿನಕ್ಕೆ ಪರಿಸ್ಥಿತಿ ಹದಗೆಟ್ಟಿತು. ಯುದ್ಧದ ಪರಿಸ್ಥಿತಿಯು ಬಹಳ ಗಂಭೀರವಾದುದರಿಂದ ಸರಕಾರಕ್ಕೆ ಹಗ್ಗಗಳು ಸರ್ಪಗಳಂತೆ ಕಡ್ಡಿಗಳು ಗುಡ್ಡಗಳಂತೆ ಕಾಣತೊಡಗಿದವು. ಡಿ. ಎಸ್. ಪಿಯವರು ಪೋಲಿಟಿಕಲ್ ಏಜಂಟರಿಗೆ ಪೋಲಿಟಿಕಲ್ ಎಜಂಟರು ಕಲೆಕ್ಟರರಿಗೆ ಬರೆದ ಪತ್ರಗಳ ವಿಷಯವು ಅವರಿಗೆ ಆ ಅಧಿಕಾರಿಗಳ ಮುಖ್ಯ ಕಾರಕೂನರ ಕಡೆಯಿಂದ ಗೊತ್ತಾಯಿತು. ಪದ್ಮಜೆಯನ್ನು ಇಟ್ಟುಕೊಂಡರೆ ಹಿಂದುಸ್ಥಾನದ ನಕಾಶದಲ್ಲಿ ಹಳದಿ ಭಾಗವು ಕಡಿಮೆಯಾಗಿ ಕೆಂಪುಭಾಗವು ಹೆಚ್ಚಾಗುವದೆಂದು ಅವರಿಗೆ ಮನದಟ್ಟಾಯಿತು.

ಒಂದುದಿನ ರಾತ್ರಿಯ ಗಾಡಿಯಿಂದ ಪದ್ಮಜೆಯನ್ನು ಸಾತಾರೆಗೆ ತಮ್ಮ ಅಕ್ಕನಮೊಮ್ಮಗಳ ಮನೆಗೆಕಳುಹಿ, ಅವರುಮಾರನೆದಿನ ಕಲೆಕ್ಟರರನ್ನೂ ಅವರ ಪತ್ನಿಯನ್ನು ಭೋಜನ ಸಮಾರಂಭಕ್ಕೆ ಆಮಂತ್ರಿಸಿದರು. ಶತ್ರುಪತಿಗಳ ಪಟ್ಟಾಭಿಷೇಕ ಕಾಲದಲ್ಲಿ ಬೇರೊಬ್ಬ ಕಲೆಕ್ಟರರು ಮಹಮ್ಮದಪೂರದಲ್ಲಿದ್ದರಾದ್ದರಿಂದ ಹೇನ್ರಿವಿಲಿಯಮ್ಸ ಮತ್ತು ಮಾರ್ಜೊರಿ ವಿಲಿಯಮ್ಸರ ಸ್ನೇಹವು ತಮಗೆ ಲಭಿಸಲಿಲ್ಲವೆಂದೂ ಮತ್ತು ಅದಕ್ಕಾಗಿ ಶತ್ರುಪತಿಗಳು ಈ ಖಾಸಗಿ ಸಮಾರಂಭವನ್ನೇರ್ಪಡಿಸಿದ್ದಾರೆಂದು ಆಮಂತ್ರಣದಲ್ಲಿ ಉಲ್ಲೇಖಿಸಲಾಗಿತ್ತು.

ಸಂಸ್ಥಾನದಲ್ಲಿ ದಿವಾಣಗಿರಿಯನ್ನು ಪ್ರಾರಂಭಿಸಿ ಮೂರು ನಾಲ್ಕು ವರ್ಷಗಳು ಮಾತ್ರ ಆಗಿದ್ದರೂ ದಿವಾಣ ರಾ, ಸಾ. ಇಬ್ಬನ್ನಿಯವರಿಗೆ ಆಡಳಿತದ ಅನುಭವವಿರಲಿಲ್ಲವೆಂದು ಹೇಳಲಿಕ್ಕಾಗದು. ಇಬ್ಬನ್ನಿಯವರು ತಮ ಪೂರ್ವಾಶ್ರಮದಲ್ಲಿ ಅಸಿಸ್ಟಂಟ ಕಲೆಕ್ಟರರೆಂದು ಬ್ರಿಟಿಶ ಹಿಂದುಸ್ತಾನದ ಅನೇಕ ಜಿಲ್ಹೆಗಳಲ್ಲಿ ಕೆಲಸ ಮಾಡಿದ್ದರು. ಅನೇಕ ಕೆಂಪು ಸಾಹೇಬರ ಪರಿಚಯವು ಅವರಿಗಿದ್ದಿತು. ಅವರಲೋಪಲೋಷಗಳು, ಒಮ್ಮೊಮ್ಮೆ ವಂಶಾವಳಿಗಳು ಕೂಡ ಅವರಿಗೆ ಚನ್ನಾಗಿ ಗೊತ್ತಿದ್ದವು. ಹೋರಿಗೆ ಮುಗದಾಣವನ್ನು

ಹಾಕಬೇಕು. ಆನಿಗೆ ಅಂಕುಶ ಚುಚ್ಚಬೇಕು, ಕತ್ತೆಯ ಕಾಲು ಕಟ್ಟಬೇಕೆಂದು ಎಂಬ ಎಲ್ಲ ಆಡಳಿತದ ಮರ್ಮಗಳು ಅವರಿಗೆ ಅವಗತವಾಗಿದ್ದವು. ವಿಜಾಪುರದಲ್ಲಿ ಅ. ಕಲೆಕ್ಟರರಾಗಿ ಬಂದಾಗ ಹೇನ್ರಿವಿಲಿಯಮ್ಸರು ಅದೇ ನೌಕರಿಗೆ ಹಾಜರಾಗಿ ತರಬೇತಿ ಹೊಂದುತ್ತಿದ್ದರು. ಒಂದಿಲ್ಲೊಂದು ದಿನ ಸಾಹೇಬ ಮಹಾಶಯರೊಡನೆ ತಮ್ಮ ಸಂಬಂಧ ಬಂದೆ ಬರುವದೆಂದು ಇಬ್ಬನ್ನಿಯವರು ಮೊದಲಿನಿಂದಲೂ ಆ ದಂಪತಿಯನ್ನು ಅಭ್ಯಸಿಸಿದ್ದರು. ಹೇನ್ರಿ ಸಾಹೇಬರಿಗೆ ಮಾರ್ಜೋರಿಯ, ಮಾತು ಮೀರಲಿಕ್ಕಾಗುವದಿಲ್ಲವೆಂದು ಅವರು ಸಿಂದಿಗಿ ಶಿಬಿರದಲ್ಲಿಕಂಡು ಹಿಡಿದಿದ್ದರು.

ತಮ್ಮ ಮಿತ್ರನ (ಪೊ. ಎಜಂಟ)ಕೆಲಸವನ್ನು ಸಾಧಿಸಲು ಆಯಾತ್ತ ಪ್ರಸಂಗಬಂದಿತೆಂದು ಹೇನ್ರಿವಿಲಿಯಮ್ಸರು ಹಿಗ್ಗಿದರು. ಬ್ರಿ ಪ್ರದೇಶದಲ್ಲಿ ಪತಿಗೆ ನೌಕರಿಯಿದ್ದರೂ ಸಂಸ್ಥಾನಿಕರಿಂದಲೂ ಅವರಿಗೆ ಗೌರವ ಸಲ್ಲುತ್ತದೆಂದು ಮಾರ್ಜೋರಿಗೆ ಆನಂದವಾಯಿತು. ಅಂತೂ ಇಬ್ಬನ್ನಿಯವರ ಉಪಾಯವು ಕಾರ್ಯರೂಪಕ್ಕಿಳಿಯಿತು.

ವೈಭವಪುರದ ವೈಭವಕ್ಕೆ ತಕ್ಕಂತೆ ಭೋಜನ ಸಮಾರಂಭವು ಏರ್ಪಟ್ಟಿತ್ತು. ದಿವಾಣಖಾನೆಯಲ್ಲಿಯ ಹಿಂದೀ ಆಸನಾದಿಗಳೂ ಹಾಗೂ ಲಕ್ಷ್ಮೀ ಸರಸ್ವತಿಯರ ಮೂರ್ತಿಗಳು ಕ್ಷಣಕಾಲ ಶಾಂತಿನಿಕೇತನದ ಒಳಭಾಗದಲ್ಲಿ ಅಡಗಿದ್ದವು. ಗೋಡೆಯ ಮೇಲಿನ ಗಣಪತಿಯು ಮಾತ್ರ ತನ್ನ ಹೊಟ್ಟೆಯನ್ನು ಹಾವಿನಿಂದ ಬಿಗಿಯುತ್ತ ಹಾಗೆಯೇ ಕುಳಿತಿದ್ದನು. ಮೊದಲೆ ಲಕ್ಷ್ಯದಲ್ಲಿ ಬಂದಿದ್ದರೆ ಗಣಪತಿಯ ಮೇಲೆ ಎಂಥಹದಾದರೊಂದು ಪರದೆಯನ್ನು ಇಳಿಬಿಡಬಹುದಾಗಿತ್ತೆಂದು ಶತ್ರುಪತಿಗಳಿಗೆ ಭೋಜನ ಪ್ರಾರಂಭವಾದೊಡನೆ ಅನಿಸತೊಡಗಿತು. ಭೋಜನಕ್ಕಾಗಿ ಪಾಶ್ಚಾತ್ಯ ಪದ್ಧತಿಯಂತೆ ಮೇಜು ಖುರ್ಚಿಗಳನ್ನು ಹಾಕಲಾಗಿತ್ತು. ಬೆಳ್ಳಿ ಚಮಚೆಗಳನ್ನು "ಮುಳ್ಳುಗಳನ್ನು" ಇಡಲಾಗಿತ್ತು. ಭೋಜನದ ಪದಾರ್ಥಗಳು ಮಾತ್ರ ಹಿಂದೀ ಪಕ್ವಾನ್ನಗಳಾಗಿದ್ದವು.

ಮಧ್ಯಭಾಗದಲ್ಲಿ ಶತ್ರುಪತಿಗಳು ಅವರ ಎಡಕ್ಕೆ ಶ್ರೀಮತಿ ವಿಲಿಯಮ್ಸ ಬಲಕ್ಕೆ ಕಲೆಕ್ಟರರು ಮುಂದಿನ ಸಾಲಿನಲ್ಲಿ ರಾ. ಸಾ. ಇಬ್ಬನ್ನಿ ಮತ್ತು ಶ್ರೀಮತಿ ಇಬ್ಬನ್ನಿ, ಹೀಗೆ ಪಂಕ್ತಿ ಕುಳಿತಿತ್ತು. ಸಂಭಾಷಣೆಗಳು ಇಂಗ್ಲೀಷಿನಲ್ಲಿ ನಡೆ

ಶತ್ರುಪತಿಗಳು ತಮಗೆ ಬಂದಷ್ಟು ಇಂಗ್ಲೀಷಿನಲ್ಲಿ ವೈಭವಪೂರದ ಐತಿಹಾಸಿಕ ಮಹತ್ವವನ್ನು ನಿವೇದಿಸಿ ಕಲೆಕ್ಟರರೊಮ್ಮೆ ವೈಭವಪುರದ ರಾಜಧಾನಿಯಾದ ವೈಭವಪುರಕ್ಕೆ ಭೆಟ್ಟಿಕೊಡಬೇಕೆಂದು ಭಿನ್ನವಿಸಿಕೊಂಡರು. ಕಲೆಕ್ಟರ ವಿಲಿಯಮ್ಸರು ಕೆಲವೊಂದು ಐತಿಹಾಸಿಕಘಟನೆಗಳ ಬಗ್ಗೆ ಪ್ರಶ್ನೆ ಕೇಳಿಕೊಂಡು ಐತಿಹಾಸಿಕ ಅವಶೇಷಗಳ ಬಗ್ಗೆ ತಮ್ಮ ಆಸ್ಥೆಯನ್ನು ತೋರಿದರು. ದಿವಾಣರು ವೈಭವಪೂರದ ಹಲಕೆಲವು ಐತಿಹಾಸಿಕ ಅವಶೇಷಗಳ ಬಗ್ಗೆ ಹೇಳಿ ಎದುರಿಗಿನ ಉದ್ಯಾನದಲ್ಲಿ ಸೊಂಡಿಯಿಂದ ನೀರು ಪುಟಿಸುತ್ತಿದ್ದ ಆನೆಯ ಇತಿಹಾಸವನ್ನು ನಿವೇದಿಸಿದರು. " ಗೋಡೆಯ ಮೇಲಿನ ಗಣಪತಿಯ ಕತೆಯು ಹೊರಬಿತ್ತು " ಆದರೆ ಬಹುತರ ಚರ್ಚೆ ಭೂತಕಾಲಕ್ಕೆ ಸಂಬಂಧಪಟ್ಟುದುದಾಗಿತ್ತು. ಶ್ರೀಮತಿ ಮಾರ್ಜೋರಿ ವಿಲಿಯಮ್ಸರವರ ಪ್ರಶ್ನೆಯಿಂದ ಚರ್ಚೆಯು ವರ್ತಮಾನ ಕಾಲಕ್ಕೆ ಇಳಿಯಿತು. ಬಾಂಬಿನ ಪ್ರಶ್ನೆ ಹೊರಡಬಾರದೆಂದು ದಿವಾಣರು ದಕ್ಷತೆ ವಹಿಸುತ್ತಿದ್ದರು.

" ಇದು ಎಂಥದಾದರೂ ಹಣ್ಣಿನ ರಸವೆ? " ಎಂದು ಶ್ರೀಖಂಡವನ್ನು ತಿನ್ನುತ್ತ ಶ್ರೀಮತಿ ಮಾರ್ಜೋರಿಯವರು ಕೇಳಿದರು.

"ಇಲ್ಲ ಇದನ್ನು ಹಾಲಿನಿಂದ ತಯಾರಿಸುತ್ತೇವೆ. ಇದರ ಹೆಸರು ಶ್ರೀಖಂಡ" ಎಂದು ಶ್ರೀಮತಿ ಇಬ್ಬನ್ನಿಯವರು ಹೇಳಿದರು.

" ಹಾಲಿನಿಂದ? "

" ಹಾಲಿನಿಂದ ಮೊದಲು ಮೊಸರು ತಯಾರಿಸಿ ಆ ಮೇಲೆ ಮೊಸರಿನಿಂದ ಇದನ್ನು ತಯಾರಿಸುತ್ತೇವೆ? "

" ಮೊಸರೆಂದರೇನು? " —ಮಾರ್ಜೋರಿ

" ಹುಳಿಯಾದ ಹಾಲು " ರಾ. ಸಾ. ಇಬ್ಬನ್ನಿ.

" ಹುಳಿಯಾದ ಹಾಲು? ಕೆಟ್ಟ ಹಾಲು? "

" ಅಲ್ಲ ಹುಳಿಯಾದ ಹಾಲು ಎಂದರೆ ಹುಳಿಯಾಗಿಸಿದ ಹಾಲು. ಅದನ್ನು ಸಿದ್ಧಪಡಿಸುವದು ಒಂದು ರೀತಿಯಿದೆ. " —ರಾ. ಸಾ.

" ಇದಕ್ಕೆ ವರ್ಣ ಯಾತರಿಂದ ಬಂದುದು? "

" ಕೇಶರದಿಂದ! ಅದನ್ನು ಕೂಡಿಸುವದು ಒಂದು ವಿಶಿಷ್ಟ ಪದ್ಧತಿಯಿದೆ. ಬೇಕಾದರೆ ನನ್ನ ಪತ್ನಿಯು ನಿಮಗೆ ಇದರ ತಂತ್ರವನ್ನು ಬರೆದುಕೊಡುವಳು.

" ಥ್ಯಾಂಕ್ಸ ಥ್ಯಾಂಕ್ಸ "

ಛತ್ರಪತಿಗಳು ತಮಗೆ ಬಂದಷ್ಟು ಇಂಗ್ಲೀಷಿನಲ್ಲಿ ಶ್ರೀಮತಿ ವಿಲಿಯಮ್ಸರ ಜಿಜ್ಞಾಸೆಯನ್ನು ಕೊಂಡಾಡಿ, ಇಷ್ಟು ಜನ ಯುರೋಪಿಯನ್ನರು ತಮ್ಮಲ್ಲಿ ಶ್ರೀಖಂಡನ್ನು ಸೇವಿಸಿದರೂ ಒಬ್ಬರಿಗೂ ಅದನ್ನು ಹೇಗೆ ಮಾಡುತ್ತಾರೆಂಬುದನ್ನು ಗೊತ್ತುಮಾಡಿಕೊಳ್ಳುವದಾಗಲಿಲ್ಲ, ಎಂದು ಅವರು ಹೇಳಿದರು. ಪತ್ನಿಯ ಸ್ತುತಿಯನ್ನು ಕೇಳಿ ವಿಲಿಯಮ್ಸರಿಗೆ ಆನಂದವಾಯಿತು.

ಹಿಂದೀಪದ್ಧತಿಯಂತೆ ಛತ್ರಪತಿಗಳು ಆಗ್ರಹಮಾಡಿ ದಂಪತಿಗೆಹೆಚ್ಚೆಚ್ಚು ಸೇವಿಸಹಚ್ಚಿದರು.

"ನೀವು ನಮಗೂ ಒಂದೊಂದು ಹಾವುಗಳನ್ನು ಕೊಡಬೇಕಾಗುತ್ತದೆ." ಎಂದರು ಕಲೆಕ್ಟರರು. ಯಾರಿಗೂ ಅವರ ಮಾತಿನ ಅರ್ಥ ಒಮ್ಮೆಲೆ ಹೊಳೆಯಲಿಲ್ಲ.

" ನಿಮ್ಮ ಆಗ್ರಹದಿಂದ ನಮ್ಮ ಹೊಟ್ಟೆ ಒಡೆಯುವ ಸಂಭವವಿದೆ. ಗಣಪತಿಯಂತೆ ನಮ್ಮ ಸ್ಥಿತಿಯೂ ಆಗಬಹುದು! " ಎಂದರವರು.

ಎಲ್ಲರೂ ಖೊಳ್ಳೆಂದು ನಕ್ಕರು. ವಿಲಿಯಮ್ಸ ದಂಪತಿಗೆ ತಮ್ಮ ವಿನೋದದ ಬಗ್ಗೆ ಅತ್ಯಾನಂದವಾಯಿತು. ಮಾಲೆಗಳನ್ನು ಹಾಕಿಸಿಕೊಳ್ಳುವಾಗ ಇವೇ ಹಾವುಗಳೇ ಎಂದು ಶ್ರೀಮತಿ ವಿಲಿಯಮ್ಸರು ಕೇಳಲು ಮತ್ತೆ ಹಾಸ್ಯಕ್ಕೆ ಪೂರಬಂದಿತು. ಅಂತೂ ಭೋಜನ ಸಮಾರಂಭವು ಬಹು ಯಶಸ್ವಿಯಾಗಿ ಕೊನೆಗಂಡಿತು.

ಅಂದಿನಅಂಚೆಯಿಂದ ರಾಜಕೀಯ ಮಹತ್ವದಎರಡು ಪತ್ರಗಳು ಮಹಮ್ಮದಪುರದ ಉಪನಗರವಾದ ವಿದ್ಯಾನಗರದಿಂದ ಹೋದವೆಂದು ರಾ. ಸಾ. ಇಬ್ಬನ್ನಿ ಯವರಿಗೆ ತಿಳಿದುಬಂದಿತು. ಅವರು ಮುಂದಿನ ಕ್ರಮ ಅನವಶ್ಯಕವೆಂದು ಬಿಟ್ಟುಕೊಟ್ಟರು.

ಮೊದಲನೆ ಪತ್ರವು ಕಲೆಕ್ಟರ ವಿಲಿಯಮ್ಸರಿಂದ ಪೋಲಿಟಿಕಲ್ ಏಜಂಟರಿಗೆ ಹೋಗಿತ್ತು. ಅದರಲ್ಲಿ ಬಾಂಬಿನ ಘಟನೆಯಲ್ಲಿ ವೈಭವಪುರದ ಸಂಸ್ಥಾನಿ

ಕರ ಅಂಗವಿದೆಂಬ ವರದಿಯು ನೂರಕ್ಕೆ ನೂರರಷ್ಟು ನಿರಾಧಾರವಾಗಿದೆಂದು ಕಾಣಿಸಲಾಗಿತ್ತು. ಒಂದು ನೆವದಿಂದ ವೈಭವಪುರದ ಶತ್ರುಪತಿಗಳಿಗೆ ಭೆಟ್ಟಿಯನ್ನು ಕೊಟ್ಟು ಅವರಮನೆಯಲ್ಲಿ ೧೭—೧೮ ವರ್ಷದ ತರುಣಿಯಾರೂ ಇಲ್ಲವೆಂಬುದನ್ನು ಪ್ರತ್ಯಕ್ಷ ಕಂಡು ಹಿಡಿದುದಾಗಿ ಕಲೆಕ್ಟರರು ಕಾಣಿಸಿದ್ದರು.

ಇನ್ನೊಂದು ಪತ್ರವು ಶ್ರೀಮತಿ ವಿಲಿಯಮ್ಸರಿಂದ ಶ್ರೀಮತಿ ಪೋಲಿಟಿಕಲ್ ಏಜಂಟರಿಗೆ ಬರೆಯಲ್ಪಟ್ಟಿತ್ತು. ಅದರಲ್ಲಿ ಇತರ ವಿಷಯಗಳೊಡನೆ ಒಂದು ಪರಿಶಿಷ್ಟವಿದ್ದಿತು. ಅದರಲ್ಲಿ 'ಸಿರಿಕಂಡ' ದ ಅಂತರಾಳವು ಗೊತ್ತಾಗಿದೆಂಬ ಅಭಿಮಾನದ ಮಾತು ಇತ್ತು. ವೈಭವಪೂರದ ಶತ್ರುಪತಿಗಳು ಅವಿವಾಹಿತರೆಂಬ ತಾಜಾ ಕಲಮು ಪತ್ರಕ್ಕೆ ಉದ್ದೇಶ ಪೂರ್ವಕವಾಗಿ ಜೋಡಿಸಲ್ಪಟ್ಟಿತ್ತು.

## ಮನವಿದ್ದಲ್ಲಿ ಮಾರ್ಗ

ಮುಂಬಯಿಗೆ ಬಂದು ಒಂದೆರಡು ತಿಂಗಳಲ್ಲಿ ಪದ್ಮನಾಭನಿಗೆ ತಂತಿ ಶಾಖೆಯ ಮುಖ್ಯಕಚೇರಿಯಲ್ಲಿ ಒಂದು ನೌಕರಿ ದೊರೆಯಿತು. ಶ್ರೀ ಗಾಡಗೋಳಿಯುವರ ವರ್ಚಸ್ಸಿನಿಂದ ಅದು ದೊರೆಯಿತೆನ್ನಬಹುದು; ಅಥವಾ ಯೋಗಾಯೋಗ ಇಲ್ಲವೆ ಪರಿಸ್ಥಿತಿಯ ಮೂಲಕ ಅದು ಸಿಕ್ಕಿತೆನ್ನಬಹುದು. ಯುದ್ಧಕಾಲದಲ್ಲಿ ಜನರು ನೌಕರಿಯನ್ನು ಹುಡುಕುವದರ ಬದಲು, ನೌಕರಿಗಳೆ ಜನರು ಹುಡುಕುವವೆಂದು ವಾಕ್‌ಪ್ರಚಾರ ಆಗಾಗಲೇ ರೂಢವಾಗಿತ್ತು.

ಆದರೆ ನೌಕರಿ ಸಿಕ್ಕ ಬಗ್ಗೆ ಪದ್ಮನಾಭನಿಗೆ ಎಳ್ಳಷ್ಟೂ ಆನಂದವಾಗಲಿಲ್ಲ. ಗಾಡಗೋಳಿಯುವರ ಮೇಲೆ ಭಾರಹಾಕುವ ಪ್ರಸಂಗ ತಪ್ಪಿತೆಂದು ಅವನಿಗೆ ಸಮಾಧಾನವಾಗುತ್ತಿದ್ದರು. ತನಗೆ ಹಣದೊರೆಯುತೊಡಗಿತು. ತಾನು ಇನ್ನು ಆರಾಮದಿಂದ ಇರಬಹುದು ಎಂದು ಅವನಿಗೆ ಅನಿಸಲಿಲ್ಲ. ಮಹಾತ್ಮರ 'ಮಾಡು ಇಲ್ಲವೆ ಮಡಿ' ಎಂಬ ಆದೇಶವನ್ನು ಪಾಲಿಸುವದು ತನ್ನಿಂದ ಆಗುತ್ತಿಲ್ಲವೆಂಬ ವಿಚಾರವು ಸುದೈವ ಅವನ ಮನಸ್ಸಿನನಲ್ಲಿ ಕುದಿಯುತ್ತಿತ್ತು. ಆದರೆ ಯಾರ ಮುಂದೆ ಹೇಳುವದು, ಯಾರ ಉಪದೇಶವನ್ನು ತಿಳಿದುಕೊಳ್ಳ

ವದು? ಗಾಡಗೋಳಿಯವರ ಮುಂದೆ ಇಂಥ ಸರಕಾರದ್ರೋಹಿ ಮಾತುಗಳನ್ನು ಹೇಳಿದರೆ ಬಂದರಹಾದಿಗೆ ಸುಂಕವಿಲ್ಲವೆಂದು ಮತ್ತೆ ಮಹಮ್ಮದಪೂರದ ದಾರಿಯನ್ನು ಹಿಡಿಯುವ ಪ್ರಸಂಗ ಬರುವದು. ಮತ್ತೆ ತಂದೆಗೆ ಮತ್ತೊಂದು ಸಮಸ್ಯೆ! ಗಾಡಗೋಳಿಯವರ ಮನಸ್ಸಿನಲ್ಲಿಯೂ ಒಮ್ಮೊಮ್ಮೆ ದೇಶಪ್ರೇಮ ಉಕ್ಕುತ್ತಿತ್ತು. ಅಲ್ಲ, ಅವರ ರಕ್ತ ಕುದಿಯುತ್ತಿತ್ತು. ಸ್ತ್ರೀ–ಪುರುಷರು, ಬಾಲಕರು–ದೊಡ್ಡವರು ಎಂಬ ಭೇದಭಾವವಿಲ್ಲದೆ ಗುಂಡುಗಳ ಮಳೆಗರೆಯುವದು, ಲಾಠಿಪ್ರಹಾರ ಮಾಡುವದು, ಅಶ್ರುವಾಯು, ಜಪ್ತಿ, ಬಂಧನ, ಸಾಮುದಾಯಿಕ ದಂಡ ಮೊದಲಾದವುಗಳು ದಿನಾಲು ನಡೆಯತೊಡಗಿದರೆ ಯಾರ ರಕ್ತ ಕುದಿಯಲಿಕ್ಕಿಲ್ಲ? ಆದರೂ ಅವರು ಈ ಜಗತ್ತಿನಲ್ಲಿ ಸಾಕಷ್ಟು ಅನುಭವ, ಸಾಕಷ್ಟು ಕಹಿವುಂಡಿದ್ದರಾದ್ದರಿಂದ ತಮ್ಮ ಸಂತಾಪವನ್ನು ಸಂಯಮಿಸುವ ಶಕ್ತಿ ಅವರಲ್ಲಿತ್ತು. ತಮಗೆ ಏನಾದರೂ ಆದರೆ ತಮ್ಮ ಮಕ್ಕಳು ಮರಿಗಳು ಆಕಾಶದ ಕಡೆಗೆ ನೋಡಬೇಕಾಗುವದೆಂಬ ಅರಿವು ಅವರಿಗೆ ಚನ್ನಾಗಿ ಇತ್ತು. ಆದ್ದರಿಂದ ಅವರು ದೇಶದಲ್ಲಿಯ ಅಶಾಂತತೆಯ ಬಗ್ಗೆ, ಸರಕಾರದ ದಬ್ಬಾಳಿಕೆಯ ಬಗ್ಗೆ ಬಹು ಜಾಗರೂಕತೆಯಿಂದ ಮಾತನ್ನೆತ್ತುತ್ತಿದ್ದರು. ಇಂಥವರ ಮುಂದೆ ಮನಸ್ಸನ್ನು ಬಿಚ್ಚಿ ಮಾತನಾಡಲು ಅಥವಾ ಏನನ್ನಾದರೂ ಚರ್ಚಿಸಲು ಪದ್ಮನಾಭನಿಗೆ ಧೈರ್ಯ ಸಾಲುತ್ತಿದ್ದಿಲ್ಲ. ಸ್ವತಂತ್ರ ಕೋಣೆಯಲ್ಲಿ ಇರತೊಡಗಿದ್ದರಿಂದ ತನಗೆ ಪೂರ್ಣ ಸ್ವಾತಂತ್ರ್ಯ ಸಿಕ್ಕಿತೆಂದು ಅವನಿಗೆ ಅನಿಸಿದ್ದಿಲ್ಲ. ತಾನು ಎಲ್ಲಿ ಇದ್ದರೂ ಗಾಡಗೋಳಿಯವರ ಮೇಲ್ವಿಚಾರಣೆಯಲ್ಲಿಯೇ ಇರತಕ್ಕವನೆಂದು ಅವನು ಚನ್ನಾಗಿ ಮನಗಂಡಿದ್ದನು ಮುಂಬಯಿಯ ಭವ್ಯತೆ,ಅವರ ವ್ಯಾಪಾರ-ವ್ಯವಹಾರ,ರೀತಿ-ನೀತಿಗಳ ಅಜ್ಞಾನ ಇವೆಲ್ಲ ಅವನನ್ನು ಗಾಡಗೋಳಿಯವರ ಆಶ್ರಯಕ್ಕೆ ಕಟ್ಟಿಹಾಕಿದ್ದವು.

ಈ ರೀತಿ ಅವನ ಮನಸ್ಸು ಹೊಯ್ದಾಡುತ್ತಿರುವಾಗ ಅವನಿಗೆ ಒಬ್ಬ ಗುರು ಭೆಟ್ಟಿಯಾದನು. ಪದ್ಮನಾಭನೊಡನೆ ಮುಂಬಯಿಗೆ ಬಂದ ಶ್ರೀ ಹಾರವಾಡ ಶ್ರೀಪತರಾಯರ ಮಗಳು ವಿಧವೆ ಕನಕಲತೆಯ ಲಗ್ನವು ರಜಿಸ್ಟರ ಪದ್ಧತಿಯಿಂದ ಮುಂಬಯಿಯಲ್ಲಿ ನೆರವೇರಿತು. ಕರ್ನಾಟಕದಲ್ಲಿ ಕೆಲವು ಶಿಷ್ಟ–ವಿಶಿಷ್ಟರು ಅದಕ್ಕೆ ಆಕ್ಷೇಪವೆತ್ತಿದರು. ಆದರೆ ಅವರ ಆಟನಡೆಯಲಿಲ್ಲ

ಕನಕಲತೆಯ ಪತಿ ಪ್ರೊ. ಅವಧಾನಿ, ಮುಂಬಯಿಯ ಒಂದು ಖಾಸಗಿ ಕಾಲೇಜಿನಲ್ಲಿ ಪ್ರೊಫೇಸರರಾಗಿದ್ದರು. ಪ್ರೊ. ಅವಧಾನಿ ಮೂಲ ಕರ್ನಾಟಕದವರು. ಆದರೆ ಹುಟ್ಟಿದ್ದು ಸಿಂಧದಲ್ಲಿ. ಸಕ್ಕರದ ಆಣೆಕಟ್ಟನ್ನು ಕಟ್ಟುವ ಕೆಲಸ ನಡೆದಾಗ ಅವರ ತಂದೆಯವರಿಗೆ ಸಿಂಧ ಪ್ರಾಂತಕ್ಕೆ ವರ್ಗವಾಗಿತ್ತು. ಮುಂದೆ ಅವರು ಅಲ್ಲಿಯೇ ತಮ್ಮ ನೌಕರಿಯನ್ನು ಮುಗಿಸಿದ್ದರು. ಕೆಲಸದಿಂದ ನಿವೃತ್ತರಾಗಿ ಅವರು ಮುಂಬಯಿಯಲ್ಲಿ ಬಂದು ನೆಲೆಸಿದರು. ಕರ್ನಾಟಕವನ್ನು ಬಿಟ್ಟು ಹೊರಗೆ ಹೋಗಿ ಹೊರಗಿನ ಜಗತ್ತನ್ನು, ಪರಿಸ್ಥಿತಿಯನ್ನು ಅವರು ಕಣ್ತೆರೆದು ನೋಡಿದವರಾಗಿದ್ದರಿಂದ ಅವರ ಮನಸ್ಸು ವಿಶಾಲವಾಗಿದ್ದಿತು. ವಿಚಾರಗಳು ಪ್ರಗತಿಪರವಾಗಿದ್ದವು. ಸಿಂಧದಲ್ಲಿ ಮುಸಲ್ಮಾನರ ಸಾನ್ನಿಧ್ಯದಲ್ಲಿ ಕಾಲಕಳೆದುದರಿಂದ ಪ್ರೊ. ಅವಧಾನಿಯವರ ಕುಟುಂಬದವರಿಗೆಲ್ಲ ಹಿಂದೂ ಧರ್ಮದಲ್ಲಿಯ ಹೊಲಸು, ಕೊಳಚೆ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಮುಸಲ್ಮಾನರಲ್ಲಿ ಕಂಡುಬರುವ ಜೀವನವನ್ನು ಎದುರಿಸುವ ಶಕ್ತಿ, 'ಇಲ್ಲಿಯೆ ಇರುವದು ಇದ್ದು ಜಯಿಸುವದೆಂಬ' ಉತ್ಸಾಹ ಹಿಂದುಗಳಲ್ಲಿ ಬರಬೇಕಾದರೆ ಮುಸಲ್ಮಾನ ಹೆಂಗಸರಂತೆ ಹಿಂದೂ ಹೆಂಗಸರು ಶಕ್ತಿಸಂಪನ್ನರಾಗಬೇಕೆಂದು ಅವರ ಅಭಿಪ್ರಾಯವಾಗಿತ್ತು. ಹೆಂಗಸರಿಗೆ ಶಕ್ತಿ ಬರಬೇಕಾದರೆ ಸಮಾಜದಿಂದ ಅವರಿಗೆ ಸಂರಕ್ಷಣೆ ದೊರೆಯಬೇಕೆಂದು ಅವರು ಮನಗಂಡಿದ್ದರು. ಹಿಂದೂ ಸಮಾಜವು ತನ್ನ ಸ್ತ್ರೀವರ್ಗವನ್ನು ದೇವತೆಗಳ ಮಟ್ಟಕ್ಕೆ ಒಯ್ದು ಪೂಜಿಸುವದು, 'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ' ಎಂದು ಪದೇ ಪದೇ ಮನುಸ್ಮೃತಿಯ ವಾಕ್ಯವನ್ನು ಎತ್ತಿ ಹೇಳುವದು, ಆದರೆ ಮಾನವ ಪ್ರಾಣಿಗಳಂತೆ ಅವರಿಗೆ ಜೀವಿಸಲು ಯೋಗ್ಯ ಅವಕಾಶವನ್ನು ಕೊಡುವದಿಲ್ಲ ಎಂದು ಅವರ ಮತವಾಗಿದ್ದಿತು. ಪ್ರೊ. ಅವಧಾನಿಯವರೂ ತಮ್ಮ ತಂದೆಯವರಂತೆಯೇ ಅಭಿಪ್ರಾಯ ಪಡುತ್ತಿದ್ದರು. ಮತ್ತು ವಿಧವಾ ವಿವಾಹವನ್ನು ಪ್ರತ್ಯಕ್ಷ ಆಚರಣೆಯಲ್ಲಿ ತರುವ ಪ್ರತಿಜ್ಞೆ ಮಾಡಿ ಅವರು ಕನಕಲತೆಯನ್ನು ಮದುವೆ ಮಾಡಿಕೊಂಡಿದ್ದರು.

ಪ್ರೊ. ಅವಧಾನಿಯವರದು ಅದೇ ೨೬ ನೇ ವಯಸ್ಸು. ಪ್ರಗತಿಪರ ವಿಚಾರದ ತಂದೆತಾಯಿಗಳು; ಶ್ರೇಷ್ಠ ಬುದ್ಧಿಮತ್ತೆ ಮತ್ತು ಅದಕ್ಕೆ ತಕ್ಕಂಥ

ಸ್ಥಾನ; ಸಿಂಧದಂಥ ಪ್ರದೇಶದಲ್ಲಿರುವದರಿಂದ ಪಠಾಣರಿಗೊಪ್ಪುವಂಥ ಶರೀರ ಸಂಪತ್ತು, ಆರೋಗ್ಯ, ಇವೆಲ್ಲ ಅವರಿಗೆ ಲಭಿಸಿದ್ದವು. ಕೇಳುವದೇನು? ತನ್ನ ಭಾಗ್ಯ ಈ ರೀತಿಯಿಂದ ತೆರೆಯುವದಿತ್ತೆಂದೇ ತನಗೆ ವೈಧವ್ಯದ ಅಗ್ನಿಪರೀಕ್ಷೆಯಾಯಿತೆಂದು ಕನಕಲತೆ ಬಗೆದಳು.

ಕನಕಲತೆಯ ವಿವಾಹವಾದಂದಿನಿಂದ ಪದ್ಮನಾಭ ಹಾಗೂ ಪ್ರೊ. ಅವಧಾನಿಯವರ ಪರಿಚಯವು ಬೆಳೆಯಿತು, ದೃಢವಾಯಿತು. ಅವರ ಉತ್ಸಾಹಭರಿತ ಕಣ್ಣು, ಅವರ ಸುಸ್ಪಷ್ಟ ಅಭಿಪ್ರಾಯಗಳು, ಆರೋಗ್ಯದಿಂದ ದೊರೆಯುವ ತೇಜ ಇವೆಲ್ಲವುಗಳು ಪದ್ಮನಾಭನನ್ನು ವಶಪಡಿಸಿಕೊಂಡವು. ಪದ್ಮನಾಭನು ಅವರಿಗೆ ಗುರುಸ್ಥಾನವನ್ನು ಕೊಟ್ಟು ತನ್ನ ಎಲ್ಲ ಸಮಸ್ಯೆಗಳನ್ನು ಅವರ ಮುಂದೆ ಇಡುತ್ತಿದ್ದನು.

ಅಂದು ರವಿವಾರವಿದ್ದುದರಿಂದ ಪ್ರೊ. ಅವಧಾನಿ ಮತ್ತು ಪದ್ಮನಾಭ ಇಬ್ಬರಿಗೂ ಸೂಟಿಯಿದ್ದಿತು. ಪದ್ಮನಾಭನು ಸಂಜೆಯ ಮುಂದೆ ಅವರ ಮನೆಗೆ ಹೋಗಿ ಇಷ್ಟು ದಿವಸ ತನ್ನ ಮನದಲ್ಲಿ ಕುದಿಯುತ್ತಿದ್ದ ವಿಷಯವನ್ನು ಅವರ ಮುಂದೆ ತೋಡಿಕೊಂಡು, ನನಗೂ ಮಾಡಬೇಕು ಇಲ್ಲವೆ ಮಡಿಯಬೇಕೆಂದು ಎನಿಸುತ್ತಿದೆ, ಮಾರ್ಗದರ್ಶನ ಮಾಡಿರೆಂದು ಕೇಳಿಕೊಂಡ. ಯಾವದೊ ಅಸಮಾಧಾನವು ಪದ್ಮನಾಭನ ಮನವನ್ನಾವರಿಸಿಕೊಂಡಿದೆಂಬುದರ ಸುಳಿವು ಪ್ರೊಫೆಸರರಿಗೆ ಮೊದಲೇ ಹತ್ತಿತ್ತು.

'ಮಾಡು ಇಲ್ಲವೆ ಮಡಿ' ಎಂದು ಅರ್ಥಮರ್ಥ ಸಜ್ಜವಾದ ದೇಶಕ್ಕೆ ಸಂದಿಗ್ಧವಾಗಿ ಹೇಳುವದು ಒಳಿತಲ್ಲ. ಅದರಿಂದ ದೇಶಕ್ಕೆ ಬಹಳ ಹಾನಿಯಾಗುವದು, ಎಂದು ಪ್ರೊಫೆಸರರು ಪ್ರಾರಂಭಿಸಿದರು.

"ಹಿಂಸಾತ್ಮಕವಾಗಲಿ, ಅಹಿಂಸಾತ್ಮಕವಾಗಲಿ ಹೋರಾಟವೆಂದರೆ ಹೋರಾಟ. ಅದು ಶಿಸ್ತು ಸಂಘಟನೆಗಳಿಂದ, ಯೋಗ್ಯ ಮಾರ್ಗದರ್ಶನದಿಂದ ಮಾತ್ರ ಸಾಧ್ಯವಾಗಬಲ್ಲದು. ಈಗ ನಡೆಯುತ್ತಿರುವ ವಿಧ್ವಂಸಕ ಚಟುವಟಿಕೆಗಳಿಂದ ನಮಗೆ ಸ್ವಾತಂತ್ರ್ಯ ಸಿಕ್ಕರೂ ಸಿಗಬಹುದು. ಆದರೆ ಹೀಗೆ ಅಸ್ತವ್ಯಸ್ತವಾಗಿ ಕಾರ್ಯ ಪ್ರಾರಂಭಿಸುವದು ನನಗೆ ರುಚಿಸುವದಿಲ್ಲ. ಮತ್ತೊಂದೆಂದರೆ ಮಹಾತ್ಮಾಗಾಂಧಿಯವರ ಇಲ್ಲಿಯವರೆಗಿನ ಹೋರಾಟಗಳನ್ನು ನಾನು ಸೂಕ್ಷ್ಮವಾಗಿ ಪರಿಶೀಲಿಸಿ

ದ್ದೇನೆ. ಮುನ್ನುಗ್ಗಲು ಆಜ್ಞೆಕೊಡುವದು, ಮುಂದೆ ಒಂದಿಲ್ಲೊಂದು ಕಾರಣ ದಿಂದ ಹೋರಾಟವನ್ನು ಮುಕ್ತಾಯಗೊಳಿಸುವದು ಹೀಗೆಯೇ ನಡೆದಿದೆ ಅವರ ತಂತ್ರ. ಇದರಿಂದ ಯಾವದೊಂದು ತತ್ವ ಸಿದ್ಧವಾಗಬಹುದು. ಆದರೆ ಸ್ವಾತಂತ್ರ್ಯದ ಧ್ಯೇಯ ಸಾಧಿಸಲಾರದು, ಶೀಘ್ರವಾಗಿ ಕೈಗೂಡಲಾರದು. ಈ ನನ್ನ ಅಭಿಪ್ರಾಯಗಳನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇವು ನಿನಗೆ ದೇಶಾಭಿಮಾನದ ಶೂನ್ಯತೆಯ ಲಕ್ಷಣವೆಂದೇ ತೋರಬಹುದು. ನನ್ನ ಬ್ರಾಹ್ಮತೇಜ ಇಲ್ಲವೆ ಕ್ಷಾತ್ರತೇಜ ಇಲ್ಲವೆ ಭಾರತದ ಆಧ್ಯಾತ್ಮಿಕ ತೇಜ ದಿವಾಳಿ ಎದ್ದಾಗ ಇಂಥ ಮಾತುಗಳನ್ನು ಆಡಬಹುದೆಂದು ನಿನಗನಿಸಬಹುದು. ಆದರೆ ನಾನು ಹೇಳುವದು ನಿಜ. ಮಾಡು ಇಲ್ಲವೆ ಮಡಿ, ಇಷ್ಟೇ ಆವೇಶವನ್ನು ಮಹಾತ್ಮಾ ಗಾಂಧಿಯವರು ಕೊಟ್ಟರೂ ಸಾಕು. ನಾವು ಏನೇ ಮಾಡಲಿ, ಹೇಗೇ ಮಾಡಲಿ ಇಲ್ಲವೆ ಹೇಗೇ ಸಾಯಲಿ ಅವರು ಅತ್ತ ಲಕ್ಷ್ಯಕೊಡಬಾರದು. ಆದರೆ ಎಲ್ಲಿಯಾದರೂ ಅತ್ಯಾಚಾರ ಸಂಭವಿಸಿದರೆ, ಚೌರಿಚೌರಾದಲ್ಲಾದಂತೆ ಬ್ರಿಟಿಶರನ್ನು ಸುಟ್ಟುಹಾಕಿದರೆ ಅವರು ಪಾಪವಾಯಿತೆಂದು ಮತ್ತು ನಡೆದ ಹೋರಾಟ ನಿಲ್ಲಬೇಕೆಂದು ಉಪವಾಸ ಹೂಡಬಾರದು. ನಿಜವಾಗಿ ಕೇಳಿದರೆ ನನಗೆ ಅಹಿಂಸಾತ್ಮಕ ಹೋರಾಟದಲ್ಲಿ ವಿಶ್ವಾಸವಿಲ್ಲ. ಆದ್ದರಿಂದ ನನ್ನ ಉಪದೇಶವೆಂದರೆ ನೀನು ಈ ಹೋರಾಟದಲ್ಲಿ ಮನಸ್ಸು ಹಾಕಬೇಡ. ಹಿಂದಿನ ಹೋರಾಟದಲ್ಲಿ ಹೊಕ್ಕು ಅತ್ತೂ ಇಲ್ಲ, ಇತ್ತೂ ಇಲ್ಲ, ಕಾರ್ಯ ಸಾಧನೆ ಏನೂ ಇಲ್ಲ, ಹೀಗಾಗಿ ಕುಳಿತ ಎಷ್ಟೋ ಜನರ ಉದಾಹರಣೆಗಳು ನನ್ನ ಮುಂದಿವೆ. ನಮ್ಮ ಪಗಡೆ ಆಟದಲ್ಲಿ ಹೇಳುವಂತೆ, ಆ ಕಾಯಿಗಳು ಮುಲ್ಲಿಯಾಗಿವೆ. ಇಷ್ಟು ಜನರ ಜೀವನ ಹಾಳಾದರೂ ಏನೂ ಸಾಧ್ಯವಾಗದಿದ್ದುದು ರಾಷ್ಟ್ರದ ಹಾನಿಯೇ ಅಲ್ಲವೇ? ಆದ್ದರಿಂದ ನೀನು ಈ ಹೋರಾಟದಲ್ಲಿ ಮನಸ್ಸು ಹಾಕಬೇಡ." ಎಂದು ಪ್ರೊಫೆಸರರು ನುಡಿದರು.

"ಸುತ್ತಲೆಲ್ಲ ಇಷ್ಟೊಂದು ನಡೆದಾಗ ನಾನು ದಬ್ಬಾಳಿಕೆ ನಡೆಸಿದ ಸರಕಾರದ ದಾಸಾನುದಾಸನಾಗಿ ಹೇಗೆ ದುಡಿಯುವದು? ವೃತ್ತಪತ್ರಗಳಲ್ಲಿ ಅಷ್ಟಿ ಮತ್ತು ಚಿಮೂರದಲ್ಲಿ ಸ್ತ್ರೀಯರ ಮೇಲೆ ನಡೆದ ಅತ್ಯಾಚಾರ ಮತ್ತು ಮಾನಭಂಗವನ್ನು ಓದಿ' ನನ್ನ ರಕ್ತ ಕುದಿಯಿತು. ನಿಮ್ಮ ಮಾತುಗಳನ್ನು ಕೇಳಿ

ನೀವೇ ಈ ಮಾತನ್ನು ಹೇಳುತ್ತಿರುವಿರೊ ಅಥವಾ ಲಂಡನ್ನಿನ ಆಕಾಶವಾಣಿಯಿಂದ ಅವು ಬರುತ್ತಿವೆಯೋ ತಿಳಿಯಲೊಲ್ಲದು" ಎಂದ ಪದ್ಮನಾಭ.

ಅಲ್ಲಿಯೇ ಕುಳಿತಿದ್ದ ಕನಕಲತೆಯು ತಾನು ಕಾದಿಟ್ಟ ವೃತ್ತಪತ್ರಗಳ ಪ್ರತಿಗಳನ್ನು ತಂದು ಅಷ್ಟಿ, ಚಿಮೂರಗಳಲ್ಲಿ ಶ್ವೇತಸೈನಿಕರು ಹೆಂಗಸರ ಮೇಲೆ ನಡೆಸಿದ ಅತ್ಯಾಚಾರಗಳ ವರದಿಗಳನ್ನು ಓದಿತೋರಿಸಿದಳು. ೧೨-೧೩ ವರ್ಷದ ಹುಡಿಗೆಯ ಮೇಲೆ ಬಿಳಿ ಸೈನಿಕರು ಮಾಡಿದ ಅತ್ಯಾಚಾರ, ಅದೇ ಹಡೆದು ಮಲಗಿದ ಮಹಿಳೆಯೋರ್ವಳ ಮಾನಭಂಗ, ಬಿಳಿಸೈನಿಕರಿಂದ ತಪ್ಪಿಸಿಕೊಳ್ಳಲು ಒಬ್ಬಳು ಮೂರು ದಿವಸಗಳವರೆಗೆ ಅನ್ನನೀರುಗಳಿಲ್ಲದೆ ಬಣಿವೆಯಲ್ಲಿ ಅಡಗಿಕೊಂಡು ಕುಳಿತ ವೃತ್ತಾಂತಗಳನ್ನು ಅವಳು ಆವೇಶದಿಂದ ಓದಿತೋರಿಸಿದಳು. ಚಿಮೂರದಲ್ಲಿ ನೂರಕ್ಕೆ ೫೦ ರಷ್ಟು ಹೆಂಗಸರ ಮಾನಭಂಗವಾಗಿದೆಯೆಂದು ಸುದ್ದಿ ಹರಡಿದ ವರದಿಯನ್ನು ಎತ್ತಿತೋರಿಸಿದಳು. ಈ ಅವತರಣಿಕೆಯಿಂದ ಪದ್ಮನಾಭನ ಪ್ರಶ್ನೆಗೆ ಬಹಳ ಮಹತ್ವಬಂದಿತು.

"ಶಾಭಾಶ್! ಶಾಭಾಶ್" ಎಂದು ಒಮ್ಮೆಲೆ ಉದ್ಗಾರ ಹೊರಬಿದ್ದಿತು ಪ್ರೊ. ಅವಧಾನಿಯವರ ಬಾಯಿಂದ. ನನಗೆ ಇಷ್ಟೇ ಬೇಕಾಗಿತ್ತು. ಇಷ್ಟಾದರೂ ಸಾಕು ನಮ್ಮ ಸೈನ್ಯ ಸಿದ್ಧವೆಂದು ನಾನು ಭಾವಿಸುವೆ. ನಮಗೆ ಮಹಾತ್ಮರು ಯೋಗ್ಯ ದಾರಿಯನ್ನು ತೋರಿದರೋ ಅಥವಾ ಕಣ್ಣುಕಟ್ಟಿ ಅಮವಾಸ್ಯೆಯ ರಾತ್ರಿಯಲ್ಲಿ ಒಂದು ಕಗ್ಗವಿಯಲ್ಲಿ ಒಯ್ದು ಬಿಟ್ಟರೊ ಈ ಪ್ರಶ್ನೆಯನ್ನು ನಮ್ಮ ಮಕ್ಕಳು ಮೊಮ್ಮಕ್ಕಳು ವಿಚಾರಿಸಲಿ. ನಾಲ್ಕೈದು ಜನರು ಹತ್ತೆಂಟು ಸಾರೆ ಅರಣ್ಯದಲ್ಲಿ ಓಡಾಡಿದರೂ ಅಲ್ಲೊಂದು ಕಾಲ್ದಾದಿ ಆಗುವದು. ೪೦ ಕೋಟಿ ಜನರು ತುಳಿದ ಹಾದಿಯು ನೋಡನೋಡುವಷ್ಟರಲ್ಲಿ ರಾಜಮಾರ್ಗವಾಗುವದೆಂದು ನನಗೆ ತುಂಬ ವಿಶ್ವಾಸವಿದೆ. ಪದ್ಮನಾಭ, ನಿನ್ನ ಉತ್ಸಾಹವನ್ನು ನೋಡಿ ನನಗೆ ಆನಂದವಾಗಿದೆ. ಲತಾ, ನಿನ್ನ ಉತ್ಸಾಹವನ್ನು ನೋಡಿ ನನ್ನ ಉತ್ಸಾಹವು ಇಮ್ಮಡಿಯಾಗಿದೆ. ಮನವಿದ್ದಲ್ಲಿ ಮಾರ್ಗದೊರತೆ ದೊರೆಯುವದು ಪದ್ಮನಾಭ!"

"ನಾನು ರಾಜೀನಾಮೆ ಕೊಡಬೇಕೆಂದು ಮಾಡಿದ್ದೇನೆ" ಎಂದ ಪದ್ಮನಾಭ.

"ಬೇಡ. ಒಂದು ಕಿಲ್ಲೆಯಮೇಲೆ ಏರಿಹೋಗಬೇಕಾದರೆ ಎಲ್ಲರೂ ಹೊರಗಿನಿಂದ ಅದರ ಮೇಲೆ ಹಲ್ಲೆ ಮಾಡಬೇಕೆಂದಿಲ್ಲ. ಅದರ ಒಳಗಿದ್ದವರೆ ತಿರುಗಿಬಿದ್ದರೆ ಶತ್ರುಗಳು ಒಂದು ಕ್ಷಣದಲ್ಲಿ ಹಣ್ಣಾಗುವರು. ನಿನಗೊಂದು ಹೇಳುತ್ತೇನೆ. ಈಗ ಯುದ್ಧ ನಡೆದಿದೆ. ನಿನ್ನ ಕಚೇರಿಯಲ್ಲಿ ಬಹಳ ಮಹತ್ವದ ತಂತಿಗಳು ಓಡಾಡುವವು. ಆದ್ದರಿಂದ ಎಲ್ಲ ಮಹತ್ವದ ತಂತಿಗಳನ್ನು ನೀನು ನಮಗೆ ದೊರಕಿಸಿಕೊಡು. ಮುಂದಿನ ವ್ಯವಸ್ಥೆಯನ್ನೂ, ಮುಂದಿನ ಕ್ರಮ ವನ್ನೂ ನಾವು ನೋಡಿಕೊಳ್ಳುತ್ತೇವೆ."

"ಮಹತ್ವದ ತಂತಿಗಳು?"

"ಮಹತ್ವದ ತಂತಿಗಳು. ಮಹತ್ವದ ತಂತಿಗಳನ್ನು ಸರಳ ಇಂಗ್ಲೀಷ ಭಾಷೆಯಲ್ಲಿ ಕಳಿಸಲು ಬ್ರಿಟಿಶರು ಏಳರಲ್ಲಿ ಹುಟ್ಟಿಲ್ಲ. ಇಂಥ ತಂತಿಗಳನ್ನು ಅವರು ಯಾವಾಗಲೂ ಗುಪ್ತಭಾಷೆಯಲ್ಲಿ ಕಳುಹುವರು. ಆದ್ದರಿಂದ ಶೂನ್ಯ ಗಳಿಂದ ತುಂಬಿದ ಅಥವಾ ಯಾರಿಗೂ, ಏನೂ ತಿಳಿಯದಂತಹ ಶಬ್ದಗಳಿದ್ದ ಎಲ್ಲ ಸರಕಾರ ತಂತಿಗಳ ಪ್ರತಿಗಳನ್ನು ದೊರಕಿಸಲು ಯತ್ನಿಸು. ಅವುಗಳ ಮೊದಲಿನ ಕೆಲವು ಸಾಲುಗಳು ಸಿಕ್ಕರೂ ಸಾಕು."

" ? ? ? " ಪದ್ಮನಾಭ.

"ನಿಮ್ಮ ತಂತಿ ಕಚೇರಿಯ ಹತ್ತರೆ ಒಬ್ಬ ಮೂಕ-ಕುರುಡ ಭಿಕ್ಷುಕನು ನಿಲ್ಲುವನು. ಕನ್ನಡದಲ್ಲಿ ಮಾತನಾಡಿಸಿದರೆ ಆ ಮೂಕನಿಗೆ ಬಾಯಿ ಬರು ವದು. ದೇಶದ ಸೇವೆಗಾಗಿ ಅವನು ಕ್ಷಣಕಾಲ ಉಪಜೀವನಕ್ಕಾಗಿ ಧರಿಸಿದ ಮೂಕತನವನ್ನು ಬದಿಗೆ ಸರಿಸಲು ಒಪ್ಪಿಕೊಂಡಿದ್ದಾನೆ. ಸ್ವರಾಜ್ಯ ಸಿಕ್ಕರೆ ತನ್ನ ಹೊಲಮನೆಗಳು ತನಗೆ ದೊರೆಯುವವೆಂದು ಅವನ ಮನವರಿಕೆಯಾ ಗಿದೆ. ಈವನ ಕೈಯಲ್ಲಿ ನೀನು ದಿನಾಲು ಗುಪ್ತತಂತಿಗಳನ್ನು ಕೊಡು. ಅವು ನಮಗೆ ಬಂದುಮುಟ್ಟುವವು. ನೀನು ಇಷ್ಟು ಕಾರ್ಯಮಾಡು. ಇದರಲ್ಲಿ ದೇಶಸೇವೆಯಿದೆ. ಹೆಚ್ಚಿಗೆ ವಿಚಾರ ಮಾಡಬೇಡ. ನಿಶ್ಚಿಂತನಾಗಿರು."

"ನನಗೇನಾದರೂ ಕೆಲಸ" ಎಂದಳು ಕನಕಲತಾ.

"ನಾನು ಕೆಲವೊಂದು ಹಸ್ತಪತ್ರಗಳನ್ನು ತಯಾರಿಸಿದ್ದೇನೆ. ಇವುಗಳ ಪ್ರತಿಗಳನ್ನು ನೀನು ತೆಗೆದುಕೊಡಬೇಕು. ಎಲ್ಲ ಕಾರ್ಯವು ಬಹಳ ಗುಪ್ತ

ವಾಗಿ ನಡೆಯತಕ್ಕದ್ದು. ಇಲ್ಲವಾದರೆ ನಾವೆಲ್ಲ ವ್ಯರ್ಥವಾಗಿ ಸೆರೆಮನೆಗಳಲ್ಲಿ ಕೊಳೆಯಬೇಕಾದೀತು!''

ಪದ್ಮನಾಭನಿಗೆ ಮಾನಸಿಕ ಸಮಾಧಾನವಾಯಿತು. ಈ ಮಹಾನ್ ಕಾರ್ಯದಲ್ಲಿ ತನಗೂ ಸ್ಥಾನವಿದೆಂದು ಅವನಿಗೆ ಆನಂದವಾಯಿತು. ಆದರೆ ಪ್ರೊಫೆಸರರು ತಾವು ಏನೇನು ಮಾಡುವರೆಂಬುದನ್ನು ಕೇಳಲು ಅವನಿಗೆ ಧೈರ್ಯ ಸಾಲಲಿಲ್ಲ.

ಅಂದಿನಿಂದ ಗುಪ್ತವಾಗಿ ಗುಪ್ತತಂತಿಗಳನ್ನು ಕಣ್ಣಲ್ಲಿ ಎಣ್ಣೆ ಇಟ್ಟು ಕೊಂಡು ಕಾಯುವದು ಕಚೇರಿಯಲ್ಲಿ ಅವನ ಮುಖ್ಯ ಕೆಲಸವಾಯಿತು. ಪ್ರತಿ ಗಳನ್ನು ತೆಗೆದುಕೊಳ್ಳಲು ಅವನಿಗೆ ವೇಳೆ ಸಿಗುತ್ತಿರಲಿಲ್ಲ. ಎಷ್ಟೋಸಾರೆ ಅವುಗಳನ್ನು ಚನ್ನಾಗಿ ಲಕ್ಷ್ಯವಿಟ್ಟು ಓದಿಕೊಂಡು ಅವನು ತನ್ನ ಕಾರ್ಯ ಸಾಧಿಸುತ್ತಿದ್ದನು. 'ಕಡಕಡಕಟ್' ಬಲ್ಲ ಮಿತ್ರರ ಸ್ನೇಹಸಂಪಾದಿಸಿ ಗುಪ್ತ ವಾಗಿ ಅವರ ನೆರವನ್ನೂ ಅವನು ಪಡೆಯುತ್ತಿದ್ದನು.

ಪದ್ಮನಾಭನಿಗೆ ತಂತಿಯ ಕಚೇರಿಯಲ್ಲಿ ಹೇಗೆ ಸ್ಥಳ ತೆರುವಾಯಿತೆಂಬು ದನ್ನು ಹೇಳಿದರೆ ಶ್ರೀ ಜಾಧವರೆಂಬವರು ಹೇಗೆ ಹೆಡ್‌ಕ್ಲಾರ್ಕರಾದರೆಂದೂ ಹೇಳಿದಂತಾಗುವದು. ಮೊದಲಿದ್ದ ಹೆಡ್‌ಕ್ಲಾರ್ಕರು ನಿವೃತ್ತರಾಗಿ ಹೋದು ದರಿಂದ ಹಿರಿದರ್ಜೆಯ ಕಾರಕೂನರಲ್ಲಿ ಹಿರಿಯರಾದ ಜಾಧವರಿಗೆ ಹೆಡ್ ಕ್ಲಾರ್ಕರ ಚಾನ್ಸಸಿಕ್ಕಿತು. ಹಿರಿದರ್ಜೆಯ ಕಾರಕೂನರ ಮಾಲೆಯಲ್ಲಿ ಎರಡ ನೆಯವನಿದ್ದವನಿಗೆ ಆ ಮಾಲೆಯ ಅಗ್ರಸ್ಥಾನವು ಸಿಕ್ಕಿತು. ಒರ್ವ ಕಿರಿದರ್ಜೆ ಯವನು ಹಿರಿದರ್ಜೆಗೆ ಬಂದನು. ಕಿರಿದರ್ಜೆಯಲ್ಲಿ ಒಂದು ಸ್ಥಳವು ತೆರು ವಾಗಿ ಪದ್ಮನಾಭನಿಗೆ ಒಳಗೆ ಸೇರಲು ಅವಕಾಶ ಸಿಕ್ಕಿತು.

ಕಚೇರಿಯಲ್ಲಿದ್ದ ಇತರರು, ಜಾಧವರವರು ಹೆಡ್‌ಕ್ಲಾರ್ಕರಾದರೂ ಅವರ ರಿಗೆ ಮೊದಲಿನಂತೆ ಮಿ|| ಜಾಧವ ಎಂದೇ ಸಂಬೋಧಿಸುತ್ತಿದ್ದರು. 'ಶಾಸ್ತ್ರಾತ್ ರೂಢಿ ರ್ಬಲೀಯಸಿ' ಎಂದು ಹೇಳುತ್ತಾರಲ್ಲ, ಹಾಗೆ. ಪದ್ಮನಾಭನೊಬ್ಬನೆ ಅವರಿಗೆ ಹೆಡ್‌ಕ್ಲಾರ್ಕ, ಒಮ್ಮೊಮ್ಮೆ ಹೆಡ್‌ಕ್ಲಾರ್ಕ ಸರ್ ಎಂದು ಸಂಬೋಧಿ ಸುತ್ತಿದ್ದನು. ತಾವು ಹೆಡ್‌ಕ್ಲಾರ್ಕ ಆದದ್ದನ್ನು ಜಗತ್ತು ಮರೆತರೂ ಪದ್ಮ ನಾಭನು ಅದಕ್ಕೆ ಮತ್ತೆ ಎಚ್ಚರಿಕೆ ಕೊಡುತ್ತಿದ್ದಾನೆಂದು ಅವರು ಪದ್ಮನಾಭನ

ಮೇಲೆ ಸಂತುಷ್ಟರಿರುತ್ತಿದ್ದರು. ವಿಶ್ರಾಂತಿಗೆಂದು ಎಲ್ಲರನ್ನು ೧೦ ನಿಮಿಷ ಹೊರಗೆ ಬಿಟ್ಟರೆ, ಪದ್ಮನಾಭನನ್ನು ಹದಿನೈದು ನಿಮಿಷ ಬಿಡುತ್ತಿದ್ದರು. ಬೇರೆಯವರು ಸಾವಕಾಶವಾಗಿ ಕೆಲಸ ನಡೆಸಿದರೆ ಹಿಂದಿನಿಂದ ಬಂದು ಬಾರಕೋಲು ಕಟೆಯುತ್ತಿದ್ದರು ಆದರೆ ಪದ್ಮನಾಭನು ಹಾಗೆಮಾಡಿದರೆ ಕಿವಿಯಲ್ಲಿ ಬೇಗ ಸಾಗಲಿ ಎಂದಿಷ್ಟೆ ಉಸುರುತ್ತಿದ್ದರು.

ವರಿಷ್ಠರು ಅನುಕೂಲರಿರುವದರಿಂದ ಪದ್ಮನಾಭನಿಗೆ ತನ್ನ ಕಾರ್ಯವನ್ನು ಯಶಸ್ವಿಮಾಡಲು ಅವಕಾಶ ದೊರೆಯಿತು. ಅವನ ಕಾರ್ಯವು ಅವ್ಯಾಹತವಾಗಿ ನಡೆಯಿತು. ದಿನಾಲು ಒಂದೆರಡು ಮಹತ್ವದ ತಂತಿಗಳನ್ನು ಅವನು ಮಾತಾಡಬಲ್ಲ ಮೂಕಬಿಕ್ಷುಕನ ಕಡೆಗೆ ಕೊಡುತ್ತಿದ್ದನು. ತಾನು ಕೊಟ್ಟ ತಂತಿಗಳು ಎಷ್ಟರ ಮಟ್ಟಿಗೆ ಮಹತ್ವದವು ಎಂಬುದು ಅವನಿಗೆ ಗೊತ್ತಾಗುತ್ತಿರಲಿಲ್ಲ. ಆದರೂ ವೃತ್ತಪತ್ರಗಳಲ್ಲಿ ಪ್ರತಿದಿನ ಬರುವ ಪೋಲೀಸ ಕಚೇರಿಯ ಲೂಟಿ, ಪ್ರವಾಸಕ್ಕೆ ಹೊರಟ ಗವರ್ನರನಿಗೆ ವ್ಯತ್ಯಯ, ಮದ್ದುಗುಂಡುಗಳನ್ನು ತಯಾರಿಸುತ್ತಿದ್ದ ಗಿರಣಿಗಳಲ್ಲಿ ಸಂಪು, ಅಂಚೇಕಚೇರಿ, ರೇಲ್ವೆ ಸ್ಟೇಶನ್ನುಗಳ ಧ್ವಂಸ ಮೊದಲಾದ ವಿವಿಧ ಚಟುವಟಿಕೆಗಳಲ್ಲಿ ತನ್ನದೂ ಅಂಗವಿದೆಂದೂ ಅವನಿಗೆ ಅನಿಸುತ್ತಿತ್ತು. ಕಚೇರಿಯ ಕೆಲಸದ ವೇಳೆಯು ನಿಯಮಿತವಿರದ್ದರಿಂದ ಅವನಿಗೆ ಪ್ರೊ. ಅವಧಾನಿಯವರಿಗೆ ಭೆಟ್ಟಿಯಾಗಿ ನಿಜಸಂಗತಿಯನ್ನು ತಿಳಿದುಕೊಳ್ಳಲು ಅಥವಾ ಬೇರೆ ವಿಷಯಗಳನ್ನು ಚರ್ಚಿಸಲು ಅವಕಾಶ ದೊರೆಯುತ್ತಿರಲಿಲ್ಲ.

ಒಂದು ದಿನ ವೃತ್ತಪತ್ರದಲ್ಲಿ ಸುರತ ಜಿಲ್ಹೆಯ ಹಳ್ಳಿಗರು ರೇಲ್ವೆ ಹಳಿಗಳನ್ನು ಕಿತ್ತೊಗೆದುದರಿಂದ ೯ ತಿಂಗಳು ಆ ಭಾಗದಲ್ಲಿ ಗಾಡಿಗಳು ಓಡಾಡಲಾರವೆಂದು ಸುದ್ದಿಬಂದಿತು. ಮುಂಬಯಿ ಪಟ್ಟಣದಲ್ಲಿಯಾವರೂ ಪ್ರಕ್ಷುಬ್ಧ ವಾತಾವರಣವು ನಿರ್ಮಾಣವಾಗಿತ್ತು. ಪಟ್ಟಣದ ಹೃದಯದಲ್ಲಿದ್ದ ಮಜಗಾನ ಕೋರ್ಟು ಸುಟ್ಟು ನೆಲಸಮವಾಗಿತ್ತು. ಪೋಲೀಸರೂ ಅಧಿಕಾರಿಗಳೂ ಹೆಚ್ಚೆಚ್ಚು ದಕ್ಷರಾಗಿದ್ದರು.

ವಿಶ್ರಾಂತಿಗೆಂದು ಪದ್ಮನಾಭನು ಕಚೇರಿಯ ಉಪಹಾರಗೃಹದಲ್ಲಿ ಕುಳಿತಿದ್ದ. ಅಂದೇ ಮೊದಲನೇ ತಾರೀಖಿನಿಂದ ಅವನ ಚಹಾಪಾನಕ್ಕೆ ಕಳೆಏರ್ಪಟ್ಟಿತು. ಹಿಂದಿ

ದ್ದಿತು. ಹಿಂದಿನಿಂದ ಬಂದು ಯಾರೋ ಬೆನ್ನು ತಟ್ಟುತ್ತಿದ್ದಾರೆಂದು ಅನಿಸಿ ಅವನು ಹೊರಳಿ ನೋಡಿದ. ಅಲ್ಲಿ ಜಾಧವ ಹೆಡ್‌ಕ್ಲಾರ್ಕರ ಸಾಕ್ಷಾತ್ಕಾರವಾಗಿತ್ತು.

"ಇನ್ನು ಇದು ಬಹಳ ದಿನ ನಡೆಯಲಾರದು" ಎಂದರವರು ಸಣ್ಣ ದನಿಯಲ್ಲಿ.

"ಯಾವದು?—"ಪದ್ಮನಾಭ

"ನನಗೆ ಗೊತ್ತಿಲ್ಲದಿಲ್ಲ. ಬೇರೆ ಪಕ್ಷಿಗಳ ಕಣ್ಣುಗಳು ಹದ್ದಿನಷ್ಟು ತೀಕ್ಷ್ಣವಿರಲಿಕ್ಕಿಲ್ಲ, ಆದರೆ ಅದರ ಮೇಲಿಂದ ಬೇರೆ ಪಕ್ಷಿಗಳಿಗೆ ಕಣ್ಣುಗಳೆ ಇಲ್ಲವೆಂದು ತಿಳಿಯಲಿಕ್ಕಾಗದು" —ಹೆಡ್‌ಕ್ಲಾರ್ಕ.

"ನಿಮ್ಮ ಮಾತಿನ ಅರ್ಥವಾಗಲೊಲ್ಲದು; ಕ್ಷಮಿಸಿರಿ."

"ನೀನು ತಂತಿಗಳ ಪ್ರತಿಗಳನ್ನು ಎಲ್ಲಿಯೊ ಕಳುಹುತ್ತಿರುವಿ. ಇದು ಜನರ ಕಣ್ಣಲ್ಲಿ ಚುಚ್ಚುತ್ತಿದೆ. ಕಚೇರಿಯಲ್ಲಿದ್ದ ಕ್ರಿಶ್ಚನ್ ಹುಡಿಗೆಯರು ನಿನ್ನ ಕಡೆಗೆ ಬೊಟ್ಟು ತೋರಿಸಿ ಇದೇ ಮಾತನ್ನೆ ಗುಣುಗುಟ್ಟುತ್ತಿದ್ದರು. ಇನ್ನು ನೀನು ಇಲ್ಲಿ ಇರಲಾರಿ. ಇದ್ದರೆ ನಮ್ಮೆಲ್ಲರ ಮೇಲೆ ಗದೆಬರುವದು. ಆದ್ದರಿಂದ ರಾಜೀನಾಮೆ ಕೊಟ್ಟು ಹೊರಟು ಹೋಗು. ಮುಂಬಯಿಯಲ್ಲಿ ನೌಕರಿಗಳಿಗೇನು ಕೊರತೆ ಇಲ್ಲ."

"ಸಿಕ್ಕರೆ ನಾನೊಬ್ಬನೆ ಸಿಗಬಹುದು; ನಿಮಗೇನು?"

"ಬ್ರಿಟಿಶರ ನೀತಿ ರೌದ್ರಾವತಾರವನ್ನು ತಾಳಿದೆ. ಒಂದು ಇಲಿಯು ಏನಾದರೂ ಮಾಡಿದರೆ ಹೋರಿನಲ್ಲಿದ್ದ ಎಲ್ಲ ಇಲಿಗಳ ಮೇಲೆ ಸಾಮುದಾಯಿಕ ದಂಡವು ಹೇರಲ್ಪಡುವದು. ನೀನೊಬ್ಬನು ಸಿಕ್ಕರೆ, ಈ ಕಚೇರಿಯಲ್ಲಿ ಚೀಫ ಸುಪರಿಂಟೆಂಡೆಂಡರಿಂದ ಮೊದಲು ಮಾಡಿಕೊಂಡು ಕಸ ಉಡುಗುವವರ ವರೆಗೆ ಎಲ್ಲರೂ ಮನೆಗೆ ಹೋಗಬೇಕಾದೀತು. ಆದ್ದರಿಂದ ನನ್ನ ಮಾತನ್ನು ಕೇಳು."

ನಿರುಪಾಯನಾಗಿ ಪದ್ಮನಾಭನು ರಾಜೀನಾಮೆಯನ್ನು ಬರೆದುಕೊಟ್ಟು ಕಚೇರಿಯ ಹೊರಗೆ ಕಾಲಿಟ್ಟನು. ಆದರೆ ನೌಕರಿಯಿಲ್ಲದೆ ಮುಂಬಯಿಯಲ್ಲಿ ಇರುವದು ಎಂಥ ಕಷ್ಟದ ಕೆಲಸವದು. ತನ್ನ ಕಿಸೆಯಲ್ಲಿದ್ದ ೬೦ ರೂಪಾಯಿಗಳ

ಬಗ್ಗೆ ಅವನಿಗೆ ಅಭಿಮಾನವೆನಿಸುತ್ತಿತ್ತು. ಆದರೆ ಇಷ್ಟರ ಮೇಲೆ ಇನ್ನು ಅನಿಯಮಿತ ಅವಧಿಯ ವರೆಗೆ ಹೇಗೆ ಸಾಗಿಸುವದೆಂದು ಅವನಿಗೆ ಚಿಂತೆಬಿತ್ತು. ಗಾಡಗೋಳಿಯವರು ಏನನ್ನುವರೊ ಏನೊ! ಮತ್ತೆ ಊರಿಗೆ ಹೋದರೆ- ? ಹಾಗಾದರೆ ಮುಂದಿನ ಮಾರ್ಗವೇನು ? ಪ್ರೊ. ಅವಧಾನಿಯವರನ್ನು ಕೇಳಬೇಕೆ ? ೬೦ ರೂಪಾಯಿಗಳ ಮೇಲೆ ಹೇಗಾದರೂ ಒಂದು ತಿಂಗಳ ಸಾಗಿಸಬಹುದೆಂಬ ವಿಚಾರವು ಆಗಾಗ್ಗೆ ಅವನ ಮನಸ್ಸಿನಲ್ಲಿ ಮೂಡತೊಡಗಿತು. ಮರುಕ್ಷಣವೆ ಮುಂದೇನು? ಎಂಬ ಪ್ರಶ್ನೆಯು ಧುತ್ತೆಂದು ಅವನೆದುರು ನಿಲ್ಲುತ್ತಿತ್ತು. ಈ ವಿಚಾರಗಳ ತಿಕ್ಕಾಟದಲ್ಲಿಯೇ ಅವನು ಕಚೇರಿಯಿಂದ ಹೊರಬೀಳುತ್ತಿದ್ದಾಗ, ಕಚೇರಿಯ ಹೆಬ್ಬಾಗಿಲದ ಹತ್ತರ ಸುಂದರ ತರುಣಿಯೋರ್ವಳು, ಅಲ್ಲಿನಿಂತಿದ್ದ ಸಶಸ್ತ್ರ ಪೋಲೀಸನಿಗೆ ಏನೋ ಕೇಳುತ್ತಿದ್ದಳು. ಸುಂದರ ತರುಣಿ—ಅಲ್ಲ ಸುಂದರಿಯರಲ್ಲಿ ಸುಂದರಿ ಎಂದುಕೊಂಡ ಪದ್ಮನಾಭ ಮನಸ್ಸಿನಲ್ಲಿ. ಮುಂದೆರಡು ಹೆಜ್ಜೆ ಹೋಗುವಷ್ಟರಲ್ಲಿ ಸಶಸ್ತ್ರ ಪೋಲೀಸನಿಗೂ ಹಾಗೂ ಅವಳಿಗೂ ನಡೆದ ಸಂಭಾಷಣೆಯು ಅವನ ಕಿವಿಗೆ ಬಿದ್ದಿತು. ಅವಳ ಕಂಠವು ಅವಳ ರೂಪದಷ್ಟೇ ಆಕರ್ಷಕವೆನಿಸಿತು. ಪದ್ಮನಾಭನು ಕಣ್ಣನ್ನು ಕಿವಿಯಾಗಿಸಿದ, ಕಿವಿಯನ್ನು ಕಣ್ಣಾಗಿಸಿದ! ಮತ್ತೊಂದೊಂದು ಕ್ಷಣದಲ್ಲಿ ಅವಳ ಬಾಯಿಂದ ತನ್ನ ಹೆಸರೆ ಹೊರಬಿದ್ದದ್ದು ನೋಡಿ ಅವನಿಗೆ ಸಾನಂದ ಆಶ್ಚರ್ಯವಾಯಿತು. ಶರೀರದಲ್ಲೆಲ್ಲ ವಿದ್ಯುತ್ ಸಂಚಾರವಾದಂತಾಯಿತು.

"ಪದ್ಮನಾಭ ಕಮಲಗೇರಿ" ಎಂದು ತರುಣಿಯು ಸಶಸ್ತ್ರ ಪೋಲೀಸನಿಗೆ ಹೇಳುತ್ತಿದ್ದಳು.

ತನ್ನ ಹೆಸರನ್ನು ರಾಗತಾಳಗಳಿಂದ ಯಾರೊ ಹಾಡುತ್ತಿದ್ದಾರೆಂದು ಪದ್ಮನಾಭನಿಗೆ ಅನಿಸಿತು.

ಸಶಸ್ತ್ರ ಪೋಲೀಸನು ಕಾಗದದ ತುಂಡನ್ನು ಅವಳ ಕೈಯಲ್ಲಿ ಕೊಟ್ಟು ಅದರ ಮೇಲೆ ಹೆಸರು ಬರೆಯಲು ಹೇಳುತ್ತಿದ್ದನು. ಅಷ್ಟರಲ್ಲಿ ಪದ್ಮನಾಭನು ತಾನಾಗಿಯೇ ಮುಂದೆ ಹೋಗಿ ತಾನೇ ಪದ್ಮನಾಭ ಕಮಲಗೇರಿ ಎಂದು ಹೇಳಿದನು.

ಪದ್ಮಜೆಯು ಕಣ್ಣೆತ್ತಿ ಅವನನ್ನು ನೋಡಿದಳು. ೧೮–೧೯ ವರ್ಷದ ಆ ತರುಣನ ಹಸನ್ಮುಖ ಮೋರೆಯು ಅವಳಿಗೆ ಮನೋಹರವಾಗಿ ಕಂಡಿತು. ಕ್ಷಣ ಕಾಲ ಅವನನ್ನೆ ದಿಟ್ಟಿಸಿ ನೋಡಿದಳು.

"ನಾನೆ ಪದ್ಮನಾಭ ಕಮುಗೇರಿ" ಎಂದು ಪದ್ಮನಾಭನು ಮತ್ತೊಮ್ಮೆ ಹೇಳಿದನು.

ಇಬ್ಬರು ಕೂಡಿ ಅದೇ ಉಪಹಾರ ಗೃಹದಲ್ಲಿ ಹೋಗಿ ಕುಳಿತರು. ಒಂದು ತಾಸಿನ ಹಿಂದೆ ಯಾವ ಕುರ್ಚಿಯ ಮೇಲೆ ಕುಳಿತುಕೊಂಡು ರಾಜೀನಾಮೆ ಕೊಡಬೇಕೆಂದು ಜಾಧವರ ಮಾತನ್ನು ಕೇಳಿಕೊಂಡನೋ ಅದೇ ಕುರ್ಚಿಯ ಮೇಲೆಯೇ ಕುಳಿತು ಅವನು ಆ ಸುಂದರ ತರುಣಿಯ ಮಾತುಗಳನ್ನು–ಅಲ್ಲ ಸಂಗೀತವನ್ನು–ಕೇಳತೊಡಗಿದನು. ತಾಳೀಕೋಟೆಯಾದ ಸ್ಥಳದಲ್ಲಿ ಸಂಭ್ರಮದ ಜಾತ್ರೆ ನೆರೆಯಬಹುದೆಂದು ಅವನಿಗೆ ಆಶೆ ಇರಲಿಲ್ಲ. ಆರು ಸಾರೆ ಕುದಿಸಲ್ಪಟ್ಟ ಪುಡಿಯಿಂದ ಸಿದ್ಧವಾದ ಚಹವೂ ಕೂಡ ಅವನಿಗೆ ಅಮೃತದಂತೆ ಹತ್ತಿತು.

"ಪ್ರೊ. ಅವಧಾನಿಯವರು ನನ್ನನ್ನು ತಮ್ಮ ಕಡೆಗೆ ಕಳಿಸಿಕೊಟ್ಟರು" ಎಂದಳು ಆ ಸುಂದರ ತರುಣಿ ಮರಾಠಿಯಲ್ಲಿ.

"ಅವರಿಗೆ ಭೆಟ್ಟಿಯಾಗಿಬಹಳ ದಿನಗಳಾದವು" ಎಂದ ಪದ್ಮನಾಭ, ಮರಾಠಿಯಲ್ಲಿಯೇ.

"ನೀವು ಕಳಿಸಿದ ಪದಾರ್ಥವೊಂದು ಸಿಗಬಾರದವರ ಕೈಗೆ ಸಿಕ್ಕಿದೆಯಂತೆ. ಎಚ್ಚರಾಗಿರಲು ತಿಳಿಸಲು ಹೇಳಿದ್ದಾರೆ" ಎಂದಳು ಸುಂದರಿ.

ಪದ್ಮನಾಭನಿಗೆ ಜಾಧವರ ದೂರದರ್ಶಿತ್ವದ ಕಲ್ಪನೆಯಾಯಿತು. ಅವನು ಎಲ್ಲವನ್ನು ಸುಂದರಿಗೆ ತಿಳಿಸಿದ. ತಾನು ಕಚೇರಿಯಿಂದ ಆದೇ ಹೊರಗೆ ಕಾಲಿಡುದ್ದುದು ಕೊನೆಯ ಸಾರೆ, ಇನ್ನು ಅದಕ್ಕೂ ತನಗೂ ಸಂಬಂಧ ಮುಗಿಯಿತೆಂದು ಎಲ್ಲವನ್ನು ಬೇರೆ ಯಾರಿಗೂ ಕೇಳಿಸದಂತೆ ಹೇಳಿದ. ತರುಣಿಯು ಈ ಮಾತನ್ನು ಕೇಳಿ ಗಾಬರಿಗೊಳ್ಳಬಹುದೆಂದು ಅವನು ತರ್ಕ ಮಾಡಿದ್ದನು. ಆದರೆ ಅವಳು ಯಾವ ರೀತಿಯಿಂದಲೂ ಆಶ್ಚರ್ಯ ಪಡಲಿಲ್ಲ.

"ಮುಂದೇನು?" ಎಂದು ನೇರವಾಗಿ ಅವಳು ಕೇಳಿದಳು.

"ಅದೇ ಪ್ರಶ್ನೆಯನ್ನೆ ನಾನೆ ಯಾರಿಗಾದರೂ ಕೇಳಬೇಕೆಂದಿದ್ದೇನೆ. ಅದಕ್ಕಾಗಿ ಪ್ರೊ. ಅವಧಾನಿಯವರಿಗೆ ಭೆಟ್ಟಿಯಾಗಲಿದ್ದೇನೆ"

"ತಮಗೆ ಭೆಟ್ಟಿಯಾಗುವ ಪ್ರಸಂಗ ಬರಬಾರದೆಂದೇ ಪ್ರೋಫೆಸರರು ನಿಮಗೆ ಸಂದೇಶ ಕಳುಹಿದರು."

"ಅಂದರೆ?"

"ಪ್ರೋಫೆಸರರು ನಿನ್ನೆ ಬಂಧಿಸಲ್ಪಟ್ಟರು. ಅಜ್ಞಾತ ರೇಡಿಓದ ಪ್ರಕರಣದಲ್ಲಿ ಪೋಲೀಸರಿಗೆ ಅವರ ಮೇಲೆ ಸಂಶಯ!"

"ಪ್ರೊ. ಬಂಧಿಸಲ್ಪಟ್ಟರು!"

"ಅಹುದು."

ಇದ್ದುದೊಂದು ಆಧಾರವು ತಪ್ಪಿತೆಂದು ಪದ್ಮನಾಭನಿಗೆ ಬಹಳ ಕೆಟ್ಟೆನಿಸಿತು. ತಾನೂ ಪ್ರೊ. ಅವಧಾನಿಯವರೊಡನೆ ಸೆರೆಮನೆ ಸೇರಿದ್ದರೆ ಒಳಿತಾಗುತ್ತಿತ್ತೆಂದು ಅವನಿಗೆ ಅನಿಸಿತು.

"ಹಾಗಾದರೆ ನಾನು ಮತ್ತೆ ಕಚೇರಿಯಲ್ಲಿ ಹೋಗಿ ರಾಜೀನಾಮೆ ಹಿಂತಿರುಗಿ ತೆಗೆದುಕೊಳ್ಳುತ್ತೇನೆ. ಮತ್ತು ಇನ್ನೆರಡು ದಿವಸ ಛಾರ್ಜ ಮಾಡಿದರೆ ನಾನು ಅವಧಾನಿಯವರ ಹತ್ತಿರ ಹೋಗುತ್ತೇನೆ" ಎಂದ ಪದ್ಮನಾಭ.

ಆ ಸುಂದರಿಗೆ ಈ ವಿಚಾರ ರುಚಿಸಲಿಲ್ಲ. ಸೆರೆಮನೆಯಲ್ಲಿ ಹೋಗಿ ವ್ಯರ್ಥ ಕೊಳೆಯುವದರಲ್ಲಿ ಅರ್ಥವಿಲ್ಲೆಂದು ಅವಧಾನಿಯವರು ಹೇಳಿದುದನ್ನು ಅವಳು ಎತ್ತಿ ಹೇಳಿ ಪದ್ಮನಾಭನಿಗೆ ತಾನೂ ಹಾಗೆಯೇ ಸಲಹೆ ಕೊಟ್ಟಳು.

ಪ್ರೊ. ಅವಧಾನಿಯಂಥವರೆ ಇನ್ನೊಬ್ಬರಿದ್ದಾರೆ. ಅವರ ಹೆಸರು ಕು. ಮೃದುಳಾಬೆಹೆನ. ಅವರು ಇಲ್ಲಿಯ ಒಬ್ಬ ಶ್ರೀಮಂತ ಗುಜರಾತಿ ವ್ಯಾಪಾರಸ್ಥನ ಮಕ್ಕಳು. ತತ್ವಜ್ಞಾನವನ್ನು ಓದಿ ಹೇಳಬಲ್ಲ ಒಬ್ಬನು ಸುಶಿಕ್ಷಿತ ತರುಣನು ಬೇಕೆಂದು ಅವರು ಇಂದು ಟಾಯಿಮ್ಸ್ ಆಫ್ ಇಂಡಿಯಾದಲ್ಲಿ ಒಂದು ಜಾಹೀರಾತು ಕೊಟ್ಟಿದ್ದಾರೆ. ನೀವು ಅವರಿಗೆ ಭೆಟ್ಟಿಯಾದರೆ ನಿಮಗೆ ಒಂದು ನೌಕರಿಯೂ ಸಿಗಬಹುದು ಮತ್ತು ಮುಂದಿನ ಮಾರ್ಗದರ್ಶನವೂ ಆಗಬಹುದು,"

ಲಕ್ಷ್ಮೀ ಸರಸ್ವತಿಯರ ಸಂಗಮವು ಈ ಸುಂದರಿಯಲ್ಲಿ ಆಗಿದೆಯೊ ಏನೋ ಎಂದು ಪದ್ಮನಾಭ ವಿಸ್ಮಯಪಟ್ಟ. ಇಷ್ಟು ಜಾಣ್ಮೆ ಇಷ್ಟು ಸಣ್ಣ ಮೂರ್ತಿಯಲ್ಲಿ !

" ಆದರೆ ನನಗೆ ತತ್ವಜ್ಞಾನ ಬರಬೇಕಲ್ಲ. ಕಾಲೇಜಿನಲ್ಲಿ ಹೆಸರು ಹಚ್ಚಿ ಕೂಡಲೆ ಹೆಸರು ತೆಗೆಸಿದ್ದೇನೆ. ಐದು ದಿವಸಗಳ ವರೆಗೆ ಮಾತ್ರ ಕಾಲೇಜಿನ ರಜಿಸ್ಟರದಲ್ಲಿ ನನ್ನ ಹೆಸರಿತ್ತು. ಅದೂ ಕಾಲೇಜ ಬಂದು ಇದ್ದಾಗ ! ನನಗೆಲ್ಲಿಯ ತತ್ವಜ್ಞಾನ! " ಎಂದ ಪದ್ಮನಾಭ,

" ಹೆಸರಿಗೆ ತತ್ವಜ್ಞಾನ ಬಲ್ಲವ ಬೇಕು. ಕು. ಮೃದುಳಾಬೆಹನರವರು ಸ್ವತ: ತತ್ವಜ್ಞಾನ ವಿಷಯ ತೆಗೆದುಕೊಂಡು ಬಿ. ಎ. (ಆನರ್ಸ) ಆಗಿದ್ದಾರೆ. ಇರಲಿ. ಹೆಚ್ಚಿನ ವಿಷಯ ಬೇಡ. ನಾಳೆ ಮುಂಜಾನೆ ನೀವು ಎಲಿಫಂಟಾ ನಡುಗಡ್ಡೆಗೆ ಬನ್ನಿರಿ. ಮುಂಜಾನೆ ೮-೩೦ ಗೆ ಅಲ್ಲಿಗೊಂದು ಹಡಗವು ಹೊರಡುವದು. ಅದರಲ್ಲಿ ನಿಮಗೆ ಅವರ ಭೆಟ್ಟಿಯಾಗುವದು. ನಾನೂ ಅವರ ಸಂಗಡ ಹೋಗುವವಳಿದ್ದೇನೆ. "

" ಒಳ್ಳೇದು. "

ಸುಂದರ ತರುಣಿಯು ಗಡಿಯಾರದ ಕಡೆಗೆ ನೋಡಿ ತನಗಿನ್ನು ಹೋಗಬೇಕಾಗಿವೆಂದು ಹೇಳಿದಳು. ಉಪಹಾರ ಗೃಹದಿಂದ ಹೊರಗೆ ಬರುವಷ್ಟರಲ್ಲಿ ಅಲ್ಲಿಯೊಂದು ಬಸ್ಸು ನಿಂತಿತ್ತು. ಆದರಲ್ಲಿ ಹತ್ತಿದವಳೆ ಅವಳು ಪದ್ಮನಾಭನಿಗೆ 'ಜಯ ಹಿಂದ! ' ಎಂದಳು. ಮರುಕ್ಷಣದಲ್ಲಿ ಬಸ್ಸು ಹೊರಟೇ ಬಿಟ್ಟಿತು.

ಕನಸು ಕಂಡು ಎಚ್ಚತ್ತವರಂತೆ ಪದ್ಮನಾಭದ ಸ್ಥಿತಿ ಯಾಯಿತು. ಎಷ್ಟು ಹಾದಿ ತಪ್ಪಿದರೂ ಈ ಜಗತ್ತಿನಲ್ಲಿ ಮತ್ತೆ ಹಾದಿ ಕಾಣಿಸುವದಲ್ಲ ಎಂದು ಅವನು ಅಂದುಕೊಂಡನು. ಎತ್ತ ನೋಡಿದರೂ, ಹ್ಯಾಗೆ ನಡೆದರೂ, ಅವನ ಮನಸ್ಸಿನಲ್ಲಿ ಆ ಸುಂದರಿಯ ವಿಚಾರವೇ ವಿಚಾರ. ಇವಳು ಯಾರು ? ಅವಳ ಹೆಸರನ್ನು ಕೂಡ ಕೇಳಲಿಲ್ಲವೆಂದು ಅವನಿಗೆ ಕೆಡಕೆನಿಸಿತು.

" ತಡಿತ್ ಸೌದಾಮನಿ ವಿದ್ಯುತ್ ಚಂಚಲಾ ಚಪಲಾ ಅಪಿ "ಎಂದು ಅಮರ ಕೋಶದಲ್ಲಿಯ ಒಂದು ಶ್ಲೋಕವು ಅವನಿಗೆ ತಾನಾಗಿಯೇ ನೆನಪಾಯಿತು,

# ಕಾಲೇಜ ವಿದ್ಯಾರ್ಥಿಗಳು

ಮುಂಬಯಿಯಿಂದ ಅನತಿ ದೂರದಲ್ಲಿರುವ ಎಲಿಫಂಟಾ ನಡುಗಡ್ಡೆಯು ನಿಸರ್ಗ ಸೌಂದರ್ಯದ ಹಾಗೂ ಶಿಲ್ಪಕಲೆಯ ತವರ್ಮನೆ. ಆ ನಡುಗಡ್ಡೆಯ ತುದಿಗಿದ್ದ ದಿನ್ನೆಯ ಮೇಲೆ ನಿಂತು ನೋಡಿದರೆ ಅರಬ್ಬೀ ಸಮುದ್ರದ ವಿರಾಟ್ ದರ್ಶನವೂ, ಸಹ್ಯ ಪರ್ವತಾವಳಿಯ ರಾಜವೈಭವವೂ ಮತ್ತು ಮುಂಬಯಿಯ ಮಹಾತ್ಮೆಯೂ ಕಾಣುವವು. ತರತರದ ಗಿಡಬಳ್ಳಿಗಳು ಹಕ್ಕಿ ಪಕ್ಕಿಗಳು ದರಿಕೊಳ್ಳಗಳು, ಝರಿಭಾವಿಗಳು ನಡುಗಡ್ಡೆಯ ಸೌಂದರ್ಯವನ್ನು ಹೆಚ್ಚಿಸುತ್ತಲೆ ಬಂದವರಿಗೆ ಸ್ವಾಗತವನ್ನೀಯುತ್ತವೆ. ತಾನೂ ನಿಸರ್ಗದ ಒಂದು ಅಂಗವಾದ್ದರಿಂದ ನಡುಗಡ್ಡೆಯ ಸೌಂದರ್ಯವನ್ನು ಹೆಚ್ಚಿಸುವದು-ತನ್ನ ಕರ್ತವ್ಯವೆಂದು ಭಾವಿಸಿ ಮನುಷ್ಯನು ಅಲ್ಲಿಯ ಕಲ್ಲುಫಡೆಗಳಲ್ಲಿ ಜೀವವನ್ನು ತುಂಬಿದ್ದಾನೆ. ಎಲಿಫಂಟಾ ನಡುಗಡ್ಡೆಯ ಗುಹೆಗಳಲ್ಲಿಯ ಕಲ್ಲಿನ ಮೂರುತಿಗಳು ಕಲ್ಲಿನಲ್ಲಿ ಕೆತ್ತಲ್ಪಟ್ಟವೆಯೊ ಸೌಂದರ್ಯದಲ್ಲಿಯೊ ಎಂದು ವಿದೇಶದ ಕಲಾಭಿಜ್ಞರು ಆಶ್ಚರ್ಯಪಡುತ್ತಾರೆ. ಎಲಿಫಂಟಾ ದೇಶದೇಶಗಳ ಸೌಂದರ್ಯ ಭಕ್ತರಿಗೆ ಕಾಶಿಯೇ ಇದ್ದಂತಿದೆ, ಸೌಂದರ್ಯ ಭಕ್ತರಂತೆ ಇತರ ಜನರೂ ಇಲ್ಲಿ ಬರುವರು. ಮುಂಬಯಿಯ ಗಿರಣಿಗಳ ಹೊಗೆಯಲ್ಲಿ, ಇಲ್ಲವೆ ಕಚೇರಿಗಳ ಉಸಿರುಗಟ್ಟಿಸುವ ವಾತಾವರಣದಲ್ಲಿ, ವ್ಯಾಪಾರದ ಬೆವರ್ಹನಿ ಸೋರಿಸಿ ಕಣ್ಣೀರು ಕುಡಿಸುವ ಸ್ಪರ್ಧೆಯಲ್ಲಿ, ಸಿಕ್ಕು ಸಣ್ಣಾದವರು ಇಲ್ಲಿ ಮಾನಸಿಕ ಹಾಗೂ ದೈಹಿಕ ವಿಶ್ರಾಂತಿಗಾಗಿ ಬರುತ್ತಾರೆ. ಅಲ್ಲದೆ ವನಭೋಜನಕ್ಕಾಗಿ ಹೊರಹೋಗಲಿಚ್ಛಿಸುವ ಶಾಲೆ-ಕಾಲೇಜುಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಎಲಿಫಂಟಾವೆ ಮಹದಾಶ್ರಯ. ಹೀಗಾಗಿ ಈ ನಡುಗಡ್ಡೆಯಲ್ಲಿ ಆಗಾಗ್ಗೆ ಜನಜಾತ್ರೆ ನೆರೆಯುವದು. ವಿಮಾನದಿಂದ ಅಥವಾ ಅಲ್ಲಿಯೇ ನೆರೆಯಲ್ಲಿದ್ದ ಸಹ್ಯ ಪರ್ವತಾವಳಿಯ ಒಂದು ಶಿಖರದ ಮೇಲೆ ನಿಂತು ಆದರತ್ತ ನೋಡಿದರೆ ಅರಬ್ಬೀ ಸಮುದ್ರದಲ್ಲಿ ಬಿದ್ದ ಜನ ಒಬ್ಬರನ್ನೊಬ್ಬರು ಅವಚಿಕೊಂಡು ಮಾನವ ನಡುಗಡ್ಡೆಯನ್ನೆ ನಿರ್ಮಿಸಿರುವರೊ ಏನೋ ಎಂದು ಭಾಸವಾಗುವದು. ಇರಲಿ.

ಪದ್ಮನಾಭನು ಕುಳಿತ ಚಿಕ್ಕಹಡಗವು ಕರ್ಕಶ ಸಪ್ಪಳದಿಂದ ತನ್ನ ಪ್ರಯಾಣವನ್ನು ಸಾರಿ ನೀರನ್ನು ಕಡೆಯುತ್ತ ಮುಂಬಯಿಯಿಂದ ಎಲಿಫಂಟಾಕ್ಕೆ ಹೊರಟಿತು. ಬಂದರದಲ್ಲಿ ತಂಗಿದ ಭವ್ಯ ಯುದ್ಧ ಹಡಗಗಳ ಮೇಲೆ ನಿಂತ ಬ್ರಿಟಿಶ ನಾವಿಕರೂ ಅಮೇರಿಕನ್ ನಾವಿಕರೂ ಈ ಚಿಕ್ಕ ಹಡಗದ ಗತಿಯನ್ನು ಬಹು ಆಸ್ಥೆಯಿಂದ ನಿರೀಕ್ಷಿಸುತ್ತಿದ್ದರು. ಹಡಗುಗಳಲ್ಲಿಯೇ ಆಯುಷ್ಯವನ್ನು ಕಳೆದವರಿಗೂ ಈ ಚಿಕ್ಕ ಹಡಗವು ಮನೋಹರವಾಗಿ ಕಾಣಲು ಕಾರಣವೇನೆಂದರೆ, ವನಭೋಜನಕ್ಕಾಗಿ ಹೊರಟ ಮುಂಬಯಿಯ ಒಂದು ಕಾಲೇಜಿನ ತರುಣಿಯರು ಅದರ "ಡೆಕ್ಕಿ" ನ ಮೇಲೆ ನಿಂತುಕೊಂಡಿದ್ದರು. ಹಡಗದ "ಡೆಕ್ಕು" ಈ ರೀತಿ ಸುಶೋಭಿತವಾಗಿತ್ತು. ಕಾಲೇಜ ತರುಣರೂ ಮತ್ತು ಇವರೆಲ್ಲರ ಪಾಲಕರಾಗಿ ಹೊರಟ ಪ್ರೋ. ಬೀಜಗಣಿತರವರೂ ಡೆಕ್ಕಿನ ಮೇಲೆಯೇ ಇದ್ದರೆಂದು ಬೇರೆ ಹೇಳುವದನವಶ್ಯ.

ಕಾಲೇಜ ತರುಣ ತರುಣಿಯರು ಮೇಲೆ ಎದ್ದು ಹೋದುದರಿಂದ ಆ ಚಿಕ್ಕ ಹಡಗದ ಎರಡನೆ ಅಂತಸ್ತಿನಲ್ಲಿ ಕುಳಿತ ಮೂವರಿಗೆ ತಮ್ಮ ಸಂಭಾಷಣೆಯನ್ನು ಸಾಗಿಸಲು ಅನುವು ದೊರೆಯಿತು. ಆ ಸುಂದರ ತರುಣಿಯು ಕು. ಮೃದುಳಾ ಬೆಹನರಿಗೆ ಪದ್ಮನಾಭನ ಔಪಚಾರಿಕ ಪರಿಚಯವನ್ನು ಮಾಡಿಕೊಟ್ಟು, ಕಣ್ಣು ಸಂಜ್ಞೆಯಿಂದ ಉಳಿದುದನ್ನೆಲ್ಲ ತಿಳಿಸಿದಳು.

ಪದ್ಮನಾಭನು ಟಾಯಿಮ್ಸ ಪತ್ರಿಕೆಯಲ್ಲಿ ಕು. ಮೃದುಳಾಬೆಹನಳ ಜಾಹಿರಾತನ್ನು ನೋಡಿದ್ದನು "ಬೇಕಾಗಿದ್ದಾರೆ" ಸ್ತಂಭದಲ್ಲಿದ್ದ ಆ ಚಿಕ್ಕ ಜಾಹಿರಾತು ಹೀಗಿದ್ದಿತು:—

**ಬೇಕಾಗಿದ್ದಾರೆ** ತತ್ವಜ್ಞಾನದ ಮೇಲೆ ಗ್ರಂಥಗಳನ್ನು ಬರೆಯುತ್ತಿದ್ದ ಓರ್ವ ಗುಜರಾತಿ ಸುಶಿಕ್ಷಿತ ಮಹಿಳೆಗೆ ತತ್ವಜ್ಞಾನ ಗ್ರಂಥಗಳನ್ನು ಅವಲೋಕಿಸುವಲ್ಲಿ ಮತ್ತು ಟೀಕೆ ಟಿಪ್ಪಣಿಗಳನ್ನು ಹೊಂದಿಸುವಲ್ಲಿ ಸಹಾಯಮಾಡಬಲ್ಲ ತರುಣ ಮ್ಯಾಟ್ರಿಕ್ಯುಲೇಟ ಸಹಾಯಕನು ಬೇಕಾಗಿದ್ದಾನೆ. ಆಸ್ಥೆಯಿಂದ ಮತ್ತು ಪರಿಶ್ರಮವಹಿಸಿ ದುಡಿಯಲಿಚ್ಛಿಸುವವರು ಮಾತ್ರ ಅರ್ಜಿಯನ್ನು ಹಾಕಬೇಕು. ಕನ್ನಡ

ಮಾತೃಭಾಷೆಯುಳ್ಳವರಿಗೆ ಪ್ರಾಶಸ್ತ್ಯ:— ಪೆಟ್ಟಿಗೆ ನಂ. ೧೮೪೫
ಟಾಯಿಮ್ಸ್ ಆಫ್ ಇಂಡಿಯಾ, ಮುಂಬಯಿ

ಈ ಜಾಹೀರಾತಿಗೂ ಆ ಸುಂದರ ತರುಣಿಯು ಹೇಳಿದ್ದ ಮಾತುಗಳಿಗೂ ತಾಳಮೇಳವಿದೆಯೆ ಎಂದು ಪದ್ಮನಾಭನ ಮನಸ್ಸಿನಲ್ಲಿ ಒಂದೇ ಸವನೆ ಕಟೆಯುತ್ತಿತ್ತು.

"ನಿಮಗೆ ಇವರು ಎಲ್ಲವನ್ನು ಹೇಳಿರಬಹುದು" ಎಂದಳು ಮೃದುಳಾಬೆಹನ ಇಂಗ್ಲೀಷಿನಲ್ಲಿ

ಮೃದುಳಾಬೆಹನಳು ಕಣ್ಣು ಮೂಗಿನಿಂದ ಅತಿ ಸುಂದರಿಯಲ್ಲದಿದ್ದರೂ ಒಂದು ತರದ ಸಾತ್ವಿಕ ತೇಜದಿಂದ ಅವಳ ಮೋರೆಯು ಬಹಳ ಮೋಹಕವಾಗಿದ್ದಿತು ಗುಜರಾತಿ ಸ್ತ್ರೀಯರ ಸೌಂದರ್ಯವನ್ನು ಹದಗೆಡಿಸುವ ವಾತವು ಅವಳಿಂದ ನಾಲ್ಕೈದು ಹೆಜ್ಜೆ ದೂರವಿದ್ದಂತೆ ತೋರುತ್ತಿತ್ತು. ಆದರೂ ನಾಲ್ಕೇ ಹೆಜ್ಜೆ, ಬಹಳವಲ್ಲ. ದೈನ್ಯವೆಂಬುದು ಅವಳ ಆಚಾರ ವಿಚಾರಗಳಲ್ಲಿ ಅಥವಾ ಮೋರೆಯ ಮೇಲೆ ಎಲ್ಲಿಯೂ ಕಂಡುಬರುತ್ತಿರಲಿಲ್ಲ. ಆದರೆ ವಿನಯವು ಅವಳ ಪ್ರತಿಯೊಂದು [illegible] ಪೂರ್ವಪೀಠಿಕೆಯಾಗಿತ್ತು. ಮೃದುಳಾಬೆಹನಳು ಮುಂಬಯಿ ವಿಶ್ವವಿದ್ಯಾಲಯದ ಪದವೀಧಾರಿಣಿ. ಅವಳ ತಂದೆ ಕುಬೇರನ ಪುತ್ರನಲ್ಲದಿದ್ದರೂ ಅವನಿಗೆ ದೂರಿನಿಂದಾದರೂ ಸಂಬಂಧಿಕ. ಹೀಗಿದ್ದರೂ ವಿನಯಪೂರ್ಣವಾದ ಅವಳ ವರ್ತನೆಯು ಪದ್ಮನಾಭನ ಮನಸ್ಸನ್ನು ಒಮ್ಮೆಲೆ ಸೆಳೆದುಕೊಂಡಿತು.

ಎಡಗಡೆಯಿಂದ ಬಲಗಡೆಗೆ ಸೆರಗನ್ನು ಹೊತ್ತುಕೊಂಡ ಆ ಸುಂದರಿ, ಬಲಗಡೆಯಿಂದ ಎಡಗಡೆಗೆ ಸೆರಗನ್ನು ಹೊತ್ತುಕೊಂಡ ಮೃದಳಾಬೆಹನ! ಈ ನಿರಾಭರಣ ಸುಂದರಿಯರನ್ನು ಅತ್ಯಂತ ಕುತೂಹಲದಿಂದ ನಿರೀಕ್ಷಿಸುತ್ತಿದ್ದ ಪದ್ಮನಾಭನಿಗೆ ಮೃದುಳಾಬೆಹನಳ ಪ್ರಶ್ನೆಯು ಕೇಳಿಸಲಿಲ್ಲ, ಗಾಳಿಯ ಹೊಡೆತಕ್ಕೆದ್ದು ಹಡಗಕ್ಕೆ ಬಂದು ಬಡಿಯುತ್ತಿದ್ದ ದೊಡ್ಡ ದೊಡ್ಡ ತೆರೆಗಳೂ ಅವನಿಗೆ ಕೇಳಿಸುತ್ತಿರಲಿಲ್ಲ, ಪ್ರಶ್ನೆಯು ಎಂತು ಕೇಳಿತು!

"ನಿಮಗೆ ಇವರು ಎಲ್ಲವನ್ನು ಹೇಳಿರಬಹುದು" ಎಂದಳು ಮೃದುಳಾಬೆಹನ ನಗುತ್ತಾ

ಮ್ಮ ಈ ಸಾರಿ ಬಾಯಿಗೆ ಅಂಗೈಗಳ ಕಂಸು ಹಾಕಿ ತುಸು ಗಟ್ಟಿಯಾಗಿ ಹೇಳಿದಳು.

"ಅಹುದು ಸ್ವಂತ ತನ್ನ ಹೆಸರನ್ನೊಂದು ಬಿಟ್ಟು ಉಳಿದುವನ್ನೆಲ್ಲ ಹೇಳಿದ್ದಾರೆ, ಎಂದ ಪದ್ಮನಾಭ. ಮೂವರು ಜೊತೆಯಿಂದು ನಕ್ಕರು.

"ನಿಮ್ಮ ಜಾಹಿರಾತನ್ನೂ ಓದಿದ್ದೇನೆ" ಎಂದ ಪದ್ಮನಾಭ ಮುಂದೆ ಸಾಗುತ್ತ.

"ಎಸ್ ಅದನ್ನೇ ಅಲ್ಪಸ್ವಲ್ಪ ಸ್ಪಷ್ಟೀಕರಿಸುತ್ತೇನೆ. ತತ್ವಜ್ಞಾನ ಗ್ರಂಥಗಳನ್ನು ಬರೆಯುವದು. ನನ್ನ ಇಚ್ಛೆಯಿದೆ. ಆದರೆ ಈಗಲ್ಲ–ಜೀವನ ಸಂಗ್ರಾಮ ಅಲ್ಲಲ್ಲ-ಸ್ವಾತಂತ್ರ್ಯ ಸಂಗ್ರಾಮ-ಮುಗಿದ ಬಳಿಕ! ಸದ್ಯಕ್ಕೆ ನಾನು ಬರೆಯುತ್ತಿರುವದು ಹಸ್ತಪತ್ರಿಕೆಗಳನ್ನು. ಅವುಗಳ ಬಗ್ಗೆ ನನ್ನ ಕೀರ್ತಿ ಹಬ್ಬಿದರೆ ನಾನೂ ಪ್ರೊ. ಅವಧಾನಿಯವರ ಹತ್ತರ ಸೆರೆಯಮನೆಯಲ್ಲಿ ಹೋಗಬೇಕಾಗುವದು. ಆದರೆ ಇದು ಅವರ ಮನಸ್ಸಿಗೆ ಬರಲಾರದು."

"ನಿನ್ನೆ ಇವರು ಕೂಡ ಪ್ರೊ. ಅವಧಾನಿಯವರ ಕಡೆಗೆ ಧಾವಿಸಲು ಹೊರಟಿದ್ದರು. ನಾನೇ ಅವರ ಮನವೊಲಿಸಿ ಇತ್ತ ಕರೆತಂದೆನು" ಎಂದಳು ಸುಂದರಿ.

"ಅಹುದು. ನಾವು ಪ್ರೊ. ಅವಧಾನಿಯವರ ಕಡೆಗೆ ಹೋಗುವದಕ್ಕಿಂತ ಅವರೇ ನಮ್ಮ ಕಡೆಗೆ ಬರುವಂತಾಗಬೇಕು," ಮೃದುಳಾ.

ಪ್ರೊ. ಅವಧಾನಿಯವರ ಬಂಧನದ ವಿಷಯವು ಮೂವರಿಗೂ ಖೇದದಾಯಕವಾಯಿತು. ಅವರ ಉಲ್ಲೇಖವಾದೊಡನೆ ಮೂವರ ಮುಖಗಳ ಮೇಲೂ ಚಿಂತೆಯು ಒಡಮೂಡಿತು.

ಮೃದುಳಾಬೆಹನಳೇ ಮಾತನ್ನು ಮುಂದೆ ಸಾಗಿಸಿದಳು.

"ಎಸ್. ಸ್ಪಷ್ಟೀಕರಣ ಅಲ್ಲಿಗೆ ಉಳಿಯಿತು. ನನ್ನ ಹಸ್ತಪತ್ರಿಕೆಗಳ ಕನ್ನಡ ಭಾಷಾಂತರದ ಕೆಲಸವು ನಿಮ್ಮದು. ನೀವು ನಮ್ಮ ಮನೆಯಲ್ಲಿ ಬಂದು ನಮ್ಮ ಕುಟುಂಬದವರಾಗಿಯಲ್ಲಿಬ್ಬರಂತೆ ಇರಬಹುದು. ಅಥವಾ ಸದ್ಯಕಿದ್ದಂತೆ ನಿಮ್ಮ ಕೋಣೆಯಲ್ಲಿಯೇ ಇರಬಹುದು. ನಿಮಗೆ ವೆಚ್ಚಕ್ಕೆ ಬೇಕಾಗು

ವಷ್ಟು ಹಣಕೊಡಲು ಪಿತಾಜಿ ಒಪ್ಪಿದ್ದಾರೆ. ಆದರೆ ವೇತನವಮಾತ್ರ ಕೇಳ ಬೇಡಿ. ಇವರೂ ಅಕಸ್ಮಾತ್ತಾಗಿ ನಮ್ಮ ತೋಳಿಯಲ್ಲಿ ಬಂದು ಸೇರಿದ್ದಾರೆ ಇವರ ಮಾತೃಭಾಷೆಯು ಕನ್ನಡವಾದರೂ ಇವರು ಮೊದಲಿನಿಂದಲೂ ಮರಾಠಿಯನ್ನೆ ಕಲಿತಿರುವದರಿಂದ ಇವರಿಗೆ ಕನ್ನಡವು ಗ್ರೀಕ್ ಲ್ಯಾಟಿನ್ ದಂತಾಗಿದೆ! (ನಗು) ನಮಗೊಬ್ಬ ಕನ್ನಡಿಗ ಅತ್ಯವಶ್ಯ ಬೇಕಾಗಿದ್ದಾನೆ."

"ಯಾಕೆ ? "

ಮೃದುಳಾಬೆಹನ ಅತ್ತಿತ್ತ ನೋಡಿ ತೀರ ಸಣ್ಣ ದನಿಯಲ್ಲಿ ಹೇಳಿದಳು "ಅಹುದು. ನಮ್ಮ ರೇಡಿಯೋ ಕೇಂದ್ರ ಪ್ರಾರಂಭವಾಗಲಿದೆ"

ಇಷ್ಟರಲ್ಲಿ ಬಿಸಿಲು ಬಲಿಯಿತಾದ್ದರಿಂದ ದೆಕ್ಕಿನ ಮೇಲಿನ ಕಾಲೇಜ ಯುವಕ–ಯುವತಿಯರು ತಂಡತಂಡವಾಗಿ ಕೆಳಗಿಳಿದು ಬರತೊಡಗಿದರು. ಮೂವರು ಸುಮ್ಮನಾಗಬೇಕಾಯಿತು.

ಕಾಲೇಜ ವಿದ್ಯಾರ್ಥಿಗಳೆಲ್ಲ ಬಂದೊಡನೆ ಅಲ್ಲಿ ತೀರ ಬೇರೆ ವಾತಾ ವರಣವು ನಿರ್ಮಾಣವಾಯಿತು. ಕೋಠಾರಿ ಎಂಬ ಗುಜರಾತಿ ಹುಡಿಗೆಯು ಒಂದು ಗುಜರಾತಿ ಗೀತವನ್ನು ಹಾಡಿದಳು. ಅದರಲ್ಲಿ ಒಬ್ಬ ರೈತನ ಬಡ ತನದ ವರ್ಣನವಿದ್ದಿತು. ಗೋವೆಯ ಆ್ಯಂಜೆಲಿನ ಡಿಸೋಜಾ ಎಂಬ ಕನ್ಯೆಯು ಒಂದು ಕೊಂಕಣಿ ಲಾವಣಿಯನ್ನು ಅಂದು ತೋರಿಸಿದರು. ಗೋವೆಯಲ್ಲಿ ಪೋರ್ತುಗೀಜರು ಜನರನ್ನು ಧರ್ಮಾಂತರಗೊಳಿಸಲು ಉಪಯೋಗಿಸಿದ ಹೇಯವಾದ ಮಾರ್ಗಗಳು ಅವರಲ್ಲಿ ವರ್ಣಿಸಲ್ಪಟ್ಟದ್ದವು. ಕಾನನಬಾಲಾ ರೇ ಎಂಬ ವಂಗ ತರುಣಿಯು ರವೀಂದ್ರರ ಒಂದು ಗೀತವನ್ನು ಅಂದಳು. ಮದ್ರಾಸ ಪ್ರಾಂತದ ಟೊಂಗಟೂರಿ ಸುಬ್ರಹ್ಮಣ್ಯಂ ಎಂಬ ಯುವಕನು ಮದ್ರಾಸಿ ಜನರ ಅನುಕರಣೆಯನ್ನು ಮಾಡಿ ಸಮುದ್ರದಲ್ಲಿ ಹೊರಟದ್ದ ಹಡಗವನ್ನು ನಗೆಗಡಲಿನಲ್ಲಿ ತೇಲಿಸಿದನು. ಪದ್ಮನಾಭನು ತಾನೂ ಮುಂ ದಾಗಿ ಬೇಂದ್ರೆಯವರ 'ಮೂವತ್ತು ಮೂರುಕೋಟಿ' ಕವನವನ್ನು ಅರ್ಥ ತಿಳಿ ಯದವರಿಗೂ ಭಾವ ತಿಳಿಯುವಂತೆ ಅಂದು ತೋರಿಸಿದನು.

ತರುಣ ತರುಣಿಯರನ್ನೂ ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸುತ್ತಿದ್ದ ಮತ್ತು ಎಲ್ಲಿ ಇವೆಲ್ಲ ಹೋಗಿ ಮುಟ್ಟುವದೊ ಏನೊ ಎಂದು ಚಿಂತಾಗ್ರಸ

ರಾವ ಪ್ರೊ., ಬೀಜಗಣಿತರು ಇವರಲ್ಲಿ ಭಾಗವಹಿಸಿಲ್ಲ. ಇದು ಕೆಟ್ಟಕಾಣಿಸಬಾರದೆಂದು ವಿದ್ಯಾರ್ಥಿಗಳಲ್ಲೊಬ್ಬನಾದ ಆಪಟೆ ಎಂಬವನು ಅವರ ಪಾತ್ರ ವಹಿಸಿ ಅವರ ಪದ್ಧತಿಯಲ್ಲಿಯೇ ಬೀಜಗಣಿತವನ್ನು ಕಲಿಸಿದನು. ಎಲ್ಲರೂ ಘೊಳ್ಳೆಂದು ನಕ್ಕರು.

ಎಲಿಫಂಟಾ ನಡುಗಡ್ಡೆ ಬಂದಿತು. ಹಡಗವು ಬಂದರಕ್ಕೆ ಹೋಗಿ ಮುಟ್ಟದೆ ಸ್ವಲ್ಪ ಅಂತರದಲ್ಲಿ ನಿಲ್ಲುವುದು. ಜನರನ್ನು ದಾಟಿಸಲು ದಂಡೆಯಿಂದ ಸಣ್ಣ ಸಣ್ಣ ನಾವೆಗಳು ಬರತೊಡಗಿದವು. ಆದರೆ ಅವುಗಳ ದಾರಿಯತ್ತ ಕಾಯುತ್ತ ಕುಳಿತುಕೊಳ್ಳದೆ ಎಷ್ಟೋ ಸದೃಢ ಮತ್ತು ಈಸಬಲ್ಲ ತರುಣರು ತಮ್ಮ ಅಂಗಿ ವಸ್ತ್ರಗಳನ್ನು ಮಿತ್ರರ ಸ್ವಾಧೀನಮಾಡಿ ನೀರಿನಲ್ಲಿ ಧುಮುಕಿದರು. ಹಡಗದಿಂದ ಈಸುತ್ತ ದಂಡೆಗೆ ಹೋದವರಲ್ಲಿ ಪದ್ಮನಾಭನೂ ಒಬ್ಬನಾಗಿದ್ದನು. ಅವನ ಉಡುಪು ತೊಡವುಗಳನ್ನು ಹಿಡಿದುಕೊಂಡು ಆ ಸುಂದರ ತರುಣಿಯು ನಾವೆಯಲ್ಲಿ ಬಂದಳು.

ಪದ್ಮನಾಭನು ಅಕ್ಷರಶಃ ಕಾಲೇಜದ ಕಟ್ಟೆಯನ್ನು ಹತ್ತುತ್ತ ಹಿಂತಿರುಗಿದನು. ತರುಣಿಯ ಸಾನಿಧ್ಯದಿಂದ ಅವನಿಗೆ ಹೊಸ ಹುರುಪು ಬಂದಂತಾಯಿತು

ಆ ದಿನ ವನಭೋಜನದ ಕಾರ್ಯಕ್ರಮವು ಕಾಲೇಜಿನ ಇತಿಹಾಸದಲ್ಲಿ ಚಿರಸ್ಮರಣೀಯವಾಗುವದೆಂದು ಕಾಲೇಜ ತರುಣ ತರುಣಿಯರಿಗೆ ಅನಿಸಿತು. ತ್ರಿಮೂರ್ತಿಗಳೂ ವಿದ್ಯಾರ್ಥಿಗಳ ಆಗ್ರಹದಿಂದ ವನಭೋಜನದಲ್ಲಿ ಆಸ್ಥೆಯಿಂದ ಭಾಗವಹಿಸಿದರು.

ಪದ್ಮನಾಭನು ವನಭೋಜನ ಮತ್ತು ಭೋಜನೋತ್ತರ ಕಾರ್ಯಕ್ರಮಗಳ ಆನಂದವನ್ನು ಮನದಣಿ ಉಂಡನು. ನಡುಗಡ್ಡೆಯಲ್ಲಿ ಕಾಲಿಟ್ಟಕೂಡಲೇ ವಿದ್ಯಾರ್ಥಿನಿಯರ ತಂಡವೊಂದು ಬೇರೆಯಾಯಿತು, ವಿದ್ಯಾರ್ಥಿಗಳ ಗುಂಪು ಬೇರೆಯಾಯಿತು. ವಿದ್ಯಾರ್ಥಿಗಳ ಅಲ್ಲಿಯ ಮೊದಲನೆ ಗುಹೆಯಲ್ಲಿದ್ದ ತಣ್ಣೀರಿನ ಬಾವಿಯಲ್ಲಿ ಮನದಣಿ ಸ್ನಾನ ತೀರಿಸಿಕೊಂಡು ಹೊರಬಿದ್ದ ಬಳಿಕ ವಿದ್ಯಾರ್ಥಿನಿಯರು ಸ್ನಾನಕ್ಕೆಂದು ಅಲ್ಲಿಗೆ ಹೋದರು. ಅವರ ಸ್ನಾನವು ಮುಗಿಯುವದರೊಳಗಾಗಿ ವಿದ್ಯಾರ್ಥಿಗಳು (ಇವರಲ್ಲಿ ಪದ್ಮನಾಭನೂ ಸೇರಿದ್ದ) ನಡು

ಗಡ್ಡೆಯನ್ನೆಲ್ಲ ಸುತ್ತು ಹಾಕಿ ಅಲ್ಲಿಯ ಎಲ್ಲ ಗುಹೆಗಳನ್ನೂ ಎಲ್ಲ ಮೂರ್ತಿಗಳನ್ನೂ ಎಲ್ಲ ದೃಶ್ಯಗಳನ್ನೂ ನೋಡಿಕೊಂಡು ಬಂದರು. ಅವರು ಮರಳಿ ಬರುವಾಗ ಗುಹೆಗಳ ನಿರೀಕ್ಷಣೆಗಾಗಿ ಹೊರಟ ವಿದ್ಯಾರ್ಥಿನಿಯರ ತಂಡವು ಅವರಿಗೆ ದಾರಿಯಲ್ಲಿ ಭೆಟ್ಟಿಯಾಯಿತು. ಕು. ಮೃದುಳಾಬೆಹನಳು ಅದೆಷ್ಟೋ ಸಾರೆ ಆ ನಡುಗಡ್ಡೆಯನ್ನು ನೋಡಿದ್ದಳಾದ್ದರಿಂದ ಅವಳೇ ಅವರಿಗೆಲ್ಲ ಮಾರ್ಗದರ್ಶಿಯಾಗಿದ್ದಳು. ಪ್ರೊ. ಬೀಜಗಣಿತರವರು ಒಂದೇ ಒಂದು ಮೂರ್ತಿಯನ್ನು ಚನ್ನಾಗಿ ಅಭ್ಯಸಿಸುತ್ತ ಒಂದು ಗುಹೆಯಲ್ಲಿ ಮತ್ತೊಂದು ಮೂರ್ತಿಯಂತೆ ನಿಂತುಕೊಂಡುಬಿಟ್ಟಿದ್ದರು.

ವಿದ್ಯಾರ್ಥಿಗಳ — ಅದರಲ್ಲೂ ಕಾಲೇಜ ವಿದ್ಯಾರ್ಥಿಗಳ
ದೊರಕಿದುದರಿಂದ ಪದ್ಮನಾಭನಿಗೆ ವಿಶೇಷ ಆನಂದ
ಕಾಲೇಜ ವಿದ್ಯಾರ್ಥಿಯೆ ಎಂದು ಭಾವಿಸಿ ಅವನು
ಕಾಲೇಜ ತರುಣ ಆಶಾವಾದ, ತಾರುಣ್ಯದ ಹೊಸ
ಅವನ ರಕ್ತದಲ್ಲಿಳಿದುವು. ವೇಳೆಯು ಹೇಗೆ ಹೋ
ತಿಳಿಯಲಿಲ್ಲ. ಬಹುತರವಾಗಿ ತರುಣ ತರ

ಆದರೆ ಅಲ್ಲಿಯ ಗುಹೆಗಳಲ್ಲಿದ್ದ ಸು
ವಾದುದನ್ನು ಕಂಡು ಅವನಿಗೆ ಬಹಳ
ನಾರೀ – ನಟೇಶ್ವರನ ಮೂರ್ತಿ –
ಮೂರ್ತಿ ! ಇವೆಲ್ಲ ಸೌಂದರ್ಯದ
ಟೊಣ್ಣೆ ಪೆಟ್ಟುಗಳಿಂದ ಭಂಗ
ಆ ಮೂರ್ತಿಗಳನ್ನು ಕಂಡು
ದುಷ್ಟ ದುರಾತ್ಮರು ಪಾ
ಸಜೀವ ಮೂರ್ತಿಯು ಆ
ಇದನ್ನು ಕಂಡಮೇ
ಬಂದಿತು. ಹಿಂದು
ದೆಂದಅವನಿಗೆ

ಇವುಗಳನ್ನು ಏಕೆ ನಿರ್ಮಿಸಬೇಕು? ಎಂದು ಅವನು ತನ್ನೊಳಗೆ ತಾನು ಗುಣ
ುಟ್ಟಿದನು.

ಬುತ್ತಿ ಗಂಟುಗಳು ಬರಿದಾದಮೇಲೆ ಮತ್ತೆ ಕೆಲವು ಮನೋರಂಜನೆಯ ಕಾರ್ಯಕ್ರಮುಗಳಾದವು. ಕಿಶೋರ ಚೌಧರಿ ಎಂಬವನ ಕೊಳಲು ನಾದನವೂ, ನೆಸ್ ಖಾಲಿ ಬಾಟ್ಲಿವಾಲಾ ಎಂಬ ಫಾರ್ಶಿ ವಿದ್ಯಾರ್ಥಿಯ ಪಶು ಪಕ್ಷಿಗಳ ಸ್ವರದನುಕರಣೆಯೂ, ಕು. ಮೃದುಳಾಬೆಹನಳೊಡನೆ ಬಂದ ಆ ಸುಂದರ ಸಹಚರಿಯ ನೃತ್ಯವು ಹೇಳಿಕೊಳ್ಳುವಂತಾದವು. ಆದರೆ ಪದ್ಮನಾಭನಿಗೆ ಇವು ಯಾವೂ ರುಚಿಸಲಿಲ್ಲ. ಕು. ಮೃದುಳಾಬೆಹನಳು ಮಾಡಿದ ಚಿಕ್ಕ ಭಾಷಣವು ಅವನಿಗೆ ಬಹಳ ರುಚಿಸಿತು. ಅವಳ ಭಾಷಣವು ನಡೆದಾಗ ಅವನು ಆಗಾಗ್ಗ
ರಿ, ಕೇಳಿರಿ' ಎಂದು ಕೂಗಿದನು. ಕು. ಮೃದುಳಾಬೆಹನಳು ಹೇಳಿದ್ದೇ
ಇಲ್ಲಿ ಸುಂದರ ಸುಂದರ ಮೂರ್ತಿಗಳು ಭಗ್ನವಾದುದನ್ನು ಕಂಡು
ಕೆಡಕೆನಿಸಿರಲು ಸಾಕು. ಯಾರನ್ನಾದರೂ ಕೇಳಿದರೆ
ವುಗಳನ್ನು ಒಡೆದರು, ಕಾಫೀರರ ಮೂರ್ತಿಗಳೆಂದು
ಒನ್ನೂರುಮಾಡಿದರು ಎಂದು ಮುಂತಾಗಿ ಹೇಳು
ೋದೆಗಾಗಿ ಬಂದ ಪುಂಡರು ಇವುಗಳನ್ನು ಒಡೆ
ಸುದು. ಧರ್ಮಪ್ರಸಾರವು ಅವರ ಉದ್ದೇಶ
ಮತ್ತು ಸ್ತ್ರೀಯರ ಅಪಹರಣ, ಇವೇ
ಅಪಹರಣಕ್ಕೂ ಒಂದು ವಿಶಿಷ್ಟವಾದ
ದುಸ್ತಾನದ ಸ್ತ್ರೀಯರಮೇಲೆ ಅವರ
ರ್ಯಗಳು; ಇಲ್ಲಿಯ ತಮ್ಮ ವನ
ಶಸ್ವಿಯಾಗಬೇಕಾದರೆ ನನ್ನ
ತೊಡುವದನ್ನು ಬಿಟ್ಟು
ವೆಳವಣಿಗೆಯೂ ಕುಂಠಿತ
ಒಳಗಾಗುವದು. ಸು
ಹಾರವನ್ನು ಧರಿಸ
ನಾಗಲೂ ಇದೇ

ಕಾರಣ. ನಮ್ಮ ಪೂರ್ವಜರು ತಮ್ಮ ಇದ್ದುಬಿದ್ದುದನ್ನೆಲ್ಲ – ಅಂದರೆ ವಿಶೇಷವಾಗಿ ಸಾರ್ವಜನಿಕ ಹಣಕಾಸನ್ನು--ಗುಡಿಯಲ್ಲಿ ಮೂರ್ತಿಯ ಕೆಳಗೆ ಇಡುತ್ತಿದ್ದರು. ಮೂರ್ತಿಯನ್ನೆತ್ತಿ ಅದನ್ನು ಯಾರೂ ಅಪಹರಿಸುವ ಪಾಪಮಾಡಲಿಕ್ಕಿಲ್ಲೆಂದು, ಪಾಪ! ಅವರ ಭಾವನೆ. ಆದರೆ ಮುಂದೆ ಯವನರು ಗಂಟು ಬೀಳಲು ಅವರು ತಮ್ಮ ಹಣಕಾಸನ್ನೂ ಮೂರ್ತಿಯ ಒಳಗೆ ಇಡಲು ಪ್ರಾರಂಭಿಸಿದರು. ಆದ್ದರಿಂದ ಹೋದಹೋದಲ್ಲಿ ಮೂರ್ತಿಗಳನ್ನು ಕಳಭ್ರಷ್ಟವಾ ನೋಡುವದು ಇಲ್ಲವಾದರೆ ಅವುಗಳ ಅವಯವಗಳನ್ನು ಒಡೆದು ನೋಡ್ಯವದು ಯವನರ ರೂಢಿಯಾಯಿತು. ಪಾರ್ವತಿಯ ಮೂರ್ತಿಯನ್ನು ನೋಡಿದರೆ ಈ ಮಾತು ಮನದಟ್ಟಾಗುವುದು. ಇನ್ನು ನನ್ನ ಸಹೋದರರಿಗೆ ಒಂದಕ ಮಾತನ್ನು ಹೇಳುವದವಶ್ಯವಿದೆ. ಸ್ತ್ರೀಯು ಎಷ್ಟೇ ಸಮಾನಹಕ್ಕುಗಳನ್ನು ಬೇಡಿದರೂ ಅವರ ಹಾಗೂ ದೇಶದ ಸಂರಕ್ಷಣೆಯು ನಿಮ್ಮ ಭುಜಬಲದ ಮೇಲೆಯೆ ಅವಲಂಬಿಸಿರತಕ್ಕದ್ದು. ನಮ್ಮ ಸ್ವಾತಂತ್ರ್ಯ ಸಂಗ್ರಾಮವು ಅಹಿಂಸಾತ್ಮಕವಾಗಿ ನಡೆದುದೇನೊ ನಿಜ ಅದರಿಂದ ನಿರ್ಬಲರಾಗಲು ನಿಮಗೆ ಶಿಲಾಶಾಸನ ಸಿಕ್ಕಂತೆಇಲ್ಲ. ಅಹಿಂಸೆಯಿಂದ ನಾವು ಸ್ವಾತಂತ್ರ್ಯವನ್ನು ಗಳಿಸಿದರೂ, ಹಿಂಸೆಯಿಂದಲೆ ನಾವು ಅದನ್ನು ರಕ್ಷಿಸಬೇಕಾಗುವದನ್ನು ಮರೆಯಬೇಡಿರಿ. ಪೋಲಂಡದಲ್ಲಿ ಜರ್ಮನ್ ಸೈನ್ಯವು ಹೊಕ್ಕಾಗ ಮಹಾತ್ಮರು ಅದ ಶಸ್ತ್ರಾಸ್ತ್ರಗಳಿಂದ ಜರ್ಮನರನ್ನೂ ಪ್ರತಿಭಟಿಸಿದರೂ ಅದು ಅಹಿಂಸಾತ್ಮಕ ಯುದ್ಧವೇ ಆಗುವದೆಂದು ಹೇಳಿದ್ದಾರೆ. ನನ್ನ ಉಪದೇಶವಿಷ್ಟೆ:— ನೀವೆಲ್ಲ ಜಾತೀಯ ಭೇದಭಾವವನ್ನು ಮರೆತು ಒಂದಾಗಬೇಕು, ಅದಕ್ಕೂ ಮುಖ್ಯವೆಂದರೆ ಸದೃಢರಾಗಬೇಕು. (ಕೇಳಿರಿ, ಕೇಳಿರಿ)

ಪ್ರೊ. ಬೀಜಗಣಿತರವರು ಎದ್ದು ಸಮಯೋಚಿತ ನಾಲ್ಕು ಮಾತ. ಗಳನ್ನು ಹೇಳಿದರು. ಭೂಮಿತಿ ಶಾಸ್ತ್ರದ ದೃಷ್ಟಿಯಿಂದ ಮೂರ್ತಿಗಳು ಅದೋಷವೆಂದು ಅವರು ತಮ್ಮ ಕಿಸೆಯಲ್ಲಿಯ ಖಡು ಮತ್ತು ಬಡ್ತಿಗಲ್ಲಿನ 'ಕರೆ ಹಲಿಗೆಯ' ಸಹಾಯದಿಂದ ತಿಳಿಸಿ ಹೇಳಿದರು.

ಮುಂಬಯಿ ಕಡೆಗೆ ಹೋಗುವ ಹಡಗವು ಬರಲು ಇನ್ನೂ ಎರಡು ತಾಸುಗಳ ಅವಕಾಶವಿದ್ದಿತು. ಸೂರ್ಯನು ಆಗಲೇ ಪಶ್ಚಿಮಾಚಲಕ್ಕೆ ಸಮೀ

ಸಿದ್ಧನು. ಎಲಿಫಂಟಾ ನಡುಗಡ್ಡೆಯ ಹಕ್ಕಿ ಪಕ್ಕಿಗಳು ಬೇರೆ ನಡುಗಡ್ಡೆಯಲ್ಲಿಯ ತಮ್ಮ ಕಾರ್ಯವನ್ನು ಮುಗಿಸಿಕೊಂಡು ಮರಳಿ ತಮ್ಮ ತಮ್ಮ ಗೂಡುಗಳಿಗೆ ಬರತೊಡಗಿದ್ದವು. ಮುಂಬಯಿಂದ ಎಲಿಫಂಟಾಕ್ಕೆ ಬಂದ "ಹಕ್ಕಿ ಪಕ್ಕಿಗಳು" ದಣಿದು ಹಡಗದ ದಾರಿಯನ್ನು ಕಾಯುತ್ತ ಅತ್ತಿತ್ತ ವಿಹರಿಸುತ್ತಿದ್ದವು. ಪದ್ಮನಾಭನು ಏಕಾಕಿಯಾಗಿ ಒಂದು ಬಂಡೆಗಲ್ಲಿನಮೇಲೆ ಕುಳಿತು ರ

ಹಿಂದಿನಿಂದ ಯಾರೊ ಕೂಗಿದಂತಾಯಿತು. ಚಪ್ಪಾಳೆ ಹೊಡೆದಂತಾಯಿತು ಆದರೆ ಬೆನ್ನಿಗೆ ಒಂದು ಹರಳು ಬಂದು ಬಡೆಯುವ ತನಕ ಅವನು ತನ್ನ ...ಮಾಧಿಯಿಂದ ಏಳಲಿಲ್ಲ.

"ನವ ... ಮರೆತುಬಿಟ್ಟಿರಲ್ಲಾ ?" ಎಂದು ಮಂಜುಳ ಸ್ವರದಲ್ಲಿ ಯಾರೊ ನುಡಿದ ...ತು.

ಪದ್ಮನಾಭನು ಹಿ... ಹೊರಳಿ ನೋಡಿದ ಮೃದುಳಾಚಿಹ್ನಳ ಸಹಚರಿ. ಆದೇ ಸುಂದರ ರೂಪ, ಮನೋಹರ ವಾಣಿ. ಲಕ್ಷ್ಮೀ ಸರಸ್ವತಿಯರ ಸಂಗಮ. "ಮರೆಯುವಂತೆಮಾಡಿಬಿಟ್ಟಿರುವಿರಿ. ನಿಮ್ಮ ಹೆಸರನ್ನೇ ಹೇಳಿಲ್ಲ. ಹೇಗೆ ಲಕ್ಷದಲ್ಲಿಟ್ಟುಕೊಳ್ಳಬೇಕು."

"ನನಗೆ ಅಜ್ಞಾತಳೆಂದೇಕೆ ಅನ್ನಬಾರದು ?"

"ಅಜ್ಞಾತಳಲ್ಲ ನಿಮಗೆ ನಾನು ಯಾವ ಹೆಸರನ್ನು ಕೊಟ್ಟಿರುವೆನು ಗೊತ್ತಿದೆಯೆ ?"

"ಯಾವ ಹೆಸರು ?"

"ತಡಿತ್ ಸೌದಾಮಿನಿ ವಿದ್ಯುತ್ ಚಂಚಲಾ ಚಪಲಾ ಅಪಿ. ನೀವು ಆ ದಿನ ಬಸ್ಸಿನಲ್ಲಿ ಕುಳಿತು ಒಮ್ಮೆಲೆ ಮಿಂಚಿನಂತೆ ಮಾಯವಾದೊಡನೆ ನನಗೆ ಅಮರ ಕೋಶದಲ್ಲಿಯ ಈ ಸಾಲು ನೆನಪಾಯಿತು."

"ಕಾಲೇಜ ವಿದ್ಯಾರ್ಥಿಗಳಲ್ಲಿ ಸೇರಲು ನೀವು ಯೋಗ್ಯರಿರುವಿರಿ ಅದೇನು ಸುಳ್ಳಲ್ಲ."

"ಕಾಲೇಜದ ರಜಿಸ್ಟರದಲ್ಲಿ ನನ್ನ ಹೆಸರು ನಾಲ್ಕೈದು ದಿನಗಳವರೆಗಿತು ನಿಮಗೆ ಗೊತ್ತಿಲ್ಲ ! "

"ಆ, ನಾಲ್ಕೈದುದಿನ. ಅಂವರೆ ನಾನೇ ನಿಮಗಿಂತ ಹೆಚ್ಚು ಕಲಿತಂತಾಯಿತು. ಕಾಲೇಜಿನಲ್ಲಿ ನಾನು ಮೂರು ತಿಂಗಳ ತೆಗೆದಿದ್ದೇನೆ."

"ಏಕೆ ಬಿಟ್ಟಿರಿ ?"

"ಇತಿಹಾಸ ದೊಡ್ಡದಿದೆ. ನೀವು ಏಕೆ ಬಿಟ್ಟಿರಿ ?"

"ನನ್ನ ಕಾಲೇಜ ಜೀವನದ ಇತಿಹಾಸ ದೊಡ್ಡದಿದೆ. ಈಗ ಇತಿಹಾಸ ಬೇಡ, ವರ್ತಮಾನಬೇಕು. ನಿಮ್ಮ ಹೆಸರೇನು ಹೇಳಿರಿ."

"ನನ್ನ ಹೆಸರು ಪದ್ಮಜಾ. ಹಚ್ಚುವ ಅಡ್ಡಹೆಸರು ವೈಭವಪುರ. ನಿಜವಾದುದು ಗೊತ್ತಿಲ್ಲ."

"ಆ ?"

"ಗೊತ್ತಿಲ್ಲ........ಗೊ.........ತ್ತಾ.........ಗ.........ಲಾರದು."

"ಕಣ್ಣಲ್ಲಿ ನೀರೇಕೆ ? ಕೇಳಬಾರದುದನ್ನು ಕೇಳಿದೆನೇ ?"

"...................................."

"ಪದ್ಮಜಾ ಇಷ್ಟೇ ಹೆಸರು ಸಾಕು. ಕುಲಗೋತ್ರಗಳನ್ನು ತೆಗೆದುಕೊಂಡು ಏನು ಮಾಡುವದು ?"

"ಹಾಗೆನ್ನಬೇಡಿ ; ನನಗೆ ಅವು ಬೇಕು. ಎಲ್ಲಿಹೋದರೂ ನನ್ನನ್ನು ಇದೇ ಇದೇ ಪ್ರಶ್ನೆ ಎದುರಿಸುತ್ತವೆ. ನಾನು ಯಾರೆಂಬುದು ನನಗೆ ಗೊತ್ತಿಲ್ಲ........"

"ಅಳುವದು ಬೇಡ. ಇಲ್ಲಿ ಕೇಳಿರಿ ಹಾಡುವ ಸಭೆಯಲ್ಲಿ ಅಳುವವರುಂಟೆ ಎಂಬಂತೆ ಇಲ್ಲಿಯ ಕಾಲೇಜ ವಿದ್ಯಾರ್ಥಿಗಳ ಆನಂದದ ಕ್ಷೀರಸಾಗರದಲ್ಲಿ ನಾವು ಉಪ್ಪನ್ನು ಬೆರೆಸಬಾರದು. ಇಷ್ಟೇಕೆ ನೀವು ಯಾರೆಂಬುದನ್ನು ತಿಳಿದುಕೊಳ್ಳಲು ಇಷ್ಟು ಕಷ್ಟವೇಕೆ ?"

"ಇಷ್ಟು ಕಷ್ಟವೇಕೆ ? ಇದು ಒಂದು ಇತಿಹಾಸವೇ ಆಗಿದೆ."

"ಈಗ ಇತಿಹಾಸ ಬೇಡ. ನನಗೊಮ್ಮೆ ಸಮಗ್ರವಾಗಿ ನಿಮ್ಮ ಇತಿಹಾಸವನ್ನು ಹೇಳಿರಿ. ನಾನು ನನ್ನ ಇತಿಹಾಸನ್ನು ಆಗ ಬಿಚ್ಚುವೆನು."

"ಈ ಜಗತ್ತಿನಲ್ಲಿ ನನಗೆ ಯಾರ ಸಹಾಯವೂ ಇಲ್ಲ. ನಿಮ್ಮ ಸಹಾಯವನ್ನು ನಾನು ನಿರೀಕ್ಷಿಸಬಹುದೇ ? "

"ನಿಮಗೆ ಸಹಾಯ ಸಲ್ಲಿಸುವಂಥ ಸಂಧಿ ಬರಲೆಂದು ತಪಸ್ಸುಮಾಡಲು ನಾನು ಸಿದ್ಧನಿರುವಾಗ ಸಹಾಯ ಕೇಳಿದರೆ ನಾನು ಕೊಡಲಿಕ್ಕಿಲ್ಲವೆ ? "

ಪದ್ಮಜೆಯ ಕಣ್ಣಲ್ಲಿ ನೀರು ತುಂಬಿದ್ದವು. ಕೇವಲ ಗಂಡಸಿನ ಸ್ವಭಾವಕ್ಕನುಗುಣವಾಗಿ ಪದ್ಮನಾಭನು ಅಭಯವನ್ನು ಕೊಟ್ಟಿದ್ದನು. ನಿಜವಾಗಿ ನೋಡಿದರೆ ಏನೂ ತಿಳಿಯದವರಂತೆ ಅವನ ಮನಃಸ್ಥಿತಿಯಾಗಿದ್ದಿತು. ತಾನೇ ನಿಃ ಸಹಾಯನಾಗಿ ಮುಂಬಯಿಯಂಥ ದೊಡ್ಡ ಪಟ್ಟಣದಲ್ಲಿ ಚಪಲಾ ಅಪಿ''ಎಂದು ಅವನು ಮತ್ತೆ ಅಂದನು.

ಪದ್ಮಜೆಯು ಅವನ ಕಡೆಗೆ ಕೃತಜ್ಞತೆಯಿಂದ ನೋಡಿದಳು. ಅಮರಕೋಶದ ಆ ಸಾಲಿನ ಬಗ್ಗೆ ಪದ್ಮನಾಭನು ತನಗೆ ಕೊಟ್ಟ ಹೆಸರಿನ ಬಗ್ಗೆ ಅವಳಿಗೆ ಬಹಳ ಕುತೂಹಲವೆನಿಸಿತು. ಅವಳು ನಕ್ಕಳು. ಪದ್ಮನಾಭನಿಗೂ ಆತ್ಮಾನಂದವಾಯಿತು.

# ವಿಚಿತ್ರ ಪ್ರೇಮ

ಪದ್ಮಜೆಯನ್ನು ಪಾರುಮಾಡಿದ ಹೀಗೂ ಹಾಗೂ ಕಲೆಕ್ಟರ ಎಲಿಯಮ್ಸರ ಕಣ್ಣಲ್ಲಿ ಧೂಳಿಯನ್ನೊಗೆದು ವೈಭವಪುರವನ್ನು ರಕ್ಷಿಸಿದ ಬಗ್ಗೆ ರಾ. ಸಾ. ಅಚ್ಯುತರಾವ ಇಬ್ಬನ್ನಿಯವರಿಗೆ ಬಹಳ ದಿವಸ ಆನಂದವಾಗಬಾರದೆಂದೇ ವಿಧಿಲಿಖಿತವಿತ್ತೊ ಏನೋ !

ಬಾಂಟನ ಖಟ್ಲೆಯ ಪ್ರಕರಣವು ಹತ್ತಿಕ್ಕಲ್ಪಟ್ಟು ಎರಡು ಮೂರು ತಿಂಗಳಾಗಿದ್ದವು. ಒಂದು ದಿನ ಮುಂಜಾನೆ ರಾ. ಸಾ. ಇಬ್ಬನ್ನಿಯವರು ಅದೇ ಎರಡನೇ ಸಲ ಚಹ ಕುಡಿದು ತಮ್ಮ ಕಚೇರಿಯ ಕೆಲವು ಕಾಗದಪತ್ರಗಳನ್ನು ತಿರುವುತ್ತ ಕುಳಿತಿದ್ದರು. ಅಷ್ಟರಲ್ಲಿ ಜರದ ಅಂಚಿನ ಸಮ ವಸ್ತ್ರವನ್ನು ಧರಿಸಿದ ಪೇದೆಯೊಬ್ಬನು ಅವರೆಡೆಗೆ ಬಂದು ಬಲಗೈಯಿಂದ ಮುಜುರೆಮಾಡಿ, ಎಡಗೈಯನ್ನು ಶತ್ರು ಪತಿಗಳ ವಾಸ ಭವನವಾದ ಶಾಂತಿನಿಕೇತನದತ್ತ ಚಾಚಿ

ಕಣ್ ಸನ್ನೆಯಿಂದ ಬರಬೇಕೆಂದು ಆಜ್ಞೆಯಾಗಿದೆಂದು ತಿಳಿಸಿದನು. ರಾ. ಸಾ. ಇಬ್ಬನ್ನಿಯವರಿಗೆ ಅವನು ಮುಜುರೆಮಾಡಿದ್ದು ಬಹುತರ ಇದೇ ಕೊನೆಯ ಸಾರೆ. ರಾ. ಸಾ. ಅವರು ಆಜ್ಞೆಯನ್ನು ಶಿರಸಾವಹಿಸಿ ಅವನ ಹಿಂದಿನಿಂದ ಸಾಗಿದರು.

ಶಾಂತಿನಿಕೇತನದ ಈ ಖಾಸದಲ್ಲಿ ಒಂದು ಮಂಚದಮೇಲೆ ಶತ್ರುಪತಿ ಪತಿಗಳು ಒರಗಿದ್ದರು. ಕಾಲಲ್ಲಿ ಮುಳ್ಳು ಸಿಂಹದ ಮುಖದಂತೆ ಅವರ ಮುಖ ವಾಗಿದ್ದಿತು.

“ಪದ್ಮಜಾ ಎಲ್ಲಿ ? ” ಎಂದು ಕೇಳಿದರು ಶತ್ರುಪತಿಗಳು.

“ನನಗೆ ಗೊತ್ತಿಲ್ಲ ಸರ ಸಾಹೇಬ. ಆದರೆ ಅವಳಿಂದ ಇನ್ನು ಮುಂದೆ ವೈಭವಪುರಕ್ಕೆ ಯಾವ ತರಹದ ಗಂಡಾಂತರವು ಬರಲಾರದೆಂದು ಎದೆ ತಟ್ಟಿ ಹೇಳಬಲ್ಲೆ” ಎಂದರು ರಾವಸಾಹೇಬ ಇಬ್ಬನ್ನಿಯವರು ಎದೆತಟ್ಟಿಕೊಳ್ಳುತ್ತ.

“ಪದ್ಮಜಾ ಎಲ್ಲಿ ? ” ಎಂದು ಶತ್ರುಪತಿಗಳು ಗುಡುಗಿದರು.

ನನಗೆ ಗೊತ್ತಿಲ್ಲ ಸರಕಾರ ? ಎಂದರು ವಿಧೇಯ ದಿವಾಣರು ಭಯ ಭೀತಿಯಿಂದ.

ವೈಭವಪುರದ ಶತ್ರುಪತಿಗಳ ಗುಡುಗಿನ ಧ್ವನಿಗೆ ವೈರಿಗಳ ಆಸೆ ಕುದುರೆಗಳು ನಡುಗುವವೆಂದು ಆ ಸಂಸ್ಥಾನದಲ್ಲಿ ಐತಿಹ್ಯವುಂಟು. ಸರ್ ರಘುನಾಥರ ಪೂರ್ವಜರೊಬ್ಬರು ತಮ್ಮ ಗರ್ಜನೆಯಿಂದ ಶತ್ರುಗಳನ್ನು ಹಿಂದಕ್ಕಟ್ಟಿದರೆಂದು ಸಂಸ್ಥಾನದ ಲಾವಣಿಗಾರನೊಬ್ಬನು ಪದಕಟ್ಟಿದ್ದ. ಐತಿಹ್ಯದಲ್ಲಿ ಸತ್ಯವಿರಲಿ ಇಲ್ಲದಿರಲಿ, ದಿವಾಣ ಸಾಹೇಬರು ಮಾತ್ರ ಬಾಗಿದರು.

“ಪದ್ಮಜಾ ಎಲ್ಲಿ ? ”

“ಗೊತ್ತಿಲ್ಲ ಸರ ಸಾಹೇಬ ! ”

“ಹೋಗಲಿ, ಪದ್ಮಜಾ ಯಾರು ? ಎಲ್ಲಿಯವಳು ? ”

“ಅದೂ ನನಗೆ ಗೊತ್ತಿಲ್ಲ ಸರ ಸಾಹೇಬ”

“ರಾವಸಾಹೇಬ ನಿಮಗೆ ಗೊತ್ತಿರುವದಾದರೂ ಏನು ?

ಗೊತ್ತಿದ್ದರೆ ಹೇಳುತ್ತಿದ್ದೆ ಸರ ಸಾಹೇಬ”

"ರಾವಸಾಹೇಬ ! ಪದ್ಮಜಾ ಯಾರು ಅವಳು ಎಲ್ಲಿರುವಳೆಂಬುದನ್ನು ನೀವು ಚನ್ನಾಗಿ ಬಲ್ಲಿರಿ"

''ಇಲ್ಲ ಸರ ಸಾಹೇಬ''

ಛತ್ರಪತಿಗಳ ಕಣ್ಣಿನಿಂದ ನಿಃಶಬ್ದ ಮಿಂಚು.

" ಇಲ್ಲ ನೋಡಿರಿ ರಾವಸಾಹೇಬರೇ, ನಿಮಗೆ ಗೊತ್ತಿರಬಹುದು ಅಥವಾ ಇರಲಿಕ್ಕಿಲ್ಲ. ಆದರೆ ಎಂಟು ದಿವಸಗಳಲ್ಲಿ ನೀವು ನನಗೆ ಈ ಎರಡೂ ಪ್ರಶ್ನೆಗಳಿಗೆ ಉತ್ತರಕೊಡಬೇಕು. ಗೊತ್ತಿರದಿದ್ದರೆ ಎಂಟು ದಿವಸಗಳಲ್ಲಿ ಗೊತ್ತು ಮಾಡಿಕೊಳ್ಳಿರಿ. ಮುಂದಿನ ವಾರ ಪದ್ಮಜಾ ನನ್ನೆದುರು ಇರಬೇಕು ಅಥವಾ ಇವಳು ಎಲ್ಲಿರುವಳೆಂಬ ಬಗ್ಗೆ ನಿಶ್ಚಿತವಾದ ಮಾಹಿತಿಯಾದರೂ ಬೇಕು.

''ಪ್ರಯತ್ನಿಸುವೆನು ಸರಕಾರ''

''ಎಂಟು ದಿವಸಗಳಲ್ಲಿ, ನೆನಪಿರಲಿ, ಇಲ್ಲವಾದರೆ............''

"ಇಲ್ಲವಾದರೆ ? ''

''ನೀವು ರಾಜೀನಾಮೆ ಕೊಡಬೇಕಾಗುತ್ತದೆ. ''

ಹಿಂದುಸ್ಥಾನದಲ್ಲಿ ಯಾವದೊಂದು ಸಂಸ್ಥಾನದ ದಿವಾಣ ಪದವಿಯು ಸಿಗುವದು ದುರ್ಲಭ, ಸಿಕ್ಕರೂ ಅದನ್ನು ಉಳಿಸಿಕೊಳ್ಳುವದು ಭಗೀರಥನ ಕೆಲಸ, ಎಂಬ ವಿಧಾನವು ಹದಿನಾರಾಣೆ ಸತ್ಯವೆಂದು ರಾ. ಸಾ. ಇಬ್ಬನ್ನಿಯು ವರಿಗೆ ಅಂದು ಖಾತ್ರಿಯಾಯಿತು.

ಈಗ ಇದ್ದದ್ದು ಮುಂದಿನ ಕ್ಷಣಕ್ಕೆ ಇಲ್ಲ ಇಂಥ ನೌಕರಿಯ ಗೊಡವೆಗೆ ಹೋಗಲು ತರುಣರು ಸಾಹಸ ಮಾಡುವದಿಲ್ಲವಾದ್ದರಿಂದ ಸಂಸ್ಥಾನಗಳ ದಿವಾಣರೆಂದರೆ ವೃದ್ಧರೇ ಇರಬೇಕು ಎಂಬ ಪರಂಪರೆಯು ರೂಢಿಯಾಗಿತ್ತು. ತಮ್ಮ ಪೂರ್ವಾಶ್ರಮವನ್ನು ಬ್ರಿ. ಸರಕಾರದ ಯಾವದೊಂದು ಶಾಖೆಯಲ್ಲಿ ಕಳೆದವರು ಪಿಂಚಣಿಯಾದ ಬಳಿಕ ಕುಳಿತೇನು ಮಾಡುವದು ಎಂದಾಗಲಿ ಅಥವಾ ಅಧಿಕಾರವನ್ನು ಉಪಭೋಗಿಸಿದವರು ಅಧಿಕಾರದಿಂದ ಭ್ರಷ್ಟರಾದರೆ ಕೊಂಡಿಇಲ್ಲದ ಜೀಳಿನಂತಾಗುವದೆಂದು ಭಾವಿಸಿಯಾಗಲಿ, ಅಥವಾ ಕಚೇರಿಯಲ್ಲಿಯೇ ಆಯುಷ್ಯದ ಬಹು ಭಾಗವನ್ನು ಹಾಕಿದವರು ಕಚೇರಿಯಿಂದ

ಕಾಲ್ತೆಗೆದರೆ ನೀರಿನಿಂದ ಹೊರಬಿದ್ದ ಮೊಸಳೆಯುಂತಾಗುವರೆಂಬಾಗಲಿ ಭಾವಿಸಿ ಸಂಸ್ಥಾನಗಳಲ್ಲಿ ದಿವಾಣ ಪದವಿಯನ್ನು ಅಲಂಕರಿಸುವರು. ಕಾಯಿದೆಗಳ ಕಟ್ಟಳೆಗಳ ಚೌಕಟ್ಟಿನಲ್ಲಿಯೇ ಕಾರ್ಯ ನಡೆಸಿ ಬೇಸತ್ತು ಕಡೆಗೊಮ್ಮೆ ಕಾಯಿದೆಗಳಿಲ್ಲದೆ ರಾಜ್ಯ ನಡೆಸುವ ಸಂಧಿ ದೊರೆಯುವದೆಂದು ದಿವಾಣರಾದವರೂ ಉಂಟು. ಕಚೇರಿಯ ತಂತ್ರಕುತಂತ್ರಗಳಲ್ಲಿ ಕೆಂಪು ಮೋರೆಯವರಿಗೆ ನೀರು ಕುಡಿಸಿದ ಜಟ್ಟಿಗಳು ಸಂಸ್ಥಾನಿಕರ ದರ್ಪದ ಖ್ಯಾತಿಯನ್ನು ಕೇಳಿ,

'ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯುಂ
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ
ಗರ್ವ ತೋಳ್ಗಳಿವೇತಕೆಂದು ಸಲೆವಾಸಿಯುಂ ತೊಟ್ಟು'

ಉರಿದೆದ್ದು ಸಂಸ್ಥಾನಗಳಲ್ಲಿ ಕಾಲಿಟ್ಟವರಿಗೂ ಕಡಿಮೆ ಇಲ್ಲ. ಕೆಂಪು ಮೋರೆಯುವರಿಗೆ ಹಣೆಯೂದ ನಾವು ಸೊಟ್ಟ ಸಂಸ್ಥಾನಿಕರಿಗೆ ಮಣಿಯುವೆವೆ ಒಳ್ಳೊಳ್ಳೆಯವರನ್ನು ಉಳ್ಳಾಡಿಸಿದವರಿಗೆ ಗುಳ್ಳನ್ನನದೇನು ಭೀತಿ ಎಂದಿನ ತರ್ಕ.

ಇಂಥ ಅನೇಕ ವಿಚಾರಗಳೇ ರಾ. ಸಾ. ಇಬ್ಬನ್ನಿಯವರಿಗೆ ಸ್ಥೈರ್ಯಪ್ರದ ಸಂಸ್ಥಾನದಲ್ಲಿ ಕಾಲಿಡಲುಹಚ್ಚಿದವು. ಆದರೆ ಅಲ್ಲಿ ಕಾಲುಹಾಕಿದ ಬಳಿಕ ಹಿಂದಿನ ದಿವಾಣರ ಇತಿಹಾಸವನ್ನು ಕೇಳಿ ಅವರ ಮೊದಲಿನ ಎಲ್ಲ ವಿಚಾರಗಳು ಹಾರಿಹೋಗಿದ್ದವು. ಅವರ ಜೀವವು ತಳಮಳಗೊಂಡಿತ್ತು. ಇಂದಿಲ್ಲ ನಾಳೆಯಾದರೂ ಒಂದಿಲ್ಲೊಂದು ನೆವದಿಂದ ತಮಗೂ ಅಪ್ಪಣೆಯಾಗುವದೆಂದು ಅವರು ಒಂದೇ ವಾರದಲ್ಲಿ ಮನಗಂಡಿದ್ದರು. ಯಾವದೊ ಒಂದು ವಿಷಯದಲ್ಲಿ ಸಂಸ್ಥಾನದ ಪೇದೆಯೊಬ್ಬನು ಅವರಿಗೆ ಹೀಗೆ ಉತ್ತರಕೊಟ್ಟಿದ್ದ, "ನೀವು ಒಂದೆರಡು ದಿವಸ ಇದ್ದು ಹೋಗುವವರು. ಇಲ್ಲಿಯೇ ಯಾವಜ್ಜೀವ ಇರಬೇಕಾದ್ದರಿಂದ ನಾವು ಬಹಳ ಎಚ್ಚರದಿಂದ ನಡೆಯಬೇಕಾಗುವದು.

ಎಚ್ಚರದಿಂದ ನಡೆಯುವದು! ಇದೇ ವಿಚಾರವೇ ರಾ. ಸಾ. ಇಬ್ಬನ್ನಿಯವರ ಮನಸ್ಸಿನಲ್ಲಿ ಬೇರೂರಿತು. ಶತ್ರುಪತಿಗಳಿಗೆ ನೀರು ಕುಡಿಸುವದರಲ್ಲಿ ತಲೆಹಾಕುವದರ ಬದಲು ಅವರು ತಮ್ಮ ಸ್ಥಾನವನ್ನು ಕಾಯ್ದುಕೊಳ್ಳುದವ

ರಲ್ಲಿ ತಲ್ಲೀನರಾದರು. ಶತ್ರುಪತಿಗಳು (ಪರ ರಘುನಾಥರ ತಂದೆಯವರು, ಈಗಿನ ಶತ್ರುಪತಿಗಳು) ಹೇಳಿದುದಕ್ಕೆ ಗೋಣುಹಾಕಲು ನಿಶ್ಚಯಿಸಿದರು. ಅವರ ಈ ಮನೋರಂಗವನ್ನರಿಯದ ಪ್ರಜೆಗಳು ದಿವಾಣರು ತಮ್ಮ ಹೊಣೆಯನ್ನರಿಯದೆ ವರ್ತಿಸುತ್ತಾರೆ, ಪ್ರಜೆಗಳ ಹಿತಮಾಡುವದು ಅವರ ಇಚ್ಛೆಯಿಲ್ಲ, ಸ್ವಾರ್ಥದ ಮುದ್ದೆಗೆ ಈ ಕಣ್ಣು ಮೂಗು ಕಿವಿಗಳನ್ನು ಹಚ್ಚಿ ದೇವರು ದಿವಾಣರನ್ನು ತಯಾರಿಸುತ್ತಾನೆ ಎಂದು ಮುಂತಾಗಿ ಸಂಸ್ಥಾನದ ಪ್ರಜೆಗಳು ಆಡಿಕೊಳ್ಳುತ್ತಿದ್ದರು.

ಅನೇಕ ಸಂಸ್ಥಾನಗಳಲ್ಲಿ ಅನುಭವ ಉಂಡು ಕೆಲವು ದಿವಾಣರ ವಾಙ್ಮಯ ಕಲಾಸೇವೆ ವೈಜ್ಞಾನಿಕ ಸಂಶೋಧನೆಗಳಂತೆ ದಿವಾಣತನವೂ ಒಂದು ತರಹದ ತಪಸ್ಸೆಂದು ಭಾವಿಸಿ, ಸಂಸ್ಥಾನಿಕರ, ಸರಕಾರದ, ಶ್ರೀಮಂತರ, ಸ್ವಾಮಿಯ, ಗುಣಾವಗುಣಗಳನ್ನು ಚನ್ನಾಗಿ ಅಭ್ಯಸಿಸಿಕೊಂಡು ಕೆಲವಂ ಬಲ್ಲವರಿಂದ ಕಲಿತು ತಮ್ಮ ರಕ್ಷಣೆಮಾಡಿಕೊಳ್ಳುತ್ತಿದ್ದರು. ಇಂಥ ಚಾಣಾಕ್ಷ ದಿವಾಣರ ಪಟ್ಟಿಯಲ್ಲಿ ರಾ. ಸಾ. ಇಬ್ಬನ್ನಿಯವರ ಹೆಸರೂ ಸ್ಥಾನ ದೊರೆಯ ತೊಡಗಿತು.

ಹಿಂದಿನ ಶತ್ರುಪತಿಗಳಾದ ಶತ್ರುಪತಿ ಪ್ರಜಾವತ್ಸಲರು ತಮ್ಮ ದಿವಾಣರನ್ನು ಬಹುದಿನ ಒಂದೇ ಒಂದು ಕಾರಣಕ್ಕಾಗಿ ಮನೆಗೆ ಕಳುಹಿಸಿದ್ದರು. ಶತ್ರುಪತಿಗಳು ಅತ್ತಿತ್ತ ಯಾರು ಯಾರಿಗೆ ಹಣ ಕಳುಹುತ್ತಾರೆ, ಎಷ್ಟು ಹಣ ಕಳುಹುತ್ತಾರೆ ಯಾಕೆ ಕಳುಹುತ್ತಾರೆ ಎಂದು ಮುಂತಾಗಿ ಜಿಜ್ಞಾಸೆಯನ್ನು ವ್ಯಕ್ತಪಡಿಸಿದ ಎಲ್ಲ ದಿವಾಣರು ಕೆಲಸ ಕಳೆದುಕೊಂಡು ಮನೆಗೆ ಹೋಗಿದ್ದರು. ಇವನ್ನೆಲ್ಲ ಚನ್ನಾಗಿ ಅಭ್ಯಸಿಸಿಕೊಂಡು ರಾ. ಸಾ. ಇಬ್ಬನ್ನಿಯವರು ಹಣದ ನಿರ್ಯಾತದ ಬಗ್ಗೆ ಜಿಜ್ಞಾಸ ವ್ಯಕ್ತಮಾಡುವದರ ಬದಲು ಅಥವಾ ಅದು ಹೋಗಗೆ [illegible] ಯಾವ ತೊಡರುಗಳನ್ನುಂಟುಮಾಡದೆ ಮೊದಲು ಮೊದಲು ಅಪ್ರತ್ಯಕ್ಷವಾಗಿಯೂ ಆ ಮೇಲೆ ಪ್ರತ್ಯಕ್ಷವಾಗಿಯೂ ಹೊರಗೆ ಹಣ ಕಳಿಸಲು ಶತ್ರುಗತಿಗಳಿಗೆ ಸಹಾಯಮಾಡತೊಡಗಿದರು. ಮುಂಬಯಿಯ ಒಂದು ಬ್ಯಾಂಕಿನಲ್ಲಿ ಶತ್ರುಗತಿಗಳ ಖಾಸಗಿ ಖಾತೆಯನ್ನು ಪ್ರಾರಂಭಿಸಿ ಅಲ್ಲಿ

ಯಾವಾಗಲೂ ಹಣ ಇರುವಂತೆ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಇದರಿಂದ ಯಾರಿಗೂ ತಿಳಿಯದಂತೆ ಹೊರಗೆ "ಚೆಕ್ಕು" ಕಳಿಸಲು ಶತ್ರುಪತಿಗಳಿಗೆ ಅನುಕೂಲವಾಗುತ್ತಿತ್ತು. ಈ ಕಾರಣಕ್ಕಾಗಿ ಅನ್ನಬಹುದು ಅಥವಾ ಯೋಗಾಯೋಗದಿಂದ ಎನ್ನಬಹುದು, ಹಿಂದಿನ ಶತ್ರುಪತಿಗಳು ರಾ. ಸಾ. ಇಬ್ಬನ್ನಿಯವರಿಗೆ ಎಚ್ಚರಿಕೆಯನ್ನು ಕೊಡುವ ವಿಚಾರವನ್ನು ಕನಸು ಮನಸಿನಲ್ಲಿಯೂ ತರಲಿಲ್ಲ.

ಹಿಂದಿನ ಶತ್ರುಪತಿಗಳು ಹಣವನ್ನು ಎಲ್ಲಿಗೆ ಕಳಿಸುತ್ತಾರೆ, ಯಾರಿಗೆ ಕಳಿಸುತ್ತಾರೆ, ಯಾಕೆ ಕಳಿಸುತ್ತಾರೆ ಎಷ್ಟು ಕಳಿಸುತ್ತಾರೆ ಎಂಬೀ ವಿಷಯದಲ್ಲಿ ಲಕ್ಷ್ಯಹಾಕದಿರುವದು ತಮ್ಮ ಮುತ್ಸದ್ದಿತನದ ದ್ಯೋತಕವೆಂದ ರಾ. ಸಾ. ರು ಭಾವಿಸಿದ್ದರು. ಆದರೆ ಹೊಸ ಶತ್ರುಪತಿಗಳು ಪಟ್ಟಕ್ಕೆ ಬಂದು ಒಂದು ವರ್ಷವಾಗುವಷ್ಟರಲ್ಲಿಯೇ ಅವರ ಭ್ರಮ ನಿರಸನವಾಯಿತು. ತಾವು ಮೇಲಿನ ವಿಷಯದಲ್ಲಿ ಲಕ್ಷ್ಯಹಾಕಿದ್ದರೆ, ಪದ್ಮಜೆ ಯಾರೆಂಬುದು ಗೂಢವಾಗಿ ಉಳಿಯುತ್ತಿರಲಿಲ್ಲವೆಂದು ಅವರಿಗೆ ಹೊಳೆಯತೊಡಗಿತು.

ಪದ್ಮಜಾ! ಅವಳನ್ನು ಎಂಟು ದಿವಸಗಳಲ್ಲಿ ಹುಡುಕಿ ಕೊಡದಿದ್ದರೆ ತಮಗೆ ಅಪ್ಪಣೆ!

ಪದ್ಮಜೆಯನ್ನು ತಮ್ಮ ಅಕ್ಕನ ಮೊಮ್ಮಗಳ ಮನೆಗೆ ಕಳಿಸಿದಮೇಲೆ ರಾ. ಸಾ. ಅವಳ ವಿಚಾರವನ್ನು ಬಿಟ್ಟುಕೊಟ್ಟಿದ್ದರು. ಪದ್ಮಜಾ ಎಂದರೆ ಓರ್ವ ಆಶ್ರಿತ ಹುಡುಗಿ ಅಥವಾ ಹಿಂದಿನ ಶತ್ರುಪತಿಗಳು ಇಂದಿನ ಶತ್ರುಪತಿಗಳಿಗೆ ಒಪ್ಪಿಸುವಲ್ಲಿ ನೂಕಿದ ಹುಡುಗಿ ಎಂದು ಅವರು ತಿಳಿದುಕೊಂಡಿದ್ದರು. ಹೆಚ್ಚಿನದು ಅವರಿಗೆ ಗೊತ್ತಿರಲಿಲ್ಲ. ವೈಭವಪುರದಲ್ಲಿ ಯಾರಿಗೂ ಗೊತ್ತಿರಲಿಲ್ಲ. ಒಂದು ವೇಳೆ ಪದ್ಮಜೆಯಮೇಲೆ ಶತ್ರುಪತಿಗಳ ಪ್ರೇಮವಿದ್ದಿದ್ದರೆ, ಅವರು ಅವಳನ್ನು ಲಗ್ನವಾಗಲಿಚ್ಛಿಸಿದ್ದರೆ, ಅಥವಾ ಕೇವಲ ಮನೆಯಲ್ಲಿ ಆದರೂ ಇರಲಿ ಎಂದು ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದರೆ ಆ ವಿಷಯದಲ್ಲಿ ರಾ. ಸಾ. ರು ಏನಾದರೂಮಾಡಬಹುದಾಗಿತ್ತು. ಆದರೆ ಪದ್ಮಜೆ ಹೋದಬಳಿಕ ಎರಡು ಮೂರು ವಾರಗಳಾದರೂ ಶತ್ರುಪತಿಗಳು ಅವಳ ವಿಷಯದಲ್ಲಿ ಶಬ್ದ ಚಕಾರ

ವನ್ನಾಡಲಿಲ್ಲ. ಇಂಗ್ಲಂಡದ ಎಡ್ವರ್ಡ ಅರಸನು ಪ್ರೇಯಸಿಯ ಸಲುವಾಗಿ ರಾಜ್ಯತ್ಯಾಗವನಾಡಿದನು, ಪದ್ಮಜೆಯು ತಮ್ಮ ಪ್ರೇಯಸಿ ಎಂದೆನಿಸಿದ್ದರೆ ಶತ್ರುಪತಿಗಳು ಎಡ್ವರ್ಡನಂತೆಯೇ ವೈಭವಪುರದ ವೈಭವದಮೇಲೆ ನೀರು ಬಿಡಲು ಸಿದ್ಧರಾಗುತ್ತಿದ್ದಿಲ್ಲವೆ? ಆಶ್ರಿತ ಹುಡಿಗಿ, ಎಲ್ಲಿಂದಲೊ ಬಂದಳು, ಹೇಗೊ ಮಾಯವಾದಳು ಎಂದು ಶತ್ರುಪತಿಗಳು ಅವಳ ವಿಚಾರವನ್ನು ಬಿಟ್ಟುಕೊಟ್ಟರ ಬೇಕೆಂದು ಭಾವಿಸಿ ರಾ. ಸಾ.ರು ತಾವು ಅವಳ ವಿಚಾರವನ್ನು ಬಿಟ್ಟುಬಿಟ್ಟರು.

ಪದ್ಮಜಾ ಹೋದಬಳಿಕ ಶತ್ರುಪತಿಗಳು ಉದಾಶೀನರಾದಂತೆ ಕಾಣುತ್ತಿದ್ದಾರೆ, ಅವರ ಮೋರೆಯಮೇಲೆ ಉತ್ಸಾಹ ಕಾಣುವದಿಲ್ಲ. ಯಾವದೊಂದು ಕೆಲಸವನ್ನು ಒಯ್ದು ಮುಂದಿಟ್ಟರೆ ದಮ್ಮಿನಿಂದ ಬಳಲುತ್ತಿದ್ದವರು ಓಪಲು ನಿರಾಕರಿಸಿದಂತೆ ಅವರು ಆ ಕೆಲಸವನ್ನು ಮುಂದೂಡುತ್ತಾರೆ ಎಂದು ದಿವಾಣ ಸಾಹೇಬರಿಗೆ ಆಗಾಗ್ಗೆ ತೋರಿಬರುತ್ತಿತ್ತು. ಪದ್ಮಜಾ ಶತ್ರುಪತಿಗಳ ಹೃದಯದಲ್ಲಿ ಮನೆಮಾಡಿಕೊಂಡಿದ್ದಾಳೆಯೋ ಎಂದು ಸಂಶಯಬರುತ್ತಿತ್ತು.

ಆದರೆ ಈಚೆಗೆ ನಡೆದ ಘಟನೆಗಳಿಂದ ಅವರ ಸಂಶಯದ ನಿವಾರಣೆಯಾಗಿತ್ತು.

ದಿವಾಣ ಸಾಹೇಬರು ಚಾತುರ್ಯದಿಂದ ಸಾರಂಗವಾಡದ ಅಧಿಪತಿಗಳನ್ನು ವೈಭವಪುರಕ್ಕೆ ಕರೆಯಿಸಿಕೊಂಡರು. ಸಂಸ್ಥಾನದ ಹಳ್ಳಿಗಳಲ್ಲೊಂದಾದ ಓಜಸ್ವಿವಾರದಲ್ಲಿ ೧೦೦—೨೦೦ ಎಕರೆ ಕಾಡಿನಲ್ಲಿ ಅನೇಕ ಮೊಲಗಳಿದ್ದು ಬೇಟೆಗೆ ಅದರಷ್ಟು ಉತ್ತಮ ಪ್ರದೇಶವು ಎಲ್ಲಿಯೂ ದೊರಕಲಾರದೆಂದು ಶತ್ರುಪತಿಗಳು ಪತ್ರ ಬರೆಯಿಸಿ ಅವರನ್ನು ಕರೆಯಿಸಿಕೊಂಡರು. ಸಾರಂಗವಾಡದ ಅಧಿಪತಿಗಳಿಗೂ ವೈಭವಪುರಕ್ಕೆ ಬರಲು ಒಂದಿಲ್ಲೊಂದು ನೆವಬೇಕಾಗಿತ್ತು. ಮೊಲದ ಬೇಟೆ ಎಂದಮೇಲೆ ಬರಲು ಒಪ್ಪಿದರು. ಸಾರಂಗವಾಡವು ವೈಭವಪುರದಂತೆಯೆ ಸಿಕ್ಕ ಸಂಸ್ಥಾನ, ತಮ್ಮ ಮಗಳು ಮದುವೆಯದೊಂದು ಸಾರಂಗವಾಡದ ಅಧಿಪತಿಗಳಿಗೆ ದೊಡ್ಡ ಚಿಂತೆಹತ್ತಿ ರಾಜಪುತ್ರಿಯಂತೆ ತಮ್ಮ ಮಗಳು ರಾಜಪುತ್ರಿಯಾಗಿದ್ದರೆ ಅವಳನ್ನು ಯಾವದೊಂದು ಸಂಸ್ಥಾನಿಕರ ಮನೆತನಕ್ಕೆ ಕೊಡಬಹುದಾಗಿತ್ತು. ಆದರೆ ಅವಳು ಬಿ. ಎ. ಆಗಿದ್ದಳು, ಉತ್ತಮ ಕ್ರೀಡಾಪಟು, ಉತ್ತಮ ಲೇಖ ಬರೆಯ ಬಲ್ಲವಳು, ಭಾಷಣ ಕೊಡ

ಬಲ್ಲವಳು. ಮತ್ತು ಸುಂದರಿಯರಲ್ಲೂ ಒಪೆದು ಕಾಣುವಂಥ ಸುಂದರಿ. ಇಂಥವಳಿಗೆ ಸಂಸ್ಥಾನಿಕರ ಮನೆತನದಲ್ಲಿ ಹೇಗೆ ತಕ್ಕ ವರ ಹುಡುಕಬೇಕೆಂಬುದೇ ಅವರ ಚಿಂತೆ. ರಾಜಮನೆತನವನ್ನು ಬಿಟ್ಟು ಸಾಮಾನ್ಯ ಮನೆತನದ ಶ್ರೀಮಂತರಿಗೆ ಇಲ್ಲವೆ ವರಿಷ್ಠ ಅಧಿಕಾರಿಗೆ ಕೊಡಬೇಕೆಂದರೆ ಮಾನ ಸಾಲುವದಿಲ್ಲ! ಹೀಗಾಗಿ ಅವರು ಗೋಳಿನಲ್ಲಿ ಬಿದ್ದಿದ್ದರು.

ವೈಭವಪುರದ ಶತ್ರುಪತಿಗಳು ಪದವಿಧರರಲ್ಲವಿದ್ದರೂ ಇಂಗ್ಲೀಷ ಕಲಿತವರು, ಹೊಸ ಆಚಾರ ವಿಚಾರಗಳ ಪರಿಚಯವುಳ್ಳವರು, ಅವರಿಗೆ ತಮ್ಮ ಮಗಳನ್ನು ಕೊಡಬೇಕೆಂದು ಅವರು ಎಣಿಕೆಹಾಕಿದ್ದರು. ಇಬ್ಬನ್ನಿ ರಾವಸಾಹೇಬರು ತರುಣ ಶತ್ರುಪತಿಗಳಿಗೆ ಬೇಗನೆ ಲಗ್ನವಾಗದಿದ್ದರೆ ಅವರು ಅಡದಾರಿಯನ್ನು ಹಿಡಿಯಬಹುದೆಂದು, ಅಧಿಪತಿಗಳ ಲಗ್ನವು ದಿವಾಣ ಪದವಿಯ ಕೆಲಸಗಳಲ್ಲೊಂದೆಂದೂ ಭಾವಿಸಿ ಅವರು ಮುಂದಾಗಿದ್ದರು.

ಸಾರಂಗವಾಡದ ಅಧಿಪತಿಗಳು ತಮ್ಮೊಡನೆ ತಮ್ಮ ಮಗಳನ್ನು ಕರೆದುಕೊಂಡುಬಂದಿದ್ದರು. ಓಜಸ್ವಿಪುರದ ಕಾಡಿನಲ್ಲಿ ಮೊಲದ ಬೇಟೆಯು ಒಳ್ಳೇ ಯಶಸ್ವಿಯಾಯಿತು. ಅಲ್ಲಿ ಝುಳು ಝುಳು ಹರಿಯುವ ನಿರ್ಮಲ ಹಳ್ಳದ ದಂಡೆಯಮೇಲೆ ಏರ್ಪಟ್ಟ ಉಪಹಾರ ಕಾರ್ಯಕ್ರಮವೂ ಅಷ್ಟೆ ಯಶಸ್ವಿಯಾಯಿತು. ಸಾರಂಗವಾಡದ ರಾಜಪುತ್ರಿಯ ಹಾಗೂ ಶತ್ರುಪತಿಗಳ ಪರಿಚಯವಾಯಿತು. ಆ ಈ ವಿಷಯಗಳನ್ನು ಚರ್ಚಿಸುತ್ತ ಬಹಳಹೊತ್ತು ಹರಟೆಹೊಡೆದರು.

ಅವರು ಹೋದಮೇಲೆ ಶತ್ರುಪತಿಗಳು ತಾವಾಗಿಯೇ ರಾ. ಸಾ. ಇಬ್ಬನ್ನಿಯವರನ್ನು ಕರೆದು ಸಾರಂಗವಾಡದ ರಾಜಪುತ್ರಿಯನ್ನು ವಿವಾಹ ಮಾಡಿಕೊಳ್ಳಲು ತಾವು ಇಚ್ಛಿಸುವದಾಗಿ ತಿಳಿಸಿದರು. ಆದರೆ ಅವರ ಕಡೆಯಿಂದ ಸೂಚನೆ ಬಂದರೆ ಮಾತ್ರ ಮುಂದಿನ ವಿಚಾರ, ತಾವಾಗಿಯೇ ಕನ್ಯೆಯನ್ನು ಕೇಳಲು ಹೋಗುವದು ವೈಭವಪುರದ ಶತ್ರುಪತಿಗಳ ಗೌರವಕ್ಕೆ ಶೋಭಿಸುವದಿಲ್ಲ ಎಂದು ಅವರು ಎಚ್ಚರಿಕೆಕೊಟ್ಟಿದ್ದರು. ಶತ್ರುಪತಿ ಹಾಗೂ ದಿವಾನರಿಬ್ಬರೂ ಸಾರಂಗವಾಡದವರಕಡೆಯಿಂದ ಸೂಚನೆ ಬರಲೆಂದು ಈ ದಾರೀ ಕಾಯ್ದರು. ಅದು ಬರಲೇ ಇಲ್ಲ.

ಅಷ್ಟರಲ್ಲಿ ಒಂದು ದಿನ ಶತ್ರುಪತಿಗಳು ದಿವಾಣರನ್ನು ಕರೆದು ಇದೇ ವಿಷಯವಾಗದಿದ್ದರೇ ಇಂಥಹದೇ ವಿಷಯವನ್ನು ಚರ್ಚಿಸಿದರು.

''ರಾವಸಾಹೇಬರೇ, ನಾವೊಂದು ಆನೆಯನ್ನು ಸಾಕಬೇಕೆಂದು ಮಾಡಿದ್ದೇನೆ, ನಿಮ್ಮ ಸಲಹೆ ಏನು ? ''

ದಿವಾಣರಿಗೆ ಏನೂ ತಿಳಿಯದಂತಾಯಿತು. ಆನೆಯನ್ನು ಸಾಕುವದು ವೈಭವಪುರಕ್ಕೆ ಸಾಧ್ಯವಿರಲಿಲ್ಲ. ಅದೊಂದು ಹೊಸ ವೆಚ್ಚ, ಸನ್ಯಾಸಿಯ ಮದುವೆಗೆ ಜುಟ್ಟು ಜನಿವಾರಗಳಿಂದ ಸಿದ್ಧತೆ ನಡೆಸಿದಂತೆ ಮಾವುತ ಅಂಕುಶ, ಗಜಶಾಲೆಯಿಂದ ಆನೆಯ ಬಗ್ಗೆ ವ್ಯವಸ್ಥೆಮಾಡಬೇಕು, ಅದಕ್ಕೂ ಹೆಚ್ಚಿನದೆಂದರೆ ಆನೆಯನ್ನು ಸಾಕಿಯಾದರೂ ಏನು ಮಾಡುವದು? ಎಂಬೀ ವಿಚಾರಗಳು ದಿವಾಣರ ತಲೆತಿನ್ನತೊಡಗಿದವು. ಆದರೆ ಮಾಡುವದೇನು, ಇಷ್ಟು ನೆವದಮೇಲಿಂದ ಅವರನ್ನು ಮನೆಗೆ ಕಳಿಸಿದರೆ ?

''ಆನೆಯೆಂದರೆ ವೈಭವದ ಪ್ರತೀಕ, ಸಂಸ್ಥಾನಿಕರಿಗೆ ಅದು ಬೇಕು. ಆದರೆ ಇತ್ತೀಚಿಗೆ ಆನೆಯ ಬದಲು ಮೋಟಾರು ಕೊಳ್ಳುವದು ನಡೆದಿದೆ. ಉತ್ತರಾದಿ ಮಠದ ಸ್ವಾಮಿಗಳು ತಮ್ಮ ಆನೆಯನ್ನು ಮಾರಿ ಈಗ ಮೋಟಾರ ಕೊಂಡಿರುವರು. ನಮ್ಮಲ್ಲಿ ಒಂದು ಮೋಟಾರ ಇದೆ. ಇನ್ನೊಂದು ಹೊಸ ಮಾಡೆಲ್ ಕೊಳ್ಳಬಹುದು." ಎಂದು ಅಂಜಂಜುತ್ತ ಸೂಚಿಸಿದರು.

ಶತ್ರುಪತಿಗಳು ಖೊಳ್ಳೆಂದು ನಕ್ಕರು. ನಗುವದಕ್ಕಾಗಿಯೇ ಅವರು ತಮಗೆ ಇಷ್ಟು ವೇಳೆ ಮಾತಾಡಗೊಟ್ಟರಬಹುದೆಂದು ದಿವಾಣರಿಗೆ ಅನ್ನಿಸಿತು.

''ಆನೆಯೆಂದರೆ ಆನೆಯಲ್ಲ – ಶ್ವೇತಗಜ – ವ್ಹಾಯಿಟ ಎಲಿಫಂಟ ! " ಅಂದರುಶತ್ರುಪತಿಗಳು.

"ಅದೆಂಥಹದದು ? ? , " ದಿವಾಣರು.

"ಇಲ್ಲಿ ನೋಡಿರಿ, ಮುಹಮ್ಮದಪುರದ ಕಲೆಕ್ಟರನ ಪತ್ನಿಯು ಒಂದು ಪತ್ರ ಬರೆದಿದ್ದಾಳೆ. ಪೋಲೀಟಿಕಲ್ ಏಜಂಟನ ಹೆಂಡತಿಯ ಸಂಬಂಧಿಕಳೊಬ್ಬಳು ಮಾರ್ಗಾರೇಟ್ ಎಂಬುವಳಿದ್ದಾಳಂತೆ. ಅವಳನ್ನು ನಾನು ಮಾಡಿಕೊಂಡರೆ ವೈಭವಪುರ ಸಂಸ್ಥಾನಿಕರಿಗೆ ವಂಶಪರಂಪರವಾಗಿ ಒಂದು ತೋಫಿನ ಸಲಾಮಿಯು ಇಡೀ ಹಿಂದುಸ್ಥಾನದಲ್ಲಿ ಸಿಗುವಂತೆ ಮಾಡುವದಾಗಿ ಶ್ರೀಮತಿ

ಪೊಲಿಟಿಕಲ್ ಎಜಂಟ ಶ್ರೀಮತಿ ಕಲೆಕ್ಟರ ಇವಳಿಗೆ ತಿಳಿಸಿರುವಳಂತೆ!”

ದಿವಾಣರ ತಲೆಯಲ್ಲಿ ಝುಗ್ಗೆಂದು ಬೆಳಕು ಬಿದ್ದಿತು. ಆನೆಯನ್ನು ಕೊಂಡರೆ ಒಂದು ವೇಳೆ ನಡೆಯುಬಹುದು, ಆದರೆ ‘ಮಡ್ಡಮ್ಮನನ್ನು’ ತಂದರೆ ವೈಭವಪುರದ ಬೊಕ್ಕಸವು ಎಂದೂ ತುಂಬದಂತೆ ಬರಿದಾಗುವದೆಂದು ಅವರಿಗೆ ಸ್ಪಷ್ಟವಾಯಿತು.

“ಸಾರಂಗವಾಡದ ರಾಜಪುತ್ರಿಯನ್ನು ಬಿಟ್ಟು, ಮಡ್ಡಮಳೊಬ್ಬಳಿಗೆ ಇತಿಹಾಸ ಪ್ರಸಿದ್ಧವಾದ ವೈಭವಪುರ ಸಂಸ್ಥಾನದ ಗಾದಿಯ ಅರ್ಧ ಭಾಗವನ್ನು ಕೊಡುವದು ಉಚಿತವಲ್ಲ. ಇನ್ನೊಮ್ಮೆ ಸಾರಂಗವಾಡದ ಅಧಿಪತಿಗಳನ್ನು ಮೊಲದ ಬೇಟಿಗೆ ಕರೆದುಬಿಡೋಣ ಎಲ್ಲವೂ ಸಾಧ್ಯವಾಗಿಹೋಗುವದು” ಎಂದು ವಿಷಯದ ಗಾಂಭೀರ್ಯವನ್ನರಿತು, ಗಂಭೀರತನದಿಂದ ದಿವಾಣರು ಸೂಚಿಸಿದರು.

ಇದರಮೇಲಿಂದ, ದಿವಾಣರು ಶತ್ರುಪತಿಗಳು ಪದ್ಮಜೆಯಮೇಲೆ ಪ್ರೇಮ ಮಾಡಿದರೂ ಅವಳನ್ನು ಮದುವೆಯಾಗುವ ಇಚ್ಛೆಯಿಲ್ಲ, ಅಂದರೆ ಪದ್ಮಜೆಯ ಮೇಲೆ ಅವರಿಗೆ ಉತ್ಕಟ ಪ್ರೇಮವಿಲ್ಲವೇ ಇಲ್ಲ ಎಂದು ತರ್ಕಕಟ್ಟಿದರು.

ದಿವಾಣರು ಹೀಗೆ ತರ್ಕಕಟ್ಟಿದ್ದರೂ, ಶತ್ರುಪತಿಗಳ ನಿಕಟ ಸಂಬಂಧದಲ್ಲಿ ಬರುವ [illegible]ಪುರದ ವರ್ಗದವರ ನಿರ್ಣಯವು ಬೇರೆಯಾಗಿದ್ದಿತು. ಪದ್ಮಜಾ ಯವರೆಂಬುವರ ಬಗ್ಗೆ ಶಾಂತಿನಿಕೇತನದ ನಿವಾಸಿಗಳಲ್ಲಿ ಆಗಾಗ ಭಿನ್ನಾಭಿಪ್ರಾಯವಾಗಿದ್ದರೂ ಬಡೆದಾಟ, ಜಿದ್ದುಕಟ್ಟುವದು ಮುಂತಾದವುಗಳು ಸಂಭವಿಸುತ್ತಿದ್ದರೂ ಅವಳು ಒಂದಿಲ್ಲೊಂದು ದಿನ ವೈಭವಪುರದ ರಾಣೀ ಸಾಹೇಬಳಾಗುವಳೆಂದು ಅವರಲ್ಲಿ ಮತೈಕ್ಯ ಕಂಡುಬರುತ್ತಿತ್ತು. ಸೌಂದರ್ಯ, ತೇಜ, ವಿನಯ, ವಿದ್ಯಾ, ಬುದ್ಧಿ ಸ್ವಲ್ಪದರಲ್ಲಿಯೆಂದರೆ ರಾಣೀಸಾಹೇಬಳಾಗಲು ಬೇಕಾಗುವ ಎಲ್ಲ ಗುಣಗಳ ಸಂಪತ್ತು ಅವಳಲ್ಲಿದೆಂದು ಅವರು ಬಗೆದಿದ್ದರು. ಈಗಾಗಲೇ ಶತ್ರುಪತಿಗಳ ಹೃದಯವು ಅವಳ ಕೈಯಲ್ಲಿ ಸಿಕ್ಕಿದೆಂದೂ ಅವರು ತಮ್ಮ ತಮ್ಮೊಳಗೆ ಗುಣಗುಟ್ಟುತ್ತಿದ್ದರು.

ಪದ್ಮಜಾ ಅದೃಶ್ಯವಾದಂದಿನಿಂದ ಒಳಗಿಂದೊಳಗೆ ಏಕಾಗಲೊಲ್ಲದು ಹೊಸ ಶತ್ರುಪತಿಗಳಿಗೆ ಜೀವನವು ಅಸಾರವೆನಿಸತೊಡಗಿದೆಂದು ಅವರು ಕಂಡು

ಹಿಡಿದಿದ್ದರು. ಶತ್ರುಪತಿಗಳಿಗೂ ಪದ್ಮಜಾ ಯಾರೆಂಬುದು ಗೂಢ ವಿಷಯವಾಗಿದ್ದಿತು. ಆದರೂ ಅವಳ ಅತ್ಯಲ್ಪ ಸಹವಾಸದಲ್ಲಿ ಅವರಿಗೆ ಅತ್ಯಾನಂದ ಎನಿಸಿತ್ತೆಂಬಲ್ಲಿ ಎಳ್ಳಷ್ಟೂ ಸಂಶಯವಿದ್ದಿಲ್ಲ.

ಪದ್ಮಜೆಯ ಮೇಲೆ ತಮ್ಮ ಪ್ರೇಮವಿದೆಯೊ ಎಂಬ ಪ್ರಶ್ನೆಯನ್ನು ಸ್ವತಃ ಶತ್ರುಪತಿಗಳು ಉತ್ತರಿಸಲು ಅಸಮರ್ಥರಿದ್ದರು. ಪದ್ಮಜೆಯ ವಿಷಯವಾಗಿ ತಮ್ಮಲ್ಲಿಪ್ರೀತಿ—ಅನುಪಮ ಪ್ರೀತಿ—ಉತ್ಪನ್ನವಾಗಿದೆಂಬಬಗ್ಗೆ ಅವರಿಗೆಎಳ್ಳಷ್ಟೂ ಸಂಶಯವಿದ್ದಿಲ್ಲ. ಆದರೆ ಆ ಪ್ರೀತಿ ಪ್ರೇಮವೆ? ಅವಳ ಜಾತಿ? ತಂದೆ? ತಾಯಿ? ಎಂಬೀ ಹಲವು ಪ್ರಶ್ನೆಗಳು ಅವರನ್ನು ಮುತ್ತುತ್ತಿದ್ದವು.

ಬಿಸಿಲಿನಲ್ಲಿ ಬಳಲಿ ದಾರಿ ನಡೆಯುತ್ತಿದ್ದವನಿಗೆ ಕೋಕಿಲದ ಇಂಚರವು ಕೇಳಬರಲು ಅವನು ತನ್ನ ಹೃದಯವನ್ನೆಲ್ಲ ಕಿವಿಗಳಲ್ಲಿ ಹಾಕಿ ಅದನ್ನಾಲಿಸ ತೊಡಗುವದಿಲ್ಲವೇ? ನಿಜವಾಗಿ ವಿಚಾರ ಮಾಡಿದರೆ ಕೋಕಿಲೆಗೂ ಮನುಷ್ಯನಿಗೂ ಏನು ಸಂಬಂಧ? ಕೋಕಿಲದ ಇಂಚರದ ಭಾಷೆಭಾವಗಳು ಮನುಷ್ಯನಿಗೆ ತಿಳಿಯುವವೇ? ಇಲ್ಲ. ಇಂಪಾದ ದನಿಯನ್ನು ಕೇಳಿದರೆ ಕಾಲಿನ ದಣಿವು ಆರುವದಿಲ್ಲವೆ? ಬಿಸಿಲಿನ ತಾಪವು ಕಡಿಮೆಯಾಗುವದಿಲ್ಲವೆ? ಹಾಗೆಯೇ ಏಕಾಕಿಯಾಗಿ ಜೀವನವನ್ನು ಸಾಗಿಸಿದ ತಮಗೆ ಪದ್ಮಜಾ ಕೋಕಿಲೆಯಂತಾಗಿ ತಮ್ಮ ಆಯುಷ್ಯದಲ್ಲಿ ಪ್ರವೇಶಿಸಿದಳೆಂದು ಅವರು ಬಗೆದಿದ್ದರು. ಅವಳೇ ತಮ್ಮ ಸಹಚರಿಯಾದರೆ? ನೇರವಾಗಿ ಈ ಪ್ರಶ್ನೆಗೆ ಉತ್ತರ ಕೊಡುವದು ಅವರಿಗೆ ಸಾಧ್ಯವಾಗುತ್ತಿದ್ದಿಲ್ಲ. ಆದರೆ ಪದ್ಮಜೆಯ ಸಾನಿಧ್ಯದಲ್ಲಿ ತಮಗೆ ಆನಂದವಾಗುವದು ನಿರ್ವಿವಾದ. ತಂದೆಯವರು ಸಂರಕ್ಷಣೆಗಾಗಿ ಅವಳನ್ನು ತಮ್ಮ ಕಡೆಗೆ ಒಪ್ಪಿಸಿದರು; ಅವಳು ಇಲ್ಲದಿದ್ದರೆ ತಮ್ಮ ಜೀವ ತಳಮಳಿಸುವದು ಇಷ್ಟೇ ಅವರಿಗೆ ಗೊತ್ತು. ಅಂತೆಯೇ ಅವಳನ್ನು ಹುಡುಕಿಸಲು ಆಕಾಶ ಪಾತಾಳಗಳನ್ನು ಒಂದು ಮಾಡಬೇಕೊ ಬಿಡಬೇಕೊ ಎಂಬುದು ಅವರಿಗೆ ಅನುಮಾನವಾಗಿದ್ದಿತು. ಅಲ್ಲದೆ ಅದರಿಂದ ವೈಭವಪುರಕ್ಕೆ ಗಂಡಾಂತರವೂ ಬರಬಹುದೆಂದು ಅವರು ಹೆದರಿದ್ದರು.

ಪದ್ಮಜೆಯ ಬಗ್ಗೆ ತಮಗೆ ಇಷ್ಟು ಮಮತೆ ಎನಿಸಬೇಕಾದರೆ, ಅದಕ್ಕೆ ತಮ್ಮ ಏಕಾಕಿ ಜೀವನವೇ ಕಾರಣವಿರಬೇಕೆಂದೂ ಅವರು ಕೆಲ ದಿನ ಸಮಾಧಾನಹಚ್ಚಿಕೊಂಡಿದ್ದರು. ತಾಯಿ ಇಲ್ಲದ ಹುಡುಗ ಮನೆಯಲ್ಲಿ! ಗೆಳೆಯ

ನಿಲ್ಲದ ತರುಣ ಕಾಲೇಜಿನಲ್ಲಿ; ಸಂಸ್ಥಾನಿಕರ ಮಗ ಮೋಟಾರಿನಲ್ಲಿ ಬರುವವ ಮೋಟಾರಿನಲ್ಲಿಯೇ ಕುಳಿತು ನಡುವಿನ ಸೂಟಿಯಲ್ಲಿ ತಿಂಡಿ ತಿನಸುಗಳನ್ನು ತಿನ್ನುವವ, ಮೋಟಾರಿನಲ್ಲಿಯೇ ಆಡುವವ, ಮೋಟಾರಿನಲ್ಲಿಯೇ ತಿರಗುವವ ಎಂದು ಯಾರೂ ತನ್ನ ಗೊಡವೆಗೆ ಬರುತ್ತಿರಲಿಲ್ಲ. ಅಲ್ಲದೆ ಫ್ರೊಫೆಸರರು ಹೇಳಿದ ಪ್ರತಿಯೊಂದು ಪುಸ್ತಕ ಮನೆಯಲ್ಲಿ, ಟೆನಿಸಿನಿಂದ ಮೊದಲುಮಾಡಿ ಕೇರಂ ಇಸ್ಪೇಟುಗಳವರೆಗೆ ಯಾವತ್ತು ಆಟಪಾಟಗಳ ಸಾಧನಗಳು ಮನೆಯಲ್ಲಿ. ಹೀಗಾಗಿ ತನಗೆ ವಿದ್ಯಾರ್ಥಿಗಳಲ್ಲಿ ಕೂಡುವ ಪ್ರಸಂಗವೇ ಬರುತ್ತಿರಲಿಲ್ಲ. ಸ್ತ್ರೀ ಜಾತಿಯ ಸಹವಾಸವಂತೂ ತನಗೆ ಹುಟ್ಟಿದಾರಭ್ಯ ತಪ್ಪಿದ್ದು. ಸುತ್ತಲು ಪುರುಷ ವರ್ಗದ ಪರಿಚಾರಕರು. ವೈಭವಪುರದ ರಾಣೀಸಾಹೇಬರು ಹೋದಂದಿನಿಂದ ಆ ಸಂಸ್ಥಾನಿಕರ ಮನೆಯು ಸ್ತ್ರೀ ಜಾತಿ ರಹಿತವೇ ಆದಂತಾಗಿತ್ತು. ಹೊರಗಿನಿಂದ ಅತಿಥಿ ಅಭ್ಯಾಗತರಾಗಿಯೂ ಯಾವ ಸಂಸ್ಥಾನದ ಕುಟುಂಬದವರೂ ಬರುತ್ತಿರಲಿಲ್ಲ. ಇಸ್ನು ಎದ್ದರೆ ಬಿದ್ದರೆ ನೌಕರರು ಅವರು ಸೇವೆಯನ್ನು ಸಲ್ಲಿಸುತ್ತಿದ್ದರೇನೊ ನಿಜ, ಆದರೆ ಅವರ ಸಹವಾಸ ತಮಗೆ ಸಿಗುತ್ತಿದ್ದಿಲ್ಲ. ಇಂಥ ಪರಿಸ್ಥಿತಿಯಲ್ಲಿ ತಮ್ಮ ತಂದೆ ತೀರಿಕೊಂಡರು. ಸ್ನಿಗ್ಧ ಸ್ತ್ರೀಯರಸಹವಾಸ ಸಹಾಯಸ್ನೇಹಿತರಧೈರ್ಯದಾಯಕಸಹವಾಸ ಇವು ಒತ್ತಟ್ಟಿಗಿರಲಿ, ಇದ್ದ ಆಧಾರವೂತಪ್ಪಿದಂತೆ ಅವರಿಗೆ ಅನಿಸಿತ್ತು. ವೈಭವಪುರದ ಪ್ರಜೆಗಳು ಪ್ರಜಾವತ್ಸಲರು. ಶತ್ರುಪತಿಗಳ ಸ್ಥಾನದಲ್ಲಿ ಒಂದು ಗೊಂಬೆಯನ್ನು ತಂದು ಕೂಡ್ರಿಸಿದರೂ ಅವರು ಅವರ ಆಜ್ಞೆಯನ್ನು ಶಿರಸಾವಹಿಸುವರು. ಅದರಲ್ಲಿ ರಾ. ಸಾ. ಇಬ್ಬನ್ನಿಯವರಂಥ ಶಿಸ್ತು ಪ್ರಿಯ ದಿವಾಣರು ಲಭಿಸಿದ್ದರಿಂದ ಅವರಿಗೆ ಆಡಳಿತೆಯ ಸೂತ್ರಗಳನ್ನು ವಹಿಸಿಕೊಳ್ಳಲು ಅಸಾಧ್ಯವಾಗಲಿಲ್ಲ. ಆದರೆ ಕಷ್ಟವಾಯಿತು. ಇಂಥ ಕಷ್ಟಕಾಲದಲ್ಲಿ ತಮಗೆ ಯಾರದಾದರೂ ಸಹವಾಸ ಬೇಕಾಗಿತ್ತು. ಒಂದು ಕಣ್ಣು ಬೇಡಿದರೆ ಎರಡು ಕಣ್ಣು ಕೊಟ್ಟಂತೆ ದೇವರು ತಮ್ಮ ಆಯುಷ್ಯದಲ್ಲಿ ಪದ್ಮಜೆಯಂಥ ಲಕ್ಷ್ಮೀ ಸರಸ್ವತಿಯರ ಸಂಗಮವನ್ನು ಪ್ರವೇಶಿಸಿದನು. ಇವಳನ್ನು ಸಂರಕ್ಷಣೆಮಾಡೆಂದು ತಂದೆ ತಮ್ಮ ಮರಣ ಸಮಯದಲ್ಲಿ ಒಪ್ಪಿಸಿದ ಹುಡುಗಿ, ಹುಡಿಗಿ ಅಲ್ಲ ದೇವತೆ. ಅವಳ ಬುದ್ಧಿ ಮುತ್ತು ರೂಪ ಎಲ್ಲವೂ ತಮ್ಮನ್ನು ಮೋಹಿಸಿದ್ದವು. ಎಂಬೀ ವಿಚಾರಗಳನ್ನು ಶತ್ರುಪತಿಗಳು ದಿನಾಲು ಮೆಲಕುಹಾಕುತ್ತಿದ್ದರು. ಆದರೆ

ಇಂಥವಳು ತಮಗೆ ಯಾವಜ್ಜೀವ ಸಹಚರಿಯಾಗಿ ದೊರೆತರೆ ಎಂಬ ವಿಚಾರವೂ ಅವರನ್ನು ಕೆಣಕದೆ ಬಿಡುತ್ತಿದ್ದಿಲ್ಲ. ಏನೊ ಒಂದು ಕ್ಷಣ ತಮ್ಮಷ್ಟಕ್ಕೆ ತಾವೇ ನಸುನಗುತ್ತಿದ್ದರು. ಮರುಕ್ಷಣ ಗಂಭೀರರಾಗುತ್ತಿದ್ದರು.

ಹೀಗೆಯೇ ಒಂದೆರಡು ತಿಂಗಳುಗಳು ಜಾರಿದವು. ವೈಭವಪುರ ಸಂಸ್ಥಾನದ ರಕ್ಷಣೆಯ ಭಾರದ ಮೂಲಕ ಅವರು ಅವಳ ವಿರಹವನ್ನು ಹೇಗಾದರೂ ಸಹಿಸಿದ್ದರು. ಆದರೆ ವೈಭವಪುರವು ಸುರಕ್ಷಿತವಿದೆಂದು ದಿನ ದಿನಕ್ಕೆ ಸ್ಪಷ್ಟವಾಗತೊಡಗಲು ಪದ್ಮಜೆಯ ವಿರಹವು ಅವರಿಗೆ ಅಸಹ್ಯವೆನಿಸತೊಡಗಿತು. ಅವಳನ್ನು ಹುಡುಕಲೇಬೇಕು. ಬೆನ್ನಿಗೆ ಬಿದ್ದವರನ್ನು ರಕ್ಷಿಸಲೇಬೇಕು. ಪಾರಿವಾಳವನ್ನು ರಕ್ಷಿಸಲು ಕೂಡ ಶಿಬಿ ನರಪತಿಯು ತನ್ನ ಮಾಂಸವನ್ನು ಕೊಡಲಿಲ್ಲವೆ? ಪದ್ಮಜೆ ಇಲ್ಲದ ವೈಭವಪುರ ಇದ್ದರೇನು ಇಲ್ಲದಿದ್ದರೇನು ಎಂಬೀ ವಿಚಾರಗಳು ಅವರ ತಲೆಯಲ್ಲಿ ತಾಂಡವವನ್ನು ಪ್ರಾರಂಭಿಸಿದವು. ಪದ್ಮಜೆಯನ್ನು ಹುಡುಕಬೇಕೆಂದು ಅವರು ತಮ್ಮ ಪೋಲೀಸ ಖಾತೆಗೂ ದಿವಾಣರಿಗೂ ಆಜ್ಞೆ ಇತ್ತರು. ಆದರೆ ಅದರಿಂದ ಉಪಯೋಗವಾಗದ್ದನ್ನು ಕಂಡು ಕೊನೆಗೆ ಅವರು ದಿವಾಣರಿಗೆ ಮನವಿಯನ್ನು ಕೊಟ್ಟರು:- ಎಂಟು ದಿವಸಗಳಲ್ಲಿ ಪದ್ಮಜೆಯನ್ನು ಹುಡುಕಬೇಕು ಇಲ್ಲವೆ ಮನೆಯ ದಾರಿ ಹಿಡಿಯಬೇಕು.

ಮನವಿ ದೊರೆತಬಳಿಕ ದಿವಾಣಸಾಹೇಬರು ಒಮ್ಮನಸ್ಸಿನಿಂದ ಪದ್ಮಜೆಯ ಶೋಧವನ್ನು ಪ್ರಾರಂಭಿಸಿದರು. ಅವಳ ಫೋಟೋ ಹತ್ತರವಿಲ್ಲದ್ದರಿಂದ ವೃತ್ತಪತ್ರಗಳಲ್ಲಿ ಜಾಹೀರಾತು ಹಾಕುವದಾಗಲಿಲ್ಲ. ಬ್ರಿ. ಪೋಲೀಸರ ಮುಖಾಂತರ ಅವಳನ್ನು ಶೋಧಿಸುವದು ಇನ್ನೂ ಗಂಡಾಂತರದ ಕೆಲಸವಾಗಿದ್ದಿತು.

ರಾ. ಸಾ. ಇಬ್ಬನ್ನಿಯವರು ಸಾತಾರೆಗೆ ತಮ್ಮ ಅಕ್ಕನ ಮೊಮ್ಮಗಳಿಗೆ ಒಂದು ಪತ್ರವನ್ನು ಬರೆದು ಪದ್ಮಜೆಯ ಬಗ್ಗೆ ವಿಚಾರಿಸಿದರು. ಆದರೆ ಅಲ್ಲಿಂದ ದೊರೆತ ವಿವರಗಳಿಂದ ಪದ್ಮಜೆ ಸಾತಾರೆಯಿಂದ ಹೇಗೆ ಎಲ್ಲಿಯೊ ಅದೃಶ್ಯಳಾದಳೆಂಬುದಿಷ್ಟೇ ಗೊತ್ತಾಯಿತು. ಅವಳ ಶೋಧವಾಗುವಂತೆ ಏನೂ ದೊರೆಯ

ಲಿಲ್ಲ. ಅವಳು ಎಲ್ಲಿ ಸಿಕ್ಕಬಹುದು ಯಾರ ಹತ್ತಿರ ಸಿಗಬಹುದು ಎಂಬೀ ಪ್ರಶ್ನೆಗಳಿಗೆ ಉತ್ತರ ದೊರೆಯಲಿಲ್ಲ.

ಪದ್ಮಜಾ ಯಾವ ಗಾಡಿಯಿಂದ ಸಾತಾರೆಗೆ ಹೊರಟಳೊ ಅದೇ ಗಾಡಿಯಿಂದ ಅವಳ ಡಬ್ಬಿಯಲ್ಲಿಯೇ ನಾಲ್ವರು ದಷ್ಟಪುಷ್ಟ ಹೆಂಗಸರು ವೇಷಭೂಷಿತರಾಗಿ ಎಲ್ಲಿಯೊ ಹೊರಟಿದ್ದರು. ಎರಡನೇ ವರ್ಗದ ಡಬ್ಬಿಯಾದ್ದರಿಂದ ಅವಳ ಹೊರತು ಅಲ್ಲಿ ಮೊದಲು ಯಾರೂ ಇರಲಿಲ್ಲ. ಗಾಡಿಯು ಬಿಡುವ ಆಯತ್ತ ವೇಳೆಗೆ ಆ ನಾಲ್ವರು ಸ್ತ್ರೀಯರು ಬಂದುಹತ್ತಿದರು. ಇಷ್ಟು ದಷ್ಟಪುಷ್ಟ ಸ್ತ್ರೀಯರು ಇದೇ ನಾಡಿನವರೊ ಅಥವಾ ಗಡಿ ಪ್ರಾಂತದಿಂದ ಬಂದವರೊ ಎಂದು ಪದ್ಮಜೆಗೆ ಸಂಶಯುಹುಟ್ಟಿತ್ತು. ಆದರೆ ಗಾಡಿಯು ಪ್ರಾರಂಭವಾದಕೂಡಲೇ ಸಂಶಯವುಹೋಗಿ ಅವಳು ಭಯುಗೊಂಡಳು. ಯಾಕಂದರೆ ಆ ನಾಲ್ವರು ಸ್ತ್ರೀಯರು ಧೂಮ್ರಪಾನ ಪ್ರಾರಂಭಿಸಿದರು. ಇವರು ಹೆಂಗಸರಲ್ಲ, ಗಂಡಸರೇ ಇರಬೇಕೆಂದು ಅವಳಿಗೆ ಸ್ಪಷ್ಟವಾಯಿತು. ಏನೋ ಮೋಸವಿರಬೇಕೆಂದು ಅವಳಿಗೆ ಒಮ್ಮೆಲೇ ಹೊಳೆಯಿತು. ಆದರೆ ಮಾಡುವದೇನು ಗಂಡಾಂತರ ಸರಪಳಿಯನ್ನು ಎಳೆಯಲು ಎದ್ದರೆ ಗಂಡಾಂತರವನ್ನೆ ಸ್ವಾಗತಿಸಿದಂತೆ. ಮುಷ್ಟಿಯಲ್ಲಿ ಜೀವವನ್ನೂ ಹೃದಯದಲ್ಲಿ ಧೈರ್ಯವನ್ನೂ ಹಿಡಿದುಕೊಂಡು ಅವಳು ಹಾಗೆಯೇ ಕುಳಿತಳು. ಯಾವ ದುಘಟನೆಯು ಸಂಭವಿಸದೇ ಗಾಡಿಯು ಮಿರ್ಜಿಯ ಸ್ಟೇಶನ್ನಿಗೆ ಬಂದಿತು. ಅಲ್ಲಿ ಆ ನಾಲ್ವರೂ ಇಳಿದರು. ಕೂಡಲೇ ಪದ್ಮಜೆಯು ಗಾರ್ಡನ ಕಡೆಗೆ ಹೋಗಿ ಅವನಿಗೆ ಆ ಸ್ತ್ರೀಯರ ವಿಷಯವನ್ನು ಅರುಹಿದಳು. ಅವನು ತುಸು ನಕ್ಕು ಅವರು ಗಂಡಸರೇನೊ ನಿಜ ಆದರೆ ಅಂಜುವ ಕಾರಣವಿಲ್ಲ, ಎಂದನು. ಧಾರವಾಡದ ಗುಪ್ತ ಪೋಲೀಸರವರು ಸಾತಾರೆಗೆ ಹೊರಟಿದ್ದಾರೆಂದು ತಿಳಿಸಿ ಹೇಳಿದನು.

ಸಾತಾರೆಯಲ್ಲಿ ನಡೆದ ಹಿಂಸಾತ್ಮಕ ಸ್ವಾತಂತ್ರ್ಯದ ಹೋರಾಟದ ಬಗ್ಗೆ ಅವಳು ಎಷ್ಟೋ ಸುದ್ದಿಗಳನ್ನು ಓದಿದ್ದಳು, ಅದಕ್ಕೂ ಹೆಚ್ಚು ಸಂಗತಿಗಳನ್ನು ಕೇಳಿದ್ದಳು. ಗುಪ್ತ ಪೋಲೀಸರು ಅಲ್ಲಿ ಏನು ಮಾಡುವರೆಂಬ ಬಗ್ಗೆ ಅವಳಿಗೆ ಕುತೂಹಲವೆನಿಸತೊಡಗಿತು. ಗುಪ್ತ ಪೋಲೀಸರು ತನ್ನ ವಿಷಯದಲ್ಲಿ ಏನಾದರು ವರದಿಮಾಡಿ ಮತ್ತೆ ಎಲ್ಲಿ ವೈಭವಪೂರ್ಣ ಛತ್ರಪತಿಗಳನ್ನು ಗಂಡಾಂತರ

ಕ್ಕೀಡುಮಾಡುವರೊ ಎಂದು ಅವಳು ಅಂಜಿದಳು. ಏನೂ ತಿಳಿಯದೆ ಹಾಸಿಗೆಯನ್ನು ಉರುಳಿಸಿ ಅವಳು ಮುಸುಕುಹಾಕಿ ಮಲಗಿಕೊಂಡಳು.

ಅವಳಿಗೆ ನಿದ್ರೆ ಹತ್ತಿರಬಹುದೆಂಬ ತಿಳಿವಳಿಕೆಯಿಂದಾಗಲಿ, ಅಥವಾ ಪೋಲೀಸರ ಭಾಷೆ ಬೇರೆ, ಅದು ಯಾರಿಗೂ ತಿಳಿಯುವದಿಲ್ಲವೆಂಬ ಭಾವನೆಯಿಂದಾಗಲಿ ಅಥವಾ ಯಾಃಕಶ್ಚಿತ್ ಶ್ರೀಮಂತ ಯುವತಿಗೆ ಅದು ತಿಳಿದರೂ ಅಷ್ಟೇ ತಿಳಿಯದಿದ್ದರೂ ಅಷ್ಟೇ ಎಂಬ ಭರವಸೆಯಿಂದಾಗಲಿ ಆ ನಾಲ್ವರು 'ಹೆಂಗಸರು' ತಮ್ಮ ತಮ್ಮೊಳಗೆ ಕನ್ನಡ ಮರಾಠಿ ಇಂಗ್ಲೀಷ ಮಿಶ್ರಿತ ಉರ್ದು ಭಾಷೆಯಲ್ಲಿ ಸಂಭಾಷಣೆ ಪ್ರಾರಂಭಿಸಿದರು. ಅವರ ಸಂಭಾಷಣೆಯಮೇಲಿಂದ ಅವರು ಸಾತಾರೆಯ ಹತ್ತರಿದ್ದ ಒಂದು ಹಳ್ಳಿಗೆ ಹೋಗಲಿರುವರೆಂದೂ ಮತ್ತು ಅಲ್ಲಿ ತಾತ್ಯಾ ಜಾಧವ ಎಂಬವನನ್ನು ಹಿಡಿಯಲೆತ್ನಿಸಿರುವರೆಂದು ಅವಳಿಗೆ ತಿಳಿಯಿತು. ಆ ಹಳ್ಳಿಗೆ ಹೋಗುವ ಮೊದಲು ಒಂದೆರಡು ದಿವಸಗಳನ್ನು ಅವರು ಸಾತಾರೆಯಿಂದ ೧೦–೧೨ ಮೈಲುಗಳ ಮೇಲಿದ್ದ ಸಾತಾರಾ ರೋಡಿನ ಸ್ಟೇಶನ್ನಿನಲ್ಲಿ ಕಳೆಯುವರೆಂದು ಗೊತ್ತಾಯಿತು.

ಸಾತಾರಾ ರೋಡ ಸ್ಟೇಶನ್ನಿಗೆ ಗಾಡಿ ಬಂದು ನಿಂತಾಗ ಮುಚ್ಚಂಜೆಯಾಗಿತ್ತು. ಪದ್ಮಜೆಯನ್ನು ಸ್ವಾಗತಿಸಲು ರಾ. ಸಾ. ಇಬ್ಬನ್ನಿಯವರ ಅಕ್ಕನ ಮೊಮ್ಮಗಳಾದ ಸುಲೋಚನೆ, ಮತ್ತು ಅವಳ ಪತಿ ವೈದ್ಯರತ್ನ ವಾಳಿಂಬೆ ಇಬ್ಬರೂ ಸ್ಟೇಶನ್ನಿಗೆ ಬಂದಿದ್ದರು. ಸುಲೋಚನಾ ಪದವೀಧರಳು; ಬಿ. ಎ. ಆಗಿದ್ದಳು. ಸಾತಾರೆಯಲ್ಲಿಯ ಇಂಗ್ಲೀಷ ಶಾಲೆಯಲ್ಲಿ ಶಿಕ್ಷಕಿಯಾಗಿದ್ದಳು. ವೈದ್ಯರತ್ನರ ಹಾಗೂ ಅವಳ ಪರಿಚಯವಾಗಿ, ಪರಿಚಯವು ಪ್ರೇಮ ರೂಪವನ್ನು ಹೊಂದಿ ಕಡೆಗೆ ಅವರು ವಿವಾಹಬದ್ಧರಾಗಿದ್ದರು. ಬಿ. ಎ. ಆದವಳು ಮ್ಯಾಟ್ರಿಕ್ ಕೂಡ ಆಗಲು ಕಷ್ಟಪಡಿಸಿದವನನ್ನು ಹೇಗಾದಳೆಂಬುದು ಸಾತಾರೆಯ ನಾಗರಿಕರಿಗೆ ಒಂದು ಬಿಡಲಾರದ ಸಮಸ್ಯೆಯೂ, ತೀರಲಾರದ ಹರಟೆಯ ವಿಷಯವೂ ಆಗಿದ್ದಿತು. ವೈದ್ಯರತ್ನರು ಶಿಕ್ಷಣ ಕ್ಷೇತ್ರದಲ್ಲಿ ಮ್ಯಾಟ್ರಿಕ್ ದಾಟದಿದ್ದರೂ ವೈದ್ಯಕೀಯ ಕ್ಷೇತ್ರಗಳಲ್ಲಿ ಕೀರ್ತಿಯನ್ನು ಗಳಿಸಿದ್ದರು. ಸಾತಾರೆಯ ಗುಡ್ಡಗಾಡ ಜಿಲ್ಲೆಯಲ್ಲೆಲ್ಲ ಅವರ ಕೀರ್ತಿಯು ಹಬ್ಬಿತ್ತು. ಅತ್ತ ರತ್ನಾಗಿರಿ ಜಿಲ್ಲೆಯಲ್ಲೂ ಇತ್ತ ಸಾಂಗ್ಲಿ-ಕೊಲ್ಹಾಪೂರ ಸಂಸ್ಥಾನಗಳಲ್ಲೂ ಅದು ವ್ಯಾಪಿಸತೊಡಗಿತ್ತು.

ಪದ್ಮಜಾ ಅಂದು ರಾತ್ರಿ ಗಾಡಿಯಲ್ಲಿಯ ವೃತ್ತಾಂತವನ್ನು ವಾಳಿಂಬೆ ದಂಪತಿಗೆ ತಿಳಿಸಿದಳು. ಕುತೂಹಲದ ವಿಷಯವೆಂದು ಮಾತ್ರ ಅವಳು ಅವರಿಗೆ ಅದನ್ನು ಅರುಹಿದಳು. ಆದರೆ ಅದು ಅವರಿಬ್ಬರಿಗೆ ಅಷ್ಟೊಂದು ಆಸ್ಥೆಯ ವಿಷಯವಾಗಬಹುದೆಂದು ಅವಳಿಗೆ ಅನಿಸಿರಲಿಲ್ಲ. ವೃತ್ತಾಂತವನ್ನು ಕೇಳಿ ವೈದ್ಯರತ್ನರು ಚಟ್ಟನೆ ಎದ್ದು ಹೊರಗೆ ಹೋದರು. ಸುಲೋಚನೆಯು ಅವಳಿಗೆ ಎಲ್ಲವನ್ನೂ ತಿಳಿಹೇಳಿದಳು. ಸಾತಾರೆಯಲ್ಲಿ ನಡೆದುದಕ್ಕೂ, ವಾಳಿಂಬೆ ದಂಪತಿಗಳಿಗೂ, ಪ್ರಾಯಶಃ ಸಾತಾರೆ ಜಿಲ್ಲೆಯ ಎಲ್ಲ ದೇಶ ಪ್ರೇಮಿಗಳಿಗೂ ಸಂಬಂಧವಿಲ್ಲದಿಲ್ಲ. ನೀನು ಬಾರದಿದ್ದರೆ ತಾತ್ಯಾ ಜಾಧವನ ಸುಳಿವು ಆವರಿಗೆಹತ್ತಬಹುದಾಗಿತ್ತು. ಸದ್ಯಕ್ಕೆ ತಾತ್ಯಾ ಸಾತಾರೆಯಲ್ಲಿಯೇ ಇದ್ದಾನೆ. ಅವರು ಅವನಿಗೆ ಎಚ್ಚರಿಕೆ ಕೊಡಲು ಅವರು ಹೋದರೆಂದು ಅವಳು ಹೇಳಿದಳು.

ಬೆಳಗಾಗುವದರೊಳಗಾಗಿ ಮಹಾನ್ ಸ್ಥಿತ್ಯಂತರವಾಗಿದ್ದಿತು ತಾತ್ಯಾ ಜಾಧವನ ಸಂಗಡದವರು ಸ್ಟೇಶನ್ನನ್ನು ಮುತ್ತಿ ಅಲ್ಲಿಯ 'ಹೆಂಗಸರ' ಮೇಲೆ ಹಲ್ಲೆಮಾಡಿ ಅವರನ್ನು ಹೊಡೆದೋಡಿಸಿದ್ದರು. ಸಕಾಲಕ್ಕೆ ಗಾಡಿ ಬಂದುದರಿಂದ ಅವರು ಪಾರಾದರು. ವಾಳಿಂಬೆ ದಂಪತಿಗೆ ಪದ್ಮಜೆಯ ಸುರಕ್ಷಿತತೆಯ ಬಗ್ಗೆ ವಿವಂಚನೆಯುಂಟಾಯಿತು. ಅವಳ ವಿಷಯ ಶೋಧ ನಡೆದೆ ನಡೆಯುವದು ! ಅವಳನ್ನೂ ತಮ್ಮನ್ನೂ ಬಂಧಿಸುವರು ಎಂದು ವೈದ್ಯರತ್ನರು ಲೆಕ್ಕಹಾಕಿದರು. ಹಿಂದುಸ್ಥಾನದಲ್ಲಿ ಎಲ್ಲೆಡೆಗೆ ಪ್ರಕ್ಷುಬ್ಧ ವಾತಾವರಣವು ನಿರ್ಮಾಣವಾಗಿದ್ದಿತು. ಸಾತಾರೆಯಲ್ಲಿ ಅದಕ್ಕೂ ಹೆಚ್ಚು. ಅಲ್ಲಿಯ ಸ್ವಾತಂತ್ರ್ಯ ಹೋರಾಟವು ಹಿಂಸೆ ಅಹಿಂಸೆಯ ಬೇಧಗಳನ್ನರಿಯದು. ಸರಕಾರವು ಕೂಡ ಅದನ್ನು ಹತ್ತಿಕ್ಕಲು ಉಗ್ರಕ್ರಮಗಳನ್ನು ಕೈಕೊಂಡಿತ್ತು. ಉಭಯ ಪಕ್ಷದವರಿಗೂ ಅಡ್ಡ ಬಂದವರು ವೈರಿಗಳು ಅವರನ್ನು ಪಾತಾಳಕ್ಕೆ ಕಾಣಿಸಬೇಕೆಂಬುದೊಂದೆ ವಿಚಾರ. ಇಂಥ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಸಾತಾರೆಯಲ್ಲಿ ಹೊರಗಿನವರು ಬಂದರೆ ಅವರನ್ನು ಸಂಶಯ ದೃಷ್ಟಿಯಿಂದಲೆ ಕಾಣುತ್ತಿರುವಾಗ ಗುಪ್ತ ಪೋಲೀಸರ ಅಪಯಶಕ್ಕೆ ಕಾರಣಳಾದವಳಂತೂ ಸೆರೆಮನೆಯನ್ನು ಕಾಣುವದು ನಿಶ್ಚಿತವೇ ಎಂದು ಅವರ ಚಿಕಿತ್ಸೆ.

ವೈಭವಪುರದಂತೆ ಸಾತಾರೆಯೂ ಪದ್ಮಜೆಗೆ ಆಶ್ರಯಕೊಡಲಿಲ್ಲ. ಇನ್ನು ಎಲ್ಲಿ ಹೋಗುವದು ? ಮುಂಬಯಿಗೆಹೋಗಿ ಅಲ್ಲಿ ತನ್ನ ಗೆಳತಿಯರಲ್ಲೆಲ್ಲಾ ದರೂ ಇರಬೇಕೆಂದು ಅವಳು ನಿರ್ಧರಿಸಿದಳು. ಬೇರೆ ಮಾರ್ಗ ಅವಳಿಗೆ ಕಾಣ ಲಿಲ್ಲ. ವಾಳಿಂಬೆ ದಂಪತಿಗಳಿಗೆ ತಿಳಿಸದೆ ಅವಳು ತಾನು ಸಾತಾರೆಗೆ ಬಂದ ಮಾರನೆ ದಿನವೇ ಮುಂಬಯಿ ಗಾಡಿಯನ್ನು ಹತ್ತಿದಳು. ಮೊದಲು ಕಂಡ ಗೆಳತಿಯ ಮನೆಯಲ್ಲಿ ಇರುವದೆಂದು ಅವಳ ಸಿಧ್ಧಾಂತ.

ಪದ್ಮಜೆಯು ಮುಂಬಯಿಗೆ ಹೋಗುವದನ್ನಾಗಲಿ ಅಥವಾ ತನ್ನ ವಿಳಾ ಸನನ್ನಾಗಲಿ ತಿಳಿಸಿದ್ದರೆ ರಾ. ಸಾ. ಇಬ್ಬನ್ನಿಯವರಿಗೆ ದಿವಾಣ ಪದವಿಯು ಇನ್ನೆರಡು ಮೂರು ವರ್ಷಗಳ ವರೆಗೆ ದಕ್ಕಬಹುದಾಗಿತ್ತು. ಆದರೆ ಹಾಗೆ ಆಗಲಿಲ್ಲ. ಕೊಟ್ಟ ಎಂಟು ದಿನಗಳೆಲ್ಲ ಒಂದರ ಹಿಂದೊಂದು ಉರುಳಿಹೋ ದವು. ಒಂಬತ್ತನೆಯ ದಿನ ಅವರು ಶತ್ರುಪತಿಗಳ ಕೈಯಲ್ಲಿ ರಾಜೀನಾಮೆ ಯನ್ನಿತ್ತು ಶಾಂತಿನಿಕೇತನದಿಂದ ಕಾಲ್ತೆಗೆದರು.

ಶತ್ರುಪತಿಗಳ ಸಂತಾಪನೆ ಹೆಚ್ಚಾಯಿತು. ಅವರಿಗೆ ರಾಜ್ಯದಲ್ಲಿ, ಜೀವ ನದಲ್ಲಿ, ಯಾತರಲ್ಲಿಯೂ ರುಚಿ ಎನಿಸದಂತಾಯಿತು. ಪದ್ಮಜಾ ಬಳಿಯಲ್ಲಿರ ಬೇಕು. ಅವಳನ್ನು ರಕ್ಷಿಸುವದು ತಮ್ಮ ಹೊಣೆ. ಪದ್ಮಜಾ ಇಲ್ಲದ ರಾಜ್ಯ ವನ್ನು ತೆಗೆದುಕೊಂಡೇನು ಮಾಡುವದು ಎಂಬೀ ವಿಚಾರಗಳು ಅವರನ್ನು ಅನುದಿನ ಕ್ಷಣ ಕ್ಷಣಕ್ಕೆ ಕಾಡತೊಡಗಿದವು. ಬ್ರಿ. ಗುಪ್ತ ಪೋಲೀಸರಿಗೆ ಅವ ಳನ್ನು ಶೋಧಿಸಲು ಬಿನ್ನವಿಸಬೇಕೆಂದು ಒಂದೆರಡು ಸಾರೆ ಅವರಿಗೆ ಅನಿಸಿತು. ಆದರೆ ಹಾಗೆ ಮಾಡುವದು ಎಷ್ಟರ ಮಟ್ಟಿಗೆ ಒಳಿತಾದೀತು ! ಅಲ್ಲ. ಈ ಕೆಲ ಸವನ್ನು ತಾವೇ ಖಾಸಗಿ ರೀತಿಯಿಂದ ಮಾಡಬೇಕು. ತಮ್ಮ ದಿವಾಣರಿಗೆ ಈ ಕೆಲಸವನ್ನು ಹೇಳಬೇಕು. ಇಲ್ಲವಾದರೆ ಪದ್ಮಜಾ ಸಿಗುವ ಮಾತಂತೂ ಒತ್ತ ಟ್ಟಿಗಿರಲಿ, ವೈಭವಪುರ ಸಂಸ್ಥಾನದ ಮೇಲೂ ಗದೆ ಬರುವದು ಎಂದು ಅವರು ಹಿಂಜರಿದರು.

ರಾ. ಸಾ. ಇಬ್ಬನ್ನಿಯವರ ತರುವಾಯ ಆದೆಷ್ಟೆ ದಿವಾಣರು ಬಂದರು, ರಾಜೀನಾಮೆ ಇತ್ತು ಹೋದರು. ಪದ್ಮಜೆಯ ಶೋಧವಾಗಲಿಲ್ಲ.

# ಆಶ್ವಾಸನ

ಪಟ್ಟಣದ ಯಾಂತ್ರಿಕ ಜೀವನವನ್ನು ಸಾಗಿಸಲಿಚ್ಛಿಸುವ ಎಮ್ಮೆಗಳು ಮುಂಬಯಿಯ ಉಪನಗರವಾದ ಮಾಲಾಡದಲ್ಲಿ ಜನ್ಮವನ್ನು ಇಲ್ಲವೆ ವಾಸವನ್ನು ಬೇಡಿ ಬರಬೇಕು.

ಮುಂಬಯಿಯಂಥ ಪಟ್ಟಣದಲ್ಲಿ ಮನುಷ್ಯನು ಮುಂಜಾವಿನಿಂದ ಸಂಜೆಯವರೆಗೆ ಯಂತ್ರಗಳ ಸಹಾಯದಿಂದ ಯಾಂತ್ರಿಕ ಜೀವನವನ್ನು ಸಾಗಿಸುವರು. ನೀರು ಆಹಾರ ಬೆಳಕು ಎಲ್ಲವೂ ಯಂತ್ರಗಳ ಸಹಾಯದಿಂದಲೇ. ವ್ಯಾಯಾಮಕ್ಕೆ ಕೂಡ ಯಂತ್ರದ ಸಹಾಯ. ಅಲ್ಲದೆ ಮನಸ್ಸಿರಲಿ, ಇಲ್ಲದಿರಲಿ, ಯಂತ್ರದಂತೆ ನಿಶ್ಚಿತ ವೇಳಗೆ ನಿಶ್ಚಿತ ಕಾರ್ಯಮಾಡುವದು. ಹೀಗಾಗಿ ಅವನು ಕೂಡ ಒಂದು ದೊಡ್ಡ ಯಂತ್ರದ ಚಕ್ರದಂತಾಗಿ-ನಾಗಲಿ, ಅಥವಾ ಮೊಳೆಯಂತಾಗಿ ಆಗಲಿ ಮುಂಜಾನೆಯಿಂದ ಸಂಜೆಯವರೆಗೆ ಅಥವಾ ಸಂಜೆಯಿಂದ ಮುಂಜಾವಿನವರೆಗೆ ಜೀವನವನ್ನು ಸಾಗಿಸುವನು, ದುಡಿಯುವನು, ಸವೆಯುವನು. ಸೂರ್ಯೋದಯವಾಗುತ್ತದೆ, ಸೂರ್ಯಾಸ್ತವಾಗುತ್ತದೆ. ಋತುಗಳು ಬದಲಾಗುತ್ತದೆ. ಆದರೆ 'ಯಂತ್ರ'ಕ್ಕೆ ಇವೆಲ್ಲವುಗಳ ಪರಿವೆ ಇಲ್ಲ.

ಪ್ರಾಣಿಶಾಸ್ತ್ರಜ್ಞರಾದ ತಂದೆಯಾದ ಶೇಠ ಗಗನಲಾಲ ವಿಹಾರಿಲಾಲರ ಮಾಲಾಡದಲ್ಲಿಯ ಗಾಂಧಿ ದುಗ್ಧಾಲಯದಲ್ಲಿಯ ೫೦೦—೬೦೦ ಎಮ್ಮೆಗಳಿಗೂ ಸುಮಾರು ೨೦ ಮೈಲು ಅಂತರದ ಮೇಲಿದ್ದ ಮುಂಬೈ ನಗರದ ಯಾಂತ್ರಿಕ ಜೀವನದ ಅನುಭವ ಬಂದಿರಬಹುದು. ಮುಂಜಾನೆ ಮೂರು ಗಂಟೆಗೆ ಏಳುವದು ಧಭಧಭ ಎಂದು ತಡಿಸಲವಂತೆ ಬೀಳುವ ನಳದ ಕೆಳಗೆ ಐದು ನಿಮಿಷ ನಿಲ್ಲುವದು ಅಷ್ಟರಲ್ಲಿ ಬದಿಗಿದ್ದ ಒಂದು ಇಲೆಕ್ಟ್ರಿಕ್ ಯಂತ್ರವು ಹದ್ದಿನಂತೆ ಮೈಮೇಲೆ ಎರಗಿ ಬಾಲದಿಂದ ಮೂಗಿನ ಹೊಳ್ಳೆಯವರೆಗೆ ಘಸಘಸ ತಿಕ್ಕುವದು, ಇದನ್ನು ಸಹಿಸುದದು, ಯಂತ್ರದ ಸಹಾಯದಿಂದ ಕಲಿಸಲ್ಪಟ್ಟ ಗಿರಣಿಯ ಹಿಂಡಿ ಹತ್ತಿಕಾಳಿನ ಒಂದು ಬುಟ್ಟಿಯನ್ನು ನೀರು ಕಡಿಮೆ, ನೀರು ಹೆಚ್ಚು ಎಂಬ ತಕರಾರಿಲ್ಲದೆ ತಿನ್ನುವದು, ಆಮೇಲೆ ಮತ್ತೊಂದು ಇಲೆಕ್ಟ್ರಿಕ್ ಯಂತ್ರದ ಮೋರೆಗೆ ಮೊಲೆ ಹಚ್ಚಿಕೊಂಡು ನಿಲ್ಲುವದು. ಇದು ಸೂರ್ಯೋ-

ದಯದ ಮೊದಲಿನ ಕಾರ್ಯಕ್ರಮವಾಯಿತು. ಮುಂದೆ ಬೆಳಗಾದ ಸಂದರ ಕನ್ನಡ ಶಾಲೆಯ ಹುಡುಗರನ್ನು ಒಂದಕ್ಕೆ ಬಿಟ್ಟಂತೆ ತಿರುಗಾಡಲು ಬಿಡುವರು. ಸಾಲು ಹಿಡಿದು, ಒಂದರ ಹಿಂದೆ ಇನ್ನೊಂದಾಗಿ ರಸ್ತೆಯ ಎಡ ಭಾಗದಿಂದ ೧ ಮೈಲು ಹೆಜ್ಜೆ ಹಾಕುವದು, ಎಂಟು ಗಂಟೆಗೆ ಹುಲ್ಲು, ಒಂಬತ್ತಕ್ಕೆ ಸೈಂಧವಲವಣವನ್ನು ನೆಕ್ಕುವದು, ಹತ್ತಕ್ಕೆ ನೀರು, ಇಷ್ಟಾದಮೇಲೆ ಉಶ್ಯ ಎಂದು ಒಂದು ಗಳಿಗೆ ಮೆಲಕಾಡಿಸಬೇಕಂದರೆ ಪಂಪಿನಿಂದ ಮೈಮೇಲೆ ತಂಬಾಕಿನ ನೀರು ಉಗ್ಗುವದು ಪ್ರಾರಂಭ. ಈ ಕಾಟ ಮುಗಿಯಿತೆನ್ನುವಷ್ಟರಲ್ಲಿ ಪಶು ವೈದ್ಯನಿಂದ ತಪಾಸಣೆ ಸುರು ಆಗುವದು. ಕಾಯಿಲೆ ಆಗಲಿ ಬಿಡಲಿ ಎಲ್ಲ ದನಗಳ ತಪಾಸಣೆ ನಡೆಯುವದು. ಹಲ್ಲು ಮುರಿಯುವಂತೆ ಬಾಯಲ್ಲಿ ಇಕ್ಕಳವನ್ನು ತುರುಕಿ ಗಂಟಲದಲ್ಲಿ ಹಣಿಕಿಕ್ಕುವದೇನು ! ಮೂಗಿನ ಹೊರಳಿಗಳಲ್ಲಿ ಬೊಟ್ಟುಗಳನ್ನು ಹಾಕಿ ನೋಡುವದೇನು ! ಅಯ್ಯೋ ಥರ್ಮಾಮಿಟರಿನ ತಪಾಸಣೆ ! ಪಶು ವೈದ್ಯನ ಕಾಟ ಮುಗಿಯಿತೆನ್ನುವಷ್ಟರಲ್ಲಿ ಹಾಲು ಹೆಚ್ಚಾಗಲೆಂದು ಒಂದು ತರ ಹದ ತೊಪ್ಪಲ ತಿನ್ನಿಸುವರು. ಆಮೇಲೆ ತೌಡು ಹತ್ತಿಕಾಳ – ಅನೇಕ ಕ್ಷಾರಗಳಿಂದ ಹದಗೆಟ್ಟುದುದು. ಮತ್ತೆ ಹಿಂಡುವ ಯಂತ್ರಕ್ಕೆ ಗುರಿಯಾಗುವದು; ಎಷ್ಟು ಹಾಲು ಹಿಂಡಿದರೂ ಕರಳಿನ ಕರುಗಳಿಗೆ ಗೊಟ್ಟದ ಹಾಲು ತಪ್ಪಿದ್ದಲ್ಲ ! ಯಂತ್ರಗಳ ರಾಜ್ಯದಲ್ಲಿಯ ಯಂತ್ರಗಳು.

ಅಲ್ಲಿಯ ಮೂಕ ಎಮ್ಮೆಗಳಿಗೆ ಮೇಲೆ ವರ್ಣಿಸಿದಂಥ ಭಾವನೆಗಳ ಉಂಟಾಗುತ್ತಿದ್ದವೆಂದು ಭಾವಿಸಬಹುದಾದರೂ ಅವುಗಳ ಮೇಲ್ವಿಚಾರಕನಾದ ಪದ್ಮನಾಭನಿಗೆ ತಾನು ಯಂತ್ರಗಳ ನಿಯಂತ್ರಿಸುವ 'ಯಂತ್ರ'ವೆಂದು ಯಂತ್ರದಂತೆಯೆ ತನ್ನ ಜೀವನವು ಖುಕ್ಷವೆಂದೂ ಅನಿಸುತ್ತಿರಲಿಲ್ಲ. ಕೃತ ಕೃತ್ಯ ಭಾವನೆಯು ಅವನಲ್ಲಿ ಬೇರೂರಿತ್ತು.

ಸಮುದ್ರದಲ್ಲಿ ಈಸುವದು ಕಠಿಣವಿರಬಹುದು. ಆದರೆ ಸಮುದ್ರದಲ್ಲಿ ಈಸಿ ದಂಡೆಗೆ ಬಂದು ಹತ್ತಿದ ನಂತರ ಮನುಷ್ಯನಿಗೆ ಅದರ ಬಗ್ಗೆ ದ್ವಿಗುಣಿತ ಆನಂದವಾಗುತ್ತದೆ.

ಪದ್ಮನಾಭನಿಗೆ ಸಮುದ್ರದಲ್ಲಿ ಬಿದ್ದು ಅದರೊಳಗಿಂದ ತಾನು ಪಾರಾದೆನೆಂದು ಆನಂದವಾಗುತ್ತಿತ್ತು.

ಮುಂಬಯಿಯಂಥ ಮಹಾಸಾಗರದಲ್ಲಿ ಮತ್ತೆ ನೌಕರಿ ಹುಡುಕುವ ಪರಿಸ್ಥಿತಿಬಂದರೂ ತಾನು ಚಿಕ್ಕ ಪುಟ್ಟ ನೌಕರಿಯಲ್ಲಿ ತೊಡಗದೆ ಉದ್ಯೋಗ ದಂಧೆಯಲ್ಲಿ ಬಿದ್ದೆನೆಂದೂ, ತಾನೊಂದು ಹೊಸ ಕ್ಷೇತ್ರದಲ್ಲಿ ಕಾಲಿಟ್ಟೆನೆಂದೂ, ಅಲ್ಲಿ ವಿಜಯ ಸಂಪಾದಿಸಿದನೆಂದೂ ಅವನಿಗೆ ಅಭಿಮಾನವೆನಿಸತೊಡಗಿತ್ತು. ಅಭಿಮಾನದಿಂದ ಆತ್ಮ ವಿಶ್ವಾಸವೂ ಬೆಳೆದಿತ್ತು.

ಕೇವಲ ಆರು ತಿಂಗಳಗಳಹಿಂದೆ ಅವನ ಸಣ್ಣ ಆಯುಷ್ಯದಲ್ಲಿ ಮತ್ತೊಂದು ಬಿಕ್ಕಟ್ಟಿನ ಪರಿಸ್ಥಿತಿ ಉದ್ಭವಿಸಿತ್ತು. ಅವನು ಯಾವ ಕೆಲಸಕ್ಕಾಗಿ ಮೃದುಳಾಬೆಹನಳ ಕಡೆಗೆ ಬಂದಿದ್ದನೊ ಆ ಕೆಲಸವು ಯಶಸ್ವಿಯಾಗಿಯಾಗಲಿ, ಅಯಶಸ್ವಿಯಾಗಲಿ, ಪೂರ್ಣ ಅಥವಾ ಅಪೂರ್ಣವಾಗಿಯಾಗಲಿ ಮುಗಿದುಹೋಗಿತ್ತು. ಮಹಾತ್ಮಾ ಗಾಂಧೀಯವರು ಸೆರೆಮನೆಯೊಳಗಿಂದಲೆ ಹಿಂದುಸ್ತಾನ ಸರಕಾರದೊಡನೆ ಸುದೀರ್ಘ ಪತ್ರವ್ಯವಹಾರಮಾಡಿ ದೇಶದಾದ್ಯಂತ ನಡೆದ ಹಿಂಸಾತ್ಮಕ ಘಟನೆಗಳಿಗೆ ಬ್ರಿ. ಸರಕಾರವೇ ಕಾರಣವೆಂದು ತೋರಿಸಿಕೊಟ್ಟಿದ್ದರು. ಇದರಿಂದ ಬ್ರಿ. ಸರಕಾರವು ಇಕ್ಕಳದಲ್ಲಿ ಸಿಕ್ಕಿತೇನೊ ನಿಜ, ಆದರೆ ಹೋರಾಟವು ಶಾಂತವಾಗತೊಡಗಿತು. ಹಿಂಸಾತ್ಮಕ ಹೋರಾಟಕ್ಕೆ ತಮ್ಮ ಬೆಂಬಲವಿಲ್ಲೆಂದು ಮಹಾತ್ಮರ ಉತ್ತರದಲ್ಲಿ ಧ್ವನಿ ಇದ್ದಿತು. ಇದಲ್ಲದೆ ಅಸ್ತವ್ಯಸ್ತವಾಗಿ ಅಲ್ಲಷ್ಟು ಇಲ್ಲಷ್ಟು ಅಲ್ಲೊಮ್ಮೆ ಇಲ್ಲೊಮ್ಮೆ ಸಂಭವಿಸುವ ಘಟನೆಗಳನ್ನು ತಡೆಯಲು, ಮಹಾಯುದ್ಧದಲ್ಲಿ ಸಿಲುಕಿದ್ದ ನಿಂತ ಬ್ರಿಟಿಷ್ ಸರಕಾರಕ್ಕೆ ಅಸಾಧ್ಯವಾಗಲಿಲ್ಲ. ಮುಸ್ಲಿಂ ಲೀಗ ಮೊದಲಾದ ಕೆಲ ಪಕ್ಷಗಳ ಬೆಂಬಲವೂ ಸರಕಾರಕ್ಕೆ ದೊರೆತಿತ್ತು. ಪೋಲೀಸರು ಸೈನಿಕರು ಅಧಿಕಾರಿಗಳು ನೌಕರರು ಚಲೆಜಾವ ಅಂದೋಲನಕ್ಕೆ ಪ್ರತ್ಯಕ್ಷ ಸಹಾಯ ನೀಡದೆ ಕೇವಲ ನೈತಿಕ ಬೆಂಬಲ ಮಾತ್ರ ಕೊಟ್ಟಿದ್ದರು. ಹೀಗೆಲ್ಲ ಆಗಿ ಅಂದೋಲನವು ಮುಕ್ತಾಯಗೊಂಡಿತ್ತು. ಅದರಲ್ಲಿ ತೊಡಗಿದ ಸ್ವಾತಂತ್ರ್ಯ ಯೋಧರು ಮತ್ತೆ ಜೀವನದಲ್ಲಿ ದೈನಂದಿನದ ಜೀವನದಲ್ಲಿ ತೊಡಗಬೇಕಾಗಿಬಂತು. ಖಡ್ಗ ಬರ್ಚಿಗಳನ್ನು ಮುರಿದು ನೇಗಿಲ ಸಲಿಕೆ ಗುದ್ದಲಿಗಳನ್ನು ಮಾಡಬೇಕಾಗಿ ಬಂತು.

ಗುಪ್ತ ರೆಡಿಯೋದ ಕೆಲಸವು ಪ್ರೊ.ಅವಧಾನಿಯವರಬಂಧನದಿಂದಇಳಿಮುಖವಾಗಿದ್ದಿತು. ಮತ್ತೆ ಈರ್ವರು ಮೂವರು ಜನ ಸಿಕ್ಕು ಅದರ ಸಾಧನ

ಸಾಮಗ್ರಿಗಳು ಪೋಲೀಸರ ವಶವಾಗಿದ್ದವು. ಅದರ ಕೆಲಸವು ಕೊನೆಗಂಡಿತ್ತು. ಹೋರಾಟದ ಸಾಮರ್ಥ್ಯವು ಕುಗ್ಗಿದ್ದರಿಂದ ನಡೆಯಲಾರದ ಭಿತ್ತಿ ಪತ್ರಗಳು ಅನವಶ್ಯಕವಾದವು. ನಡೆಯಲಾರದ ಮೋಟಾರನ್ನು ಕೇವಲ ನೂಕುತ್ತ ಸಾಗಿದರೆ ಏನಾಗಬಲ್ಲದು ?

ಮೃದುಳಾಬೆಹೆನಳು ತನ್ನ ಸಣ್ಣ ಸೇನೆಯನ್ನು ವಿಸರ್ಜಿಸಲು ಅಣಿಯಾದಳು. ತಾನು ತತ್ವಜ್ಞಾನದ ಪುಸ್ತಕಗಳ ಮೇಲಿನ ಧೂಳಿಯನ್ನು ಹೊಡೆದು ಅವುಗಳನ್ನು ತೆರೆದಳು. ಪದ್ಮನಾಭನಿಗೆ ಉಪಜೀವನದ ಸಾಧನವನ್ನು ಹುಡುಕುವ ಪ್ರಸಂಗವು ಮತ್ತೆ ಬಂದಿತು.

ಮಗಳ ಕಾರ್ಯದಲ್ಲಿ ಬದಲಾವಣೆಯಾದಂತೆ ಶೇಠ ಗಗನಲಾಲ ವಿಹಾರಿಲಾಲರ ವ್ಯಾಪಾರದಲ್ಲಿಯೂ ಬದಲಾವಣೆಯಾಗಬೇಕಾಗಿ ಬಂದಿತು. ಯುದ್ಧ ಪೂರ್ವದ ಕಾಲದಲ್ಲಿ ಅವರು ಬಣ್ಣದ ವ್ಯಾಪಾರವನ್ನು ಮಾಡುತ್ತಿದ್ದರು. ಯುದ್ಧ ಪೂರ್ವದಲ್ಲಿ ಅವರು ತರಿಸಿಟ್ಟ ಜರ್ಮನ್ ಬಣ್ಣಗಳ ಸಂಗ್ರಹಕ್ಕೆ ೮-೧೦ ಪಟ್ಟು ಹೆಚ್ಚು ಬೆಲೆ ಬಂದು ಲಕ್ಷಾಧೀಶರ ಪಟ್ಟಿಯಲ್ಲಿ ಅವರ ಹೆಸರು ಮತ್ತಷ್ಟು ಮೇಲಕ್ಕೆ ಬಂದಿತ್ತು. ಕೋಟ್ಯಾಧೀಶರ ಪಟ್ಟಿಯಲ್ಲೂ ಹಣಿಕಿಕ್ಕತೊಡಗಿತ್ತು. ಕೈಯಲ್ಲಿ ತುಂಬ ಹಣ ಬಂದಿತೇನೋ ನಿಜ ಆದರೆ ಬಣ್ಣದ ವ್ಯಾಪಾರದಲ್ಲಿ ಅವರ ಆಟವು ಸಾಗದಂತಾಯಿತು. ಸ್ವದೇಶಿ ಬಣ್ಣಗಳ ವ್ಯಾಪಾರವು ಬೇರೆಯವರ ಕೈ ಸೇರಿತ್ತು; ವಿದೇಶದ ಬಣ್ಣಗಳ ಆಯಾತವು ಯುದ್ಧದ ಮೂಲಕ ನಿಂತು ಹೋಗಿತ್ತು. ಬೇರೊಂದು ಕ್ಷೇತ್ರವೆಂದೂ ಹಾಗೂ ದೊರೆತ ಹಣವನ್ನೂ ದೊಡ್ಡ ಪ್ರಮಾಣದಮೇಲೆ ಒಂದು ದುಗ್ಧಾಲಯವನ್ನೂ ಪ್ರಾರಂಭಿಸಿದರು. ೫೦೦-೬೦೦ ಎಮ್ಮೆಗಳನ್ನೂ ಕಟ್ಟಿದರು. ದುಗ್ಧಾಲಯದ ಮೇಲ್ವಿಚಾರಣೆಗೆ ವಿಶ್ವಾಸಿಕರಾದಾದರೂ ಅವರಿಗೆ ಬೇಕಾಗಿದ್ದರು. (ಮೃದುಳಾಬೆಹೆನಳು ಗಂಡಸಾಗಿದ್ದರೆ ನೆಟ್ಟಗಾಗುತ್ತಿತ್ತೆಂದು ಅವರು ಮೇಲಿಂದ ಮೇಲೆ ಅನ್ನುತ್ತಿದ್ದರು) ಇದೇ ದುಗ್ಧಾಲಯವನ್ನು ಇನ್ನೂ ಬೆಳೆಸಿ ಹಾಲಿನ ಸತ್ವವನ್ನು ತೆಗೆದು ಹಾರ್ಲಿಕ್ಸ ಗ್ಲಾಕ್ಸೋನಂಥ ಸಣ್ಣ ಹುಡುಗರ ಜೀವನ ಸತ್ವಪೂರ್ಣ ಆಹಾರ ಪದಾರ್ಥಗಳನ್ನು ತಯಾರಿಸಬೇಕೆಂದು ಶೇಠರ ಯೋಜನೆಯಿದ್ದಿತು. ಇತ್ತ ಪದ್ಮನಾಭನಿಗೂ ನೌಕರಿ ಬೇಕಾದಾಗ ಅತ್ತ ಶೇಠರಿಗೆ ಒಬ್ಬ ವಿಶ್ವಾಸಿಕ ನೌಕರ

ಬೇಕಾಗಿದ್ದ. ಅಂತೂ ಪದ್ಮನಾಭನ ಸಮಸ್ಯೆ ಯೋಗಾಯೋಗದಿಂದ ಅನಾಯಾಸವಾಗಿ ಬಗೆಹರಿಯಿತು.

ಹೊಸ ಕ್ಷೇತ್ರದಲ್ಲಿ ಪದ್ಮನಾಭನಿಗೆ ಹೊಸ ಹುರುಪು ಬಂದಿತು. ಶೇಠರ ದುಗ್ಧಾಲಯ ಯೋಜನೆಯು ನಾಲ್ಕಾರು ತಿಂಗಳಲ್ಲಿ ಅತ್ಯಂತ ಯಶಸ್ವಿಯಾಯಿತು. ಮುಂಬಯಿಯ ಜನಸಂಖ್ಯೆಯು ಮಿತಿಮೀರಿ ಬೆಳೆದದ್ದರಿಂದ ಹಾಲಿಗೆ ಬಹಳ ಬೇಡಿಕೆಯಿತ್ತು. ಹಾಲಿನದಷ್ಟೇ ಅಲ್ಲದೆ, ಗೊಬ್ಬರ ಮತ್ತು ಮಣಕಗಳ ಮಾರಾಟವೂ ಭರದಿಂದ ಸಾಗಿತ್ತು. ಶೇಠರ ಆದಾಯವು ಹೆಚ್ಚಿತು. ಅದರಂತೆ ಪದ್ಮನಾಭನ ವೇತನವೂ ಏರಿತು. ಮೊಟ್ಟಮೊದಲನೆ ಸಾರೆ ಅವನು ತನ್ನ ತಂದೆಗೆ ೧ ಸಾವಿರ ರೂಪಾಯಿಗಳನ್ನು ಕಳುಹಿಕೊಟ್ಟನು. ತಾನು ನೌಕರಿ ಮಾಡುತ್ತಿಲ್ಲ ವ್ಯಾಪಾರೋದ್ಯೋಗದಲ್ಲಿ ತರಬೇತಿ ಹೊಂದುತ್ತಿದ್ದೇನೆಂದು ಅವನಿಗೆ ಅನಿಸತೊಡಗಿತ್ತು.

ಮನುಷ್ಯನ ಜೀವನವು ಒಂದು ಜಮಾಖರ್ಚಿನ ಪುಸ್ತಕವಿದ್ದಂತೆ. ಜಮೆ ಇದ್ದಲ್ಲಿ ಖರ್ಚು, ಖರ್ಚು ಇದ್ದಲ್ಲಿ ಜಮೆ ಇರಲೇಬೇಕು. ಉದ್ಯೋಗದ ದೃಷ್ಟಿಯಿಂದ ಅವನಿಗೆ ಪೂರ್ಣ ಸಮಾಧಾನವಾಗಿದ್ದರೂ ಹೃದಯದಲ್ಲಿ ಒಂದು ಬಗೆಯ ತಳಮಳವು ಪ್ರಾರಂಭವಾಗಿತ್ತು.

ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದಂದಿನಿಂದ ಪದ್ಮನಾಭ–ಪದ್ಮಜಾ–ಮೃದುಳಾಬೆಹನರ ಪರಿಚಯವು ಅತ್ಯಂತ ದೃಢವಾಗಿದ್ದಿತು. ಒಂದೇ ತಾಟಿನಲ್ಲಿ ಊಟ ಮಾಡುವಷ್ಟು ಅವರ ಸ್ನೇಹವು ನಿಕಟವಾಗಿದ್ದಿತು. ಆದರೆ ಸ್ವಾತಂತ್ರ್ಯ ಹೋರಾಟವು ಕೊನೆಗಂಡಂತಾಗಿ ಅವರ ಕೈವಶವಾಗಲು ಅವರಲ್ಲಿ ಮೆಲ್ಲಮೆಲ್ಲನೆ ವೈಮನಸ್ಸು ಮೂಡತೊಡಗಿತ್ತು. ಸ್ಥಾನ ಬಲದಿಂದ ಅರ್ಥ ಬಲದಿಂದ ಹಿರಿತನದಿಂದ ಮೃದುಳಾಬೆಹನಳಿಗೆ ಅಗ್ರಸ್ಥಾನವಿದ್ದಯಿತ್ತು. ಆದರೆ ಇತ್ತೀಚೆಗೆ ಅವಳು ಆ ಸ್ಥಾನದಿಂದ ಕೆಳಗಿಳಿದು ಆಗಾಗ್ಗ ಈರ್ಷೆ ಅಸೂಯೆಗಳನ್ನು ತೋರುತ್ತಿದ್ದಳು. ಮೂವರಲ್ಲೂ ಅದರಲ್ಲು ವಿಶೇಷವಾಗಿ ಪದ್ಮಜಾ – ಮೃದುಳಾಬೆಹನರಲ್ಲಿ ಸಣ್ಣ ಪುಟ್ಟ ವಿಷಯಗಳ ಬಗ್ಗ ಆಗಾಗ್ಗ ಘರ್ಷಣೆ ನಡೆಯುತ್ತಿತ್ತು. ಮರು ಕ್ಷಣವೆ ಮೃದುಳಾಬೆಹೆನಳು ಮತ್ತೆ ಹಿರಿತನವನ್ನು ವಹಿಸಿ ಎಲ್ಲವನ್ನು ಸರಿಗೊಳ್ಳುತ್ತಿದ್ದಳು. ಘರ್ಷಣೆಯುಲ್ಲಾದ

ಗಾಯಗಳ ಉಪಚಾರವಾಗುತ್ತಿತ್ತು. ಆದರೆ ಆದ ಗಾಯಗಳು ವಾಯುವಾಗುತ್ತಿರಲಿಲ್ಲ. ಇದರಿಂದ ಮೂವರಿಗೂ ಎಲ್ಲಿಯೊ ಏನೊ ತಪ್ಪುತ್ತಿದೆಂದು ಹಳಹಳಿಯಾಗುತ್ತಿತ್ತು.

ಪದ್ಮಜಾ ಮೃದುಳಾಬೆಹನರ ಸಂಬಂಧವು ಮೊದಲಿನಷ್ಟು ಹಾರ್ದಿಕ ವಿಲ್ಲವೇನೊ ಎಂದು ಪದ್ಮನಾಭನಿಗೆ ಸಂಶಯು ಬರುತ್ತಿತ್ತು. ಆದರೆ ಮೃದುಳಾಬೆಹೆನಳ ಮೋರೆಯನ್ನು ನೋಡಿದೊಡನೆ, ಅವಳ ಮೋರೆಯ ಮೇಲಿನ ಸಾತ್ವಿಕ ತೇಜವನ್ನು ನೋಡಿದೊಡನೆ ಅವನಿಗೆ ತನ್ನ ಸಂಶಯಕ್ಕೆ ಬುಡವಿಲ್ಲವೆಂದು ಅನಿಸುತ್ತಿತ್ತು. ಪ್ರೊ. ಅವಧಾನಿಯುವರು ಬಂಧನಕ್ಕೀಡಾದ ಮೇಲೆ ಅವಳನ್ನೆ ಗುರು ಸ್ಥಾನದಲ್ಲಿರಿಸಿದ್ದನು. ರಾಜಕೀಯ ಹೋರಾಟವನ್ನು ಗೆದೆಯದಿದ್ದರೂ ಜೀವನದ ಹೋರಾಟದಲ್ಲಿ ಸೌರ್ಯವನ್ನು ಪಡೆಯತೊಡಗಿದುದು ಅವಳ ಸಲಹೆ ಸಹಾಯುಗಳಿಂದಲೇ ಎಂದು ಅವನು ತಿಳಿದಿದ್ದನು. ಪದ್ಮಜೆಯಂತೂ ಅವಳನ್ನೆ ಆಶ್ರಮಿಸಿದವಳು. ಅವಳ ಮೇಲೆ ಮೃದುಳಾಳ ಕ್ರೋಧ ಎಂತಹದು ? ತನ್ನ ಹೃದಯವೇ ಹದಿನೆಂಟು ವಿಚಾರಗಳ ತೊಡಕಿನಲ್ಲಿ ಸಿಕ್ಕು ತನ್ನನ್ನು ದುಃಖದ ಕಲ್ಪನಾ ಸಾಗರದಲ್ಲಿ ನೂಕುತ್ತಿತೆಂದು ಅವನು ಸಮಾಧಾನ ಹಚ್ಚಿಕೊಳ್ಳುತ್ತಿದ್ದನು. ಯಾಕಂದರೆ ಮೃದುಳಾ ಅವಳ ಕೃಪೆಯು ವಜ್ರಘಾತವೆಂದು ಅವನಿಗೆ ಅನಿಸುತ್ತಿತ್ತು. (ಅ)ವಳ ಆಶ್ರಯ ತಪ್ಪಿದರೆ ತಾನು ಎಲ್ಲಿಯಾದರೂ ಹೋಗಬಹುದು ಆದರೆ ಪದ್ಮಜಾ ಎಲ್ಲಿ ಹೋಗಬೇಕು ಎಂದು ಅವನು ದಿಗಿಲುಗೊಳ್ಳುತ್ತಿದ್ದನು.

ಒಂದು ದಿವಸ ಅವನಿಗೆ ಹೊಸ ಪ್ರಕಾಶ ಕಂಡಿತು. ತನ್ನ ಸ್ವಂತದ ಹಣ ವೆಚ್ಚಮಾಡಿ ಅವನು ಬೆಂಗಳೂರಿನಿಂದ ಒಂದು ಅತ್ಯುತ್ತಮ ಸೀರೆಯನ್ನು ತರಿಸಿದ್ದನು. ಪದ್ಮಜೆಗೆ ಅದನ್ನು ಕೊಡುವದಕ್ಕೋಸ್ಕರ. ಆದರೆ ಅದನ್ನು ಅವಳಿಗೆ ಹೇಗೆ ಕೊಡುವದು ?

ಪದ್ಮಜೆಯ ರೂಪ ಲಾವಣ್ಯವನ್ನು ನೋಡಿ ಅವಳು ರಾಜಪುತ್ರಿಯಿರಬೇಕೆಂದು ಅಥವಾ ಯಾವದೊ ದೊಡ್ಡ ಶ್ರೀಮಂತನ ಹುಡಿಗೆ ಯಿರಬೇಕೆಂದು ಅವನ ಕಲ್ಪನೆಯಾಗಿದ್ದಿತು. ಆಲಸ್ಯವೊಂದನ್ನು ಬಿಟ್ಟರೆ ಗರ್ಭ ಶ್ರೀಮಂತರಲ್ಲಿ ಕಂಡುಬರುವ ಯಾವತ್ತೂ ಲಕ್ಷಣಗಳು ಅವಳಲ್ಲಿ ಕಂಡುಬರುತ್ತಿದ್ದವು.

ಆದರೆ ತಾನು ಯಾರೆಂಬುದೊಂದು ಪ್ರಶ್ನೆಯನ್ನು ಬಿಟ್ಟು ಪದ್ಮಜಾ ಎಲ್ಲ ವನ್ನೂ ವಿವರಿಸಿದ್ದಳು. ನೀನು ಯಾರ ಮಗಳು ಎಂದು ಅವಳನ್ನು ಕೇಳಿದರೆ ಅದು ಅವಳ ಮರ್ಮಕ್ಕೆ ತಗಲಿ ಅವಳ ಕಣ್ಣುಗಳು ನೀರಿನಿಂದ ತುಂಬುತ್ತಿದ್ದವು. ಅವಳು ಗರ್ಭ ಶ್ರೀಮಂತರ ಪುತ್ರಿಯೆಂದು ಊಹೆ ಯಿಂದಲೆ ಪದ್ಮನಾಭನು ನಿರ್ಧರಿಸಿದ್ದ. ತನ್ನ ದೃಷ್ಟಿಯಿಂದ ಬೆಲೆಯುಳ್ಳವಾಗಬಹುದಾದ ಸೀರೆಯು ಅವಳ ದೃಷ್ಟಿಯಿಂದ ಏನಾಗಬಹುದು ಎಂದು ಅವನಿಗೆ ಚಿಂತೆ. ಅಲ್ಲದೆ ಎಲ್ಲರೂ ಪದ್ಮಜಾ – ಪದ್ಮನಾಭ ಇವರು ಒಂದಿಲ್ಲೊಂದು ದಿನ ಸತಿ ಪತಿಗಳಾಗುವವರೆ ಎಂದು ಪ್ರಸಂಗ ಸಿಕ್ಕಾಗೆಲ್ಲ ಚೇಷ್ಟೆ ಮಾಡುತ್ತಿರುವಾಗ ರೇಸಿಮೆಯ ಸೀರೆಯನ್ನು ಅವಳ ಮುಂದಿಡುವದೆಂದರೆ ಮದುವೆಯ ನಾಂದಿಯನ್ನೇ ಹಾಡಿದಂತಾಗುವದು! ಇದಕ್ಕೆ ಪದ್ಮನಾಭನಿಗೆ ಧೈರ್ಯ ಸಾಲುತ್ತಿರಲಿಲ್ಲ. ತಾನು ಯಾರು? ಪದ್ಮಜಾ ಯಾರು? ತನ್ನನ್ನು ಲಗ್ನವಾಗಿ ಗರ್ಭ ಶ್ರೀಮಂತ ಪದ್ಮಜಾ ಸುಖ ಕಾಣಬಹುದೆ? ಒಂದು ವೇಳೆ ಪದ್ಮಜಾ ಲಗ್ನಕ್ಕೆ ಸಿದ್ಧವಾದರೂ ಸಂಹಾರ ಮಾಡುವಷ್ಟು ಸ್ಥೈರ್ಯವು ತನಗೆ ಇನ್ನು ದೊರೆಯಬೇಕಲ್ಲವೆ? ಇಷ್ಟೆಲ್ಲ ಅನೇಕ ವಿಚಾರಗಳು ಅವನ ತಲೆಯಲ್ಲಿ ತಾಂಡವವನ್ನಾರಂಭಿಸಿದ್ದರೂ ಅವಳ ಸಲ್ಲುವಾಗಿ ತರಿಸಿದ ಸೀರೆಯನ್ನು ಅವಳಿಗೆ ಕೊಟ್ಟೇತೀರಬೇಕೆಂದು ಅವನ ಮನ ಛಟಹಿಡಿಯಿತು. ಮನವೇ ಮಾರ್ಗವನ್ನು ತೋರಿತು. ಪ್ರೊ. ಅವಧಾನಿಯವರ ಪತ್ನಿ ಕನಕಲತೆಯ ಕೈಯಿಂದ ಕೊಡಿಸಬೇಕೆಂದು ಅವನಿಗೆ ಹಂಚಿಕೆ ಹೊಳೆಯಿತು. ಅದರಂತೆ ಅವನು ಕನಕಲತೆಯ ಕಡೆಗೆ ಹೋಗಿ ಅವಳಿಗೆ ಸೀರೆಯನ್ನು ತೋರಿಸಿ ಅವಳನ್ನು ಶೇಠ ಗಗನಲಾಲರ ವಾಸ ಭವನಕ್ಕೆ ಕರೆದುಕೊಂಡು ಬಂದನು. ಪ್ರೊ. ಅವಧಾನಿಯವರು ಸೆರೆಮನೆಗೆ ಹೋದಂದಿನಿಂದ ಕನಕಲತೆಯ ಹಾಗೂ ಅವಳ ಮಾವನವರ ಕ್ಷೇಮ ಸಮಾಚಾರವನ್ನು ವಿಚಾರಿಸುವದು ಅವನಿಗೆ ವಾಡಿಕೆಯಾಗಿತ್ತು. ಕನಕಲತೆಯಾದರೂ ಮೊದಲಿಂದ ಮೇಲೆ ಮೃದುಳಾಬೆಹೆನಳ ಕಡೆಗೆ ಬಂದು ಹೋಗುತ್ತಿದ್ದಳು.

"ಪದ್ಮಜಾ ಕಷ್ಟದಲ್ಲಿದ್ದಾಳೆ; ನೀನು ಅವಳನ್ನು ಬೇಗ ನೆಮದುವೆಯಾಗುವದೊಳಿತು" ಎಂದಳು ಕನಕಲತಾ ಲೋಕಲ್ ಗಾಡಿಯಲ್ಲಿ ಸೀರೆಯನ್ನು ಪರಿಶೀಲಿಸುತ್ತ.

"ಕಷ್ಟದಲ್ಲಿದ್ದಾಳೆ! ಏಕೆ?" ಎಂದ ಪದ್ಮನಾಭ ಆಶ್ಚರ್ಯಚಕಿತನಾಗಿ.

"ಮೃದುಳಾಳ ಹತ್ತರ ಇರುವದು ಅವಳಿಗೆ ಅಸಹ್ಯವಾಗತೊಡಗಿದೆ"

" ? ? ? " ಮೊದಲೆ ಸಂಶಯ ಬಂದಿದ್ದರೂ ಪದ್ಮನಾಭನು ಪ್ರಶ್ನಾರ್ಥಕ ಮೋರೆ ಮಾಡಿದ.

"ಸಣ್ಣ ಪುಟ್ಟ ಮಾತುಗಳಿಗಾಗಿ ಕೂಡ ಮೃದುಳಾಬೆಹೆನ್ ಅವಳ ಮೇಲೆ ಸಿಟ್ಟಿಗೇಳತೊಡಗಿದ್ದಾಳೆ. ಅವಳಿಗೆ ಜೀವ ಬೇಜಾರವೆನಿಸತೊಡಗಿದೆ"

" ! ! ! "

"ಅರಬ್ಬೀ ಸಮುದ್ರದ ಹೊರತು ತನಗೆ ಇನ್ನಾರ ಆಶ್ರಯವಿಲ್ಲೆಂದು ಪದ್ಮಜಾ ಅನ್ನುತ್ತಿದ್ದಾಳೆ"

"ಏನಿದು ಕನಕಲತಾ ಏನು ಹೇಳುವೆ ? ಅವಳಿಗೆ ಯಾರ ಆಶ್ರಯವಿಲ್ಲವೆ? ವೈಭವಪುರದ ಸಂಸ್ಥಾನಿಕರಲ್ಲವೆ? ನೀನಿಲ್ಲವೆ? ನಾನಿಲ್ಲವೆ? "

"ನಿನ್ನ ಆಶ್ರಯವನ್ನು ನಂಬಿಯೇ ಅವಳು ಇಲ್ಲಿರುವದು. ಆದರೆ ಮದುವೆಯಾಗೆಂದು ನಿನ್ನನ್ನು ಕೇಳಲು ಅವಳು ಹಿಂಜರಿಯುತ್ತಿದ್ದಾಳೆ. "

"ನಾನೂ ಹಿಂಜರಿಯುತ್ತಿದ್ದೇನೆ. ಇರಲಿ. ಏಕೆ ಅವಳು ಹಿಂಜರಿಯುವದು? "

"ಯಾವದೊ ಒಂದು ಆಸ್ಪತ್ರಿಯಲ್ಲಿ ಹುಟ್ಟಿ, ಅನಾಥ ಆಶ್ರಮದಲ್ಲಿ ಬೆಳೆದು ಕಡೆಗೆ ಮುಂಬಯಿಯ ಒಂದು ವಸತಿ ಗೃಹದಲ್ಲಿದ್ದುಕೊಂಡು ವಿದ್ಯಾಭ್ಯಾಸ ಮಾಡಿದಳವಳು. ತಂದೆ ತಾಯಿಯ ಮೋರೆಯನ್ನೆ ನೋಡಿಲ್ಲವಂತೆ. ಯಾರೊ ಅವಳ ವಿದ್ಯಾಭ್ಯಾಸಕ್ಕೆ ಹಣ ಕಳಿಸಿಕೊಡುತ್ತಿದ್ದರು. ಅವರು ಯಾರೆಂಬುದೂ ತಿಳಿಯದ ವಿಷಯ ನೀನು ಯಾರ ಮಗಳು ಎಂದು ಕೇಳಿದರೆ ಸಾಕು ಅವಳ ಕಣ್ಣುಗಳಲ್ಲಿ ನೀರು ತುಂಬುವವು. "

"ಯಾಕೆ ಕೇಳಬೇಕು? "

"ವೈಭವಪುರ ಸಂಸ್ಥಾನಿಕರಲ್ಲಿ ಯಾರೊ ಅವಳನ್ನು ಒಯ್ದು ಇಟ್ಟರಂತೆ. ಬಾಂಬಿನ ಖಟ್ಲೆಯ ಮೂಲಕ ಅಲ್ಲಿಂದ ಹೊರಬೀಳಬೇಕಾಯಿತು. ಸಾತಾರೆಗೆ ಹೋದಳು ಅಲ್ಲಿಂದಲೂ ಕಾಲ್ತೆಗೆಯಬೇಕಾಯಿತು. ಈಗ ಮುಂಬಯಿಕೂಡ ಅವಳಿಗೆ ಎಬ್ಬಟಿಗೆಯನ್ನು ಕೊಡುತ್ತಿದೆ. ನೀನು ಅವಳನ್ನು ಮದುವೆಯಾಗಬಲ್ಲೆಯಾ? "

" ಹುಡುಕಬೇಕಾದ ಲಕ್ಷ್ಮೀ ತಾನೇ ಮನೆಗೆ ಬಂದರೆ ಯಾರಿಗೆ ಬೇಡ. ಆದರೆ! ಆದರೆ ಅವಳ ಲಕ್ಷಣಗಳನ್ನು ನೋಡಿ ಅವಳು ಗರ್ಭ ಶ್ರೀಮಂತರ ಮಗಳಿರಬೇಕೆಂದು ನಾನು ತರ್ಕಕಟ್ಟಿದ್ದೆ. ತನ್ನ ವಿಷಯವಾಗಿ ಎಲ್ಲವನ್ನೂ ಹೇಳುತ್ತೇನೆಂದು ಅವಳು ನನಗೊಮ್ಮೆ ಹೇಳಿದ್ದಳು. ಆದರೆ ಇಲ್ಲಿಯವರೆಗೆ ಏನನ್ನೂ ಹೇಳಲಿಲ್ಲ. ಕೇವಲ ಬಾಂಬಿನ ಪ್ರಕರಣ ಸಾತಾರೆ ಪ್ರಕರಣಗಳನ್ನೂ ವಿವರಿಸಿದಳಷ್ಟೇ. ನಾನು ಅವಳನ್ನೂ ಅವಳ ಕುಲಗೋತ್ರಗಳ ಬಗ್ಗೆ ಕೇಳಲಿಲ್ಲ. ಅವಳಿಗೆ ಅದರಿಂದ ಕಷ್ಟವಾಗುತ್ತಿದ್ದರೆ ಏಕೆ ಕೇಳಬೇಕು? "

" ಅವಳನ್ನು ನೀನು ಲಗ್ನವಾದರೆ ನಿಮ್ಮ ಮನೆಯವರು ಸುಮ್ಮನಿರಬಹುದೆ?"

" ಇರಲೇಬೇಕೆಂದು ನನ್ನ ಅಭಿಪ್ರಾಯ!"

"ನಿನ್ನ ಅಭಿಪ್ರಾಯ! ಇದು ಹಿಂದುಸ್ತಾನ ಮರೆಯಬೇಡ. ಇಲ್ಲಿವ್ಯಕ್ತಿಗೆ ಬೆಲೆಯಿಲ್ಲ. ಜಾತಿಗೆ ಕುಲಕ್ಕೆ ರೂಡಿಪರಂಪರೆಗೆಇದೆ. ತಲೆಇಲ್ಲದವಳನ್ನು ವಾಡಿಕೊಂಡರೆ ನಡೆದೀತು ಆದರೆ ತಾಳಿಹರಿದವಳನ್ನು ಮುಟ್ಟಲಿಕ್ಕಾಗದು! ತಾಯಿ ಯಾರೆಂಬುದು ಗೊತ್ತಿಲ್ಲದಿದ್ದರೆ, ಅದೇಕೆ ತಾಯಿಯೇ ಇಲ್ಲದೆ ಕೂಸು ಹುಟ್ಟಿದರೂ ನಡೆದೀತು. ಆದರೆ ತಂದೆಯ ಹೆಸರು ಇಲ್ಲದಿದ್ದರೆ ತೀರಿ ಹೋಯಿತು!"

" ಕನಕಲತಾ ನನ್ನನ್ನು ಹೆಚ್ಚಿಗೆ ಪ್ರಶ್ನಿಸಬೇಡ. ಪದ್ಮಜಾ ಸಿದ್ಧಳಿದ್ದರೆ ಅವಳೊಡನೆ ಲಗ್ನವಾಗಲು ನಾನು ಒಂದು ಕಾಲು ಮೇಲೆ ಸಿದ್ಧನಿದ್ದೇನೆ. ಆಯಿತೆ? "

" ಹೌದು ಪದ್ಮನಾಭ. ನೀನು ಅವರ ಶಿಷ್ಯ; ಸುಳ್ಳಲ್ಲ. " ಎಂದಳು ಕನಕಲತಾ ಗದ್ಗದ ಸ್ವರದಿಂದ.

ಅಷ್ಟರಲ್ಲಿ ಗಾಡಿಯು ಬಾಂದ್ರಾ ಸ್ಟೇಶನ್ನಿನಲ್ಲಿ ನಿಂತಿತು. ಪ್ಲಾಟಫಾರ್ಮಿನ ಮೇಲೆ ನಿಂತ ಬಿಕ್ಷುಕರಲ್ಲಿ ಒಬ್ಬನು ತಾನಾಗಿಯೇ ಪದ್ಮನಾಭನನ್ನು ನೋಡಿ ಅವನ ಕಡೆಗೆ ಓಡುತ್ತ ಬಂದನು. ಪದ್ಮನಾಭನಿಗೆ ಅವನ ಗುರ್ತು ಹತ್ತಿತು. ನಸುನಗೆಯಿಂದ ಅವನನ್ನು ಸ್ವಾಗತಿಸಿ ಅವನ ಕೈಯಲ್ಲಿ ಒಂದು ರೂಪಾಯಿ ಇಟ್ಟು ಮಾಲಾಡಕ್ಕೆ ಗಾಂಧೀ ದುಗ್ಧಾಲಯಕ್ಕೆ ಬರಬೇಕೆಂದು ಹೇಳಿದನು. ಇಷ್ಟರಲ್ಲಿ ಗಾಡಿಯು ಮತ್ತೆ ಪ್ರಾರಂಭವಾಯಿತು.

" ಕನಕಲತಾ ಇವನೊಬ್ಬ ಸ್ವಾತಂತ್ರ್ಯವೀರ. ಆದರೆ ಇವನ ವಿಷಯ ಇಲ್ಲಿ ಬೇಡ. " ಎಂದ ಪದ್ಮನಾಭ.

"ನಮ್ಮ ಸ್ವಾತಂತ್ರ್ಯ–ವೀರವನಿತೆಯ ವಿಷಯವನ್ನೆ ನನಗೆ ಮಾತನಾಡ ಬೇಕಾಗಿದೆ. ನೀನು ಕೇಳಿದರೂ ಬೇರೆ ವಿಷಯವನ್ನು ಎತ್ತಲಾರೆ. "

" ಎತ್ತಬೇಡ "

" ಮುಖ್ಯ ಮಾತೆಂದರೆ, ಮೊದಲು ಪದ್ಮಜೆಯನ್ನು ಮೃದುಳಾಳ ಸಹ ವಾಸದಿಂದ ಮುಕ್ತವಾಡುವದು. ಇದಕ್ಕೆ ನಾವು ಉಪಾಯ ಹುಡುಕಬೇಕು?"

" ಮೃದುಳಾಬೆಹನಳು ಅವಳನ್ನು ನಿಜವಾಗಿಯೂ ದ್ವೇಷಿಸುತ್ತಿರುವಳೆ? ಚೇಷ್ಟೆಗಾಗಿ ಇರಲಿಕ್ಕಿಲ್ಲವೆ ? "

" ನನಗೆ ಹಾಗೆನಿಸುವದಿಲ್ಲ. ಅವಳೂ ನಿನ್ನನ್ನು ಮದುವೆಯಾಗಲಿಚ್ಛಿಸು ತ್ತಿರುವಳು! "

" ಕನಕಲತಾ, ನಿನ್ನ ಬತ್ತಳಿಕೆಯಲ್ಲಿ ಇನ್ನೂ ಎಷ್ಟು ಅದ್ಭುತ ಬಾಣ ಗಳಿವೆ! "

" ನಾನು ಹೇಳುವದು ಸುಳ್ಳಿರಬಹುದು. ಆದರೆ ಪದ್ಮಜೆಯ ತರ್ಕವು ಹಾಗಿದೆ. ಪದ್ಮನಾಭನ ಮೇಲೆ ಶೇಠರು ಅಷ್ಟು ಪ್ರೀತಿಮಾಡುವರು, ಇಷ್ಟು ಪ್ರೀತಿಮಾಡುವರು, ಅವನಿಗಾಗಿ ಅಂಥ ಕಾರ್ಖಾನೆ ಹಾಕಿಕೊಡುವರು ಇಂಥ ಫ್ಯಾಕ್ಟರಿ ಪ್ರಾರಂಭಿಸುವವರು ಎಂದು ಹೇಳಿ ಮೃದುಳಾ ನಿನ್ನ ಸ್ತುತಿ ಮಾಡುತ್ತಾಳಂತೆ. ಆಮೇಲೆ ಪದ್ಮನಾಭನು ಒಳ್ಳೇ ಕುಲಶೀಲ ಸಂಪನ್ನ ಹುಡಿಗೆಯನ್ನಾಗುವನು, ಅವನು ಅಂಥ ಇಂಥ ಹುಡಿಗೆಯನ್ನಾಗುವದು ಶೇಠರ ಮನಸ್ಸಿಗೆ ಬಾರದೆಂದು ಪದ್ಮಜೆಯ ಮನಸ್ಸಿಗೆ ಹತ್ತುವಂತೆ ಆಡುವ ಳಂತೆ. ಯಾವದೇ ಹಾಡು ಎಂದರೂ ಇದೇಪಲ್ಲವಿಯಂತೆ. ಪದ್ಮಜಾ ಬೇಸತ್ತು ಬೇಲಿ ಹೊಕ್ಕಿದ್ದಾಳೆ.

" ಗುರು ಎಂದಾದರೂ ಶಿಷ್ಯನ ಮೇಲೆ ಮನಸ್ಸಿಡಬಹುದೇ ? ಕೊಡಲು ಹೋದರೂ ಕೂಡ ಉತ್ತರೆಯನ್ನು ಮಾಡಿಕೊಳ್ಳಲು ಅರ್ಜುನ ಸಿದ್ಧನಾಗ ಲಿಲ್ಲವಲ್ಲವೆ ? "

" ಅದು ದ್ವಾಪರ; ಇದು ಕಲಿಯುಗ. ಶಿಷ್ಯೆಯರನ್ನು ಓಡಿಸಿ ಕೊಂಡು ಹೋದ ಮಾಸ್ತರರ ಉದಾಹರಣೆಗಳು ಬೇಕಾದ ಭಾಷೆಯ

ವೃತ್ತಪತ್ರದಲ್ಲಿ ಸಿಕ್ಕುವವು. ಒಬ್ಬ ಸಂಸ್ಥಾನಿಕನ ಮಗಳು ತನ್ನ ಸಂಗೀತ ಶಿಕ್ಷಕನನ್ನಾದಳೆಂದು ಕೇಳಿಲ್ಲವೆ? ''

ವಿಷಯ ಗಂಭೀರವಾಗಿದ್ದರೂ ಪದ್ಮನಾಭ ನಕ್ಕ. ಮೃದುಳಾಬೆಹೆನಳು ತನ್ನ ಮೇಲೆ ಪ್ರೇಮ ಮಾಡುವದೆಂದರೆ ಅವನಿಗೆ ಆಶ್ಚರ್ಯವೆನಿಸಿತು. ನಗೆಬಂದಿತು. ಅತಿ ಪರಿಚಯದಿಂದ ನಿರಂತರ ಸಹವಾಸದಿಂದ ಮೃದುಳಾಬೆಹನ ಪದ್ಮಜೆಯರ ಸಂಬಂಧ ಕೆಟ್ಟಿರಬಹುದಲ್ಲದೆ ಈ ಹೊಸ ಕಾರಣದ ಮೂಲಕ ಎಂದೂ ಶಕ್ಯವಿಲ್ಲೆಂದು ಅವನು ಮನಸ್ಸಿನಲ್ಲಿ ಅಂದುಕೊಂಡ. ಉಪ್ಪು ಬಿದ್ದರಷ್ಟೇ ಹಾಲು ಕೆಡುವದಿಲ್ಲ, ಬಹಳ ವೇಳೆಯವರೆಗೆ ಅದನ್ನು ಮುಚ್ಚಿಟ್ಟರೂ ಅದು ಕೆಡುವ ಸಂಭವವಿದೆ, ಎಂದು ಅವನು ಎಣಿಕೆ ಹಾಕಿದ ಕೆಲವು ಕಾಲದ ವರೆಗಾದರೂ ಪದ್ಮಜಾ—ಮೃದುಳಾ ಬೆಹನರನ್ನು ಅಗಲಿಸುವದಶ್ಯವೆಂದು ಭಾವಿಸಿ ಕನಕಲತೆಯ ಮನೆಯಲ್ಲಿ ಅವಳು ಇರಬೇಕೆಂದು ಸೂಚಿಸಿದ. ಕನಕಲತೆ ಈ ಸೂಚನೆಗೆ ಒಪ್ಪಿ ತಾನು ಒಬ್ಬಳೇ ಆಗಿರುವನೆವ ಮುಂದೆಮಾಡಿ ಪದ್ಮಜೆಯನ್ನು ತಮ್ಮ ಮನೆಗೆ ಕರೆದುಕೊಂಡು ಬರುವದಾಗಿ ಹೇಳಿದಳು.

**ಅಂದು** ಸಾಯಂಕಾಲ ಸ್ಯಾಂಟಾಕ್ರುಜ್ ಸ್ಟೇಶನ್ನಿನಲ್ಲಿ ಪದ್ಮಜಾ ಕನಕಲತೆಯನ್ನು ಲೋಕಲ್ ಗಾಡಿಯಲ್ಲಿ ಕೂಡ್ರಿಸಿ ಪದ್ಮನಾಭ-ಮೃದುಳಾ ಬೆಹನರು ಜೂಹೂದ ಹತ್ತರಿದ್ದ ಶೇಠ ಗಗನಲಾಲ ವಿಹಾರಲಾಲರ ಬಂಗಲೆಗೆ ಬರುತ್ತಿದ್ದರು. ಆದೇ ಸಂಜೆಯಾಗಿತ್ತು. ಆಕಾಶದಲ್ಲೆಲ್ಲ ಸುವರ್ಣದಂಥ ಬೆಳಕು ಹಬ್ಬಿ ಅಲ್ಲಿಯ ಮೋಡಗಳಿಗೆ ತರತರದ ಬಣ್ಣವನ್ನು ಬಳಿದು ಸಿಂಗರಿಸಿತ್ತು. ಸಮುದ್ರದ ಮೇಲಿಂದ ಆಲ್ಹಾದದಾಯಕ ಗಾಳಿ ಬೀಸತೊಡಗಿತು. ಪದ್ಮನಾಭನೆ ಮಾತು ಪ್ರಾರಂಭಿಸಿದ.

'' ಬೆಹೆನ, ಪ್ರೊ. ಅವಧಾನಿಯವರು ಹೋದಂದಿನಿಂದ ನಿಮ್ಮನ್ನೆ ಗುರುಸ್ಥಾನದಲ್ಲಿರಿಸಿದ್ದೇನೆ. ನಿಮ್ಮ ಸಹಾಯದಿಂದಲೇ ಜೀವನಸಂಗ್ರಾಮ ಗೆದೆಯುತ್ತಿದ್ದೇನೆ. ನನ್ನ ಯಶಕ್ಕೆ ನೀವೇ ಕಾರಣರು. ನಿಮ್ಮಿಂದ ನನಗೆ ಏನ ಮುಚ್ಚಿಡುವ ಕಾರಣವಿಲ್ಲ ''

"ಪದ್ಮನಾಭ! ಇದು ಮುಂಬಯಿ. ಇಲ್ಲಿ, ವೇಳೆಗೆ ಬಹಳ ಮಹತ್ವವಿದೆ. ಗ್ರಂಥಕೋಟಿಗಳಿಂದ ಹೇಳಬೇಕಾದುದನ್ನು ಶ್ಲೋಕಾರ್ಧದಲ್ಲಿ ಮುಗಿಸಲಾರೆಯಾ? ಎಸ್. ಹೇಳು"

"ಬೆಹೆನ, ನಾನು ಪದ್ಮಜೆಯನ್ನು ಪ್ರೀತಿಸುವೆನು. ಅವಳನ್ನು ಲಗ್ನವಾಗಲಿಚ್ಛಿಸುತ್ತೇನೆ. ಇದಕ್ಕೆ ನಿಮ್ಮ ಆಶೀರ್ವಾದಬೇಕು"

"ನನ್ನ ಆಶಿರ್ವಾದ ಯಾವಾಗಲೂ ಇದೆ. ನೀನು ಪದ್ಮಜೆಯನ್ನು ಪ್ರೀತಿಸುವದು ಅಥವಾ ಅವಳು ನಿನ್ನನ್ನೂ ಪ್ರೀತಿಸುವದು ನನಗೆ ತಿಳಿಯಿದ್ದಿದ ವಿಷಯುವಲ್ಲ. ಆದರೆ ಒಂದೇ ಒಂದು ಮಾತು ಎಸ್. ಒಂದೇ ಒಂದು ಮಾತು'

"ಹೇಳಬೇಕು"

"ನನ್ನನ್ನು ಗುರುಸ್ಥಾನದಲ್ಲಿಟ್ಟಿ ನೀನು. ಆದರೆ ಗುರುವಿಗೆ ಬೇಕಾದ ವಯಸ್ಸು ನನ್ನದಲ್ಲ ಎಂಬುದನ್ನು ಮರೆತೆ. ನಾನೂ ತರುಣಿ ಎಂಬುದನ್ನು ನೀನು ಮರತೆ. ನೀವಿಬ್ಬರೂ ದಿನಾಲು ಮರೆಯುವಿರಿ!"

"ಅದೇನು ಸುಳ್ಳಲ್ಲ"

"ತಮಗಿಂತ ದೊಡ್ಡವರು ವೃದ್ಧರೆಂದು ತಿಳಿಯುವದು ತಪ್ಪು. ನಾನು ತತ್ವಜ್ಞಾನ ಓದಿದ್ದೇನೆ. ಮಾನಸಶಾಸ್ತ್ರ ಅಭ್ಯಸಿಸಿದ್ದೇನೆ. ಮನಸ್ಸನ್ನು ನಿಯಂತ್ರಿಸುವ ಶಕ್ತಿ ನನ್ನಲ್ಲಿ ಇರಲಿ ಇಲ್ಲದಿರಲಿ ಅದರ ಎಳೆತ ಸೆಳೆತ ಕುಣಿತ ಮಣಿತಗಳು ನನಗೆ ತಿಳಿಯುವವು. ನಾವು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದಾಗ ಎಲ್ಲವನ್ನೂ ಮರೆತಿದ್ದೆವು. ಆದರೆ ಈಗ ಯುದ್ಧ ನಿಂತಬಳಿಕ ಛಾವಣಿಯಲ್ಲಿಯ ಸೈನಿಕರು ಬದಿಯ ಪಟ್ಟಣದಲ್ಲಿ ಹೊಕ್ಕು ಮನಬಂದಂತೆ ವರ್ತಿಸುವಂತೆ ನಮ್ಮ ಮನ ಬೇರೆಕಡೆಗೆ ಹರಿಯುತ್ತಿವೆ. ಇದು ಸ್ವಾಭಾವಿಕ. ಒಂದು ದಿನ ಜುಹೂದಮೇಲೆ ನಾನೂ ಮತ್ತು ಪದ್ಮಜಾ ತಿರುಗಾಡಲಿಕ್ಕೆ ಹೋಗಿದ್ದೆವು. ಬೆಳದಿಂಗಳದ ಹೊರತು ಅಲ್ಲಿ ಬೇರೆ ಏನೂ ಇರಲಿಲ್ಲ. ಸಮುದ್ರದ ಸಪ್ಪಳವೇ ಸಪ್ಪಳ. ಹತ್ತೆಂಟು ಹೆಜ್ಜೆ ಅಡ್ಡಾಡಿ ಮರಳಿ ಬರುವಾಗ ಒಂದು ತೆಂಗಿನ ಗಿಡದ ಕೆಳಗೆ ಒಬ್ಬ ಅಮೇರಿಕನ್ ಸೈನಿಕನು ತನ್ನ ತೆಕ್ಕೆಯಲ್ಲಿದ್ದ ಓರ್ವ ಆ್ಯಂಗ್ಲೋ–ಇಂಡಿಯನ್ ಯುವತಿಗೆ ಮುತ್ತಿಡುತ್ತಿದ್ದ. ಸಮುದ್ರದ ಸಪ್ಪಳದಲ್ಲೂ ಕೇಳಬರುವಂಥ ಮುದ್ದು. ಏಕೊ ನನಗೆ ತಿಳಿಯದು. ಮನಸ್ಸಿನಲ್ಲಿ ಏನೋ ಸಂವೇದನೆಯಾಯಿತು. ಕೂಡಲೇ ಗಿಡದಡಿಯಲ್ಲಿದ್ದ ಆ ತಾತ್ಕಾಲಿಕ

ದಂಪತಿಯ ಬಗ್ಗೆ ಕ್ಷಣಕಾಲ ಮತ್ಸರವೆನಿಸಿತು. ಬದಿಯಲ್ಲಿಯೇ ಪದ್ಮಜಾ ಇದ್ದಳು. ಅವಳನ್ನು ಕಂಡಕೂಡಲೇ ನಿನ್ನ ನೆನಪಾಯಿತು. ನಿಮ್ಮಿಬ್ಬರ ಬಗ್ಗೆ ಯಾದರೂ ಮತ್ಸರ ಉತ್ಪನ್ನವಾಯಿತು. ತಿಳಿದು ಅಥವಾ ತಿಳಿಯದಲೆ ಉತ್ಪನ್ನವಾಯಿತು. ಅಂದಿನಿಂದ ಅವಳ ಮೇಲೆ ಸಿಡಿಮಿಡಿಗೊಳ್ಳುತ್ತಿದ್ದೇನೆ, ಆದರೆ ಅವಳ ಮೇಲೆ ನನ್ನ ಪ್ರೇಮವು ಅಚಲವಿದೆ. ಅವಳು ನಮ್ಮಲ್ಲಿ ಆಶ್ರಿತ ಳಲ್ಲ. ನನ್ನ ತಂಗಿ''

"ಬೆಹೆನ ಇದರ ಬಗ್ಗೆ ನನಗೆ ಎಳ್ಳಷ್ಟೂ ಸಂಶಯವಿಲ್ಲ."

"ನೀನು ಸ್ಪಷ್ಟವಾಗಿ ಮಾತೆತ್ತಿ ಕೇಳಿದೆ. ನಾನು ಅಷ್ಟೇ ನಿರ್ದಾಕ್ಷಿಣ್ಯ ವಾಗಿ ನನ್ನ ಮನಸ್ಸನ್ನು ನಿನ್ನ ಮುಂದೆ ಬಿಚ್ಚಿಟ್ಟೆನು. ಆದರೆ ಇದರಿಂದ ಸಮಸ್ಯೆ ಬಗೆಹರಿದಿಲ್ಲ."

"ಅಂದರೆ ?''

''ನಾನು ತರುಣಿ ಎಂಬುದನ್ನು ಮರೆಯಬೇಡಿರಿ. ನನಗಾದರೂ ಯಾರನ್ನಾದರೂ ಪ್ರೇಮದಿಂದ ಗೆದೆಯಬೇಕೆನಿಸುತ್ತದೆ. ಜೀವಕ್ಕೆ ಜೀವ ಕೊಟ್ಟಾದರೂ ಪ್ರೇಮ ರಣಾಂಗಣದಲ್ಲಿ ವಿಜಯವನ್ನು ದೊರಕಿಸಬೇಕೆನಿಸು ತ್ತದೆ. ನೀನು ನನ್ನ ಶಿಷ್ಯನೆಂದು ಅನ್ನುಕೊಳ್ಳುವಿ. ಆಜ್ಞಾಧಾರಕ. ನಿನ್ನನ್ನು ಗೆಲ್ಲಲು ನನ್ನ ಮನಸ್ಸಿಲ್ಲ. ನೀನೂ ಪದ್ಮಜಾ ಸುಖವಾಗಿ ಇರಬೇಕೆಂದು ನನಗೆ ಅನಿಸುತ್ತದೆ. ಆದರೆ............''

"ಆದರೆ.... ?"

''ಆದರೆ ತನ್ನ ಮದುವೆಯಾಗದೆ ತಂಗಿಯ ಮದುವೆಯಾದರೆ ಹಿರಿ ಯಕ್ಕನಿಗೆ ಏನೆನಿಸಬಹುದೆಂಬದನ್ನು ಮರೆಯಬೇಡಿರಿ.''

"ಬೆಹೆನ. ನಿನ್ನ ಲಗ್ನವಾಗುವವರೆಗೆ ನಾವು ಲಗ್ನವಾಗುವದಿಲ್ಲ."

"ಇಷ್ಟು ಒಪ್ಪಿದರೆ ಸಾಕು. ನನ್ನ ಗುಪ್ತ ಮನವು ತಾನಾಗಿಯೆ ಹಾದಿಗೆ ಬರುವದು. ಪದ್ಮಜಾ ಮತ್ತು ನನ್ನ ನಡುವೆ ಚಕಮಕಿ ಸಂಭವಿಸಲಾರದು."

"ಬೆಹೆನ, ತೆಗೆದುಕೊಳ್ಳಿ ನನ್ನ ವಚನ", ಎನ್ನುತ್ತ ಪದ್ಮನಾಭ ಕೈ ಮೇಲೆ ಕೈಹಾಕಿ ವಚನಕೊಟ್ಟ.

# ಅಧಃಪಾತ ?

ಬಂಧಿಸಲ್ಪಟ್ಟ ಪ್ರೊ. ಆವಧಾನಿಯವರು ಮೊದಲು ಕೆಲವು ದಿವಸಗಳ ವರೆಗೆ ಮುಂಬಯಿ ಪೋಲೀಸ ಲಾಕಅಪ್‌ನಲ್ಲಿಡಲ್ಪಟ್ಟರು.

ಸೆರೆಮನೆಯಲ್ಲಿ ಅವರು ಕಾಲಿಟ್ಟುದೆಂದರೆ ಇದೇ ಮೊದಲನೆ ಸಾಕಥೆ ಕಾಂದಬರಿ, ಸ್ವಾತಂತ್ರ್ಯ ಸಂಗ್ರಾಮದ ಪುಸ್ತಕಗಳಲ್ಲಿ ಅವರು ಸೆರೆಮನೆಯ ಬಗ್ಗೆ ಅನೇಕ ವರ್ಣನೆಗಳನ್ನು ಓದಿದ್ದರು. ಕಮಲಾ ನೆಹರೂ, ವಿಠ್ಠಲಭಾಯಿ ಪಟೇಲ ಮೊದಲಾದವರು ಸೆರೆಮನೆಯಲ್ಲಿಯ ಉಸುಕು ಮಿಶ್ರಿತ ರೊಟ್ಟಿಗಳನ್ನು ತಿಂದು ಕಾಯಿಲೆಯಿಂದ ಹಾಸಿಗೆಹಿಡಿದು ಮಡಿದರೆಂದೂ ಸುಭಾಸ ಬೋಸರ ಪ್ರಕೃತಿ ಕೆಡಲು ಕೂಡ ಇಂಥ ರೊಟ್ಟಿಗಳೇ ಕಾರಣವಾದವೆಂದೂ ಅವರಿಗೆ ಯಾರೋ ಹೇಳಿದ್ದರು. ಸೆರೆಮನೆಯೆಂದರೆ ನಾನಾಯಾತನೆಯ ತವರ್ಮನೆ ಎಂದು ಅವರ ಕಲ್ಪನೆಯಾಗಿದ್ದಿತು.

ಆದರೆ ಪೋಲೀಸ ಲಾಕ್‌ಅಪ್‌ದಲ್ಲಿ ಕಳೆದ ಅಲ್ಪಾವಧಿಯಲ್ಲಿ ಅವರಿಗೆ ಸೆರೆಮನೆಯ ಅನುಭವ ಬರಲಿಲ್ಲ. ಅಲ್ಲಿದ್ದ ಪೋಲೀಸ ಅಧಿಕಾರಿಯು ಒಂದಾನೊಂದು ಕಾಲದಲ್ಲಿ ಅವರ ವಿದ್ಯಾರ್ಥಿಯಾಗಿದ್ದನಾದ್ದರಿಂದ ಅವರಿಗೆ ಅನೇಕ ಸೌಲಭ್ಯ ಸೌಕರ್ಯಗಳೊದಗಿದವು. ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ತಂಡತಂಡವಾಗಿ ಬಂದು ಅವರಿಗೆ ಮೇಲಿಂದ ಮೇಲೆ ಊಟ ಉಪಹಾರ ಹಣ್ಣು ಹಂಪಲಗಳನ್ನು ತಂದುಕೊಡುತ್ತಿದ್ದರು. ಕಾಯಿಲೆಯಿಂದ ಹಾಸಿಗೆ ಹಿಡಿದವರಿಗೆ ಪ್ರತಿ ತಾಸು–ಅರ್ಧತಾಸಿಗೆ ಏನಾದರೂ ಆಹಾರ ಕೊಡುವಂತೆ ನನಗೂ ಕೊಡುತ್ತಿರುವಿರಿ, ಇದರಿಂದ ನಿಮ್ಮ ಪ್ರೊಫೆಸರರ ಪ್ರಕೃತಿ ಕೆಟ್ಟೀತು ಜೋಕೆ ಎಂದು ಅವರು ತಮ್ಮ ವಿದ್ಯಾರ್ಥಿಗಳಿಗೆ ನಗೆಯಾಡುತ್ತಿದ್ದರು. ವಿದ್ಯಾರ್ಥಿಗಣದ ಭೆಟ್ಟಿಯಾದಂತೆ ಅವರಿಗೆ ಇಷ್ಟಮಿತ್ರರ ಭೆಟ್ಟಿಯೂ ಆಗುತ್ತಿತ್ತು. ಪದ್ಮಜಾ–ಪದ್ಮನಾಭ ಮೃದುಳಾ ಬೆಹೆನ್–ಕನಕಲತಾ ಮೊದಲಾದವರು ಬಂದು ಹೋಗುತ್ತಿದ್ದರು. ಇದೇ ಸೆರೆಮನೆಯಾದರೆ ಸ್ವಾತಂತ್ರ್ಯಕ್ಕಾಗಿ ಹೋರಾಡುವದಕ್ಕಿಂತ ಇದೇ ವಾಸವೇ ' ಕಾಯಂ ' ಆಗಲೆಂದು ದೇವರಲ್ಲೇಕೆ ಪ್ರಾರ್ಥಿಸಬಾರದೆಂದು ಅವರು ಚೇಷ್ಟೆ–ಮಾಡುತ್ತಿದ್ದರು. ಲಾಕ್‌ಅಪ್‌ದಲ್ಲಿದ್ದ

ಸಂಗಡಿಗರೂ ಅದೇ ಕಾರಣಕ್ಕಾಗಿ ಬಂಧಿಸಲ್ಪಟ್ಟವರೂ, ಸಮವಯಸ್ಕರೂ ಆಗಿದ್ದರಾದ್ದರಿಂದ ಕಾಲವು ಕಾವ್ಯಶಾಸ್ತ್ರ ವಿನೋದಿನ ಹೋಗುತ್ತಿತ್ತು. ಕೇಳುವದೇನು?

ಆದರೆ ಈ ಕೆಲವು ದಿವಸಗಳು ಹಾಹಾ ಎನ್ನುವಷ್ಟರಲ್ಲಿ ಮಾಯವಾದವು. ಒಂದು ದಿನ ರಾತ್ರಿ ಅವರೆಲ್ಲರನ್ನು ಮೋಟಾರಿನಲ್ಲಿ ಕೂಡ್ರಿಸಿಕೊಂಡು ಯಾವದೊ ಒಂದು ಸಣ್ಣ ಸ್ಟೇಶನ್ನಿಗೆ ಒಯ್ದರು. ಪೋಲೀಸರ 'ಬಂದೊಬಸ್ತಿನಲ್ಲಿ' ಅವರ ಮುಂದಿನ ಪ್ರಯಾಣ ಪ್ರಾರಂಭವಾಯಿತು. ಹಾದಿಯಲ್ಲಿ ಎಲ್ಲ ಸ್ಟೇಶನ್ನುಗಳ ಹೆಸರುಗಳನ್ನು ಯುದ್ಧದ ಸಲುವಾಗಿ ಎಂದು ಅಳಿಸಿಒಡೆದಿದ್ದರಾದ್ದರಿಂದ ತಮ್ಮನ್ನು ಎಲ್ಲಿಗೆ ಸಾಗಿಸಲಾಗುತ್ತಿದೆಂಬುದು ಅವರಿಗೆ ತಿಳಿಯಲಿಲ್ಲ. ಮಧ್ಯದಲ್ಲಿ ಯಾವದೋ ಒಂದು ಸಣ್ಣ ಸ್ಟೇಶನ್ನಿನಲ್ಲಿ ಒಯ್ದು ಹತ್ತಿಸಿದ್ದರಿಂದ ತಾವು ಬಿ. ಬಿ. ಸಿ. ಐ. ಗಾಡಿಯಲ್ಲಿರುವೆವೊ ಅಥವಾ ಜಿ. ಐ. ಪಿ ಯಲ್ಲಿಯೊ ಎಂಬುದೂ ಅವರಿಗೆ ತಿಳಿಯದಂತಾಯಿತು.

ಪೋಲೀಸರ ಮೋರೆಯ ಮೇಲೆ ಸಹಾನುಭೂತಿ [illegible] ತಾದರೂ ಅವರ ಮೇಲೆ ಕೆಂಪು ಮೋರೆಯ ಅಧಿಕಾರಿ[illegible] ಅವರು ಅವನು ಕೊರೆದ ಗೆರೆಯನ್ನು ದಾಟುತ್ತಿರಲಿಲ್ಲ. ಒಂದೆರಡು ಸ್ಟೇಶನ್ನುಗಳು ಹೋದ ಮೇಲೆ ಪ್ರೋ ಅವಧಾನಿಯವರ ಸಂಗಡಿಗರಲ್ಲೊಬ್ಬನು ತಲೆ ತುರಿಸಿಕೊಂಡು ಗಾಡಿಗೆ ಇಲೆಕ್ಟ್ರಿಕ್ ಎಂಜಿನ ಇದ್ದಂತೆ ಕಾಣಿಸುತ್ತದೆಂದು ಗಾಡಿ ಪುಣೆಯ ಕಡೆಗೆ ಸಾಗಿದೆ ಎಂದು ತರ್ಕಕಟ್ಟಿದನು. ಇತರರೂ ಅವನ ತರ್ಕಕ್ಕೆ ಪುಷ್ಟಿಕೊಟ್ಟರು.

ಮುಂದೆ ಒಂದು ದೊಡ್ಡ ಸ್ಟೆಶನ್ನದಲ್ಲಿ ಈ ಪರಿವಾರದಲ್ಲಿಯ ಕೆಲವರನ್ನು ಇಳಿಸಲಾಯಿತು. ಅದರ ಮುಂದಿನ ದೊಡ್ಡ ಸ್ಟೆಶನ್ನದಲ್ಲಿ ಪ್ರೋ. ಅವಧಾನಿಯವರೊಬ್ಬರನ್ನು ಬಿಟ್ಟು ಉಳಿದ ಎಲ್ಲರನ್ನು ಇಳಿಸಲಾಯಿತು. ಪ್ರೋಫೆಸರರ ಪ್ರವಾಸವು ಹಾಗೆಯೇ ಸಾಗಿತು. ಬಾಲ್ಯವೆಲ್ಲವೂ ಸಿಂಧದಲ್ಲಿ ಹೋಗಿತ್ತಾದ್ದರಿಂದ ಅವರಿಗೆ ದ. ಹಿಂದುಸ್ತಾನದ ಪರಿಚಯವಿರಲಿಲ್ಲ.

ಆದರ ಮುಂದಿನ ದೊಡ್ಡ ಸ್ಟೇಶನ್ನಿನಲ್ಲಿ ಪ್ರೋಫೆಸರರನ್ನು ಬೇರೊಂದು ಉಗಿಬಂಡಿಯಲ್ಲಿ ಕೂಡ್ರಿಸಲಾಯಿತು. ಆ ಗಾಡಿಯು ವೇಗದ ಮೇಲಿಂದ ಆದೇ

ಎಂ. ಎಸ್. ಎಂ. ಇರಬೇಕೆಂದು ಅವರಿಗೆ ಮನದಟ್ಟಾಯಿತು. ಬೆಳಗಾಗಲು ಅವರಿಗೆ ತಮ್ಮ ತರ್ಕಸರಿ ಎಂದು ಕಣ್ಣಿಗೇ ಕಂಡಿತು.

ಮೂರನೇ ದಿನ ಪ್ರೊ. ಅವಧಾನಿಯವರು ಕೋಟೆಯಂತೆ ವಿಸ್ತೃತವಾದ ಒಂದು ಸೆರೆಮನೆಯಲ್ಲಿ ಕಾಲಿಟ್ಟರು. ಇಲ್ಲಿ ಅವರಿಗೆ ಸೆರೆಮನೆಯೆಂದರೇನೆಂಬುದು ಎಂದೂ ಮರೆಯದಂತೆ ತಿಳಿಯಿತು. ಅಪರಿಚಿತ ಪ್ರದೇಶ, ಸೆರೆಮನೆಯ ಪರಿಚಯವಿಲ್ಲ, ಅದರಲ್ಲಿದ್ದವರ ಪರಿಚಯವಿಲ್ಲ, ಸುತ್ತಲಿನವರೂ ಅಪರಿಚಿತರೆ, ಪ್ರೀತಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸುಳಿವಿಲ್ಲ, ಒಂದೆ ಒಂದು ದೊಡ್ಡ ಕೋಣೆಯಲ್ಲಿ ಕುರಿ ತುಂಬಿದಂತೆ ಎಲ್ಲ "ಅಂಡರ ಟ್ರಾಯಲ್" ಸೆರೆಯಾಳುಗಳನ್ನು ತುಂಬಲಾಗಿತ್ತು. ಅಲ್ಲಿಯೇ ದಪ್ಪ ರೊಟ್ಟಿಯ ಊಟ, ಅಲ್ಲಿಯೇ ಒಂದು ಮೂಲೆಯಲ್ಲಿ ಮಲಮೂತ್ರ ವಿಸರ್ಜನೆ; ನಾಚಿಕೆಗೆ ಆಸ್ಪದವಿಲ್ಲ. ಆರೋಗ್ಯದ ನಿಯಮಗಳನ್ನು ಕಟ್ಟಿಡಬೇಕು. ಅಧಿಕಾರಿಗಳನ್ನೂ ಕೇಳಹೋದರೆ ಇದೇ ಶಿಕ್ಷೆ ಭೋಗಿಸಿರಿ ಎಂಬ ಉತ್ತರ. ಪ್ರೊ. ಅವಧಾನಿಯವರಿಗೆ ಒಂದೆರಡು ದಿವಸಗಳಲ್ಲಿಯೇ ಪೂರ್ಣ ಬೇಜಾರ ಬಂದಿತು.

೧೯೪೨ ರ ಹೋರಾಟದಲ್ಲಿ ಸೆರೆಮನೆಗೆ ಮಹಾಪೂರ ಬಂದಂತಾಗಿತ್ತು. "ಹಂಡರ ಟ್ರಾಯಲ್" (ಪೋಲೀಸರ ವ್ಯಾಕರಣದಲ್ಲಿ ಅಕಾರಕ್ಕೆ ಹಕಾರಾದೇಶವಾಗುತ್ತಿತ್ತು) ವಿಭಾಗದಲ್ಲಿ ಅನೇಕ ಜನ ಇದ್ದಂತೆ ಅನೇಕ ತರದ ಜನ ಇದ್ದಿತು. ಮಾಡು ಇಲ್ಲವೆ ಮಡಿ ಹೋರಾಟದಲ್ಲಿ ಪ್ರಾಣಾರ್ಪಣ ಮಾಡಲು ಪ್ರತಿಜ್ಞೆಗೈದು ಬ್ರಿಟಿಶರನ್ನು ಮಣ್ಣು ಮುಕ್ಕಿಸಲು ಮುಂದಾದವರಿದ್ದರು. ಕಾಂಗ್ರೆಸಿನ ಆಜ್ಞೆ ಅದನ್ನು ಶಿರಸಾವಹಿಸತಕ್ಕದ್ದು ಎಂಬ ಅಂಧ ಶ್ರದ್ಧೆಯಿಂದ ಬಂದವರಿದ್ದರು. ಹಿಂಸಾತ್ಮಕ ಹೋರಾಟದ ನೆವ ಮುಂದೆಮಾಡಿ ದರೋಡೆ ಲೂಟಿಗಳನ್ನೂ ಸಾಧಿಸಿಕೊಂಡು ಗಾಳಿಬಿಟ್ಟಾಗ ತೂರಿಕೊಂಡವರೂ ಅದರಲ್ಲಿದ್ದರು. ರಾಜಕೀಯ ಸ್ಥಿತಿಗಳನ್ನೂ ಪರಿಶೀಲಿಸಿ ಮುಂದೇನು ಎಂಬ ವಿಚಾರದಲ್ಲಿ ತಲ್ಲೀನರಾದವರಂತೆ, ರಾಜಕೀಯ ಪರಸ್ಥಿತಿ ಎಂದರೇನು ತಾವು ಸೆರೆಮನೆಯಲ್ಲಿ ಏಕೆಬಂದದ್ದು ಎಂಬೀ ವಿಚಾರಗಳಗಾಳಿಯು ಕೂಡ ಹತ್ತದವರೂ ಅವರಲ್ಲಿದ್ದರು. ದೇಶದಲ್ಲಿ ನಡೆದುದು ಪೋಲಿಸರೊಡನೆ ಯುದ್ಧ ಎಂದು ಹೇಳುವವರೂ ಕಂಡುಬರುತ್ತಿದ್ದರು. ಇದರಿಂದ ಪ್ರೊ. ಅವ

ಧಾನಿಯವರ ಮನಸ್ಸಿನಮೇಲೆ ವಿಚಿತ್ರ ಪರಿಣಾಮವಾಯಿತು. ಇಷ್ಟು ಜನ ವ್ಯರ್ಥವಾಗಿ ಸಿಕ್ಕುಬಿದ್ದು ಏನನ್ನೂ ಸಾಧಿಸದಂತಾಯಿತು ಎಂಬ ವಿಚಾರವೂ ಅವರನ್ನು ಬಾಧಿಸತೊಡಗಿತು. ತಮ್ಮಂಥ ಸಾವಿರಾರು ಜನಸಾಯುತ್ತ ಬಿದ್ದರೂ ಅತ್ತ ಹೊರಗೆ ಸರಕಾರವು ಯಥಾ ಪ್ರಕಾರ ಸಾಗಿದೆ, ಏನು ಪುರುಷಾರ್ಥ ಸಾಧಿಸಿದಂತಾಯಿತು? ಹೊರಗೆ ಇದ್ದರೆ ಬ್ರಿ. ಸರಕಾರಕ್ಕೆ ಚಳ್ಳಹಣ್ಣು ತಿನಿಸ ಬಹುದಾಗಿತ್ತು ಎಂಬೀ ವಿಚಾರಗಳು ಅವರನ್ನು ಸುತ್ತುತ್ತಿದ್ದವು.

ಮರುಕ್ಷಣದಲ್ಲಿಯೇ ಮಹಾತ್ಮರ ಪ್ರಭಾವದ ಪ್ರತೀತಿ ಅವರಿಗೆ ಆಗುತ್ತಿತ್ತು. ರಾಜಕೀಯ ಸೆರೆಯಾಳುಗಳನ್ನು ಮತ್ತು ಸಾಮಾನ್ಯ ಸೆರೆಯಾಳುಗಳನ್ನು ನಡೆಸಿಕೊಳ್ಳುವಲ್ಲಿ ಮಹದಂತರ ಕಂಡುಬರುತ್ತಿತ್ತು. ರಾಜಕೀಯ ಸೆರೆಯಾಳುಗಳು ಮನುಷ್ಯರೆಂದು ಭಾವಿಸಿ ಸೆರೆಮನೆಯ ಅಧಿಕಾರಿಗಳು ವರ್ತಿಸುತ್ತಿದ್ದರು, ಆದರೆ ಸಾಮಾನ್ಯ ಸೆರೆಯಾಳುಗಳಿಗೆ ಅವರು ಎಳ್ಳಷ್ಟು ಮಹತ್ವ ಕೊಡುತ್ತಿರಲಿಲ್ಲ. ಕೊಲೆ ಸುಲಿಗೆಮಾಡಿ ಸೆರೆಮನೆ ಹೊಕ್ಕವರೂ 'ಗಾಂಧೀ ಜನರನ್ನು' ಅತ್ಯಂತ ಆದರದಿಂದ ಕಾಣುತ್ತಿದ್ದರು. ಒಮ್ಮೊಮ್ಮೆ ಕಾಲುಮುಟ್ಟಿ ನಮಸ್ಕಾರ ಮಾಡುತ್ತಿದ್ದರು. ತಮ್ಮನ್ನು ಹತ್ತಿಕ್ಕುವಲ್ಲಿಯೂ ಸರಕಾರಕ್ಕೆ ಅಂಜಿಕೆಯಿದೆಂದು ಅವರಿಗೆ ಅನಿಸುತ್ತಿತ್ತು.

ಕರ್ಮ ಧರ್ಮ ಸಂಯೋಗದಿಂದ ಪ್ರೊ. ಅವಧಾನಿಯವರಿಗೆ ಸ್ಪೇಶಿಲ್ ವರ್ಗದಲ್ಲಿದ್ದ ವರಿಷ್ಠ ಸ್ಥಾನಬದ್ಧರೊಬ್ಬರ ಪರಿಚಯವಾಯಿತು. ಈ ಮಹನೀಯರು ಹಿಂದಕ್ಕೊಮ್ಮೆ ಬ್ರಿಟಿಶ್ ಸರಕಾರದ ಆಧಾರ ಸ್ತಂಭರಾಗಿ ಒಡೆ ಮತ್ತು ಆಳು ಎಂಬ ಅವರ ಕಾಯಕಕ್ಕೆ ಪುಷ್ಟಿಕೊಡಲು ಉಪಜಾತೀಯತೆಯ ವಿಷ ಬೀಜಗಳನ್ನು ಬಿತ್ತಿ ತಮ್ಮ ಜೋಳಿಯನ್ನು ಬೇಯಿಸಿಕೊಂಡಿದ್ದರು. ಪ್ರತಿ ವರ್ಷದ ಬಿರುದುದಾನದ ಸುಗ್ಗಿಯಲ್ಲಿ ಇವರ ಬುಟ್ಟಿಯೂ ತುಂಬುತ್ತಿತ್ತು. ಆದರೆ ೧೯೩೭ರಲ್ಲಿ ಹೊಸ ಕಾನೂನಿನ್ವಯ ಚುನಾವಣೆಗಳು ನಡೆಯುವುದನ್ನು ಕಂಡು ಮಹನೀಯರ ಹೃದಯಪಲ್ಲಟವಾಯಿತು! ಅವರು ತಮ್ಮ ಬಿರುದುಗಳನ್ನು ಬಿಸುಡಿ ಕಾಂಗ್ರೆಸಿಗೆ ಸೇರಿದರು. ಚುನಾವಣೆಗೆ ನಿಂತರು. ಆರಿಸಿ ಬಂದರು. ಬ್ರಿಟಿಶ್ ಆಧಾರ ಸ್ತಂಭರಾಗಿದ್ದವರು ಕಾಂಗ್ರೆಸ್ ಎಂ. ಎಲ್. ಎ. ! ಬೇಡರವನಾಗಿದ್ದ ವಾಲ್ಮಿಕೀ ದೊಡ್ಡ ಋಷಿಯಾಗಲಿಲ್ಲವೆ ಹಾಗೆ, ಎಂದು ವೃತ್ತಪತ್ರಗಳು ಅವರನ್ನು ಕೊಂಡಾಡಿದವು.

ಮಹನೀಯರಿಗೆ ಓದುವ ಹುಚ್ಚು ಬಹಳ. ಆದರೆ ಸ್ವತಃ ಓದಲು ಬೇಜಾರ. ಯಾರಾದರೂ ಓದಬೇಕು, ತಾವು ಕೇಳಬೇಕು ಇದೇ ಅವರ ಪದ್ಧತಿ. ಸೆರೆಮನೆಯಲ್ಲೂ ಅದು ಅವರಿಗೆ ಸಾಧ್ಯವಾಯಿತು! ಅವರು ಸ್ಪೇಶಲ್-ಕ್ಲಾಸಿನಲ್ಲಿಯವರು, 'ವಸೀಲೆ' ಇದ್ದವರು "ವಸೀಲೆ" ಹಚ್ಚಬಲ್ಲವರು. ಕೇಳುವ ದೇನು? ಮೂರನೆ ವರ್ಗದಲ್ಲಿದ್ದ ಪ್ರೊ. ಅವಧಾನಿಯವರಿಗೆ ಸೆರೆಮನೆಯ ಅಧಿಕಾರಿಗಳು ದಿನಾಲು ಮುಂಜಾನೆ ಮಹನೀಯರ ಕೋಣೆಗೆ ಹೋಗಬಹುದೆಂದು ಖಾಸಗಿ ರೀತಿಯಿಂದ ತಿಳಿಸಿದರು. ಪ್ರೊ. ಅವಧಾನಿಯವರಿಗೂ ಹೊರಗಿನ ಜಗತ್ತಿನ ಸಂಬಂಧ ಬೇಕಾಗಿತ್ತು. ಹೇಗಾದರೂ ಎಲ್ಲಿಯಾದರೂ ವೃತ್ತಪತ್ರ ಓದಲು ಸಿಕ್ಕರೆ ಸಾಕೆಂದು ಅವರಿಗೆ ಅನಿಸುತ್ತಿತ್ತು. ಮೇಲೆ ದೊಡ್ಡವರ ಸಹವಾಸದ ಯೋಗ. ಅವರು ಕೂಡಲೇ ಒಪ್ಪಿದರು.

ಮಹನೀಯರಹೃದಯದಲ್ಲಿ ಮತ್ತೆ ದೊಡ್ಡ ಸ್ಥಿತ್ಯಂತರವಾಗುವ ಲಕ್ಷಣಗಳು ಕಾಣತೊಡಗಿದ್ದವು. ಮನೆಯ ಸುಖ ಸೌಲಭ್ಯಗಳನ್ನು ಮುಖ್ಯವಾಗಿ ತರುಣ ಪತ್ನಿಯ ಸಹವಾಸವನ್ನು ಬಿಟ್ಟು ಇರುವದು ಅವರಿಗೆ ದುಃಸಹವಾಗಿದ್ದಿತು. ಅಲ್ಲಿ ಅವರಿಗೆ ಯಾವ ಸುಖಕ್ಕೂ ಕಡಿಮೆ ಇಗಿಲಿಲ್ಲ. ಆದರೂ ಸೆರೆಮನೆ ಸೆರೆಮನೆಯೇ.

ಆಗಾಗ್ಗೆ ಈರ್ವರಲ್ಲಿ ಚರ್ಚೆನಡೆಯುತ್ತಿತ್ತು. ಮಹನೀಯರು ಹೇಳುತ್ತಿದ್ದರು:– ನೋಡಿರಿ ಇದೆಲ್ಲ ವ್ಯರ್ಥ. ಗಾಂಧೀಜೀಯ ನೈತಿಕ ಧೈರ್ಯ ದೊಡ್ಡದು, ಆದರೆ ಪಾಶವಿ ಬಲವನ್ನು ನೈತಿಕ ಬಲದಿಂದ ಎದುರಿಸುವದು ಯಶಸ್ವಿಯಾಗಲಾರದು. ನಾವು ಹೇಗಾದರೂಮಾಡಿ ಹೊರಬೀಳೋಣ. "

ಪ್ರೊ. ಅವಧಾನಿಯವರಿಗೆ ಅವರ ಮಾತಿನ ಅರ್ಥವಾಗುತ್ತಿರಲಿಲ್ಲ. ಒಂದುದಿನ ನಗುತ್ತ ಅವರು ಹೇಳಿದರು:– ಹೊರಬೀಳುವದು ನಮ್ಮಂಥವರಿಗೆ ಸಾಧ್ಯವಿಲ್ಲ. ಹುಟ್ಟಿದಂದಿನಿಂದಲೂ ತುಡುಗು ದರೋಡೆಗಳಲ್ಲಿ ತರಬೇತಿಹೊಂದಿದವರು ಎಲ್ಲರಿಗೆ ನೀರುಕುಡಿಸಿ ಪಾರಾಗಬಹುದು. ನಮ್ಮನ್ನು ಹೊರಗೆ ಮಹಾದ್ವಾರದವರೆಗೆ ಒಯ್ದು ನಿಲ್ಲಿಸಿದರೂ ಮುಂದೆ ಯಾವ ಹಾದಿ ಎಲ್ಲಿಗೆ ಹೋಗುವದೆಂದು ಪೋಲೀಸನನ್ನೇ ಕೇಳಿ ನಾವು ಅವನ ಕೈಯಲ್ಲಿ ಸಿಕ್ಕುಬೀಳುವವರು"

ಮಹನೀಯರೂ ನಕ್ಕರು. ಆದರೆ ಅವರ ಮನೋವೇಗ ಶಾಂತವಾಗಲಿಲ್ಲ.

ಒಂದು ದಿವಸ ಯಾವದೊ ವಿಷಯದ ಚರ್ಚೆ ನಡೆದ ಕಾಲಕ್ಕೆ, ಮಹ ನೀಯರು ತಮ್ಮ ನಿಜವಾದ ಮನೀಷೆಯನ್ನು ಪ್ರಕಟಿಸಿದರು. ಮಹಾತ್ಮರ ಮಾರ್ಗ ಸರಿ ತೋರುವದಿಲ್ಲವೆಂದು ಸಾರಿ ಸೆರೆಮನೆಯಿಂದ ಹೊರಬಿದ್ದರೆ ಎಂದು ಅವರುಕೇಳಿದರು.

"ಸಾರಿ? " --ಪ್ರೊ. ಅವಧಾನಿ.

"ಸಾರಿ ಅಂದರೆ ಬರೆದುಕೊಟ್ಟು, " ಎಂದು ಮಹನೀಯರು ಭಾಷ್ಯ ಹೇಳಿದರು.

ಪ್ರೊಫೆಸರರಿಗೆ ಇದು ರುಚಿಸಲಿಲ್ಲ. 'ಮಹಾತ್ಮರ ಮಾರ್ಗ ನಮಗೆ ಸರಿ ಕಾಣಲಿ ಇಲ್ಲವೆ ಬಿಡಲಿ. ನಾವು ಬ್ರಿಟಿಶರ ಶತ್ರುಗಳೆಂದು ಸೆರೆಮನೆಯನ್ನು ಸೇರಿರುವಾಗ ಅವರಿಗೆ ಶರಣು ಹೊಡೆದು ಹೊರಗೆ ಹೋಗಲಾರೆವು. ಕಿಲೀ ಮುರಿದು, ಗೋಡೆ ಜಿಗಿದು ಹೊರಬೀಳಲಿಚ್ಛಿಸುವಿರಿ ಆದರೆ ನಾನು ನಿಮ್ಮ ಜೊತೆಗೆ ಬರುತ್ತೇನೆ' ಎಂದು ಅವರು ಸ್ಪಷ್ಟವಾಗಿ ಹೇಳಿದರು.

ಮಹನೀಯರು ನಿರುತ್ತರರಾದರು. ಆದರೆ ನಿಷ್ಕ್ರೀಯರಾಗಲಿಲ್ಲ. ಒಂದೆರಡು ದಿವಸಗಳಲ್ಲಿ ಕಾಂಗ್ರೆಸು ಹೂಡಿದ ಹೋರಾಟಕ್ಕೆ ತಮ್ಮ ವಿಶ್ವಾಸ ವಿಲ್ಲೆಂದೂ ಆ ಹೋರಾಟದಲ್ಲಿ ತಾವು ಭಾಗತೆಗೆದುಕೊಳ್ಳುವದಿಲ್ಲವೆಂದೂ ಬರೆದುಕೊಟ್ಟು ಅವರು ಬಿಡುಗಡೆಹೊಂದಿದರು.

ಹೊರಗೆ ಆಂದೋಲನವು ಹಾಗೆಯೇ ಸಾಗಿದ್ದಿತು. ವೃತ್ತಪತ್ರಗಳಲ್ಲಿ ಸೋಸಿ ಸೋಸಿ ಬಂದ ಸುದ್ದಿಗಳನಷ್ಟೇ ನೋಡಿದರೂ ಇನ್ನೂ ಜನರ ಹುರುಪು ಹಾಗೆಯೇ ಇದೆಂದು ಪ್ರೊಫೆಸರರಿಗೆ ಧೈರ್ಯಬರುತ್ತಿತ್ತು. ಪೋಸ್ಟ ಆಫೀಸ ಗಳು, ತಂತಿಯ ಕಂಬಗಳು ಗೌಡ ಕುಲಕರ್ಣಿಯರ ಕಾಗದಪತ್ರಗಳು ಪ್ರಜೆ ಗಳ ಕ್ರೋಧಕ್ಕೆ ಆಹುತಿಯಾಗುತ್ತಿದ್ದವು. ಎಷ್ಟೋ ಕಡೆಗೆ ರೇಲ್ವೆಗಾಡಿಗಳು, ಸೇತುವೆಗಳು ಉರುಳಿದ್ದವು. ಇತ್ತ ಬಂಧನ ಸತ್ರವೂ ಅಷ್ಟೇ ಜೋರಿನಿಂದ ಸಾಗಿತ್ತು. ದಿನಾಲು ಹತ್ತಿಪ್ಪತ್ತು ಜನರು ಸೆರೆಮನೆಗೆ ಬಂದೇ ಬರುತ್ತಿದ್ದರು. ಗೋಳಿಬಾರು, ಅಶ್ರುವಾಯು, ಲಾಠಹಲ್ಲೆ, ಸಾಮೂದಾಯಿಕ ದಂಡ ಇವು ನಿತ್ಯದ ವಿಷಯಗಳಾಗಿದ್ದವು.

ಇಷ್ಟರಲ್ಲಿ ಒಂದು ಮಹತ್ವದ ಸ್ಥಿತ್ಯಂತರವಾಯಿತು. ಸ್ವಾತಂತ್ರ್ಯ ಹೋರಾ ಟದಲ್ಲಿ ನಡೆದ ಹಿಂಸಾತ್ಮಕ ಘಟನೆಗಳಿಗೆ ಬ್ರಿ. ಸರಕಾರವೇ ಕಾರಣವೆಂದು

ಮಹಾತ್ಮರು ಸೆರೆಮನೆಯಿಂದ ಸಾರಿದರು. ಸ್ವಾತಂತ್ರ್ಯ ಹೋರಾಟ ಪ್ರಾರಂಭವಾಗುವ ಮೊದಲೆ ಮುಖಂಡರು ಬಂಧಿಸಲ್ಪಟ್ಟದ್ದರಿಂದ ಸ್ಥಾನಿಕ ಮುಖಂಡರೆ ಮುಖಂಡರಾಗಿದ್ದರು. ಬ್ರಿ. ಸರಕಾರದ ವಿರುದ್ಧವಾಗಿದ್ದ ಯಾವದೇ ಕೃತ್ಯವು ಹೋರಾಟವೆನಿಸತೊಡಗಿತ್ತು. ಆದಕ್ಕೆ ಮಹಾತ್ಮರನ್ನು ಮೊದಲು ಮಾಡಿಕೊಂಡು ಎಲ್ಲ ಮುಖಂಡರ ಆಶೀರ್ವಾದ ಇದ್ದೇ ಇದೆಯೆಂಬ ಭರವಸೆಯಿಂದ ಜನಸಾಗಿತ್ತು. ಆದರೆ ಮಹಾತ್ಮರ ಅಭಿಪ್ರಾಯ ಪ್ರಕಟವಾದೊಡನೆ ಹೋರಾಟದಲ್ಲಿಯ ರಭಸವು ಕಡಿಮೆಯಾಯಿತು. ಬ್ರಿ. ಸರಕಾರದ ಮದ್ದುಗುಂಡುಗಳಿಗೆ ಹಣಿಯದ ಹೋರಾಟವು ಮಹಾತ್ಮರ ಒಂದೇ ಮಾತಿನಿಂದ ನಿಂತಿತು. ಹಿಂಸಾತ್ಮಕವಾಗಲಿ ಅಹಿಂಸಾತ್ಮಕವಾಗಲಿ ಹೋರಾಟವು ಸಾಗಿಯೇ ಸಾಗಬೇಕು, ಯಶಸ್ಸುದೊರೆತರಾಯಿತು ಎಂದು ಪ್ರೊಫೆಸರರ ಮತ. ಹೋರಾಟವು ತಣ್ಣಗಾದ್ದರಿಂದ ಅವರ ಮನ ಅಲ್ಲೋಲಕಲ್ಲೋಲವಾಯಿತು. ಮಹನೀಯರ ವಿಚಾರವು ಅವರಿಗೆ ಸರಿ ಎನಿಸತೊಡಗಿತು.

ಮಾನವೀಯ ವಿಪತ್ತುಗಳನ್ನು ಎದುರಿಸಬಹುದು. ಆದರೆ ದೈವಿಕ ವಿಪತ್ತನ್ನು ಎದುರಿಸುವದು ಕಷ್ಟ. ಹಾಗೂ ಹೀಗೂ ತಮ್ಮ ಮನಸ್ಸಿನ ಸಮತೂಕ ಕಾಯ್ದುಕೊಳ್ಳಲೆತ್ನಿಸುತ್ತಿದ್ದ ಅವರಿಗೆ ಮನೆಯಿಂದ ಒಂದು ಪತ್ರಬಂದಿತು. ಕನಕಲತೆ ವಿಷಮಜ್ವರದಿಂದ ಹಾಸಿಗೆಹಿಡಿದಿದ್ದಾಳೆಂದೂ ಕೂಡಲೇ ಬಂದರೆ ಮಾತ್ರ ಅವಳ ಮೋರೆಯನ್ನು ಕಾಣುವದು ಶಕ್ಯವೆಂದೂ ಅದರಲ್ಲಿ ಬರೆದಿತ್ತು. ಪತ್ರವನ್ನು ಅಧಿಕಾರಿಗಳಿಗೆ ಕಳಿಸಿಕೊಟ್ಟರು. ಉತ್ತರಬರಲಿಲ್ಲ. ನಾಲ್ಕೆಂಟು ದಿನ ಹಾಗೆಯೇ ಉರುಳಿದವು. ಮುಂಬಯಿ ಪೋಲೀಸ ಅಧಿಕಾರಿಗಳ ಕಡೆಯಿಂದ ಆಜ್ಞೆ ಬರಬೇಕೆಂದು ಅಲ್ಲಿಯ ಜಿಲ್ಹಾ ಮ್ಯಾಜಿಸ್ಟ್ರೇಟರು ತಿಳಿಸಿದರು. ಇಷ್ಟೆಲ್ಲ ವಿಳಂಬವಾಗುವತನಕ ತಮ್ಮ ಮಡದಿ ಇಹಲೋಕವನ್ನು ಬಿಡಬಹುದೆಂದು ಅವರು ಹೇಳಿದರು. ಜಿಲ್ಹಾ ಮ್ಯಾಜಿಸ್ಟ್ರೇಟರು ಆಯುತ್ತಾಗಿ ಮತ್ತೊಂದು ಬೇಟಿ ಸಿಕ್ಕಿತೆಂದು, ಕ್ಷಮಾಯಾಚನೆಮಾಡಿದರೆ ಕೂಡಲೆ ಬಿಡುಗಡೆಮಾಡುವದಾಗಿ ತಿಳಿಸಿದರು. ನಿರುಪಾಯರಾಗಿ ಪ್ರೊಫೆಸರರು ಕ್ಷಮೆಬೇಡಿ ಮಹನೀಯರಂತೆ ತಾವೂ ಹೊರಬಿದ್ದರು ಮತ್ತು ನೇರವಾಗಿ ಮುಂಬಯಿಗೆ ಬಂದರು.

ಅವರು ಮುಂಬಯಿಗೆ ಬರುವ ಮೊದಲೇ ಅವರು ಕ್ಷಮಬೇಡಿಬಂದವರೆಂದು ಸುದ್ದಿಹಬ್ಬಿಬಿಟ್ಟಿತ್ತು. ಖಾಸವಿದ್ಯಾರ್ಥಿ ವಿದ್ಯಾರ್ಥಿನಿಯರು ಅತ್ಯಾದರಗಳಿಂದ

ಬಂದು ಲಾಕ್‌ಪ್ಪಿನಿಲ್ಲಿ ಉಪಹಾರಾದಿಗಳನ್ನು ಒದಗಿಸಿದರೋ ಅವರೇ ತಂಡ ತಂಡವಾಗಿ ಬಂದು ಅವರಿಗೆ ಥೂ ಎಂದು ಹೋದರು. ಒಬ್ಬಳಂತೂ ಮುಂದೆ ಬಂದು ಅವರ ಕೈಗೆ ಬಳೆತೊಡಿಸಿದಳು! ಅವರು ಬರುವಷ್ಟರಲ್ಲಿ ಕನಕಲತೆಯ ಅವತಾರವು ಸಮಾಪ್ತಿಯಾಗಿ ಹೋಗಿತ್ತು. ಕೇವಲ ಪದ್ಮಜಾ ಮತ್ತು ಮೃದುಳಾಬೆಹನರು ಅವರಿಗೆ ಸಹಾನುಭೂತಿಯ ನಾಲ್ಕುಮಾತುಗಳನ್ನು ಹೇಳಿ ಸಾಂತ್ವನಮಾಡಿದರು.

ಶೇಠ ಗಗನಲಾಲರು ಓಜಸ್ವಿಪುರ ಎಂಬ ವೈಭವಪುರದ ಒಂದು ಹಳ್ಳಿಯಲ್ಲಿ ಕಪ್ಪುಬಸಿಗೆ ಬೇಕಾಗುವ ಬಿಳಿಯ ಮಟ್ಟಿ ಸಿಗುತ್ತದೆಂದು ಅಲ್ಲಿಗೆ ಪದ್ಮನಾಭನನ್ನು ಕಳಿಸಿಕೊಟ್ಟಿದ್ದರು. ಮುಂಬಯಿ ಉಪನಗರದಲ್ಲಿ ಒಂದು ಕಪ್ಪು ಬಸಿಯ ಕಾರ್ಖಾನೆ ಹೊರಡಿಸುವ ವಿಚಾರದಲ್ಲಿ ಅವರು ತೊಡಗಿದ್ದರು.

ಪ್ರೊ. ಅವಧಾನಿಯವರು ಅಕ್ಷರಶಃ ಏಕಾಕಿಯಾದರು. ಮುಂಬಯಿ ತಮ್ಮನ್ನು ತಿನ್ನಲೆದ್ದಿದೆಂದು ಅವರಿಗೆ ಅನಿಸತೊಡಗಿತು. ಅಲ್ಲಿರುವದು ಅವರಿಗೆ ಅಸಾಧ್ಯವೆನಿಸತೊಡಗಿತು. ಕ್ಷಮೆಬೇಡಿ ಬಂದುದರಿಂದ ಅವರಿಗೆ ಮತ್ತೆ ಕಾಲೇಜಿನಲ್ಲಿ ಪ್ರವೇಶದೊರೆಯಬಹುದಾಗಿತ್ತು. ಆದರೆ ವಿದ್ಯಾರ್ಥಿಗಳ ಕೋಪವನ್ನು ಎದುರಿಸುವದು ಅಸಾಧ್ಯವೆಂದು ಅವರು ಆ ವಿಚಾರವನ್ನು ಬಿಟ್ಟುಕೊಟ್ಟರು. ಕಾಲೇಜ ಪ್ರಿನ್ಸಿಪಾಲರಿಗೆ ಪ್ರೊಫೆಸರರ ಬುದ್ಧಿಮತ್ತೆಯ ಅರಿವು ಚನ್ನಾಗಿದ್ದಿತು. ಆದರೆ ವಿರುದ್ಧ ಎದ್ದ ವಿದ್ಯಾರ್ಥಿಗಳೆದುರು ಅವರ ಆಟ ನಡೆಯಲಾರದೆಂದೂ ಅವರಿಗೆ ಗೊತ್ತಿತ್ತು. ಅಂತೆಯೇ ಅವರು ಪ್ರೊಫೆಸರರನ್ನು ಕರೆಯಿಸಿ ವೈಭವಪುರ ಸಂಸ್ಥಾನದ ದಿವಾಣಪದವು ತೆರವಿದೆ ಅಲ್ಲಿ ಪ್ರಯತ್ನಿಸಬಹುದೆಂದು ಸೂಚಿಸಿದರು. ರಾಜಕೀಯ ಹೋರಾಟಕ್ಕೆ ಸಂಬಂಧವಿಲ್ಲೆಂದು ಬರೆದುಕೊಟ್ಟಿದುದರಿಂದ ದಿವಾಣ ಪದವನ್ನು ದೊರಕಿಸುವದು ಅವಧಾನಿಯವರಿಗೆ ಸುಕರವಾಯಿತು,

ಹುಟ್ಟಿಮೊದಲನೇ ಸಾರೆ ಪ್ರೊ. ಅವಧಾನಿಯವರು ಸಂಸ್ಥಾನದಲ್ಲಿ ನೌಕರಿಹಿಡಿದರು. ಮೊಟ್ಟಮೊದಲನೇ ಸಾರೆ ವೈಭವಪುರ ಸಂಸ್ಥಾನಕ್ಕೆ ತರುಣ ದಿವಾಣನು ದೊರೆತನು. ಬ್ರಿ. ಹಿಂದುಸ್ಥಾನದಲ್ಲಿ ಕೊಲೆ ದರೋಡೆಗಳನ್ನು ಮಾಡಿದವರು ಸಂಸ್ಥಾನದಲ್ಲಿ ಅಡಗುವಂತೆ, ಬ್ರಿ. ಹಿಂದುಸ್ಥಾನದಲ್ಲಿ ಅಧಃ

ಘಾತವಾದ ನಾನು ಸಂಸ್ಥಾನದಲ್ಲಿ ಆಶ್ರಯ ಹೊಂದುತ್ತಿದ್ದೇನೆಂದು ನಿಟ್ಟುಸುರು ಬಿಟ್ಟು ಅವರು ವೈಭವಪುರದಲ್ಲಿ ಕಾಲಿಟ್ಟರು.

## ರಕ್ತಸಂಬಂಧ

ವೈಭವಪುರದ ಪೋಸ್ಟ್ ಆಫೀಸು ಒಂದು ಸಂಸ್ಥಾನದ ರಾಜಧಾನಿಯ ಪೋಸ್ಟ್ ಆಫೀಸಾಗಿತ್ತಾದರೂ ಸಣ್ಣದೇ ಇದ್ದಿತು. ವ್ಯವಹಾರವು ವಿಶೇಷ ವಿದ್ದಿಲ್ಲ ಆದ್ದರಿಂದ ಪೋಸ್ಟ್ ಮಾಸ್ತರರಿಗೆ ವೇಳೆಯನ್ನು ನೂಕಲು ಉಪಾಯ ಹುಡುಕಬೇಕಾಗುತ್ತಿತ್ತು. ಹಿಂದಿನ ಪೋಸ್ಟ್ ಮಾಸ್ತರರು ನಿದ್ರೆಯಿಂದಲೊ, ಅಥವಾ ಪುಸ್ತಕಗಳನ್ನು ಓದುತ್ತ ಆಗಲಿ, 'ಕುಟುಂಬ'ಕ್ಕೆ ತೊಂದರೆಯಾಗ ಬಾರದೆಂದು ಹುಡುಗರನ್ನು ಅಲ್ಲಿ ತಂದು ಆಡಿಸಿ ಆಗಲಿ ಅಥವಾ ಇಸ್ಪೇಟ ಚದುರಂಗ ಮೊದಲಾದ ಆಟಗಳಿಂದಾಗಲಿ ವೇಳೆಯನ್ನು ನೂಕುತ್ತಿದ್ದರು. ಆದರೆ ಸದ್ಯದ ಪೋಸ್ಟ್ ಮಾಸ್ತರರು ಹೀಗೇನು ಮಾಡುತ್ತಿರಲಿಲ್ಲ. ಮಿತ್ರ ರಾಷ್ಟ್ರಗಳು ತಾವು ಹಿಟ್ಲರನ ವಿರುದ್ಧ ಹೂಡಿದ ಯುದ್ಧವು ಜಗತ್ತಿನಲ್ಲಿ ಪ್ರಜಾ ಪ್ರಭುತ್ವದ ಸುರಕ್ಷಿತತೆಗಾಗಿ ಎಂದು ಸಾರಿದ್ದವು. ಅವರ ವಿಜಯವು ದಿನ ದಿನಕ್ಕೆ ನಿಶ್ಚಯವಾಗುತ್ತ ಬಂದಂತೆ ಪ್ರಜಾಪ್ರಭುತ್ವಕ್ಕೂ ಏರಿಕೆಯ ಕಾಲ ಬಂದಂತಾಗಿತ್ತು. ಅದರ ಪರಿಣಾಮವು ಜಗತ್ತಿನಲ್ಲಿ ಬೇರೆಕಡೆಗೆ ಏನುಆಯಿತೊ ಇಲ್ಲವೊ ತಿಳಿಯದು. ಆದರೆ ವೈಭವಪುರದ ಚಿಕ್ಕ ಪೋಸ್ಟ್ ಆಫೀಸಿನ ತರುಣ ಮಾಸ್ತರರು ಪ್ರಜಾಪ್ರಭುತ್ವದ ಪ್ರಭಾವಕ್ಕೆ ಒಳಗಾದರು. ಪೋಸ್ಟ್ ಆಫೀಸಿನ ಅಧಿಕಾರಿಗಳು ತಾವೇ ಆಗಿದ್ದರೂ ಅದು ಜನರದೆಂದು ಭಾವಿಸಿ ಅವರು ಅದನ್ನು ಮಿತ್ರ ವರ್ಗಕ್ಕೆ ಮುಕ್ತದ್ವಾರವಮಾಡಿದ್ದರು. ಪೋಸ್ಟ್ ಆಫೀಸು ಹರಟೆಯ ಅಡ್ಡೆಯಾಗಿತ್ತು. ಪೋಸ್ಟ್ ಮಾಸ್ತರರ ವೇಳೆ ನೂಕುವ ಸಮಸ್ಯೆಯು ಇದರಿಂದ ಬಗೆಹರಿದಿತ್ತು.

'ಹೊಸ ದಿವಾಣರ ಸಮಾಚಾರವೇನು?', ಎಂದು ಒಂದು ದಿನ ಅಡ್ಡೆಯ ಸದಸ್ಯನೊಬ್ಬನು ಹರಟೆಯನ್ನು ಪ್ರಾರಂಭಿಸಿದ.

'ವೈಭವಪುರಕ್ಕೆ ಮುದುಕ ದಿವಾಣರ ಸಂಗತಿ ತಪ್ಪಿತಪ್ಪಾ ಚಲೋ ಆತು.', ಎಂದ ಇನ್ನೊಬ್ಬ

'ಹಗಲು ರಾತ್ರಿ ಒಂದೇ ಸವನೆ ಕೂತು ಎಲ್ಲಾ ಖಟ್ಲಿ ಪ್ರಕರಣ ಮುಗಿಸಿ ಒಗಿಲೀಬತ್ತಾನಂತs ಈ ಅವಧಾನಿ.'

"ಕಚೇರ್‍ಯಾಗಿನ s ಮುದಕರನ್ನೆಲ್ಲ ಮನೀಗೆ ಕಳಿಸಿ ಅಲ್ಲಿ ತರುಣರ ತುಂಬತಾನಂತ. ! "

'ಸಂಸ್ಥಾನದ ದುಡ್ಡು ಪೈ ನೌಕರಿಗೆ ಬರವರ್‍ಯಾರೊ? '

"ಪಗಾರ ಹೆಚ್ಚ ಮಾಡತಾನಂತ."

" ಪಿಂಗೀ ಊದಿ ರೊಕ್ಕ ಹುಟ್ಟಿಸತಾನೇನsವ ? ರೊಕ್ಕ ಎಲ್ಲಿಂದ ತರತಾನ ? "

" ಸಂಸ್ಥಾನದ ಉತ್ಪನ್ನ ಹೆಚ್ಚಿಸತಾನಂತ. ಸಕ್ಕರೆ ಕಾರ್ಖಾನೆ ಸುರುಮಾಡತಾನಂತ! "

" ಅಂತ. ಅಂತ. ಅಂತ. ಅಂತ ಆಗಿ ಹೋಗತಾನ ತೀರಿತು. ರಾಟಿ ಮ್ಯಾಲ ನೂಲತಗ್ಯಾವ ಒಂದು ಮಾರಿನಿಗಿಂತ ಹೆಚ್ಚು ಉದ್ದ ನೂಲ ತಗೀಲಾರ. ಗೊತ್ತದ ಇಲ್ಲೊ ? ಅಲ್ಲೊ, ಇಬ್ಬನ್ನಿ ಕಾಯಂ ಆದ ಬೇರು ಊರಿದ ಅಂದರಿ.. ಹೋದ ಇಲ್ಲೊ ಅವ ಹಳ್ಳ್ಯಾಹಿಡದು ? ಅವಧಾನಿನೂ ಎರಡದಿನದಾವಾನೇಪಾ "

" ಅಲ್ರ್ಯೊ ಮತ್ತೊಂದು ಕೇಳಿದ್ರೇನು ನೀವು ? ಸಂಸ್ಥಾನಕ್ಕ ತರುಣ ದಿವಾಣಬಂದ ಖರೆವು, ಆದರೆ ಶತ್ರುಪತಿ ಮುದುಕನಂಗ ಆಗ್ಯಾನಂತ."

" ಹೌಂದಂತೊ s. ನಮ್ಮ ಮುಸರೀ ತಿಕ್ಕಾಕಿ ಗಂಡ ರಾಜವಾಡೇದ ತೋಟದಾದ ಕೆಲಸಕ್ಕಿದ್ದಾನ. ಆವ ಅಕೀಗೆ ಹೇಳತ್ತಿದ್ದನಂತ ಶತ್ರುಪತಿ ಸೊರಗಿ ಸೊರಗಿ ಕಡ್ಡಿ ಆಗ್ಯಾನಂತ. "

" ಹುಚ್ಚಾ ನಿಮ್ಮ ಮುಸರಿ ತಿಕ್ಕಾಕಿ ಯಾತಕ್ಕಬೇಕು ಊರಾಗಿನ ಡಂಗರ ಹೊಡಿಲಿಕತ್ತದ. ಹವಾ ಬದ್ಲಾಸಲಿಕ್ಕೆ ಶತ್ರುಪತಿ ವಿದ್ಯಾನಗರ ಬಿಟ್ಟು ಇಲ್ಲಿಗೆ ಬಂದಂತ. ಗೊತ್ತಿಲ್ಲೇನು ? "

"ನೋಡ ದಾಮ್ಯಾ ಮದವೀ ಮಾಡಿಕೊಳ್ಳದವರ ಹಣೇಬಾರ ಹ್ಯಾಂಗ ಆಗತದ. ನೀ ಹ್ಯಾಂಗ ಬಂದ ಹೆಣ್ಣೆಲ್ಲ ಬಿಟ್ಟ ಈಗ ಒಣಗನಾರತಿ s ಹಾಂಗ

ಆಗೇದ ಶತ್ರುಪತಿ ಸ್ಥಿತಿ. ಸುರಂಗವಾಡದ ಸಂಸ್ಥಾನಿಕನ ಮಗಳನ್ನ ಮಾಡಿಕೊಂಡಿದ್ದರ ಇವನದೇನ ಗಂಟು ಹೋಗತಿತ್ತಪಾ ? "

'ಮತ್ತೇನಪಾ, ಅದೇನೋ ಹೇಳತಾರಂತಲಾ. ಅದು ಏನದು ? ಯಾರದೊಮ್ಯಾಲ ಶತ್ರುಪತಿ ಪ್ರೇಮ ಅದ ಅಂತ. '

ಇಷ್ಟರಲ್ಲಿ ಜರದ ಅಂಚಿನ ಸಮವಸ್ತ್ರದಲ್ಲಿದ್ದ ಪೇದೆಯೊಬ್ಬನು ಒಂದು ಪತ್ರವನ್ನು ಕೊಟ್ಟುಹೋದನು.

ಮಿತ್ರಮಂಡಳಿಯು ಅದನ್ನುಮೇಲೆ ಕೆಳಗೆ ಎಡಕ್ಕೆಬಲಕ್ಕೆ ಚೆನ್ನಾಗಿ ಪರಿಶೀಲಿಸಿ ರೇಜರ ಬ್ಲೇಡಿನ ಸಹಾಯದಿಂದ ಅದನ್ನು ತೆಗೆದು ಓದಿತು. ಪತ್ರದ ಮೇಲೆ ವಿಳಾಸವು ಕೆಳಗಿನಂತಿತ್ತು:—ಚಿ. ಪದ್ಮಜಾ. ಪ್ರೊ. ಅವಧಾನಿಯವರ ಮನೆಯಲ್ಲಿ ೭೩೯ ಮಾತುಂಗಾ ಮುಂಬಯಿ. ಸ್ತ್ರೀಯ ವಿಳಾಸವಿದ್ದುದರಿಂದ ಮಂಡಳಿಯ ಕುತೂಹಲ ಹೆಚ್ಚಾಗಿತ್ತು. ಪತ್ರವು ಕೆಳಗಿನಂತಿತ್ತು. ಇಂಗ್ಲೀಷ ಬಲ್ಲವನೊಬ್ಬನು ಅದನ್ನು ಗಟ್ಟಿಯಾಗಿ ಓದಿದನು.

ಪ್ರೀಯ ಪದ್ಮಜಾ,

ಶತ್ರುಪತಿಗಳು ತಾವಾಗಿಯೇ ಕೇಳಿದರೆ ನನ್ನಕುಶಲವನ್ನು ತಿಳಿಸಿರೆಂದು ಹೇಳಿದ್ದೆ. ಆದರೆ ನಿನ್ನ ಪ್ರಭಾವವನ್ನು ಕೇಳು.

ನಾನು ದಿವಾಣ ಪದವನ್ನು ವಹಿಸಿಕೊಂಡ ಕೂಡಲೇ ಶತ್ರುಪತಿಗಳು ನನಗೆ ಎರಡು ಕೆಲಸಗಳ ಕಡೆಗೆ ವಿಶೇಷ ಲಕ್ಷ್ಯ ಹಾಕಬೇಕೆಂದು ತಿಳಿಸಿದರು. ಮೊದಲನೆಯದು ಪದ್ಮಜಾ ಎಂಬ ಹುಡಿಗೆಯನ್ನು ಹುಡಿಕಕೊಡಬೇಕು, ಎರಡನೆಯದೆಂದರೆ ಸಂಸ್ಥಾನದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕು.

ಪದ್ಮಜಾ ಎಂಬ ಹುಡುಗೆ ! ನಿನ್ನ ಛಾಯಾಚಿತ್ರವಿಲ್ಲೆಂದು. ನಿನ್ನ ಪೂರ್ಣ ಹೆಸರು ಗೊತ್ತಿಲ್ಲವೆಂದು ಶತ್ರುಪತಿಗಳು ಬಳಲುತ್ತಿದ್ದಾರೆ- ಅವರ ಬಾಯಿಂದ ಹೊರಟ ನಿನ್ನ ವರ್ಣನೆಯು ಛಾಯಾಚಿತ್ರಕಿಂತ ಸ್ಪಷ್ಟವಿದ್ದರೂ ಛಾಯಾಚಿತ್ರವಿಲ್ಲದ್ದಕ್ಕೆ ನಿನ್ನನ್ನು ಹುಡುಕುವದು ಅಸಾಧ್ಯವಾಗಿದೆಯೆಂದು ಅವರು ಹೇಳಿದರು ನಿನ್ನ ಸಲುವಾಗಿ ಶತ್ರುಪತಿಗಳು ಕೊರಗಿ ಸಣ್ಣಾಗಿದ್ದಾರೆ ಅವರ ಮನದಲ್ಲಿ ಉತ್ಸಾಹವಿಲ್ಲ. ದೇಹದಲ್ಲಿ ಶಕ್ತಿ ಇಲ್ಲ. ಅವರ ಈ ಸ್ಥಿತಿಗೆ ನೀನೆ ಕಾರಣಳೆಂದು ಇಲ್ಲಿಯ ಜನ ಮಾತಾಡುತ್ತಿದೆ. ನಿನ್ನನ್ನು

ಹುಡುಕಲಾರದೆ ಎಷ್ಟೋ ದಿವಾಣರು ತಮ್ಮ ಹುದ್ದೆಗೆ ರಾಜೀನಾಮೆಕೊಟ್ಟು ಹೋಗಿದ್ದಾರೆ. ಅವರದಾದರೇನು ತಪ್ಪು ಪಾಪ ?

ನಿನ್ನನ್ನು ಕಾಣದೆ ಶತ್ರುಪತಿಗಳಿಗೆ ಸ್ವಾಸ್ಥ್ಯಲಭಿಸುವದು ಸಾಧ್ಯವಿಲ್ಲ. ಈ ಪತ್ರವನ್ನು ಕಂಡಕೂಡಲೇ ಹೊರಟುಬರಬೇಕು. ನಿನ್ನ ಮೇಲಿನ ಖಟ್ಲೆ ಹಿಂತೆಗೆದುಕೊಳ್ಳಲ್ಪಟ್ಟದೆಂದು ತಿಳಿಯುತ್ತದೆ. ನಿರಾತಂಕವಾಗಿ ಹೊರಟುಬಾ ಬರುವಾಗ ತಂದೆಯವರನ್ನು ಕರೆದುಕೊಂಡು ಬರಬೇಕು. ಎಲ್ಲ ಸಾಮಾನು ತರಬೇಕು.

●

ವೈಭವಪುರ ಸಂಸ್ಥಾನ ಚಿಕ್ಕದು. ಆಡಳಿತದಿಂದ ಕೈಗೆ ಬಂದ ಹಣ ಕಿಸೆಗೆ ಬಾರದಂತಾಗಿದೆ. ಸಾಲದ ಭಾರವು ಬೆಳೆದಿದೆ; ಆದರೆ ಸಂಸ್ಥಾನಿಕರ ಖಾಸಗಿ ಬೊಕ್ಕಸವು ಒಂದು ಆಶಾಸ್ಥಾನದಂತಿದೆ. ಅದರಿಂದ ಇನ್ನೊಂದು ಇಂಥ ಸಂಸ್ಥಾನವನ್ನು ಕೂಡ ಕೊಳ್ಳಬಹುದು. ಸಂಸ್ಥಾನದ ಆರ್ಥಿಕ ಪರಿಸ್ಥಿತಿ ಯಂತೆ ಇಲ್ಲಿಯ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲೆತ್ನಿಸಬೇಕೆಂದಿ ದ್ದೇನೆ. ಈ ಭಾಗದಲ್ಲಿ ಸಕ್ಕರೆಯ ಕಾರಖಾನೆಯನ್ನು ಪ್ರಾರಂಭಿಸುವದು ಸಾಧ್ಯ ವಿದೆ. ವಿಚಾರ ನಡೆಸಿದ್ದೇನೆ.

ಇಲ್ಲಿ ನಾನು ಅಜ್ಞಾತವಾಸದಲ್ಲಿದ್ದಂತಾಗಿದೆ. ಇದರಿಂದ ನನಗೆ ಒಂದ್ರು ದೃಷ್ಟಿಯಿಂದ ಸಮಾಧಾನವಾಗುತ್ತಿದೆ. ವೈಯಕ್ತಿಕ ದುಃಖವನ್ನು ಮರೆ ಯಲು ಸಾಧ್ಯವಾಗಿದೆ, ನಿಮ್ಮವ. ಪ್ರೊಫೆಸರ ಅವಧಾನಿ. ಪೋಸ್ಟ ಆಫಿಸಿನ ಮಿತ್ರಮಂಡಳಿ ಈ ಪತ್ರವನ್ನು ವಾಕ್ಯಕ್ಕೆ ವಾಕ್ಯ ಶಬ್ದಕ್ಕೆ ಶಬ್ದ ಹೀಗೇ ಅರ್ಥ ಮಾಡಿಕೊಂಡು ಓದುತ್ತಿರುವಾಗ ಚರ್ಚಿಸುತ್ತಿರುವಾಗ ಹೊರಗಿನ ಕೆಂಪು ಡಬ್ಬಿಯಲ್ಲಿ ಕೂಲಿಕಾರನೊಬ್ಬನು ಒಂದು ಪಾಕೀಟನ್ನು ಚೆಲ್ಲಿ ಹೋದ. ಟಪಾಲ ಕಟ್ಟುವ ವೇಳೆಯಾಯಿತೆಂದು ಪೋಸ್ಟ ಮಾಸ್ತರರು ಎಲ್ಲರನ್ನು ಕಳುಹಿ ಲಗುಬಗೆಯಿಂದ ಟಪಾಲ ಕಟ್ಟಲು ಪ್ರಾರಂಭಿಸಿದರು. ಹೊರಗಿನ ಡಬ್ಬಿಯಲ್ಲಿಯ ಅರ್ಧಮರ್ಧ ಅಂಟು ಹಚ್ಚಿ ಅರ್ಧಮರ್ಧ ಬಂದುಮಾಡಲಟ್ಟ ಆ ಪತ್ರವನ್ನು ಅವರು ಅನಾಯಾಸವಾಗಿ ತೆರೆದು ಒದಿಕೊಂಡರು. ಮತ್ತು ಭದ್ರವಾಗಿ ಅಂಟು ಹಚ್ಚಿ ಅದನ್ನು ಮುಂದಕ್ಕೆ ಕಳಿಸಿದರು. ಈ ಪತ್ರವಾದರೂ ಇಂಗ್ಲೀಷಿನಲ್ಲಿಯೆ ಇದ್ದಿತು. ಅದು ಕೆಳಗಿನಂತಿತ್ತು.

ಪ್ರೀಯ ಮೃದುಳಾಬೆಹೆನ್,

ಓಜಸ್ವಿ ಮರಕ್ಕೆ ಪೋಸ್ಟ ಆಫೀಸಿಲ್ಲದ್ದರಿಂದ ಬೇಗನೆ ಪತ್ರ ಬರೆಯುವದಾಗಲಿಲ್ಲ. (ಇಲ್ಲಿಂದ ಹನ್ನೆರಡು ಮೈಲಿನ ಮೇಲಿದ್ದ ವೈಭವಪುರಕ್ಕೆ ಪೋಸ್ಟ ಆಫೀಸಿದೆ) ತಡವಾದರೂ ಚಿಂತೆಯಿಲ್ಲ, ಸುದೀರ್ಘ ಪತ್ರ ಬರೆಯುತ್ತಿದ್ದೇನೆ.

ನಾನು ಓಜಸ್ವಿಪುರಕ್ಕೆ ಬಂದು ನನ್ನ ಕಾರ್ಯವನ್ನು ಪ್ರಾರಂಭಿಸಿದ್ದೇನೆ. ನನ್ನ ಕಾರ್ಯ ಯಶಸ್ವಿಯಾಗಿ ನಡಿದಿದೆ. ನನ್ನ ಇಲ್ಲಿಯ ವರೆಗಿನ ಯಶಸ್ಸಿಗೆ ನಿಮ್ಮ ಮಾರ್ಗದರ್ಶನವೇ ಕಾರಣ. ಮತ್ತೆ ನನಗೆ ನಿಮ್ಮ ಮಾರ್ಗದರ್ಶನ ಬೇಕಾಗಿದೆ. ನಿಮ್ಮ ಸಾಂನಿಧ್ಯ ಬೇಕಾಗಿದೆ.

ಎಷ್ಟೇ ಅಂತರದ ಮೇಲಿಂದ ನೋಡಿದರೂ ಓಜಸ್ವಿ ಪುರದ ಓಜಸ್ಸು ಒಡೆದು ಕಾಣುವದು. ಹಿಮಾಚಲದ ಹಿಮಾಚ್ಛಾದಿತ ಶಿಖರಗಳು ಗಾಳಿಗೆ ಹಾರಿ ಬಂದು ಕರ್ನಾಟಕದಲ್ಲಿ ನೆಲೆಸಿವೆಯೋ ಏನೋ ಎಂದು ಅನಿಸುತ್ತದೆ. ಇಲ್ಲಿಯ ಬಿಳಿಯ ಮಟ್ಟಿಯ ದಿನ್ನೆಗಳಿಗೆ ಬಿಸಿಲಿನಲ್ಲಿ ಒಂದು ಬಗೆಯ ಶೋಭೆ, ಬೆಳದಿಂಗಳಲ್ಲಿ ಒಂದು ಬಗೆಯ ಬೆಡಗು. ಈ ಸೌಂದರ್ಯದಲ್ಲಿ ಸಂಪತ್ತು ಅಡಗಿದೆಂದು ಇಲ್ಲಿಯವರಿಗಾರಿಗೂ ಗೊತ್ತಿದ್ದಿಲ್ಲ. ಏನೋ ಬಿಳಿಯ ಮಟ್ಟಿಯಿದೆ, ಮದುವೆ ಮುಂಜುವೆಗಳಲ್ಲಿ ಮನೆಗಳ ಗೋಡೆಗಳಿಗೆ ಗಿಲಾವಿಗೆ ಮಾಡಿಸಲು ಬರುತ್ತದೆಂದು ಇಲ್ಲಿಯ ಬಹುಜನರ ಅಭಿಪ್ರಾಯ. ಕೆಂಪು ಮಟ್ಟಿಯಲ್ಲಿ ನಿಂತಷ್ಟು ಬಿಳೀ ಮಟ್ಟಿಯಲ್ಲಿ ನೀರು ನಿಲ್ಲುವುದಿಲ್ಲ, ಆದ್ದರಿಂದ ಭತ್ತಕ್ಕೆ ಈ ಈ ಮಟ್ಟಿ ನೆಟ್ಟಗಲ್ಲವೆಂದು ನಿಟ್ಟುಸುರುಬಿಡುವವರೂ ಇದ್ದಾರೆ. (ಈ ಊರಲ್ಲಿ ಎಲ್ಲಿ ಅಗೆದರೂ ಬಿಳಿ ಮಟ್ಟಿ ಹೊರಡುತ್ತದೆ.) ಐತಿಹಾಸಿಕ ಕಾಲದಲ್ಲಿಯೂ ಈ ಮಟ್ಟಿ ಶಪಿಸಲ್ಪಟ್ಟಿವೆ. ಬಿಳಿಯ ದಿನ್ನೆಗಳು ಶತ್ರುಗಳಿಗೆ ಒಡೆದುಕಂಡು ದಾಳಿಗಳು ಹೆಚ್ಚಾಗುತ್ತಿದ್ದವಂತೆ. ಆದರೆ ಈ ಮಟ್ಟಿಯಿಂದ ಕಪ್ಪು ಬಸಿಗಳನ್ನು ತಯಾರಿಸಬಹುದೆಂದೂ ಅದು ಇಲ್ಲಿದೆಂದೂ ನಿಮ್ಮ ತಂದೆಯವರು ಹೇಗೆ ತಿಳಿದುಕೊಂಡರೋ ಆಶ್ಚರ್ಯವಾಗುತ್ತದೆ. ಇರಲಿ.

ನಾನು ಇಲ್ಲಿ ಸುಮಾರು ೫೦ ಜನರನ್ನು ಕೂಲಿಗೆ ಹಚ್ಚಿದ್ದೇನೆ. ಅರ್ಧ ಹೊಟ್ಟೆಯಿಂದ, ಗಿರ್ಧ ಹೊಟ್ಟೆಯಿಂದ ಇದ್ದ ಇಲ್ಲಿಯ ಜನಕ್ಕೆ ಕೂಲಿಯು ದೊರೆತದ್ದರಿಂದ ಅತ್ಯಾನಂದವಾಗಿದೆ. ನನ್ನನ್ನು ಅತ್ಯಾದರದಿಂದ ಕಾಣುತ್ತಿದ್ದಾರೆ. ಶಕ್ಯವಿದ್ದ ಎಲ್ಲ ಸಹಾಯ ಮಾಡುತ್ತಾರೆ. ಕೈಯಿಂದ ಅಡಿಗೆ ಮಾಡಿಕೊಳ್ಳಲು ವೇಳೆ ಸಿಕ್ಕುವದಿಲ್ಲವೆಂದು ಇಲ್ಲಿಯ ಒಬ್ಬ ರೈತನ ಮನೆಯಲ್ಲಿ

ಊಟಮಾಡುತ್ತೇನೆ. ಬ್ರಾಹ್ಮಣನು ತಮ್ಮ ಮನೆಯಲ್ಲಿ ಊಟಮಾಡುತ್ತಾನೆಂದು ಅವನು ನನಗೆ ಹೆಮ್ಮೆಯಿಂದ ಊಟಕ್ಕೆ ಹಾಕುತ್ತಾನೆ!

ಇಲ್ಲಿಂದ ಬಂಡಿಗಳ ಮೂಲಕ ನಾನು ಬಿಳಿ ಮಟ್ಟಿಯನ್ನು ಇಲ್ಲಿಂದ ಸುಮಾರು ಎಂಟು ಮೈಲಿನ ಮೇಲಿದ್ದ ಸುಗ್ಗೂರು ಸ್ಟೇಶನಕ್ಕೆ ಮತ್ತು ಅಲ್ಲಿಂದ ಮುಂಬಯಿಗೆ ಕಳುಹುತ್ತೇನೆ. ಮಹಮ್ಮದಪುರದಲ್ಲಿದ್ದ ನನ್ನ ತಂದೆಯವರು ಸರಕಾರಿ ನೌಕರಿಯಿಂದ ನಿವೃತ್ತರಾಗಲಿದ್ದಾರೆ. ಅವರಿಗೆ ಸುಗ್ಗೂರಲ್ಲಿ ಮಟ್ಟಿಯನ್ನು ಹೇರಿಸುವ ಕೆಲಸ ಕೈಕೊಳ್ಳಲು ಕೇಳುವವನಿದ್ದೇನೆ. ಇದಕ್ಕೆ ಶೇಠರ ಅನುಮತಿ ದೊರೆಯಲಿದೆ.

ಶೇಠಜಿಯವರು ನನಗೊಂದು ವಿಷಯವನ್ನು ಬರೆದಿದ್ದರು. ಅದೇನಂದರೆ ಇಲ್ಲಿಯೇ ಮಟ್ಟಿಯನ್ನು ಸ್ವಚ್ಛಮಾಡುವ ಯಂತ್ರವನ್ನು ಸ್ಥಾಪಿಸಬಹುದೆ ಹೇಗೆಂದು ಇದಕ್ಕೆ ನೀರಿನ ಪೂರೈಕೆ ಬೇಕು. ಇಲ್ಲಿಯ ದಿನ್ನೆಗಳ ವಾರಿಯಲ್ಲಿ ಒಂದು ಹಳ್ಳವು ಹರಿದುಹೋಗುತ್ತದೆ. ಅದಕ್ಕೊಂದು ಒಡ್ಡು ಹಾಕಿದರೆ ಯಂತ್ರಕ್ಕೆ ಸಾಕಷ್ಟು ನೀರು ಸಿಗಬಹುದು. ಇದನ್ನೆ ಪರಿಶೀಲಿಸುವದಕ್ಕಾಗಿ ಮೊನ್ನೆ ನಾನು ಹಳ್ಳಕ್ಕೆ ಹೋಗಿದ್ದೆ.

ಹಿಂದಿನಿಂದ ಬಂದ ಸಕ್ರೆಪ್ಪಾ ಎಂಬ ರೈತನು ನನ್ನ ತಲೆಯಲ್ಲಿ ಹೊಸ ವಿಚಾರವನ್ನು ಹಾಕಿದನು. ಇದಕ್ಕಾಗಿಯೇ ನಾನು ನಿಮಗೆ ಇಲ್ಲಿ ಬರಲು ಬರೆದಿದ್ದೇನೆ. ಈ ಹಳ್ಳಕ್ಕೆ ದೊಡ್ಡದೊಂದು ಒಡ್ಡು ಹಾಕಿದರೆ ಕೆಳಗಿನ ಸುಮಾರು ೨೦೦ ಎಕರೆ ಭೂಮಿ ನೀರುಣ್ಣುವದು. ಈ ಭೂಮಿಯು ಈಗ ಕೇವಲ ಹುಲ್ಲುಗಾವಲಾಗಿದೆ. ವೈಭವಪುರ ಸಂಸ್ಥಾನಿಕರ ವಶಕ್ಕಿದೆ ಮೊಲದ ಬೇಟೆಗೆಂದು ಸುಪ್ರಸಿದ್ಧವಿದೆ. ಅಷ್ಟೇ. ನೀರಿನ ವ್ಯವಸ್ಥೆಯಾದರೆ ಅಲ್ಲಿ ಕಬ್ಬು ಬೆಳೆಯಬಹುದೆಂದು ರೈತನ ಸೂಚನೆಯಿದೆ. ನನಗೆ ಒಕ್ಕಲತನದಲ್ಲಿ ತಿಳಿಯುವದು ಅಷ್ಟಕ್ಕಷ್ಟೆ. ಕಬ್ಬು ತಿನ್ನಲು ಬರಬಹುದು, ಆದರೆ ಅದನ್ನು ಹೇಗೆ ಬೆಳೆಯಬೇಕು, ಎಲ್ಲಿ ಬೆಳೆಯ ಬಹುದೆಂಬುದು ತಿಳಿಯಲಾರದು. ಆದರೆ ಒಂದೇ ಒಡ್ಡಿನಿಂದ ಎರಡು ಕೆಲಸಗಳು ಸಾಧಿಸಬಹುದು ಎಂಬೀ ವಿಚಾರವು ಆಕರ್ಷಕವೆನಿಸತೊಡಗಿದೆ. ಈ ಒಡ್ಡು ಗುಡ್ಡದಿಂದ ವೇಗವಾಗಿ ಬರುವ ಹಳ್ಳವನ್ನು ತಡೆಯಬೇಕಾದ್ದರಿಂದ ಬಹಳ ಭದ್ರವಾದದ್ದಿರಬೇಕೆಂದು ರೈತನ ಸೂಚನೆ. ಒಡ್ಡು ಕಟ್ಟುವ

ದಾದರೆ ವೈಭವಪುರದ ಶತ್ರುಪತಿಗಳ ಅನುಜ್ಞೆಬೇಕು. ನೀವು ಇಲ್ಲಿಗೆ ಬಂದರೆ ಎಲ್ಲವನ್ನೂ ಅಭ್ಯಸಿಸಲು ಬರುವದು.

ಒಬ್ಬರೆ ಇದ್ದು ನಿಮಗೆ ಈಗ ಬೇಜಾರವೆನಿಸುತ್ತಿರಬಹುದು. ಇಲ್ಲಿ ನಿಮಗೆ ವಿಶ್ರಾಂತಿ ಮತ್ತು ಉತ್ಸಾಹ ದೊರೆಯಬಹುದು. ನಿಮಗಿಲ್ಲಿ ಅಭ್ಯಾಸಕ್ಕೆ ಶಾಂತ ವಾತಾವರಣವಿದೆ. ಸಾಮಾಜಿಕ ಕಾರ್ಯಕ್ಕೆ ಸಾಕಷ್ಟು ಅವಕಾಶ ವಿದೆ. ಆದಷ್ಟು ಬೇಗನೆ ಹೊರಟು ಬರಬೇಕೆಂದು ಬಿನ್ನಹ.

ನಿಮ್ಮ ಅನುಯಾಯಿ
ಪದ್ಮನಾಭ

ತಾಜಾ ವಿಚಾರ:— ಪ್ರೊಫೆಸರ ಅವಧಾನಿಯವರ ವೃತ್ತಾಂತವೇನು? ಪಾಪ! ಕನಕಲತೆಯ ನೆನಪಾದೊಡನೆ ಕಣ್ಣಲ್ಲಿ ನೀರು ಬರುವವು. ಪದ್ಮನಾಭ

**ಮೇಲಿನ** ಪತ್ರಗಳು ಮುಂಬಯಿ ಮುಟ್ಟಿ ಎಂಟು ದಿವಸಗಳಲ್ಲಿ ವೈಭವ ಪುರಕ್ಕೆ ಮೂವರು ಬಂದಿಳಿದರು. ಪ್ರೊ. ಅವಧಾನಿಯವರ ತಂದೆ, ಹಾಗೂ ಈರ್ವರು ತರುಣಿಯರು, ಪದ್ಮಜಾ ಮತ್ತು ಮೃದುಳಾಬೆಹೆನ್.

ಪದ್ಮಜಾ ಶತ್ರುಪತಿಗಳ ದರ್ಶನಕ್ಕಾಗಿ ಹೊರಟಿದ್ದರೂ ಮನಸ್ಸಿನಲ್ಲಿ ಪದ್ಮನಾಭನನ್ನು ಕಾಣಬೇಕೆಂದು ಹಾತೊರೆಯುತ್ತಿದ್ದಳು. ಮೃದುಳಾಬೆಹೆನಳು ಪದ್ಮನಾಭನನ್ನು ಕಾಣಲು ಹೊರಟಿದ್ದರೂ ಪದ್ಮಜೆಯ ಕಡೆಯಿಂದ ಶತ್ರುಪತಿಗಳ ವೃತ್ತಾಂತವನ್ನು ಕೇಳಿ ಅವರನ್ನು ಕಾಣಬೇಕೆಂದು ಉತ್ಸುಕಳಾಗಿದ್ದಳು.

ದಿವಾಣ ಪ್ರೊ. ಅವಧಾನಿಯವರು ಅಂದು ವೈಭವಪುರದಲ್ಲಿರಲಿಲ್ಲ. ಸಕ್ಕರೆಯ ಕಾರ್ಖಾನೆಯ ಸ್ಥಳವನ್ನಾರಿಸುವದಕ್ಕಾಗಿ ಸಂಸ್ಥಾನದ ಒಂದು ಹಳ್ಳಿಯಾದ ಘಡಗಳ್ಳಿಗೆ ಹೋಗಿದ್ದರು. ಪೇದೆಗಳು ಮೂವರನ್ನು ಸ್ವಾಗತಿಸಿ, ದಿವಾಣ ಸಾಹೇಬರ ಮನೆಗೆ ಕರೆದೊಯ್ದರು. ಕೂಡಲೆ ಶತ್ರುಪತಿಗಳನ್ನು ಕಾಣಬೇಕೆಂದು ದಿವಾಣ ಸಾಹೇಬರು ಹೇಳಿದ್ದಾರೆಂದು ಪದ್ಮಜೆಗೆ ತಿಳಿಸಿದರು. ಬಹು ದಿವಸಗಳ ಮೇಲೆ ಶತ್ರುಪತಿಗಳಿಗೆ ಮೋರೆ ತೋರಲು ಪದ್ಮಜೆಗೆ ಧೈರ್ಯಬರಲಿಲ್ಲ. ಮೃದುಳಾಬೆಹೆನಳನ್ನು ಸಂಗಡ ಕರೆದುಕೊಂಡು ಅರಮನೆಗೆ ಹೊರಟಳು.

ವೈಭವಪುರ ಸಂಸ್ಥಾನಿಕರ ವೈಭವಪುರದಲ್ಲಿಯ ಅರಮನೆಯು ಹೊರಗಿನಿಂದ ಒಂದು ಚಿಕ್ಕ ಕಿಲ್ಲೆಯಂತೆ ತೋರುವದು. ಸುತ್ತಲು ಭವ್ಯವಾದ ಆವಾರಗೋಡೆ. ಒಂದೆಡೆಗೆ ಒಂದುಒಂದೆಡೆಗೆ ಒಂದು ಅಭೇದ್ಯವಾದ ಮಹಾದ್ವಾರ. ಒಳಗೆ ಒಂದು ವಿಶಾಲವಾದ ಅರಮನೆ. ಅದನ್ನು ಕಟ್ಟುವವರು ಸೌಂದರ್ಯಭದ್ರತೆಯ ಕಡೆಗೆ ಹೆಚ್ಚು ಲಕ್ಷಕೊಟ್ಟದ್ದರೆಂಬುದು ಸ್ಪಷ್ಟವಿದ್ದಿತು. ಅಲ್ಲಿಯ ತೊಲೆಗಳು ಆನೆಯ ಮೇಲೆ ಬಿದ್ದರೂ ಅದು ಒದ್ದಾಡುವಷ್ಟು ದೊಡ್ಡವಾಗಿದ್ದವು. ಅರಮನೆಯ ಸುತ್ತಲು ತೋಟವಿದ್ದಿತು. ಹೂದೋಟವಿದ್ದಿಲ್ಲ. ಉಪಯುಕ್ತ ಗಿಡಗಳ ಗುಂಪು. ಈ ವಿಶಾಲವಾದ ಅರಮನೆಯಲ್ಲಿ ಒಂದು ಪ್ರಶಸ್ತವಾದ ಕೋಣೆಯಲ್ಲಿ ನಾಲ್ಕು ಕಟ್ಟಿಗೆಯ ಸಿಂಹಗಳ ಮೇಲೆ ನಿಂತ ಒಂದು ಮಂಚದ ಮೇಲೆ ಶತ್ರುಪತಿ ಸರ ರಘುನಾಥರಾವ ಪ್ರತಾಪಗಿರಿಯವರು ಒರಗಿದ್ದರು. ಸುತ್ತಲು ಇದ್ದಂತೆ ಅವರ ಮೋರೆಯ ಮೇಲೆಯೂ ರಾಜ ವೈಭವ ಕಾಣುತ್ತಿತ್ತು. ಆದರೆ ಅವರ ದೇಹ ಕೃಶವಾಗಿದ್ದಿತು. ಮುಳ್ಳು ನಟ್ಟು ನಿಸ್ಸಹಾಯವಾದ ಸಿಂಹದಂತೆ ಅವರ ಸ್ಥಿತಿಯಾಗಿದೆಂದು ಅನಿಸುವಂತಿತ್ತು.

ಪದ್ಮಜಾ ಮೃದುಳಾಬೆಹೆನರು ಅವರ ಕಡೆಗೆ ಹೋದರು ಆದರೇನು? ಶತ್ರುಪತಿಗಳು ನಿತ್ರಾಣರಾಗಿ ಹಾಸಿಗೆಯಲ್ಲಿ. ಕಣ್ಣು ಮುಚ್ಚಿಕೊಂಡು ಮಲಗಿದ್ದರು. ಇವರಿಬ್ಬರೂ ಬಂದ ಸುಳಿವು ಅವರಿಗೆ ಹತ್ತಲಿಲ್ಲ. ಪದ್ಮಜಾ ಎರಡು ಮೂರು ಸಾರೆ ಅವರ ಕಿವಿಯಲ್ಲಿ, 'ಪದ್ಮಜಾ ಬಂದಿದ್ದೇನೆ, ಪದ್ಮಜಾ' ಎಂದು ಕೂಗಿದಳು. ಅವರಿಗೆ ಕೇಳಿಸಲಿಲ್ಲ. ಅವಳು ಅಲ್ಲಿಯೆ ಅವರ ತಲೆದಿಂಬಿನ ಹತ್ತರ ಕುಳಿತು ಅವರ ಹಣೆಗೆ ಕೈ ಹಚ್ಚಿದಳು. ಶತ್ರುಪತಿಗಳ ಮೈ ಕಾಯ್ದು ಎಸರಾಗಿದ್ದಿತು. ಜ್ವರದಿಂದ ಅವರ ಪ್ರಜ್ಞೆ ತಪ್ಪಿರಬಹುದೆಂದು ಊಹಿಸಿದಳು. ಕೂಡಲೆ ಡಾಕ್ಟರರನ್ನು ಕರೆಕಳುಹಬೇಕೆಂದು ಹೊರಗೆ ಹೋದಳು.

ಅವಳು ಹೊರಗೆ ಹೋದಬಳಿಕ ಮೃದುಳಾಬೆಹನಳು ತಾನೂ ಮುಂದಾಗೆ ಶತ್ರುಪತಿಗಳ ಹಣೆ ಹಿಡಿದು ನೋಡಿದಳು. ಕಾಯ್ದಿದ್ದಿತು. ತನ್ನ ಕರವಸ್ತ್ರವನ್ನು ನೀರಿನಲ್ಲಿ ಒದ್ದೆಮಾಡಿ ಅವರ ಹಣೆಯ ಮೇಲಿಟ್ಟಳು. ಮತ್ತು ಮೆಲ್ಲಮೆಲ್ಲನೆ ಅವರ ಮೈಮೇಲೆ ಕೈಯಾಡಿಸ ತೊಡಗಿದಳು.

ತಣ್ಣೀರಿನ ಪಟ್ಟಿಯ ಪ್ರಭಾವದಿಂದಲೊ ಅಥವಾ ಬೇರೆ ಯಾವರ ಪ್ರಭಾವದಿಂದಲೋ ಅವರು ಒಮ್ಮೆ ಕಣ್ತೆರೆದರು. ಮಾತನ್ನಾಡಲಿಲ್ಲ. ಬಹಳ ಹೊತ್ತಿನ ವರೆಗೆ ಕಣ್ತೆರೆದು ನೋಡುವಷ್ಟು ಶಕ್ತಿಯೂ ಅವರಲ್ಲಿರಲಿಲ್ಲ. ಹಾಗೇಯೇ ಮತ್ತೆ ಕಣ್ಣು ಮುಚ್ಚಿಕೊಂಡರು. ಎರಡು ನಿಮಿಷಗಳ ಮೇಲೆ ಮತ್ತೆ ಕಣ್ಣು ತೆರೆದು ಒಮ್ಮೆ ಮೃದುಳಾಬೆಹನಳ ಕಡೆಗೆ ನೋಡಿದರು. ಅಂಥ ಸ್ಥಿತಿಯಲ್ಲೂ ಅವರ ಕಣ್ಣಲ್ಲಿ ಕೃತಜ್ಞತೆ ಕಂಡುಬಂದಿತು. ಮತ್ತೆ ಕಣ್ಣು ಮುಚ್ಚಿಕೊಂಡರು. ಮುಂದೆರಡು ನಿಮಿಷಗಳಾದ ಮೇಲೆ ತಮ್ಮ ಮೈಮೇಲೆ ಆಡುತ್ತಿದ್ದ ಕೈಯನ್ನು ಹಿಡಿದರು. ಅವರ ಸ್ಪರ್ಶದಲ್ಲೂ ಮೃದುಳಾಬೆಹನಳಿಗೆ ಕೃತಜ್ಞತೆ ಕಂಡುಬಂದಿತು. ಕೃತ ಕೃತ್ಯ ಭಾವನೆಯಿಂದ ಅವಳು ಹಾಗೆಯೇ ಅವರ ಮೈಮೇಲೆ ಕೈಯಾಡಿಸತೊಡಗಿದಳು. ಕರವಸ್ತ್ರವನ್ನು ಮತ್ತೆ ನೀರಲ್ಲಿ ಹಿಂಡಿ ಅವರ ನೆತ್ತಿಯ ಮೇಲಿಟ್ಟಳು. ಶತ್ರುಪತಿಗಳು ಮತ್ತೊಮ್ಮೆ ಕಣ್ತೆರೆದರು ಏನೊ ಮಾತನಾಡುವಂತೆ ತುಟಿ ಅಲುಗಾಡಿಸಿದರು. ಮೃದುಳಾಬೆಹೆನಳು ಮಾತನಾಡಬೇಡಿರೆಂದು ಅವರ ಬಾಯಿಯನ್ನು ಒತ್ತಿ ಹಿಡಿದಳು. ಸಣ್ಣ ಹುಡುಗರಂತೆ ಅವಳ ಮಾತುಕೇಳಿ ಶತ್ರುಪತಿಗಳು ಕಣ್ಣುಮುಚ್ಚಿ ಒರಗಿಕೊಂಡರು.

ಶತ್ರುಪತಿಗಳ ಖಾಸಗಿ ಡಾಕ್ಟರರು ಬಂದರು. ಮುಂಜಾನೆ ನೆಟ್ಟಗಿದ್ದ, ಶತ್ರುಪತಿಗಳು ಮತ್ತೆ ಹೇಗೆ ಅಸ್ವಸ್ಥರಾದರೆಂದು ಆಶ್ಚರ್ಯಪಡುತ್ತಲೇ ಥರ್ಮಾಮೀಟರ ಹಚ್ಚಿದರು. ಅವರ ಪ್ರಕೃತಿಯನ್ನು ಚೆನ್ನಾಗಿ ಪರೀಕ್ಷಿಸಿದರು- ಹೃದಯದ ಬಗ್ಗೆ ಏನೊ ಸಂಶಯ ಬರುತ್ತದೆಂದರು. ತಲೆತುರಿಸಿಕೊಂಡು ಒಂದು ಇಂಜೆಕ್ಷನ್ ಕೊಟ್ಟರು.

ಇಂಜೆಕ್ಷನ್‌ದಿಂದ ಶತ್ರುಪತಿಗಳ ಕಾಯಿಲೆ ಹೆಚ್ಚಾದಂತೆ ತೋರಿತು. ನಿತ್ರಾಣರಾಗಿದ್ದರೂ ಅವರು ಇಲ್ಲಿಯವರೆಗೆ ಹಾಸಿಗೆಯ ಮೇಲೆ ಶಾಂತರಾಗಿ ಮಲಗಿದ್ದರು. ಆದರೆ ಇಂಜೆಕ್ಷನ್ ಕೊಟ್ಟ ೫–೧೦ ನಿಮಿಷಗಳಲ್ಲಿ ಹೊರಳಾಡತೊಡಗಿದರು. ಕೈಕಾಲುಗಳನ್ನು ಜಾಡಿಸತೊಡಗಿದರು. ಒಕರಿಸತೊಡಗಿದರು. ಸುತ್ತಲಿನವರ ಕೈಕಾಲುಗಳು ತಣ್ಣಗಾದವು!

ಪ್ರೊ. ಅವಧಾನಿಯವರು ಮುಚ್ಚಂಜೆಯ ಸುಮಾರಿಗೆ ಬಂದರು. ಶತ್ರುಪತಿಗಳ ಅವಸ್ಥೆಯನ್ನು ನೋಡಿ ಅವರು ಗಾಬರಿಗೊಂಡರು. ಆದರೆ

ಎಲ್ಲರ ಧೈರ್ಯವು ತಮ್ಮ ಧೈರ್ಯದ ಮೇಲೆ ಅವಲಂಬಿಸಿದೆಂದು ತಿಳಿದು ಮೇಲೆ ಎಳ್ಳಷ್ಟೂ ವಿಮನಸ್ಕತೆ ತೋರಲಿಲ್ಲ. ಶತ್ರುಪತಿಗಳ ಹಾಸಿಗೆಯ ಮೇಲೆ ಕುಳಿತು ಅವರ ಕೈಕಾಲುಗಳನ್ನು ಗಟ್ಟಿಯಾಗಿ ಒತ್ತಿ ಹಿಡಿದರು. ಕೈಕಾಲುಗಳನ್ನು ಗಟ್ಟಿಯಾಗಿ ಒತ್ತಿ ಹಿಡಿದೊಡನೆ ಅವುಗಗಳನ್ನು ಜಾಡಿಸುವಲ್ಲಿ ವಿನಿಯೋಗವಾಗುತ್ತಿದ್ದ ಶತ್ರುಪತಿಗಳ ಶಕ್ತಿಯು ಓಕರಿಕೆಗೆ ಹರಿಯಿತು. ಓಕರಿಸುವದು ಹೆಚ್ಚಾಯಿತು. ವಾಂತಿಯಾಯಿತು. ಶತ್ರುಪತಿಗಳು ರಕ್ತ ಕಾರಿದರು.

ರಕ್ತವು ಹೋದ ಬಳಿಕ ಅವರು ಮತ್ತಷ್ಟು ನಿತ್ರಾಣರಾದರು. ಚಟುಪಟಿಕೆ ಕಡಿಮೆಯಾಯಿತು. ಆದರೆ ಅಶಕ್ತತೆ ಮಿತಿಮೀರಿ ಬೆಳೆಯಿತು. ಡಾಕ್ಟರರು ಮತ್ತೊಮ್ಮೆ ಅವರ ಪ್ರಕೃತಿಯನ್ನು ಪರೀಕ್ಷಿಸಿದರು. ಹೃದಯದಲ್ಲಿ ಕೇಳಬರುತ್ತಿದ್ದ ವಿಚಿತ್ರ ನಾದವು ಈಗ ಇಲ್ಲದಂತಾಗಿದೆ. ಇನ್ನು ಶತ್ರುಪತಿಗಳು ನೆಟ್ಟಗಾಗಬಹುದೆಂದು ಸಾರಿದರು. ಆದರೆ ಅದಕ್ಕಾಗಿ ಅವರ ಮೈಯಲ್ಲಿ ಹೊರಗಿನಿಂದ ರಕ್ತ ಹಾಕಬೇಕಾಗುವದೆಂದು ತೀರ್ಪುಕೊಟ್ಟರು.

ಹೊರದಿನಿಂದ ರಕ್ತವನ್ನು ಹಾಕಬೇಕು. ಆದರೆ ಯಾರ ರಕ್ತವನ್ನು ಎಂದು ಪ್ರಶ್ನೆಯಿದ್ದಿತು. ತಮ್ಮ ವಂಶವೃಕ್ಷದಲ್ಲಿ ಏಕಾಕಿಗಳಾಗಿದ್ದ ಶತ್ರುಪತಿಗಳ ರಕ್ತಕ್ಕೆ ಅನುಗುಣವಾಗುವಂಥ ರಕ್ತವನ್ನು ಎಲ್ಲಿಂದ ತರಬೇಕು? ಊರಲ್ಲಿದ್ದ ದೂರಿನ ಆಪ್ತರನ್ನು ಕರೆಸಿ ನೋಡಿದರು. ಅವರ ರಕ್ತ ಶತ್ರುಪತಿಗಳ ರಕ್ತಕ್ಕೆ ಸರಿಹೋಗಲಿಲ್ಲ. ಪ್ರೊ. ಅವಧಾನಿಯುವರನ್ನೂ ಹಿಡಿದುಕೊಂಡು ಸಂಸ್ಥಾನದ ಚಿಕ್ಕ ಪುಟ್ಟ ಅಧಿಕಾರಿಗಳೆಲ್ಲರ ರಕ್ತ ಪರೀಕ್ಷೆಯಾಯಿತು. ಅನುಗುಣ ರಕ್ತದೊರೆಯಲಿಲ್ಲ. ಇನ್ನು ನಿರ್ವಾಹವಿಲ್ಲ—ಹೆಂಗಸರ ರಕ್ತವನ್ನಾದರೂ ನೋಡೋಣ ಎಂದು ಡಾಕ್ಟರರು ಸೂಚಿಸಿದರು.

ಸದ್ಮಜಾ ತನ್ನ ರಟ್ಟೆಯನ್ನು ಮುಂದೊಡ್ಡಿದಳು. ಡಾಕ್ಟರರು ಅವಳ ರಕ್ತದ ಒಂದೆರಡು ಹನಿಗಳನ್ನು ತೆಗೆದು ನೋಡಿದರು. ಈ ರಕ್ತ ಹದಿನಾರಾಣಿ ಹೋಲುತ್ತದೆ. ಶತ್ರುಪತಿಗಳ ಹಾಗೂ ರಕ್ತ ಒಂದೇ ಎಂದು ಡಾಕ್ಟರರು ಆನಂದದಿಂದ ಕೂಗಿದರು.

ಶತ್ರುಪತಿಗಳ ರಕ್ತ ಈ ರಕ್ತ ಒಂದೇ ಎಂಪ ಕೂಡಲೆ ಸದ್ಮಜೆಗೆ ಹಿಡಿಸಲಾರದಷ್ಟು ಆನಂದವಾಯಿತು. ಬಹಿ ಅಂತರಿಕ್ಷದಲ್ಲಿ ಅಲೆಯುತ್ತಿದ್ದ ಹಕ್ಕಿಗೆ

ಉತ್ತಮ ಗೂಡು ದೊರೆತಂತೆ ಅವಳಿಗೆ ಅನಿಸಿತು. ಅಣ್ಣಾ ಎನ್ನುತ್ತ ಶತ್ರುಪತಿಗಳನ್ನು ಅಪ್ಪಿಕೊಂಡಳು. ಅವಳ ಸುಖದಲ್ಲಿ ಸಮಭಾಗಿಯಾಗಲು ಶತ್ರುಪತಿಗಳಿಗೆ ಪ್ರಜ್ಞೆ ಇರಲಿಲ್ಲ.

ಆದರೆ ಅದು ಬರಲು ಬಹಳ ದಿವಸಗಳು ಹಿಡಿಯಲಿಲ್ಲ. ವೃದುಳಾ ಬೆಹೆನ ಹಾಗೂ ಪದ್ಮಜೆಯರ ಶುಶ್ರೂಷೆಯಿಂದ ಶತ್ರುಪತಿಗಳು ಬೇಗನೆ ಗುಣಹೊಂದಿದರು. ರಕ್ತದ ವಿಷಯವನ್ನೂ ಕೇಳಿ ಅವರಿಗೆ ಅತ್ಯಾನಂದ ವಾಯಿತು. ಜಗತ್ತಿನಲ್ಲಿದ್ದ ಒಬ್ಬಳೇ ಒಬ್ಬಳಾದ ಸಹೋದರಿಯನ್ನು ಕಳೆದು ಕೊಂಡಾಗ ನಾನಿಷ್ಟು ಕೊರಗಿದ್ದೆನಾಶ್ಚರ್ಯ ಎಂದರವರು.

## ವಸಂತ ಋತು

ಶತ್ರುಪತಿಗಳು ಪೂರ್ಣವಾಗಿ ಗುಣಹೊಂದುವವರೆಗೆ ವೃದುಳಾಬೆಹೆನಳು ತನ್ನ ಓಜಸ್ವಿಪುರ ಪ್ರಯಾಣವನ್ನು ಮುಂದೆ ಹಾಕಿದಳು. ಎರಡು ಮೂರು ಸಾರೆ ಪದ್ಮನಾಭನು ಅವಳನ್ನು ಕರೆಯಲು ಬಂದು ಹಾಗೆಯೇ ಹೋಗಬೇಕಾಯಿತು.

ಬೇನೆಯವರ ಆರೈಕೆ ಮಾಡಿದುದೆಂದರೆ ಅವಳ ಆಯುಷ್ಯದಲ್ಲಿ ಇದೇ ಮೊದಲನೆ ಸಾರೆ, ಮನೆಯಲ್ಲಿಯಾರಾದರೂ ಹಾಸಿಗೆಯನ್ನು ಹಿಡಿದರೆ ಶೇಠರ ಮನೆಯಲ್ಲಿ ಒಬ್ಬಳನ್ನು ಬಿಟ್ಟು ಹತ್ತು ಜನ ದಾಯಿಗಳು ಬರುತ್ತಿದ್ದರು, ಹೊರಗಿನವರು ಹೋದಂತೆ ಬೇನೆಯವರ ಕೋಣೆಗೆ ಹೋಗಿಬಂದರೆ ತೀರಿತು, ಅವಳ ಕೆಲಸ. ಆದರೆ ದೈಭವಪುರದಲ್ಲಿ ಅವಳಿಗೆ ತೀರ ಬೇರೆ ಅನುಭವ ಬಂದಿತು. ಪದ್ಮಜೆಯೊಡನೆ ಶತ್ರುಪತಿಗಳ ಆರೈಕೆ ಮಾಡುವಲ್ಲಿ ಅವಳಿಗೆ ಅಪರಿಮಿತ ಆನಂದವೆನಿಸುತ್ತಿತ್ತು. ಡಾಕ್ಟರರ ಔಷಧಕ್ಕಿಂತ ಶತ್ರುಪತ್ರಿಗಳಿಗೆ ತಮ್ಮಿಬ್ಬರ ಸಹವಾಸವು ಹೆಚ್ಚು ಪಥ್ಯವಾಗಿದೆಂದು ಅವಳು ಮನಗಂಡಳು. ಶತ್ರುಪತಿಗಳ ಜ್ವರ ತೆಗೆದವು. ಅವರು ಎದ್ದು ಕೂಡ್ರತೊಡಗಿದರು. ಮತ್ತೆ ಮೊದಲಿನಂತೆ ಆದರು. ಇದಕ್ಕೆಲ್ಲ ತಮ್ಮ ಸಹವಾಸವೇ ಕಾರಣವೆಂದು ಅವಳಿಗೆ ಅಭಿಮಾನವೆನಿಸುತ್ತಿತ್ತು. ಶತ್ರುಪತಿಗಳು ಅವರ ದಿವಾಣರು ಅರಮನೆಯ ಪರಿವಾರದವರು ಇದೇ ಮಾತನ್ನು ಕೃತಜ್ಞತೆಯಿಂದ ಮೇಲಿಂದ ಮೇಲೆ

ಹೇಳುತ್ತಿದ್ದರು. ಅದನ್ನು ಕೇಳಿ ಅವಳ ಅಂತರಂಗದಲ್ಲಿ ಕೃತಕೃತ್ಯಭಾವನೆಯು ಮೂಡುತ್ತಿತ್ತು. ಆದರೆ ಮರುಕ್ಷಣವೇ ತತ್ವಜ್ಞಾನಪುಸ್ತಕಗಳಲ್ಲಿ ಮುಳುಮುಳುಗಿ ಎದ್ದ ಅವಳ ಮನಸ್ಸು ಅವಳನ್ನು ಪ್ರಶ್ನಿಸುತ್ತಿತ್ತು. ಪದ್ಮಜೆಗೆ ಒಂದು ಸಾಮ್ರಾಜ್ಯ ಸಿಕ್ಕಂತಾಗಿದೆ; ಜನವು ನಂಬಲಿ ಬಿಡಲಿ ಶತ್ರುಪತಿಗಳು ತನ್ನ ಅಣ್ಣಂದಿರೆಂದು ಅವಳು ತಿಳಿದುಕೊಂಡುಬಿಟ್ಟಿದ್ದಾಳೆ. ಅಂತಃಕರಣಪೂರ್ವಕವಾಗಿ ಅವಳು ತನ್ನ ಅಣ್ಣನ ಆರೈಕೆಮಾಡಿದಳು. ಅವಳಿಗೆ ಆನಂದವಾದುದರಲ್ಲಿ ಆಶ್ಚರ್ಯವಿಲ್ಲ. ಆದರೆ ನೀನು ಯಾರು? ನಿನಗೇಕೆ ಏನು ಅನಿಸಬೇಕು? ತನ್ನ ಮನಸ್ಸಿಗೆ ಏನಾದರೊಂದು ಉತ್ತರವನ್ನು ಹೇಳಿ ಅವಳು ಸಮಾಧಾನ ಪಡಿಸುತ್ತಿದ್ದಳು. ಕೂಸಿಗೆ ಮೊಲೆಕೊಟ್ಟರೆ ತಾಯಿಗೆ ಆನಂದವೆನಿಸುವಂತೆ, ಸಹಾನುಭೂತಿ ಅಂತಃಕರಣವನ್ನು ತೋರುವಲ್ಲಿ ಸ್ತ್ರೀಗೆ ಆನಂದವಾಗುತ್ತದೆ. ನನಗೆ ಅರಮನೆಯ ಜೀವನವು ನಾವಿನ್ಯಪೂರ್ಣವೆನಿಸುತ್ತದೆ. ಅದರಲ್ಲಿ ಒಂದಿಲ್ಲೊಂದು ನೆವದಿಂದ ನನಗೆ ಮಹತ್ವದ ಸ್ಥಾನ ದೊರೆಯುತ್ತಿದೆಂದು ನನಗೆ ಆನಂದವಾಗುತ್ತದೆ. ಇದೇ ಆನಂದ ಶತ್ರುಪತಿಗಳ ಆರೈಕೆಮಾಡಿ ಸಿಕ್ಕಿತೆಂದು ನನಗೆ ನೀಸುತ್ತದೆ ಎಂದು ಮುಂತಾಗಿ ಅವಳು ವೇಳೆ ಸಿಕ್ಕಾಗ ವಿಚಾರಮಾಡುತ್ತಿದ್ದಳು. ಆದರೆ ಇಂಥ ವಿಚಾರಗಳಿಗೆ ಅವಳಿಗೆ ವಿಶೇಷ ವೇಳೆ ದೊರೆಯುತ್ತಿದ್ದಿಲ್ಲ.

ಯಾಕಂದರೆ ಉಳಿದ ವೇಳೆಗಾಗಿ ಎಷ್ಟೋ ವಿಷಯಗಳು ಕಾದಿರುತ್ತಿದ್ದವು. ಆಡಳಿತೆಯನ್ನು ಸುವ್ಯವಸ್ಥಿತಗೊಳಿಸಲು, ದಿವಾಣರು ಮೇಲಿಂದ ಮೇಲೆ ಹೊರಗೆ ಹೋಗುತ್ತಿದ್ದರು. ಆದ್ದರಿಂದ ಅಂಥ ಇಂಥ ಒಂದೆರಡು ವಿಷಯಗಳನ್ನು ಒಂದೆರಡು ಪತ್ರಗಳಿಗೆ ಉತ್ತರ ಬರೆದಿಡುವ ಕೆಲಸವನ್ನು, ಒಂದೆರಡು ಲೆಕ್ಕಗಳನ್ನು ಪರಿಶೀಲಿಸಿಸುವ ಕೆಲಸವನ್ನು ಅವರು ಅವಳಿಗೆ ಕೊಡುತ್ತಿದ್ದರು. ಓಜಸ್ವಿಪುರದ ಹಳ್ಳಕ್ಕೆ ಒಡ್ಡು ಹಾಕಿ ಅದರಿಂದ ತಮ್ರ ಕಪ್ಪು ಬಸಿಯ ಕಾರ್ಖಾನೆಯ ಸ್ಥಾಪನೆಯ ವಿಚಾರವನ್ನು ಪದ್ಮನಾಭನು ಅವಳ ತಲೆಯಲ್ಲಿ ತುಂಬಿದ್ದ. ಅದನ್ನು ಯಾವ ರೀತಿ ಶತ್ರುಪತಿಗಳ ಮುಂದಿಡಬೇಕೆಂದು ಅವಳು ಎಣಿಕೆಹಾಕುತ್ತಿದ್ದಳು. ಪ್ರೊ. ಅವಧಾನಿಯವರು ಈ ವಿಚಾರಕ್ಕೆ ಪುಷ್ಟಿಕೊಟ್ಟಿದ್ದರು. ಆದರೆ ಕೊಡತೆಗೆದುಕೊಳ್ಳುವ ವ್ಯವಹಾರವು ಶೇಠ ಗಗನಲಾಲರಿಲ್ಲದೆ ಬಗೆಹರಿಯಲಾರದೆಂದು ಅವರಿಗೆ ಬರಲು ಬರೆಯಬೇಕೆಂದು ಪ್ರೊಫೆಸರರು ಸೂಚಿಸಿದ್ದರು. ಶೇಠರ ಆಗಮನವನ್ನು ನಿರೀಕ್ಷಿಸುತ್ತ ಅವಳು ಕುಳಿತಿದ್ದಳು.

ಇಷ್ಟರಲ್ಲಿ ಒಂದು ದಿನ ಪದ್ಮನಾಭನು ವೈಭವಪುರಕ್ಕೆ ಬಂದುದರಿಂದ ಮೃದುಳಾಬೆಹೆನಳೂ ಅವನೊಡನೆ ಓಜಸ್ವಿಪುರಕ್ಕೆ ಹೊರಟಳು. ಓಜಸ್ವಿಪುರದ ಯೋಜನೆಯ ಪ್ರಾಸ್ತಾವಿಕ ಪರಿಶೀಲನೆಯನ್ನು ಮಾಡಿಕೊಂಡರೆ ತಂದೆಗೆ ಏನಾದರೂ ಸಲಹೆ ಕೊಡಬಹುದೆಂದು ಅವಳು ಭಾವಿಸಿದಳು.

ವೈಭವಪುರದಿಂದ ಓಜಸ್ವಿಪುರಕ್ಕೆ ಹೋಗುವ ದಾರಿ ಗಿಡಗಂಟಿಗಳಿಂದ ತುಂಬಿದ ಕಾಡಿನಲ್ಲಿ ಹಾಯ್ದುವದು. ಹಾದಿಯು ಗಿಡಗಂಟಿ ಕಲ್ಲು ಮುಳ್ಳುಗಳಿಂದ ಕೂಡಿದ್ದರೂ ಆ ಪ್ರದೇಶವು ಬಹಳ ಮೋಹಕವಾಗಿದ್ದಿತು. ಹೊರಗೆ ವಸಂತ ಋತು ಪ್ರಾರಂಭವಾಗಿದೆಂದು ಮೃದುಳಾಬೆಹನಳಿಗೆ ಅದೇ ಮೊಟ್ಟಮೊದಲು ತಿಳಿದುಬಂತು. ಶತ್ರುಪತಿಗಳ ಅರಮನೆಯ ಸುತ್ತಲು ಇದ್ದ ಗಿಡಬಳ್ಳಿಗಳಿಗೆ ೧೨ ತಿಂಗಳು ನೀರು ದೊರೆಯುತ್ತಿದ್ದುದರಿಂದ ಋತುಗಳ ಪರಿಣಾಮವು ಅವುಗಳ ಮೇಲಾದುದು ಅಷ್ಟೊಂದು ಎದ್ದು ಕಾಣುತ್ತಿರಲಿಲ್ಲ. ಆದರೆ ಗಿಡಗಂಟಿಗಳ ಕಾಡು ಪ್ರದೇಶದಲ್ಲಿ ಪ್ರತಿಯೊಂದು ಗಿಡದಮೇಲೆ ಪ್ರತಿಯೊಂದು ಬಳ್ಳಿಯಮೇಲೆ ಆಗಿನ ಋತುವಿನ ಹೆಸರು ಕಾಣುತ್ತಿತ್ತು. ಬರಲಾದ ಗಿಡಗಳು ಭರದಿಂದ ಚಿಗಿಯುತೊಡಗಿದ್ದವು. ಬಳ್ಳಿಗಳು ರೇಶಿಮೆಯ ಎಲೆಗಳಿಂದ ಸುಶೋಭಿತವಾಗಿ ಗಿಡಗಳಮೇಲೆ ಹಬ್ಬತೊಡಗಿದ್ದವು. ವಿಧವಿಧದ ಹಕ್ಕಿಪಕ್ಕಿಗಳ ಕಂಠದಿಂದ ವಿಧವಿಧದಸಂಗೀತವು ಹೊರಸೂಸುತ್ತಿತ್ತು. ಕಾಡುಹೂಗಳ ಸುಗಂಧವನ್ನು ಹರಡುತ್ತಮಂದ ಮಾರುತನು ಸುಳಿಯುತ್ತಿದ್ದನು.

ತಗ್ಗು ದಿನ್ನೆಗಳ ಮುಳ್ಳು ಕಲ್ಲುಗಳ ಪ್ರದೇಶನಲ್ಲಿ ನಡೆದು ರೂಢಿ ಇದ್ದಿಲ್ಲವಾದ್ದರಿಂದ ಮೃದುಳಾಬೆಹೆನಳು ಒಂದೆರಡು ಮೈಲು ಹೋಗುವಷ್ಟರಲ್ಲಿಯೇ ದಣಿದಳು. ವಿಶ್ರಾಂತಿಗಾಗಿ ಇಬ್ಬರೂ ಒಂದು ಬೂರಲದ ಮರದ ಕೆಳಗೆ ಕುಳಿತುಕೊಂಡರು. ರಮಣೀಯ ನಿಸರ್ಗ ಸೌಂದರ್ಯವು ಮೂರು ಲೋಕಗಳನ್ನು ಸುತ್ತಿ ಬಂದವರ ದಣಿವನ್ನು ಕಳೆಯುವಷ್ಟು ಆಲ್ಹಾದದಾಯಕವಾಗಿತ್ತು. ಕ್ಷಿತಿಜದ ವರೆಗೆ ಸಣ್ಣ ಪುಟ್ಟ ಗುಡ್ಡಗಳ ಸಾಲುಗಳು. ಅವುಗಳ ಮೇಲೆ, ಹಚ್ಚಹಸುರಾಗದಿದ್ದರೂ, ಹಚ್ಚಹಸುರಾಗಲು ಹವಣಿಸುವ ಹುಲ್ಲಿನ ಹೊದಿಕೆ. ಚಿಲಿಪಿಲಿಸುವ ಹಕ್ಕಿಪಕ್ಕಿಗಳು. ತಟ್ಟನೆ ಹಣಿಕಿಕ್ಕಿ ಚಣ್ಣನೆ ಹಾರುವ ಮೊಲಗಳು, ಶುಭ ಸೂಚಿಸುವದಕ್ಕಾಗಿಯೊ ಅಥವಾ ತಮ್ಮ ಬಾಲಗಳ ಸೌಂದರ್ಯವನ್ನು ಪ್ರದರ್ಶಿಸುವದಕ್ಕಾಗಿಯೋ ಹೊರಬಿದ್ದ

ಸುಳಿದಾಡುವ ನರಿಗಳು, ತರತರದ ಹೂಗಳನ್ನು ಕಾಯಿಗಳನ್ನು ಹೊತ್ತು ಕೊಂಡು ಸ್ವಾಗತಕ್ಕಾಗಿ ನಿಂತ ಗಿಡ ಬಳ್ಳಿಗಳು!

ಹೌದು ತರತರದ ಗಿಡಬಳ್ಳಿಗಳು! ಮೃದುಳಾಬೆಹೆನಳ ತೀರ ಸಮೀಪ ದಲ್ಲಿ ಒಂದು ಮಲ್ಲಿಗೆಯ ಬಳ್ಳಿಯು ಒಂದು ಮುಳ್ಳಿನ ಕಂಟಿಯಮೇಲೆ ಹಬ್ಬಿತ್ತು. ಬಳ್ಳಿಗೆ ಎಲೆಗಳಿಗಿಂತ ಹೂಗಳೇ ಹೆಚ್ಚಾಗಿವೆಯೊ ಏನೋ ಎಂದು ಭಾಸವಾಗುತ್ತಿತ್ತು. ಮೃದುಳಾಳ ಚಿತ್ತವು ಒಮ್ಮೆಲೇ ಬಳ್ಳಿಯತ್ತ ಆಕರ್ಷಿ ಸಲ್ಪಟ್ಟಿತು. ಈ ಮಲ್ಲಿಗೆ ಮುಂಬಯಿಯಲ್ಲಿ ದೊರೆಯುವ ಮಲ್ಲಿಗೆಗಳಿಂದ ಭಿನ್ನವಾಗಿದೆ ಎಂದಳು. ಹೂಗಳನ್ನು ಹರಿದುಕೊಂಡು ಮಲ್ಲಿಗೆಯ 'ಅಂಟಿ'ನ್ನೂ ಸಂಗಡ ಒಯ್ಯಬೇಕೆಂದು ಅವಳು ಪದ್ಮನಾಭನಿಗೆ ಸೂಚಿಸುತ್ತಿದ್ದಳು. ಅಷ್ಟ ರಲ್ಲಿ ಹರಕು ಸೀರೆಯನ್ನುಟ್ಟು ಮೂರು ನಾಲ್ಕಾಂಶ ನಗ್ನ ಅಸ್ಥಿಪಂಜರದಂಥ ಹೆಂಗಸೊಬ್ಬಳು ಮಲ್ಲಿಗೆಯ ಬಳ್ಳಿಯು ಕಡೆಗೆ ಬಂದಳು

ಇನ್ನು ಹೂವಿನ ಆಶೆಯನ್ನು ಬಿಡಬೇಕೆಂದು ಮೃದುಳಾಗೆ ಅನಿಸಿತು. ಮರುಕ್ಷಣದಲ್ಲಿಯೇ, ಇಂಥ ಬಡವಿಗೂ ಕೂಡ ಸೌಂದರ್ಯಾರಾಧನೆ ಬೇಕೆನಿ ಸುತ್ತದೆಂದು ತಾತ್ವಿಕ ವಿಚಾರವೊಂದು ಅವಳಲ್ಲಿ ಸುಳಿಯಿತು.

ಆ ಸ್ತ್ರೀಯು ಮಲ್ಲಿಗೆಯ ಬಳ್ಳಿಯನ್ನು ಬದಿಗೆ ಸರಿಸಿ ಅದರ ಕೆಳಗಿದ್ದ ಮುಳ್ಳ ಕಂಟೆಯಿಂದ ಕರ್‍ರಗಿನ ಹಣ್ಣುಗಳನ್ನು ಹರಿಯತೊಡಗಿದಳು. ಮಲ್ಲಿ ಗೆಯ ಹೂಗಳು ಪಳಪಳನೆ ಉದುರಿ ಕೆಳಗೆ ಬಿದ್ದವು. ಅವುಗಳನ್ನು ಕಾಲ್ಕೆಳಗೆ ತುಳಿಯುತ್ತಲೂ ಕೂಡ ಆ ಸ್ತ್ರೀಯು ಹಣ್ಣುಗಳನ್ನು ಆರಿಸತೊಡಗಿದಳು.

ಮೃದುಳಾಬೆಹೆನಳಿಗೆ ಆಶ್ಚರ್ಯವಾಯಿತು. ಇಂಥ ಸುಂದರ ಹೂಗ ಳನ್ನು ಕಾಲ್ಕೆಳಗೆ ತುಳಿಯುವದುಂಟೆ? ಈ ಹೂವಿಗಿಂತ ಹೃದ್ಯವೆನಿಸುವ ಹಣ್ಣುಗಳಾದರೂ ಎಂಥಹವವು? ಎಂದು ಅವಳು ಪದ್ಮನಾಭನನ್ನು ಕೇಳಿ ದಳು. ಪದ್ಮನಾಭನು ಆ ಸ್ತ್ರೀಯನ್ನೇ ಪ್ರಶ್ನಿಸಿದ.

"ಎಂಥ ಹಣ್ಣವು ? " ಪದ್ಮನಾಭ

" ಕವಳೀ ಹಣ್ಣು " ಆ ಸ್ತ್ರೀ.

"ಬಹಳ ರುಚಿಯೆನಿಸುವವೆ? "

"ತಿನ್ನಾಕಬರೋದ್ಯಾಲ್ಲಾ ನಮಗೆ ರುಚಿಕನಕ "

"ಹೂ ಯಾಕ ಒತ್ತುದುಲ್ಲಾ? ಎಷ್ಟು ಚಂದ ಅವ? "

"ಅವು ತಿನ್ನಾಕ ಬರಾಣಿಲ್ಲ ಅಣ್ಣಾ; ಹೊಟ್ಟೆತುಂಬಿದವ್ಯಾಗ ಹೂ ಚೆಂದ!

"ಈ ಗೋಲಿಗುಂಡಿನಂಥ ಹಣ್ಣ ತಿಂದ ಎಷ್ಟು ಹೊಟ್ಟೆ ತುಂಬ ಬೇಕಾಗ್ಯದ? "

"ತುಂಬಿದಷ್ಟು ತುಂಬೀತ್ರಿ. ಕಾಳಕಡಿ ಬಂಗಾರಕಿಂತಾ ಬಂಗಾರ ಆಗ್ಯಾವ. ಇವ ನಮ್ಮ ಹೊಟ್ಟಿ ತುಂಬೋವ. ಇನ್ನ ಹದನದಿನಕ್ಕ ನೀರಲ ಹಣ್ಣ ಆಗತಾವ. ಅಲ್ಲಿ ಮತಾ ಕವಳಿ ಹಣ್ಣಾ, ಸುಣ್ಣದ ಹಣ್ಣಾ, ಮುರಕಿ ಹಣ್ಣಾ ಇಂಥವ ತಿನ್ನೋತ್ರದು"

ಪದ್ಮನಾಭನು ಅವಳ ಹಕೀಕತನ್ನು ವಿವರವಾಗಿ ತಿಳಿದುಕೊಂಡು ಮೃದುಳಾಬೆಹನಳಿಗೆ ಅರುಹಿದ. ವೈಭವಪುರ ಸಂಸ್ಥಾನದಲ್ಲಿಯ ಒಂದು ಚಿಕ್ಕ ಹಳ್ಳಿಯಾದ ಚಿಕ್ಕಹಳ್ಳಿಯು ಅವಳ ಊರು. ಒಕ್ಕಲತನದಮೇಲೆ ಉಪ ಜೀವನ. ಒಮ್ಮೆಲೇ ಯಾವದೊ ಒಂದು ರೋಗವಾಗಿ ಅವರ ಒಂದು ಎತ್ತು ಸತ್ತುದರಿಂದ ಅವಳ ಕುಟುಂಬವು ನಿರಾಧಾರವಾಯಿತು. ಇನ್ನೊಂದು ಎತ್ತನ್ನು ಅಥವಾ ಕೋಣವನ್ನು ಕೊಂಡು ಒಕ್ಕಲತನವನ್ನು ಸಾಗಿಸುವ ಶಕ್ತಿ ಅವರಿಗಿರಲಿಲ್ಲ. ಯುದ್ಧ ಪರಿಸ್ಥಿತಿಯ ಮೂಲಕ ಎತ್ತು ಕೋಣಗಳನ್ನು ಅವುಗಳ ತೂಕದಷ್ಟು ರೂಪಾಯಿ ಕೊಟ್ಟು ಕೊಳ್ಳಬೇಕಾಗಿತ್ತು. ಆದ್ದರಿಂದ ಆ ಎತ್ತಿನ ಜೋಡಿಯಾಗಿದ್ದ ಕೋಣವನ್ನು ಮಾರಿಕೊಂಡು ಆ ಕುಟುಂಬವು ಕೂಲಿಗಾಗಿ ನಿಂತಿತು. ಆದರೆ ದಿನ ಒಂದಕ್ಕೂ ಎಲ್ಲಿ ಕೂಲಿ ದೊರೆಯಬೇಕು? ಕೂಲಿ ದೊರೆತರೂ ಕೂಲಿಯ ಪ್ರತಿಫಲ ಬರುವದು ರೈತನ ಅಥವಾ ಮಾಲಕನ ಕಡೆಗೆ ದುಡ್ಡು ಆದಾಗ. ಅವಳ ಗಂಡನು ಕೂಲಿಗಾಗಿ ಆ ಊರಿಂದ ಈ ಊರು ಈ ಊರಿಂದ ಆ ಊರು ಅಲೆಯಬೇಕಾಯಿತು. ಇವಳು ಗುಡ್ಡ ಗುಡ್ಡ ಗಳಲ್ಲಿ ತಿರುಗಿ, ಕಟ್ಟಿಗೆ ಸಿಕ್ಕರೆ ಕಟ್ಟಿಗೆ, ಹಣ್ಣು ಸಿಕ್ಕರೆ ಹಣ್ಣು ಹೀಗೆ ಮಾಡಿ ತನ್ನ ಹಾಗೂ ಎರಡು ಹುಡುಗರ ಪೋಷಣೆಯನ್ನು ನಡೆಸಿದ್ದಳು. ಪೋಷಣೆ? ಜೀವನವನ್ನು ಅಸ್ಥಿಪಂಜರದಲ್ಲಿ ಹಿಡಿದಿಡುವ ಉಪಾಯ ಪೋಷಣೆಯೆ?

"ಇವಳಂಥವಳು ಆ ಹಳ್ಳಿಯಲ್ಲಿ ಅಥವಾ ಸುತ್ತಲಿನ ಹಳ್ಳಿಗಳಲ್ಲಿ ಎಷ್ಟು ಜನ ಇದ್ದಾರೆ? ಎಂದು ಹಿಂದೀಯಲ್ಲಿ ಮೃದುಳಾಬೆಹೆನಳು ಪ್ರಶ್ನಿಸಿದಳು. ಪದ್ಮನಾಭನು ಆ ಪ್ರಶ್ನೆಯನ್ನು ಅವಳಿಗೆ ಕನ್ನಡದಲ್ಲಿ ಕೇಳಿದ.

"ಟಿಕ್ಕ್ಯಾs ಹಾಕಾಕs ಪರಮೇಶ್ವರನ ಬರಾಕಬೇಕು," ಎಂದು ಉತ್ತರ ಬಂದಿತು.

"ನಮ್ಮ ಮಟ್ಟಿಯನ್ನು ಹೊರಲು ದಿನಾಲು ಬರುವ ನೂರಾರು ಜನರೂ ಇದೇ ಸ್ಥಿತಿಯವರೆ. ಇಲ್ಲಿಯವರ ಪರಿಸ್ಥಿತಿ ಸ್ವಲ್ಪ ಹೆಚ್ಚು ಕಡಿಮೆ ಇದೇ ಆಗಿದೆ. ಸಾಲ ಹೆಚ್ಚಾಯಿತೆಂದು ಇದ್ದುದು ಬಿದ್ದುದನ್ನೆಲ್ಲ ಮಾರಿ ಜಮೀನದಾರರ ಲಾವಣಿ ಮತ್ತು ಸಂಸ್ಥಾನದ ತೆರಿಗೆಯನ್ನು ತೆತ್ತುವದು, ಒಂದಿಲ್ಲೊಂದು ಕಾರಣದಿಂದ ಒಕ್ಕಲತನ ಮುರಿಯಬೇಕಾಗಿ ಪ್ರಸಂಗ. ಒಕ್ಕಲತನ ಇದ್ದಾಗಲೂ ಅರೆಹೊಟ್ಟೆ, ಅದು ಮುರಿದ ಮೇಲಂತೂ ಒಂದು ನಾಲ್ಕಾಂಶದಷ್ಟು ಕೂಡ ಹೊಟ್ಟೆ ತುಂಬದು" ಎಂದ ಪದ್ಮನಾಭ.

ಮೃದುಳಾಬೆಹೆನಳು ಕ್ಷಿತಿಜದ ಕಡೆಗೆ ನೋಡಿದಳು. ಗುಡ್ಡಗಳ ಸಾಲುಗಳ ಬದಲು ಅವಳಿಗೆ ಅಲ್ಲಿ ಸಮಸ್ಯೆಗಳ ಸಾಲುಗಳೇ ಕಂಡವು. ಮತ್ತೆ ಮಲ್ಲಿಗೆಯ ಬಳ್ಳಿಯ ಕಡೆಗೆ ನೋಡಿದಳು. ಅದರ ಹೂಗಳೆಲ್ಲ ಉದುರಿ ಬಿದಿದ್ದವು. ಕವಳಿಯ ಕಂಟಿಯ ದೊಡ್ಡ ದೊಡ್ಡ ಮುಳ್ಳುಗಳು ಮಾತ್ರ ಎದ್ದು ಕಾಣತೊಡಗಿದ್ದವು. ಹಳ್ಳಿಗಳ ಪರಿಸ್ಥಿತಿಯನ್ನು ಪುಸ್ತಕಗಳಲ್ಲಿ ಓದಿದ ಅವಳು ಕತೆ ಕಾದಂಬರಿಗಳಲ್ಲಿದ್ದ ಅನೇಕ ಚಿತ್ರಗಳಿದ್ದಂತೆ ಹಳ್ಳಿಗಳ ಬಡತನವೂ ಕಲ್ಪನಾ ವಿಲಾಸ, ಅತಿಶಯೋಕ್ತಿ ಎಂದು ಅವಳಿಗೆ ಅನಿಸುತ್ತಿತ್ತು. ಆದರೆ ಹಣ್ಣನ್ನು ಆರಿಸಲು ಬಂದವಳ ಸ್ವರೂಪವನ್ನು ನೋಡಿದೊಡನೆ ಅವಳಿಗೆ ಹಳ್ಳಿಯ ಬಡತನದ ವಿರಾಟ ಸ್ವರೂಪವು ಕಂಡಿತು. ಹಸಿವಿಯನ್ನು ಹಿಂಗಿಸಲು ಅಹಾರವಿಲ್ಲ! ಮರ್ಯಾದೆಯನ್ನು ಮುಚ್ಚಲು ಬಟ್ಟೆಯಿಲ್ಲ!

ಗಾಂಧೀಯವರ ಚರಖಾ ಸಂದೇಶವು ಅರ್ಥವಿಲ್ಲದಿಲ್ಲ ಎಂದು ಅವಳಿಗೆ ಹೊಳೆಯಿತು. ದಿನಾಲು ಒಂದು ರಾಟಿಯನ್ನು ತಿರುವಿದ್ದರೂ ಈ ಹೆಂಗಸರಿಗೆ ಮೈತುಂಬ ಬಟ್ಟೆಯಾಗಬಹುದಾಗಿತ್ತು. ಗಾಂಧೀಯವರ ಮಾರ್ಗದಿಂದ ತಮಗೆ ಸ್ವರಾಜ್ಯ ದೊರೆಯಲಿಲ್ಲವೆಂದು ಆಗಾಗ್ಗೆ ಸಂಶಯಬಡುತ್ತಿದ್ದ ಅವಳಿಗೆ ಗಾಂಧೀಯ ತತ್ವಜ್ಞಾನದ ತಿರುಳು ಒಮ್ಮೆಲೇ ತಿಳಿಯಿತು. ಬಟ್ಟೆಯ ಸಮಸ್ಯೆಯಂತೆಯೇ ಈ ಜನದ ಹೊಟ್ಟೆಯ ಸಮಸ್ಯೆಯನ್ನು ಬಿಡಿಸಬೇಕು. ಆದರೆ ಹೇಗೆ? ಈ ಪ್ರಶ್ನೆಯ ಉತ್ತರವು ಅವಳಿಗೆ ಸಿಕ್ಕಲಿಲ್ಲ. ಇವೇ ವಿಚಾರಗಳನ್ನೆ ಮೆಲಕುಹಾಕುತ್ತ ಅವಳು ಪದ್ಮನಾಭನೊಡನೆ ಓಜಸ್ವಿಪುರಕ್ಕೆಹೋಗಿ ಮುಟ್ಟಿದಳು.

ಓಜಸ್ವಿಪುರದಲ್ಲಿ ಅವಳು ಒಕ್ಕಲಿಗರನ್ನೂ ಮಟ್ಟಿಯನ್ನು ಹೊರಲು ಬರುವ ಕೂಲಿಕಾರರನ್ನೂ ಅಭ್ಯಸಿಸಿದಳು. ಭೂಮಿಯ ಪರಿಸ್ಥಿತಿಯು ಸಂಪೂರ್ಣ ಹದಗೆಟ್ಟಿತ್ತು. ಅಲ್ಲಿಯ ಬಹುತರ ಎಲ್ಲ ಭೂಮಿಗಳು ವೈಭವಪುರದ ಶೆಟ್ಟಿ ಸಾಹುಕಾರರ ಒಡೆತನದವಾಗಿದ್ದವು. ಇಲ್ಲವೆ ಅವರಿಗೆ ಒತ್ತೀ ಬಿದ್ದಿದ್ದವು. ಹೀಗಾಗಿ ಭೂಮಿಗಳಲ್ಲಿ ರೈತರಿಗೂ ಆಸ್ಥೆ ಇರಲಿಲ್ಲ. ಇವು ಒಂದಿಲ್ಲೊಂದು ದಿನ ನಮ್ಮ ಕೈಬಿಡುವವೇ ಎಂದು ಅವರ ನಂಬುಗೆ. ಬಡ್ಡಿಯಲ್ಲಿ ಬರುವ ಹೊಲ ಹ್ಯಾಗಿದ್ದರೂ ಲಾಭವೆ ಎಂದು ಸಾಹುಕಾರರ ಲೆಕ್ಕ. ಹೀಗಾಗಿ ಹೊಲಗಳು ಒಂದು ದೃಷ್ಟಿಯಿಂದ ಪರದೇಶಿಯಾಗಿದ್ದವು. ಅದರಲ್ಲಿ ಸಂಸ್ಥಾನದ ಪ್ರದೇಶ ಕೇಳುವದೇನು? ಕೇಳುವವರಾರು? ಇದ್ದ ಒಂದು ಕೆರೆಯು ಎಂದೊ ಹುಗದುಹೋಗಿ ನೆಲಸಮವಾಗಿತ್ತು. ಆಕಾಶದ ಕಡೆಗೆ ಮೊರೆಯಿಟ್ಟೇ ಬಿತ್ತುವದು ಬೆಳೆಯುವದು. ಕೆಲವು ಭೂಮಿಗಳು ಖಟ್ಲೆಗಳಲ್ಲಿ ಸಿಕ್ಕು ಪಡಬಿದ್ದಿದ್ದವು. ಸಂಸ್ಥಾನದಲ್ಲಿಯ ನ್ಯಾಯವಿಚಾರಣಾ ಪದ್ಧತಿ ಕೇಳುವದೇನು? ಅಜ್ಜನು ಹೂಡಿದ ಖಟ್ಲೆಯ ವಿಚಾರಣೆಯು ಮೊಮ್ಮಗನ ಕಾಲಕ್ಕೆ ಆಗುವದು, ಮರಿಮಗನು ಅದರ ನಿರ್ಣಯವನ್ನು ಕೇಳುವನು ಇಂಥ ಪರಿಸ್ಥಿತಿ. ಅಜ್ಞಾನ ಮತ್ತು ಬಡತನದ ಮೂಲಕ ರೈತರು ಭೂಮಿಯ ಸುಧಾರಣೆಯಲ್ಲಿ ಲಕ್ಷ್ಯಹಾಕುವದು ಶಕ್ಯವಿಲ್ಲ. ಅನಾಸ್ಥೆಯ ಮೂಲಕ ಮಾಲಕರು ಅದರಲ್ಲಿ ಮನಸ್ಸುಹಾಕುತ್ತಿರಲಿಲ್ಲ. ಹೀಗಾಗಿ ಒಕ್ಕಲತನದಿಂದ ಹಳ್ಳಿಗೆ ಬರುವ ಆದಾಯವು ಬಹಳ ಕಡಿಮೆಯಾಗಿತ್ತು. ಆದರೂ ಅಲ್ಲಿಯ ಜನರ ಮುಖ್ಯ ಉದ್ಯೋಗ ಏಕಮೇವ ಉದ್ಯೋಗ ಒಕ್ಕಲತನ ಹಳ್ಳಿಯವರಷ್ಟೇ ಅಲ್ಲದೆ ಪಟ್ಟಣದಲ್ಲಿಯವರ ಹೊಟ್ಟೆಯೂ ಅದರ ಮೇಲೆಯೇ ತುಂಬುವದು.

ಅಲ್ಲಿ ಮಟ್ಟಿಯ ಕೆಲಸವು ಪ್ರಾರಂಭವಾದಂದಿನಿಂದ ಅಲ್ಲಿಯ ಜನರಿಗೆ ಕೂಲಿ ದೊರೆಯಹತ್ತಿತ್ತು. ಜನರ ಪರಿಸ್ಥಿತಿ ಸುಧಾರಿಸುವ ಲಕ್ಷಣಗಳು ತೋರ ತೊಡಗಿದ್ದವು. ಕೂಲಿಗಾಗಿ ನೆರೆಹಳ್ಳಿಯವರೂ ಹಲ ಕೆಲವರು ಅಲ್ಲಿ ಬಂದು ಇರತೊಡಗಿದ್ದರು. ಎಷ್ಟೋ ಹೊಸ ಗುಡಿಸಲುಗಳಾಗಿ ಹಳ್ಳಿಯ ಬೆಳವಣಿಗೆ ನಡೆದಿತ್ತು ಜನರ ಕೈಯಲ್ಲಿ ಹಣ ಬರತೊಡಗಲು ಒಂದು ಸಿಂದಿಯ ಅಂಗಡಿಗೂ ಆಸ್ಪದ ದೊರೆತಿತ್ತು. ಅದರ ವ್ಯಾಪಾರವು ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತ ನಡೆದಿದ್ದು. ಮೃದುಳಾಬೆಹೆನಳಿಗೆ ಅನೇಕ ಸಮಸ್ಯೆಗಳು ಕಂಡವು. ಎಲ್ಲಿ ನೋಡಿದರೂ ಸಮಸ್ಯೆಯೇ.

ಓಜಸ್ವಿಪುರದ ಜನರು ಬಡವರಾದರೂ ಅದರ ಭೂಮಿಯು ಸುಸಂಪನ್ನ ವೆಂದು ಮೃದುಲಾ ಕಂಡುಕೊಂಡಳು. ಮೊಳದ ಬೇಟೆಗಾಗಿ ಪ್ರಸಿದ್ಧವಾದ ವಿಹಾರ ಭೂಮಿಯಲ್ಲಿ ಅತ್ಯುತ್ತಮ ಕಬ್ಬು ಬೆಳೆಯುವದೆಂದು ಸ್ಥಾನಿಕ ರೈತ ರಿಂದ ಕೇಳಿಕೊಂಡಳು. ೨೦೦ ಎಕರೆ ಸುಸಂಪನ್ನ ಭೂಮಿ ಕೇವಲ ಹುಲ್ಲು ಗಾವಲಾಗಿದೆ! ಬಿಳಿಯ ಮಟ್ಟಿಯೂ ಓಜಸ್ವಿಪುರದ ಸಂಪತ್ತನ್ನು ಸಾರುತ್ತಿತ್ತು. ಪದ್ಮನಾಭನ ವಿಚಾರವು ಅವಳಿಗೆ ಸರಿದೋರಿತು. ಹಳ್ಳಕ್ಕೆ ಒಡ್ಡು ಹಾಕಿದರೆ ಎರಡು ಕಾರ್ಯಗಳು ಸಾಧಿಸುವವು. ಮಟ್ಟಿಯನ್ನು ಮುಂಬಯಿಗೆ ಕಳಿಸದೆ ಅಲ್ಲಿಯೇ ಶುದ್ಧಮಾಡಬಹುದು—ಅಲ್ಲದೆ ಕಪ್ಪು ಬಸಿ ಕಾರ್ಖಾನೆಯನ್ನೆ ಅಲ್ಲಿ ಪ್ರಾರಂಭಿಸಬಹುದು. ಇತ್ತ ೨೦೦ ಎಕರೆ ಭೂಮಿಯನ್ನು ಸಾಗುವಮಾಡ ಬಹುದು. ಎಂಥ ದೊಡ್ಡ ವಿಚಾರ ಆದರೆ ಅದರ ಸಾಧ್ಯಾಸಾಧ್ಯತೆಯ ವಿಚಾರವೇನು?

ಹಳ್ಳಿಯಲ್ಲಿ ಕೆಲವು ರೈತರನ್ನು ಕೇಳಿದಳು. ಒಕ್ಕಲತನದಿಂದ ಹೆಚ್ಚು ಉತ್ಪಾದನೆಮಾಡಲು ಏನು ಮಾಡಬೇಕೆನ್ನುವಿರಿ? ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಏನು ಮಾಡಬೇಕೆನ್ನುವಿರಿ? ಎರಡು ಪ್ರಶ್ನೆಗಳಿಗೂ ಒಂದೇ ಒಂದು ಉತ್ತರ ಸಿಕ್ಕಂತಾಯಿತು. ಒಕ್ಕಲತನದ ಉತ್ಪಾದನೆ ಹೆಚ್ಚಾಗ ಬೇಕಾದರೆ ನೀರಿನ ವ್ಯವಸ್ಥೆಯಾಗಬೇಕು. ಮಳೆಯ ನೀರಿನ ಮೇಲೆಯೇ ಅವಲಂಬಿಸಿದರೆ ಮಳೆಯಷ್ಟೇ ಅನಿಶ್ಚಿತವಾಗುವದು ಹೊಲದ ಉತ್ಪಾದನೆ. ಹೆಚ್ಚು ಗೊಬ್ಬರ ಹಾಕಿದರೆ ಮಳೆಯಾದರೆ ನೆಟ್ಟಗೆ ಇಲ್ಲದಿದ್ದರೆ ಗೊಬ್ಬರವು ಬೆಳೆಗೆ ಪೋಷಕವಾಗದೆ ಶೋಷಕವಾಗುವದು. ಅದರಂತೆ ಮಳೆಯ ಭರವಸೆ ಇಲ್ಲವೆಂದು ಗೊಬ್ಬರವನ್ನು ಹಾಕುವದನ್ನು ಬಿಟ್ಟರೆ ಮಳೆ ಹೆಚ್ಚು ಬಿದ್ದರೂ ಅದರ ಉಪಯೋಗವಿಲ್ಲ. ಆದ್ದರಿಂದ ನೀರಿನ ವ್ಯವಸ್ಥೆಯಾಗದೇ ಒಕ್ಕಲತನದ ಸುಧಾರಣೆಯ ಮಾತು ಶುಷ್ಕವೆಂದು ಅಲ್ಲಿಯವರು ಅಭಿಪ್ರಾಯಪಟ್ಟರು. ಇನ್ನು ಆರ್ಥಿಕ ಪರಿಸ್ಥಿತಿ. ರೈತರ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕಾದರೆ ರೈತರಿಗೆ ಒಕ್ಕಲತನದ ಹೊರತು ಬೇರೊಂದು ಉಪ ದಂಧೆ ಬೇಕೇಬೇಕೆಂದು ಅವಳು ಮನಗಂಡಳು. ವಿಧಾಯಕ ಕಾರ್ಯಕ್ರಮ— ಗಾಂಧೀಜಿಯ ವಿಚಾರ ವೆಷ್ಟು ಸುಂದರ, ಎಷ್ಟು ಸರಳ, ಎಷ್ಟು ಸುಲಭ. ಆದರೆ ರಾಜಕೀಯ ಚಳು ವಳಿಯು ಹೇಗೆ ಸಂಸ್ಥಾನಗಳಲ್ಲಿ ಮತ್ತು ಅವುಗಳ ಹಳ್ಳಿಗಳಲ್ಲಿ ಇನ್ನೂ

ಪಾದಾರ್ಪಣಮಾಡಿದ್ದಿಲ್ಲವೊ ಅದರಂತೆಯೇ ವಿಧಾಯಕ ಕಾರ್ಯಕ್ರಮದ ಆಂದೋಲನವು ಇನ್ನೂ ಸಂಸ್ಥಾನಗಳಲ್ಲಿ ಅದರಲ್ಲೂ ವಿಶೇಷವಾಗಿ ವೈಭವ ಪುರ ಸಂಸ್ಥಾನದಲ್ಲಿ ಕಾಲಿಟ್ಟಿದ್ದಿಲ್ಲ. ಏನೊ ಎಲ್ಲೋ ಪ್ರಾರಂಭವಾಗಿದ್ದರೂ ಯುದ್ಧದ ಮೂಲಕ ಅದು ಹಿಂದೆ ಬಿದ್ದಿತ್ತು. ಯುದ್ಧವು ಕೆಲವು ರೈತರಿಗೆ ಹೊಸ ಬಗೆಯ ಉಪ ದಂಧೆಗಳನ್ನು ಕಲ್ಪಿಸಿಕೊಟ್ಟಿತ್ತು. ಸಂಸ್ಥಾನದಿಂದ ಧಾನ್ಯ ವನ್ನು ಸಾಗಿಸಿ ಆದನ್ನು ಬ್ರಿಟಿಶ್ ಪ್ರದೇಶದಲ್ಲಿ ಕಳ್ಳತನದಿಂದ ಮಾರಿದರೆ ಕೈ ತುಂಬ ಹಣ ಸಿಗುತ್ತಿತ್ತು. ಆದರೆ ಹಣದಿಂದ ಕೈ ತುಂಬಿದರೂ ಕಿಸೆ ತುಂಬು ತ್ತಿರಲಿಲ್ಲ. ಎಷ್ಟೋ ''ಸುಂಕದ ಕಟ್ಟಿಗಳಲ್ಲಿ'' ನೈವೇದ್ಯವಿಟ್ಟು ಬರಬೇಕಾಗು ತ್ತಿತ್ತು. ನಮಗೆ ಎಲ್ಲಿಯಾದರೂ ಕೂಲಿ ದೊರಕಿಸಿಕೊಡಿರಿ ಎಂದು ಸಾಮಾನ್ಯ ಮತ್ತು ಬಡ ರೈತರ ಬೇಡಿಕೆಯಾಗಿತ್ತು. ಇದಕ್ಕುಪಾಯವೇನು?

ಮೃದುಳಾ ಪದ್ಮನಾಭನಿಗೆ ಈ ಪ್ರಶ್ನೆಯನ್ನು ಹಾಕಿದಳು. ಈ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ನಾವೇನಾದರೂ ಮಾಡಬಹುದೆ?

'ಮಾಡುವವರು ಮಾಡಿದರೆ ಚೆಂದಕಾಬಹುದು! ಕಾರ್ಯವಾಗಬಹುದು!'

"ಮಾಡುವವರು? "

''ಶತ್ರುಪತಿಗಳು. ರಾಜ್ಯ ಅವರದು. ಪ್ರಜೆಗಳು ಅವರ ಮಕ್ಕಳಂತೆ. ಸಂಸ್ಥಾನಿಕರ ಈ ದೃಷ್ಟಿಯಿಂದ ಅವರ ಸಿರಿವಂತಿಕೆ ದೊಡ್ಡದಿಲ್ಲದಿದ್ದರೂ ಸಿರಿ ವಂತ ಈ ದೃಷ್ಟಿಯಿಂದ ಆವರಿಗೆ ಸಂಪತ್ತು ಸಾಕಷ್ಟಿದೆ. ಅಧಿಕಾರ ಬೇಕಾ ದಷ್ಟಿದೆ. ಸ್ವಾಮಿನಿಷ್ಠ ಪ್ರಜೆಗಳಿದ್ದಾರೆ. ಆದರೆ ಮನವೊಂದಿಲ್ಲ. ನಿಮ್ಮ ಮನಸ್ಸಿ ನಲ್ಲಿ ಸುಳಿದ ವಿಚಾರಗಳು ಶತ್ರುಪತಿಗಳ ಮನಸ್ಸಿನಲ್ಲಿ ಸುಳಿದರೆ ಮರುಭೂಮಿ ಯಾಗದಿದ್ದರೂ ಮರುಭೂಮಿಯಾಗಿದ್ದ ವೈಭವಪುರ ಸಂಸ್ಥಾನವು ನಂದನ ವಾದೀತು! ಅದರ ಪ್ರಜೆಗಳು ಸುಖ ಸಮೃದ್ಧಿಗಳನ್ನು ಅನುಭವಿಸಬಹುದು. "

"ಪದ್ಮನಾಭ, ಈ ದುಃಖ ಕಷ್ಟಗಳು ದೈನ್ಯದಾರಿದ್ರ್ಯಗಳು ಶತ್ರುಪತಿಗಳ ಹೃದಯವನ್ನು ಕರಗಿಸಲಾರವೆ? ಅವರ ಹೃದಯ ಅಷ್ಟು ಕಲ್ಲಾಗಿದೆಯೆ? "

''ಉತ್ತರ ಕೊಡಲಾರೆ. ನನಗೆ ಗೊತ್ತಿಲ್ಲ. ''

"ಒಂದು ವೇಳೆ ಶತ್ರುಪತಿಗಳು ಸ್ವಾರ್ಥದ ಮೂರ್ತಿಗಳಾದರೂ ಸುಖ ಲೋಲುಪರಾದರೂ ಅವರ ಮನಸ್ಸನ್ನು ಯಾರೂ ತಿರುಗಿಸಲಾರರೆ? ಪ್ರೊ. ಅವಧಾನಿ ಇಲ್ಲವೆ, ಪದ್ಮಜಾ ಇಲ್ಲವೆ? "

"ಅವರ ಮನವೊಲಿಸಲು ಮತ್ತಾರಿಗೂ ಶಕ್ಯವಿಲ್ಲವೆ? ," ಎಂದು ಕೇಳಿದಳು ಮೃದುಳಾ ಸ್ವಲ್ಪ ವಿಚಾರ ಮಾಡಿದಂತೆ ಮಾಡಿ.

"ಅಥವಾ ಮತ್ತಾರು? "

ಮೃದುಳಾ ಉತ್ತರ ಕೊಡಲಿಲ್ಲ. ಅವಳ ಮುಖ ಕೆಂಪೇರಿ ಚೆವಕ್ಷನಿ ತೋರಿ ಏನೋ ಒಂದು ಉತ್ತರವನ್ನು ಕೊಟ್ಟಿತು.

"ಶೀತ ಗಗನಲಾಲರು ಇಲ್ಲಿ ಕಪ್ಪು ಬಸಿಯ ಕಾರ್ಖಾನೆಯನ್ನು ಸ್ಥಾಪಿಸಬಹುದು. ಅನೇಕರಿಗೆ ಕೂಲಿ ದೊರೆಯಬಹುದು. ಅವರಿಗೂ ಸಾಕಷ್ಟು ಲಾಭವಾಗಬಹುದು. ಆದರೆ ಇದಕ್ಕೂ ಶತ್ರುಪತಿಗಳ ಅನುಮತಿ ಬೇಕೇ ಬೇಕು. "

"ಸಂಸ್ಥಾನದ ಮುಟ್ಟಿಯನ್ನು ಶತ್ರುಪತಿಗಳ ಅನುಮತಿಯಿಲ್ಲದೆ ನಾವು ಸಾಗಿಸಿರುತ್ತಿರುವೆವಲ್ಲವೆ? "

"ಹೌದು. ಅದು ನಿಜವಾಗಿ ನೋಡಿದರೆ ತಪ್ಪೇ ಸರಿ. ಆದರೆ ಇದು ಸಂಸ್ಥಾನ. ಮುಟ್ಟಿಯಂಥ ಅಮೂಲ್ಯವಸ್ತುವನ್ನು ಬೇಕಾದಷ್ಟು ಸಾಗಿಸಿದರೂ ಶಿಕ್ಷೆಯಾಗಲಿಕ್ಕಿಲ್ಲ.ಆದರೆ ಈ ಊರಲ್ಲಿಯ ಹುಲ್ಲುಗಾವಲದಲ್ಲಿಹೊಕ್ಕು ಹತ್ತೆಂಟು ಮೊಲಗಳನ್ನು ಕೊಂದರೆ ಸಾಕು. ಉಗ್ರ ಶಿಕ್ಷೆ ಭಾರವಾಗುವಂಥ ದಂಡ. ಕೊಲೆಯಾದರೂ ಎಷ್ಟೋ ಸಾರೆ ಮುಚ್ಚಿಹೋಗಿವೆಯಂತೆ, ಆದರೆ ಕೆನ್ನೆಗೆ ಹೊಡೆದ ಪ್ರಕರಣಗಳಲ್ಲಿ ದಂಡವಾದುದು ಉಂಟಂತೆ.

" ಪ್ರೊ. ಅವಧಾನಿಯವರೂ ಇತರ ದಿವಾಣರರಂತೆ ದಿವಾಣರೇ ಸೈ. ಇತರರಷ್ಟೇ ಇವರೂ ಕ್ಷಣಿಕರು. ಶತ್ರುಪತಿಗಳ ಅನುಗ್ರಹವಿದ್ದುವ ವರೆಗೆ ಮಾತ್ರ ಅವರು ದಿವಾಣರಾಗಿ ಉಳಿಯಬಹುದು. ಮರುಕ್ಷಣವೇ ಅನುಗ್ರಹ ತಪ್ಪಿದರೆ ಅವರು ಪದಚ್ಯುತರಾಗುವರು. ಅವರು ಪ್ರಾರಂಭಿಸಿದ ಕಾರ್ಯವು ಅವರ ಅಧಿಕಾರದೊಡನೆ ಸಮಾಪ್ತಿಗೊಳ್ಳುವದು. ಲಕ್ಷ್ಮೀಯು ಶೀತ ಗಗನಲಾಲರ ಮನವೊಲಿಸಬಹುದು. ಆದರೆ ಲಕ್ಷ್ಮೀ ಸರಸ್ವತಿಯರಿಬ್ಬರೂ ಕೂಡಿದರೂ ಅವರು ಶತ್ರುಪತಿಗಳ ಮನವೊಲಿಸಲಾರರು. "

ಮಾತು ಇಲ್ಲಿಗೆ ಮುಗಿಯಿತು .

ಒಂದು ದಿನ ಸಂಜೆಗೆ ವೈಭವಪುರದಿಂದ ದಿವಾಣ ಪ್ರೊ. ಅವಧಾನಿ ಮತ್ತೂ ಪದ್ಮಜಾ ಇಬ್ಬರೂ ಬಂದರು ಪ್ರೊ. ಅವಧಾನಿಯವರು ಆನಂದದ ಸುದ್ದಿಯನ್ನು ಅದರ ಜೊತೆಗೆ ಅಸಮಾಧಾನದ ಸುದ್ದಿಯನ್ನೂ ತಂದಿದ್ದರು.

ಆನಂದದ ಸುದ್ದಿಯೆಂದರೆ ಶತ್ರುಪತಿಗಳು ಪದ್ಮಜೆಯನ್ನು ತಮ್ಮ ತಂಗಿಯೆಂದು ಅತ್ಯಾನಂದದಿಂದ ಸ್ವೀಕರಿಸಿ ಅವಳ ಮದುವೆಗಾಗಿ ೭೫ ಸಾವಿರ ರೂಪಾಯಿ ವರದಕ್ಷಿಣೆ ಎಂದು ತಮ್ಮ ಖಾಸಗಿ ಬೊಕ್ಕಸದಿಂದ ಕೊಡ ಮಾಡಿದ್ದರು. 'ದೊಡ್ಡದೊಂದು' ಸ್ಥಳವನ್ನು ಹುಡುಕಬೇಕೆಂದು ದಿವಾಣ ರಿಗೆ ಆಜ್ಞಾಪಿಸಿದ್ದರು. ಪದ್ಮಜಾ ಅವರಿಗೆ ತನ್ನ ಪ್ರೇಮವನ್ನು ತಿಳುಹಿ ಪದ್ಮನಾಭನನ್ನು ಆಗುವದಾಗಿ ಹೇಳಿದ್ದಳು.

"ಯಾರು ಪದ್ಮನಾಭನೆಂದರೆ ? ಸಿರಿವಂತನಿರುವನೆ ? ಕನಿಷ್ಟ ಪಕ್ಷಕ್ಕೆ ಏನು ಕೆಲಸಮಾಡದೆ ಕುಳಿತು ಉಣ್ಣುವಷ್ಟಾದರೂ ಸಾಮರ್ಥ್ಯ ಅವನಿಗಿದೆಯೆ? " ಎಂದು ಶತ್ರುಪತಿಗಳು ಪ್ರಶ್ನಿಸಿದ್ದರು.

ಪದ್ಮಜೆಯ ಪರವಾಗಿ ಪ್ರೊ. ಅವಧಾನಿಯವರೇ ಶತ್ರುಪತಿಗಳಿಗೆ ಅವರ ಮೇಲಿನ ಪ್ರಶ್ನೆಗೆ ಉತ್ತರ ಕೊಟ್ಟಿದ್ದರು; "ಪದ್ಮನಾಭನು ಶ್ರೀಮಂತ ನಲ್ಲ. ಆದರೆ ನಿಮ್ಮ ೭೫ ಸಾವಿರ ರೂಪಾಯಿಗಳಿಂದ ಅವನು ನಿಶ್ಚಯವಾಗಿಯೂ ಶ್ರೀಮಂತನಾಗಬಲ್ಲ. ಕುಳಿತು ಉಣ್ಣುವಷ್ಟು ಸಾಮರ್ಥ್ಯ ಅವನಲ್ಲಿಲ್ಲ; ಆದರೆ ದುಡಿದು ಉಣ್ಣುವಷ್ಟು ಶಕ್ತಿ ಅವನಲ್ಲಿ ನಿಃಸಂಶಯವಾಗಿದೆ. ಇದಕ್ಕೂ ಮುಖ್ಯವಾದುದೆಂದರೆ ಪದ್ಮಜೆಗೆ ಪದ್ಮನಾಭ ಬೇಕಾದವ. ಪದ್ಮನಾಭನಿಗೆ ಪದ್ಮಜೆಯು ಪ್ರೀಯಳಾಗಿದ್ದಾಳೆ."

ಮೌನವೆಂದರೆ ಅರ್ಧ ಸಮ್ಮತಿಯೆಂದು ವಾಕ್ ಪ್ರಚಾರವಿರುವದು. ಅದು ನಿಜವಾದರೆ ಪದ್ಮನಾಭ-ಪದ್ಮಜಾ ವಿವಾಹಕ್ಕೆ ಶತ್ರುಪತಿಗಳು ಅರ್ಧ ಸಮ್ಮತಿಯಿತ್ತರೆಂದು ಅವರ ಅರ್ಧ ಸಮ್ಮತಿಯೆಂದರೆ ಅದುಪೂರ್ಣಸಮ್ಮತಿಯೇ ಎಂದು ತಮ್ಮ ಅನುಭವವಿರುವದಾಗಿಯೂ ದಿವಾಣರುಹೇಳಿದರು. ಪದ್ಮನಾಭನು ಮೊಗವನ್ನೆತ್ತಿ ಪದ್ಮಜೆಯ ಕಡೆಗೆ ನೋಡಿದನು. ಪದ್ಮಜೆಯು ಪದ್ಮನಾಭನ ಕಡೆಗೆ ನೋಡಿದಳು. ಉಭಯತರ ಮುಖಗಳ ಮೇಲೆ ವಸಂತಋತು ಕಂಡಿತು. ದ್ರುಮಾಃ ಸಪುಷ್ಪಾಃ ಸಲಿಲಂ ಸಪದ್ಮಂ. ನರಾಃ ಪ್ರಮೋದಾಃ

ಪವನಂ ಸುಗಂಧಿಃ ಎಂದು ಪ್ರೊ. ಅವಧಾನಿಯವರು ಕಾಲಿದಾಸನ ಶಬ್ದಗಳಲ್ಲಿ ವಸಂತ ಋತುವನ್ನು ವರ್ಣಿಸಿದರು. (ಗಿಡಗಳ ಮೇಲೆ ಹೂಗಳು, ಕೆರೆಸರೋವರಗಳಲ್ಲಿ ಪದ್ಮಗಳು ಜನರ ಮನಸ್ಸಿನಲ್ಲಿ ಪ್ರಮೋದ. ಗಾಳಿಯಲ್ಲೂ ಸುಗಂಧಿ ಆಹಾ! ಎಂಥ ವಸಂತಋತು!)

ಅಸಮಾಧಾನಕರ ಸುದ್ದಿಯೊಂದನ್ನೂ ಅವರು ತಂದಿದ್ದರು. ಶೇಠ ಗಗನಲಾಲರು ಮೃದುಳಾ ಬೆಹೆನಳಿಗೆ ಒಂದು ಕಾರ್ಡನ್ನು ಬರೆದಿದ್ದರು. " ಯುದ್ಧವು ಮುಗಿದಿದೆಯಾದ್ದರಿಂದ ವಿದೇಶದಿಂದ ಕಪ್ಪುಬಸಿಗಳು ಬರುವ ಸಂಭವ ಸಾಕಷ್ಟಿದೆ. ಆದ್ದರಿಂದ ಕಪ್ಪುಬಸಿಯ ಕಾರ್ಖಾನೆಯ ವಿಚಾರವನ್ನು ನಾನು ಬಿಟ್ಟುಬಿಟ್ಟಿದ್ದೇನೆ. ಮಟ್ಟಿಯ ಕೆಲಸವನ್ನು ಬಂದು ಮಾಡಬೇಕೆಂದು ಪದ್ಮನಾಭನಿಗೆ ತಿಳಿಸಬೇಕು. ನಾನು ಅಹಮ್ಮದಾಬಾದದಲ್ಲಿಯ ಒಂದು ಬಟ್ಟೆಯ ಗಿರಣಿಯಲ್ಲಿ ಹಣವನ್ನು ತೊಡಗಿಸಲಿದ್ದೇನೆ, '' ಎಂದು ಮುಂತಾಗಿ ಅದರಲ್ಲಿ ಬರೆದಿದ್ದರು.

'' ಓಜಸ್ವಿಪುರದ ಔದ್ಯೋಗಿಕರಣವು ಒಂದು ಹೆಜ್ಜೆ ಹಿಂದೆ ಹೋಯಿತು, " ಎಂದ ಪದ್ಮನಾಭ.

''ಹಾಗೇನು ಅಲ್ಲ. ಶೇಠರ ಹಣ ನಮಗೆಸಿಗಲಿಕ್ಕಿಲ್ಲ. ಆದರೆ ಪದ್ಮನಾಭನ ೭೫ ಸಾವಿರ ರೂಪಾಯಿ ನಮ್ಮ ಕಡೆಗೆ ಇವೆ," ಎಂದರು ಪ್ರೊಫೆಸರರು.

ಮೃದುಳಾ ನಕ್ಕಳು. ಪದ್ಮಜಾಪದ್ಮನಾಭರಿಬ್ಬರೂ ಹಸನ್ಮುಖರಾಗಿ ಪ್ರೊಫೆಸರರ ಬುದ್ಧಿಮತ್ತೆಗೆ ತೂಲೆದೂಗಿ ಅವರ ವಿಚಾರಕ್ಕೆ ಅನುಮತಿ ಕೊಟ್ಟಂತೆ ಮಾಡಿದರು.

ಪ್ರೊಫೆಸರರು ಮುಂದರಿದರು, "೭೫ ಸಾವಿರ ರೂಪಾಯಿಯಿಂದ ನಾವು ಸಹಜವಾಗಿ ಹಳ್ಳಕ್ಕೆ ಒಡ್ಡು ಹಾಕಿ ೨೦೦ ಎಕರೆ ಭೂಮಿಯನ್ನು ಟ್ರ್ಯಾಕ್ಟರದಿಂದ ಸಾಗುವಾಡಬಹುದು. ಕಬ್ಬುಹಾಕಬಹುದು. ಆದರಿಂದ ಇಲ್ಲಿಯ ಜನರದಷ್ಟೇ ಅಲ್ಲದೆ ಸಂಸ್ಥಾನದ ಅಭಿವೃದ್ಧಿಯೂ ಆಗುವುದೆಂದು ನನಗೆ ಖಾತ್ರಿಯಿದೆ. ಆಮೇಲೆ ಸಕ್ಕರೆಯ ಕಾರ್ಖಾನೆ ಮತ್ತು ಕಪ್ಪುಬಸಿಯ ಕಾರ್ಖಾನೆ. "

''ಅವುಗಳಿಗೆ ಹಣಬೇಡವೇ? ಶತ್ರುಪತಿಗಳ ಅನುಮತಿ ಬೇಡವೆ? " ಎಂದ ಪದ್ಮನಾಭ.

"ಪದ್ಮಜೆಯಂತೆ ಮೃದುಳಾಳೂ ಕೂಡ ನಮಗೆ ಹಣ ತಂದುಕೊಟ್ಟರೆ ಏನೂ ಅಶಕ್ಯವಿಲ್ಲ. ಆಮೇಲೆ ಶತ್ರುಪತಿಗಳ ಅನುಮತಿಯನ್ನು ದೊರಕಿಸುವದೂ ಕಠಿಣವಿಲ್ಲ" ಎಂದರು ಪ್ರೊಫೆಸರರು.

"ಮೃದುಳಾ ಹಣತಂದರೆ? ಯಾರಿಗೆ ತರಬೇಕು? ಎಲ್ಲಿಂದತರಬೇಕು?", ಪದ್ಮಜಾ—ಪದ್ಮನಾಭ.

"ಅದನ್ನೆ ಹೇಳುವವನಿದ್ದೇನೆ. ಮೃದುಳಾಬೆಹೆನ ತಮ್ಮನ್ನು ಆಗುವ ಳೀನೆಂದು ಕೇಳಲು ಶತ್ರುಪತಿ ಸರ ರಘುನಾಥ ಪ್ರತಾಪಗಿರಿ ಸಂಸ್ಥಾನಿಕ ವೈಭವಪುರ ಇವರು ನನಗೆ ಆಜ್ಞಾಪಿಸಿದ್ದಾರೆ, " ಎಂದರು ದಿವಾಣರು.

ಪದ್ಮಜಾ ಪದ್ಮನಾಭರು ನಕ್ಕರು. ಮೃದುಳಾ ಸ್ವಲ್ಪ ನಾಚುತ್ತ ತಲೆ ಕೆಳಗೆ ಹಾಕಿದಳು. ಆದರೂ ಅವಳ ಮೋರೆಯ ಮೇಲೆ ಎದ್ದ ಆನಂದೋರ್ಮಿಯು ಕಾಣದೆ ಹೋಗಲಿಲ್ಲ. ದ್ಯುಮಾಃ ಸಪುಷ್ಪಾಃ ಎಂಬ ಪದ್ಯವನ್ನು ಈ ಸಾರೆ ಪದ್ಮಜೆಯು ಅಂದಳು.

## ದರ್ಶನ

ಮುಂದೊಂದು ತಿಂಗಳದಲ್ಲಿ ಓಜಸ್ವಿಪುರದ ಮೊಲದ ಬೇಟೆಗಾಗಿ ಇಲ್ಲಿಯ ವರೆಗೆ ಪ್ರಸಿದ್ಧವಾದ ವಿಹಾರ ಭೂಮಿಯಲ್ಲಿ ಎರಡು ಮೂರು ಟ್ರಾಕ್ಟರಗಳು ಓಡಾಡತೊಡಗಿದವು. ಮೊಲಗಳನ್ನೂ ನೆಲವನ್ನೂ ಒಂದೇ ಕಾಲಕ್ಕೆ ಮೇಲಕ್ಕೆಬ್ಬಿಸ ತೊಡಗಿದವು. ಇತ್ತ ಹಳ್ಳಕ್ಕೆ ಒಡ್ಡು ಹಾಕುವ ಕೆಲಸವೂ ಪ್ರಾರಂಭವಾಗಿತ್ತು.

ನಗರಗಳು ಉಪನಗರಗಳನ್ನು ಈಯುವಂತೆ ಓಜಸ್ವಿಪೂರವೂ ಒಂದು ಉಪಹಳ್ಳಿಯನ್ನು ಹೆತ್ತಿತ್ತು. ಕೂಲಿಯ ಆಸೆಯಿಂದ ಸುತ್ತಲಿನ ಹಳ್ಳಿಯವರು ಬಂದು ಓಜಸ್ವಿಪುರದಲ್ಲಿ ನೆಲೆಸಿದ್ದರು. ಪ್ರೊ. ಅವಧಾನಿಯವರ ಮೇಲ್ವಿಚಾರಣೆಯಲ್ಲಿ ಅವರ ಗುಡಿಸಲುಗಳು ಸಾಲಾಗಿ ಸುವ್ಯವಸ್ಥಿತವಾಗಿ ಕಟ್ಟಲ್ಪಟ್ಟಿದ್ದವು. ಕವಾಯತಿಗೆ ನಿಂತ ಸೈನಿಕರಂತೆ ಅವು ಶೋಭಿಸುತ್ತಿದ್ದವು.

ಈ ಒಂದು ಹಳ್ಳಿಗೆ ಉಪಹಳ್ಳಿಯಾಗುವಷ್ಟರಲ್ಲಿ, ಹಿಂದುಸ್ತಾನದಲ್ಲಿ ರಾಜಕೀಯ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆಗಳಾಗ ತೊಡಗಿದ್ದವು. ಹಿಂದು

ಸ್ತಾನವು ಸಂಕ್ರಮಣ ಕಾಲದಲ್ಲಿತ್ತು— ಅಲ್ಲಲ್ಲಿ ಹಿಂದುಸ್ತಾನಕ್ಕೆ ಹಿಡಿದ ಗ್ರಹಣ ಬಿಡುತ್ತಿದೆಂಬ ಸುಚಿನ್ಹಗಳು ಕಾಣತೊಡಗಿದವು. ಮಿಂಚಿನ ವೇಗ ದಿಂದ ಘಟನೆಗಳು ಸಂಭವಿಸ ತೊಡಗಿದವು. ಒಂದೆರಡು ವರ್ಷಗಳಲ್ಲಿ ಎಷ್ಟೊಂದು ಸ್ಥಿತ್ಯಂತರ!

ಜಗತ್ತಿನಲ್ಲಿಯ ಪ್ರತಿಯೊಂದು ಸಾಮಾನ್ಯ ಜೀವಿಗೂ ಬೇಸರವೆನಿಸಿದ ಭಾರವೆನಿಸಿದ ಯುದ್ಧವು ಮುಕ್ತಾಯವಾಯಿತು. ಜರ್ಮನಿ ಮಿತ್ರರಾಷ್ಟ್ರಗಳಿಗೆ ಶರಣು ಬಂದಿತು. ಘನಘೋರ ಯುದ್ಧಕ್ಕೆ ತಕ್ಕಂತೆ, ಅದಕ್ಕೆ ಆ್ಯಟಂ ಬಾಂಬು ಭಯಂಕರ ಪೂರ್ಣವಿರಾಮವನ್ನಿತ್ತಿತು. ಜಪಾನವು ಮುಕ್ಕರಿಸಿತು.

ಇತ್ತ ಇಂಗ್ಲಂಡವು ವಿಜಯಿಯಾಗಿದ್ದರೂ ಬಲಹೀನವಾಯಿತು. ಬಹು ದೊಡ್ಡ ಬೇನೆಯಿಂದ ಹಾಸಿಗೆ ಹಿಡಿದು ಹಾಗೂ ಹೀಗೂ ಎದ್ದವರಂತೆ ಅದರ ಸ್ಥಿತಿಯಾಯಿತು. ಬಲಾತ್ಕಾರದಿಂದ ಹಿಂದುಸ್ತಾನವನ್ನು ಆಳುವಷ್ಟು ಶಕ್ತಿ ಅದಕ್ಕೆ ಉಳಿದಿರಲಿಲ್ಲ. ಹಿಂದುಸ್ತಾನದ ಸ್ನೇಹಸಹಕಾರವು ಅದಕ್ಕೆ ಬೇಕಾದವು. ಅಂತೆಯೇ ರಾಜಕೀಯ ಸುಧಾರಣೆಗಾಗಿ ರಾಜಕೀಯ ಸಂಧಾನಕ್ಕಾಗಿ ಸೇನಾಪತಿ ಲಾರ್ಡ ವೇವೆಲ್ಲರು ವೈಸರಾಯರಾಗಿ ನೇಮಕ ಹೊಂದಿದರು. ಅವರು ಕಾಂಗ್ರೆಸ ಮುಖಂಡರನ್ನು ಸೆರೆಮನೆಯಿಂದ ಬಿಡುಗಡೆ ಮಾಡಿ ದೇಶದ ಪಕ್ಷೋಪಪಕ್ಷಗಳ ನಾಯಕರೊಡನೆ ಸಿಮ್ಲಾದಲ್ಲಿ ರಾಜಕೀಯ ಸಂಧಾನವನ್ನು ಪ್ರಾರಂಭಿಸಿದರು. ಅಷ್ಟರಲ್ಲಿ ಇಂಗ್ಲಂಡದಲ್ಲಿ ಚರ್ಚಿಲ್ಲರ ಮಂತ್ರಿ ಮಂಡಳವು ಉರುಳಿತು. ಅದರ ಸ್ಥಳದಲ್ಲಿ ಆ್ಯಟ್ಲಿಯವರ ಸಮತಾವಾದಿ ಮಂತ್ರಿ ಮಂಡಳವು ಸ್ಥಾಪಿಸಲ್ಪಟ್ಟಿತು. ಒಂದು ದೃಷ್ಟಿಯಿಂದ ಹಿಂದುಸ್ತಾನದ ಭಾಗ್ಯ ತೆರೆದಂತಾಯಿತು. ರಾಜಕೀಯ ಪ್ರಗತಿಯು ಮತ್ತಿಷ್ಟು ಜೋರಿನಿಂದ ಪ್ರಾರಂಭವಾಯಿತು. ಬ್ರಿ. ಮಂತ್ರಿ ಮಂಡಳದ ಶಿಷ್ಟಮಂಡಳವು ರಾಜಕೀಯ ಒಡಂಬಡಿಕೆಗಾಗಿ ಹಿಂದುಸ್ತಾನಕ್ಕೆ ಬಂದಿತು. ತಾತ್ಪೂರ್ತಿಕ ಮತ್ತು ದೀರ್ಘ ಕಾಲೀನ ಯೋಜನೆಗಳು ಮುಂದೆ ಬಂದವು. ಸಂರಕ್ಷಣ ವಿದೇಶ ಶಾಖೆಯಂಥ ಮಹತ್ವದ ಶಾಖೆಗಳನ್ನು ಬಿಟ್ಟು ಕೇಂದ್ರ ಸರಕಾರದ ಉಳಿದ ಆಡಳಿತವನ್ನು ಹಿಂದೀಯರ ಕೈಗೆ ಕೊಡಬೇಕೆಂದು ನಿರ್ಧಾರವಾಯಿತು. ಘಟನಾ ಸಮಿತಿಯನ್ನು ನೇಮಿಸಿ ಹಿಂದುಸ್ತಾನದ ಭಾವೀಘಟನೆಯನ್ನು ಸಿದ್ಧಪಡಿಸುವ ಕಾರ್ಯವನ್ನು ಅದಕ್ಕೊಪ್ಪಿಸುವ ದೀರ್ಘಯೋಜನೆ ಸಿದ್ಧವಾಯಿತು. ಮುಸ್ಲಿಂ

ಲೀಗ ಹಾಗೂ ಕಾಂಗ್ರೆಸು ಎರಡೂ ಈ ಯೋಜನೆಗೆ ಒಪ್ಪಿಗೆಯನ್ನಿತ್ತವು. ಘಟನಾ ಸಮಿತಿಯ ಕಾರ್ಯವು ಪ್ರಾರಂಭವಾಗಲಿತ್ತು. ಆದರೆ ಮುಸ್ಲಿಂಲೀಗು ಸಹಕರಿಸುವದಿಲ್ಲವೋ ಏನೋ ಎಂಬ ಅಂಜಿಕೆಯಿದ್ದೆ ಇತ್ತು. ಏನೇ ಆದರೂ ಎಷ್ಟೇ ಆದರೂ ಅಧಿಕಾರವು ಹಿಂದೀಯರ ಕೈಗೆಬಂತೆಂದು ಎಲ್ಲರಿಗೂ ಆನಂದ ವಾಗಿದ್ದಿತು. ಬ್ರಿಟಿಶರು ಬೇಗನೆ ಹಿಂದುಸ್ತಾನದಿಂದ ಕಾಲ್ತೆಗೆಯಬಹುದೆಂದೂ ಊಹೆ ಕೇಳಬರುತ್ತಿತ್ತು. ಹೀಗಾಗಿ ನಾಡಿನ ಪುಣ್ಯದ ಪೂರ್ವ ದಿಗಂತದಿ ನವ ಅರುಣೋದಯವಾಗುವದೆಂಬ ಲಕ್ಷಣಗಳು ಕಾಣತೊಡಗಿದ್ದವು.

ಕೇಂದ್ರದಲ್ಲಿ ಪಂ. ನೆಹರೂರ ಸಹಕಾರ! ಸ್ವರಾಜ್ಯವಲ್ಲದೆ ಇದು ಮತ್ತೇನು ಎಂದೂ ಜನ ಆನಂದಬಡುತ್ತಿತ್ತು.

ಆದರೆ ಈ ಆನಂದಕ್ಕೆ ಎಲ್ಲಿಯೊ ಬಾಧೆ ಬರಬಹುದೆಂಬ ಭೀತಿ ತೋರು ತ್ತಲೆ ಇತ್ತು. ದೇಶವೂ ವಿಭಜಿಸಲ್ಪಡುಬಹುದೋ ಏನೋ ಎಂಬ ಭೀತಿಯು ಈ ಆನಂದವನ್ನು ಹೊಡೆದಟ್ಟಲು ಯತ್ನಿಸುತ್ತಿತ್ತು. ಬ್ರಿಟಿಶರು ಹಿಂದು ಸ್ತಾನ ಬಿಟ್ಟು ಹೋಗುವವರಿದ್ದಾರೆಂಬ ದೊಡ್ಡ ಆನಂದದಲ್ಲಿ ಬೇರೆ ಸಂಶಯು ಗಳು ಭೀತಿಗಳು ಲೀನವಾಗುತ್ತಿದ್ದವು.

ಅಂದು ಹುಣ್ಣಿವೆ ಇದ್ದಿತು. ಎಲ್ಲೆಡೆಗೆ ಹಾಲು ಉರುಳಿಸಿದಂತೆ ಬೆಳ ದಿಂಗಳು. ಒಂದು ಕಡೆಗೆ ಹಳ್ಳದ ಝುಳುಝುಳು ಹರಿಯುವ ನೀರು ಇನ್ನೊಂದು ಕಡೆಗೆ ಥಳಥಳಿಸುವ ಶುಭ್ರಮಟ್ಟಿಯ ದಿನ್ನೆಗಳು ಬೆಳದಿಂಗಳಕ್ಕೆ ಕನ್ನಡಿಯನ್ನು ಹಿಡಿದಿದ್ದವು. ಓಜಸ್ವಿಪುರದ ಕೂಲಿಕಾರರು ದಿನದ ದಣಿವನ್ನು ಆರಿಸಿ— ಕೊಳ್ಳಲು ಸಂಸ್ಥಾನದಿಂದ ಒದಗಿಸಲ್ಪಟ್ಟ ಆಕಾಶವಾಣಿಯ ಹಾಡುಗಳನ್ನು ಕೇಳುತ್ತಿದ್ದರು. ಸಂಸ್ಥಾನದ ಸೂತ್ರ ಚಾಲಕರು ಮಾತ್ರ ಅದೇ ಕಟ್ಟಲುಪ್ರಾರಂಭಿ ಸಲ್ಪಟ್ಟ ಒಡ್ಡಿನ ಮೇಲೆ ನಿಂತು ಅನೇಕ ವಿಷಯಗಳನ್ನು ಚರ್ಚಿಸುತ್ತಿದ್ದರು. ಸಕ್ಕರೆಯ ಹಾಗೂ ಕಪ್ಪುಬಸಿಯ ಕಾರ್ಖಾನೆಗಳ ಯೋಜನೆಗಳನ್ನೂ ಚರ್ಚಿ ಸುತ್ತಿದ್ದರು. ವೈಭವಪೂರ ಸಂಸ್ಥಾನದಲ್ಲಿ ಮತ್ತೆಲ್ಲಿ ಏನೇನು ಮಾಡಬಹು ದೆಂದೂ ವಿಚಾರವಿನಿಮಯ ನಡೆಸಿದ್ದರು. ಬೆಳದಿಂಗಳಲ್ಲಿ ಅವರಿಗೆ ಅವ ರ ಮೂರ್ತರೂಪಹೊಂದಿದ ಅಥವಾ ಹೊಂದುತ್ತಿದ್ದ ವಿಚಾರಗಳು ಬಹಳ ಮನೋಹರವಾಗಿ ಕಾಣುತ್ತಿದ್ದವು.

ಶತ್ರುಪತಿಗಳು ಅವರ ದಿವಾಣರಾದ ಪ್ರೋ. ಅವಧಾನಿಯವರು ಮೇಲಿಂದ ಮೇಲೆ ಬರುವಂತೆ ಅಂದೂ ಅಲ್ಲಿಗೆ ಬಂದಿದ್ದರು. ಪದ್ಮಜಾ ಮೃದುಳಾಬೆಹನ್ ಪದ್ಮನಾಭರು ಓಜಸ್ವಿಪೂರದಲ್ಲಿಯೇ ಇರುತ್ತಿದ್ದರು.

"ಓಜಸ್ವಿಪುರವು ನಾಳೆ ಒಂದು ದೊಡ್ಡ ಪಟ್ಟಣವಾದರೂ ಆಗಬಹುದು. ಈಗಲೇ ಅದಕ್ಕೊಂದು ಹೆಸರನ್ನಿಡುವದೊಳ್ಳೇದು " ಎಂದು ಪ್ರೊಫೆಸರರು ಪ್ರಾರಂಭಿಸಿದರು.

"ಇದು ದೊಡ್ಡ ಔದ್ಯೋಗಿಕಪಟ್ಟಣವಾಗಬೇಕಾದರೆ ಇದಕ್ಕೆ ಗುಜರಾತಿ ಹಣದ ಅವಶ್ಯಕತೆಯಿದೆ. ಇಲ್ಲವಾದರೆ ನಮ್ಮ ಕಾರಖಾನೆಗಳ ವಿಚಾರಗಳು ನಮ್ಮ ತಲೆಯಲ್ಲಿಯೇ ಉಳಿದು ಹೋಗುವ ಸಂಭವವಿದೆ. ಆದ್ದರಿಂದ ಇವಕ್ಕೆ ಗಗನಲಾಲಪುರಿ ಎಂದು ಹೆಸರಿಡಬೇಕು " ಎಂದ ಪದ್ಮನಾಭ ಸೂಚಿಸಿದ.

'' ಗುಜರಾತಿ ಹಣವು ದಾನ ಎಂದು ಬಂದರೆ ಗುಜರಾತಿ ಹೆಸರನ್ನಿಡಬಹುದು. ಅದು ದಾನವೆಂದು ಬರುವದಿಲ್ಲವಷ್ಟೇ! " ಎಂದಳು ಪದ್ಮಜಾ.

"ಗು ಜ ರಾ ತಿ ಹ ಣ ವು ಬ ರು ವ ದೇ ಆ ದ ರೆ ಅ ದು ಶ ತ್ರು ಪತಿಗಳಿಗೆ ವರದಕ್ಷಿಣೆ ಎಂದು ಬರಲಿವೆ ಮರೆಯಬೇಡಿರಿ ಪದ್ಮಜಾ ಹೇಳಿದ್ದು ಹದಿನಾರಾಣೆ ಸತ್ಯ, '' ಎಂದರು ಪ್ರೊಫೆಸರರು.

"ಹಾಗಾದರೆ ಈ ನಗರವು ಸಂಪೂರ್ಣವಾಗಿ ಶತ್ರುಪತಿಗಳದಾಗಲಿರುವದು ಆದ್ದರಿಂದ ಇದು ರಘುನಾಥಪೂರವಾಗಬೇಕು, ' ಎಂದ ಪದನಾಭ.

' ನಿಮ್ಮೊಳಗೆ ಕೂಡವ ಮೊದಲು ನನಗೆ ಯಾರಾದರೂ ಈ ರೀತಿ ಸೂಚಿಸಿದ್ದರೆ ನಾನು ಒಪ್ಪಬಹುದಾಗಿತ್ತು. ಆದರೆ ನಿಮ್ಮೆಲ್ಲರ ಸಹವಾಸ ದಿಂದ ನನಗೆ ಬೇರೆ ದೃಷ್ಟಿ ಬಂದಂತಾಗಿದೆ. ವಿಶಾಲ ಜಗತ್ತು ಕಾಣುತಿದೆ. ಇದು ನನ್ನದೆಂದು ಗೌರವಿಸಿದಿರಿ. ಅದರೆ, ಆದು ನಿಮ್ಮೆಲ್ಲರದು–ಆಷ್ಟೇ ಏಕೆ ಇದಕ್ಕಾಗಿ ದುಡಿಯುತ್ತಿರುವ ಕೂಲಿಕಾರರದೂ ಕೂಡ. ' ಎಂದರುಶತ್ರುಪತಿಗಳು. ''ಪದ್ಮನಾಭನೇ ಮೊದಲು ಇಲ್ಲಿ ಒಂದು ನೆಲೆಸಿದ. ಇಲ್ಲಿಯ ಔದ್ಯೋಗಿಕರಣದ ವಿಚಾರವುಮೊದಲು ಆವನಿಗೆ ಹೊಳೆದದ್ದು ಅದಕ್ಕೆ ಊರಿಗೆ ಆವನ ಹೆಸರಿರಲಿ, ' ಎಂದಳು ಮೃದುಳಾ.

' ಪದ್ಮಜಾ ಪದ್ಮನಾಭ-ಸರಿಹೋದಿತೆ ' ? ಎಂದರು ಪ್ರೊ. ಅವಧಾನಿ.

" ಅದು ಮಾಲತಿ ಮಾಧವದಂತೆ ಪುಸ್ತಕಕ್ಕೆ ಶೋಭಿಸಬಹುದೆ ಹೊರತು ಊರಿಗೆ ಅಲ್ಲ. ", ಪದ್ಮಜಾ.

" ಏನೇ ಇರಲಿ ಒಂದು ಸ್ಪಷ್ಟವಾತನ್ನು ಹೇಳುತ್ತೇನೆ. ನನಗೆ ಪದ್ಮ ಜೆಯ ದರ್ಶನ, ಪುನರ್ದರ್ಶನ ವಾಗದಿದ್ದರೆ, ನಿಮ್ಮೆಲ್ಲರ ದರ್ಶನವಾಗದಿದ್ದರೆ ಇಲ್ಲಿ ಏನೂ ಆಗಲು ಶಕ್ಯವಿದ್ದಿಲ್ಲ. ಸದ್ಯಕ್ಕೆ ಏನೂ ಆಗಿಲ್ಲವೆನ್ನಬಹುದು. ಆದರೆ ಆಗಬಹುದೆಂದು ನಾವು ಎಣಿಸುವದನ್ನು ಲೆಕ್ಕಕ್ಕೆ ಹಿಡಿದರೆ ನಾವು ಒಂದು ದೊಡ್ಡ ಕಾರ್ಯವನ್ನು ಮಾಡಿದಂತೆ. ಓಜಸ್ವಿಪುರದಂತೆ ವೈಭವಪುರದ ಇತರ ಹಳ್ಳಿಗಳೂ ಮುಂದಾಗಬಹುದು. ಇದಕ್ಕೆಲ್ಲ ನಿಮ್ಮ ದರ್ಶನವೇ ಕಾರಣ. " ಎಂದರು ಶತ್ರುಪತಿಗಳು.

" ನನಗೂ ಮೊದಲು ಪ್ರೋ. ಅವಧಾನಿಯವರ ದರ್ಶನವಾಗದಿದ್ದರೆ ನಾನೂ ಎಲ್ಲೋ ಏನೊ ಆಗಿಬಿಡುತ್ತಿದ್ದೆ, " ಪದ್ಮನಾಭ

" ನನಗೆ ವೈಭವಪುರದ ದರ್ಶನವಾಗದಿದ್ದಿದ್ದರೆ, ನಾನು ಬಹಿಷ್ಕೃತ ನಾಗಿ ಎಲ್ಲಿಯೊ ಕಾಲಹರಣ ಮಾಡುತ್ತಿದ್ದೆ., " ಪ್ರೋ. ಅವಧಾನಿ.

" ನಾನು ಸಾತಾರೆಯಿಂದ ಮುಂಬಯಿಗೆ ಹೋಗುವಾಗ ಗಾಡಿಯಲ್ಲಿ ಮೃದುಳಾಬೆಹೆನಳ ದರ್ಶನವಾಗದಿದಿದ್ದರೆ ಆ ದೊಡ್ಡ ಪಟ್ಟಣದಲ್ಲಿ—. " ಪದ್ಮಜಾ

" ನಾನು ವೈಭವಪುರಕ್ಕೆ ಬಾರದೆ ಹೋಗಿದ್ದರೆ ಸ್ತ್ರೀ ಸಾಮರ್ಥ್ಯದ ನಿಜವಾದ ದರ್ಶನವು ನನಗಾಗುತ್ತಿರಲಿಲ್ಲ. " ಮೃದುಳಾ.

"ಓ. ಇಷ್ಟೆಲ್ಲ ನಿಜವಿದ್ದ ಬಳಿಕ ಇದಕ್ಕೆ ದರ್ಶನವೆಂದು ಏಕೆ ಹೆಸರಿಡ ಬಾರದು? ಊರನ್ನು ನೋಡಿದೊಡನೆ ನಮಗೆಲ್ಲ ನಮ್ಮೆಲ್ಲರ ದರ್ಶನ ಪ್ರಸಂಗ ಗಳು ನೆನಪಾಗುವವು . ", ಶತ್ರುಪತಿಗಳು.

"ಹೌದು ದರ್ಶನ ಇರಲಿ, " ಎಂದರು ಪದ್ಮಜಾ ಪದ್ಮನಾಭ ಮೃದುಳಾ, "ಸ್ವಾತಂತ್ರ್ಯ ದರ್ಶನವೆಂದೂ ಅರ್ಥವಾಗಬಹುದು"

"ದರ್ಶನ! ನಿಜವಾಗಿಯೂ ಎಂಥ ದಿವ್ಯ ಹೆಸರು, " ಎನ್ನುತ್ತ ಪ್ರೋ. ಅವಧಾನಿಯವರು ಹೊಸವಾಗಿ ಸಾಗಾಗುತ್ತಿದ್ದ ಭೂಮಿಯ ಕಡೆಗೆ ಕೂಲಿಕಾರರ ಶಿಬಿರದ ಕಡೆಗೆ ಹಳ್ಳದ ಒಡ್ಡಿನ ಕಡೆಗೆ ದೃಷ್ಟಿಯನ್ನು ಚೆಲ್ಲುತ್ತ ಹಾಗೆಯೇ

ಧ್ಯಾನಾಸಕ್ತರಾದಂತೆ ನಿಂತುಬಿಟ್ಟರು. ಉಳಿದವರು ಆಮೇಲೆ ಏನು ಮಾತು ನಾಡಿದರು, ಅಥವಾ ಎಲ್ಲಿ ಹೋದರು ಎಂಬ ಅರಿವಿಲ್ಲದೆ ಅವರು ಹಾಗೆಯೇ ನಿಂತುಕೊಂಡುಬಿಟ್ಟರು. ದರ್ಶನದ ಬಗ್ಗೆ ಹಲವು ವಿಚಾರಗಳು ಅವರ ತಲೆಯಲ್ಲಿ ಸುಳಿದವು. ಓಜಸ್ವಿಪುರದ ಭಾವಿ ಅಭಿವೃದ್ಧಿ ಐಶ್ವರ್ಯದ ದರ್ಶನವು ಅವರ ಅಂತಚಕ್ಷುವಿಗೆ ಆದಂತಾಗತೊಡಗಿತು.

ಸೆರೆಮನೆಯಿಂದ ಹೊರಬಿದ್ದ ಮೇಲೆ ತನಗಾದ ಅವಮಾನ ಈ ದರ್ಶನದಿಂದ ತೊಳೆದು ಹೋಗುವದು. ಅಲ್ಲ. ಆ ಅವಮಾನಕ್ಕೆ ನಾನು ಇಷ್ಟು ಸುಂದರವಾದ ಗೋರಿಯನ್ನು ಕಟ್ಟಿದೆ. ಓಜಸ್ವಿಪೂರದಂತೆ ವೈಭವಪೂರದ ಇತರ ಹಳ್ಳಿಗಳೂ ಆದರೆ ಮೈಸೂರು ಸರ ವಿಶ್ವೇಶ್ವರಯ್ಯನವರನ್ನು ನೆನೆಸಿಗೊಂಡಂತೆ ವೈಭವಪೂರವು ನನ್ನನ್ನು ಸ್ಮರಿಸಬಹುದಲ್ಲವೆ? ಕಾರ್ಯದಲ್ಲಿ ಅವಮಾನದ ವಿರಹದ ದುಃಖವನ್ನು ಮರೆಯಲೆತ್ನಿಸಿದೆ. ಕಾರ್ಯಕ್ಕೆ ಮೂರ್ತಸ್ವರೂಪ ಬಂದಿತು. ಶಹಾಜಹಾನನು ತಾಜಮಹಾಲಿನಂಥ ಸೌಂದರ್ಯಸಂಪನ್ನ ಗೋರಿಯನ್ನು ಕಟ್ಟಿಸಿದಂತೆ ನಾನು, —" ಹೀಗೆಯೇ ಅವರಲ್ಲಿ ವಿಚಾರಗಳು ಹರಿಯ ತೊಡಗಿದವು.

" ಆ! ಇದರಲ್ಲಿ ನನ್ನದೇನಿದೆ.? ಪದ್ಮರಾಜ ಪದ್ಮನಾಭ ಮೃಡುಳ-ಶತ್ರುಪತಿ ಎಲ್ಲರ ಅಂಗವಿದೆ ಈ ಕಾರ್ಯದಲ್ಲಿ. ದರ್ಶನ. ಒಂದೊಂದು ರೀತಿಯಿಂದ ಜೀವದದಲ್ಲಿ ಬೇಸತ್ತ ನಮ್ಮಂಥ ಜನಸಮಾನ್ಯರು ಕಟ್ಟಿದಂದ ಇದು. ನಮ್ಮದಾದರೂ ಇದರಲ್ಲೇನು? ಕೂಲಿಕಾರರ ಬೆವರ್ಹನಿಯೇ ಹಳ್ಳವಾಗಿ ಹರಿದಾಗ ಇಂಥ ಪಟ್ಟಣಗಳು ಏಳುವವಲ್ಲವೆ. ಇದೇ ಸುಬುದ್ಧಿ ಸುವಿಚಾರ ನಮ್ಮೆಲ್ಲೆಲ್ಲರಲ್ಲಿಯೂ ಸುಳಿದರೆ? ಷಡ್ ದರ್ಶನಗಳಂತೆ ಈ ವಿಚಾರವೂ ಒಂದು ದರ್ಶನವೇ ಅಲ್ಲವೆ? ಅಹುದು! ಇದೇ ದರ್ಶನದ ನಿಜವಾದ ಅರ್ಥ. ಇದನ್ನೆ ಅವರಿಗೆಲ್ಲ ಹೇಳುತ್ತೇನೆ. ಹಿಂದುಸ್ಥಾನವು ಸ್ವತಂತ್ರವಾಗಲಿದ್ದ ಈ ಕಾಲದಲ್ಲಿ ಇಂಥ ದರ್ಶನಕ್ಕೆ ಮಹತ್ವವಿದೆ." ಎಂಬ ವಿಚಾರಗಳ ಪ್ರವಾಹದಲ್ಲಿ ಅವರು ಈಸುತ್ತಿದ್ದರು.

" ಏನ್ರಿ ದಾವ್ರು? " ಎಂಬ ದನಿ ಅವರಿಗೆ ಕೇಳಬಂದಿತು.

ಪ್ರೊಫೆಸರರು ಒಮ್ಮೆಲೆ ಎಚ್ಚತ್ತರು. ನೋಡಿದರು. ರೈತ ಸಕ್ರೆಪ್ಪ ಅವರ ಬದಿಗೆ ಬಂದು ನಿಂತಿದ್ದ.

" ಏನು ಸಕ್ರೆಪ್ಪಾ ಈಗ ಬಂದೆ? " ಎಂದು ವಿಚಾರಿಸಿದರು. ಸಕ್ರೆಪ್ಪನು ಈಗಾಗಲೇ ದಿವಾಣರಿಗೆ ಒಕ್ಕಲತನದಲ್ಲಿ ಸಲಹೆಗಾರನಾಗಿದ್ದ.

" ಯಾವ ಕಬ್ಬನ್ನು ಹಾಕಿಸುವವರೆಂದು ಕೇಳಲು ಬಂದಿದ್ದ್ಯೆವ್ರಿ. ಇಷ್ಟು ಭೂಮಿಗೆ ಬೀಜ ಅಂದ್ರ ಈಗಿಂದs ನೋಡಾಕ ಬೇಕು. ರಸವಾಳಿ ಹಾಕಿಸುವಿರೊ? ಹೂಲಿಗಬ್ಬೊ ? ಸೀವ್ರೊ ? "

"ಅದನ್ನೆಲ್ಲ ನೀನೇ ಹೇಳಬೇಕ ಸಕ್ರೆಪ್ಪಾ. ಅದಿರಲಿ,ಈ ಊರಿಗೆ ನಾವು ದರ್ಶನ ಅಂತ ಹೆಸರ ಇಡಾವ್ರಿ. ದರ್ಶನ ಅಂದರ ಅದು ಎಲ್ಲಾರ ಊರು ಅಂತ ಎಲ್ಲಾರು ಕೂಡಿ ದುಡಿದು ಕಟ್ಟಿದ ಊರ ಅಂತ ತಿಳಿತೆ? ಆ ? ಎಲ್ಲಿ ಎಲ್ಲಿ ಹೋದಂವರೆಲ್ಲಾ? "

ಇಬ್ಬರೂ ಅತ್ತಿತ್ತ ನೋಡಿದರು. ಒಡ್ಡಿನಿಂದ ಸ್ವಲ್ಪ ಅಂತರದ ಮೇಲಿದ್ದ ಒಂದು ಬಂಡೆಗಲ್ಲ ಮೇಲೆ ಮೃದುಳಾ—ಶತ್ರುಪತಿ ಕುಳಿತಿದ್ದಾರೆ. ಅದಕ್ಕಿಂತ ಸ್ವಲ್ಪು ಅಂತರದ ಮೇಲಿದ್ದ ಇನ್ನೊಂದು ಬಂಡೆಗಲ್ಲ ಮೇಲೆ ಪದ್ಮಜಾ— ಪದ್ಮನಾಭ ಕುಳಿತಿದ್ದಾರೆ. ಬೆಳದಿಂಗಳಲ್ಲಿ ಜೋಡಿಗಳು ಬಹಳ ಮನೋಹರವಾಗಿ ಕಾಣುತ್ತಿವೆ.

" ದಿವ್ಯ ದರ್ಶನ ! " ಎಂದರು ಪ್ರೊ. ಅವಧಾನಿ.